ಭಾನುವಾರ, ನವೆಂಬರ್ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 309 | ಪುಟ 20
• www.prajavani.net   prajavani.net   prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರವಿಂದರ್‌ಗೆ ಸ್ವರ್ಣ

ಭಾರತದ ರವಿಂದರ್ ಸಿಂಗ್ ಅವರು ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನ ಪುರುಷರ 50 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಶನಿವಾರ ಚಿನ್ನ ಗೆದ್ದರು

ಬಡವರ ಬಾದಾಮಿ...

ಬೆಂಗಳೂರಿನ ಮಲ್ಲೇಶ್ವರದ ಕಾಡುಮಲ್ಲೇಶ್ವರ ದೇವಸ್ಥಾನದ ಬೀದಿಯಲ್ಲಿ 'ಕಡಲೆಕಾಯಿ ಪರಿಷೆ' ಶನಿವಾರ ಆರಂಭವಾಯಿತು

ವಂದೇ ಭಾರತ್: 4 ರೈಲುಗಳಿಗೆ ಮೋದಿ ಚಾಲನೆ 9
ಕರ್ಣಾಟಕ ಬ್ಯಾಂಕ್ ಲಾಭ ಶೇ 9.1ರಷ್ಟು ಏರಿಕೆ 8

ಸುರಂಗ: ವಿ-ವಾದ ತರಂಗ

ಒಳನೋಟ

• ಆರ್.ಮಂಜುನಾಥ್

ಪ್ಯಾಕೇಜ್ 1 (ಉತ್ತರ)	ಪ್ಯಾಕೇಜ್ 2 (ದಕ್ಷಿಣ)
ಹೆಬ್ಬಾಳ ಜಂಕ್ಷನ್ ಸಮೀಪದ ಎಸ್ಟೀಮ್ ಮಾಲ್‌ನಿಂದ ಸ್ವಾತಂತ್ರ್ಯ ಉದ್ಯಾನದ ಬಳಿಯ ಶೇಷಾದ್ರಿ ರಸ್ತೆಗೆ	ಶೇಷಾದ್ರಿ ರಸ್ತೆಯಿಂದ ಸಿಲ್ಕ್ ಬೋರ್ಡ್
₹8,770 ಕೋಟಿ (ಒಟ್ಟು ವೆಚ್ಚ)	₹8,928 ಕೋಟಿ (ಒಟ್ಟು ವೆಚ್ಚ)
₹3,508 ಕೋಟಿ (ಸರ್ಕಾರದ ಪಾಲು); ₹5,262 ಕೋಟಿ (ಖಾಸಗಿ ಹೂಡಿಕೆ)	₹3,571 ಕೋಟಿ (ಸರ್ಕಾರದ ಪಾಲು); ₹5,357 ಕೋಟಿ (ಖಾಸಗಿ ಹೂಡಿಕೆ)

ಸುರಂಗ ರಸ್ತೆ 16.74 ಕಿ.ಮೀ

ಆರು ಪಥಗಳ ಸುರಂಗ ರಸ್ತೆಯನ್ನು 'ಟ್ವಿನ್–ಟ್ಯೂಬ್ ಟನಲ್' ಎಂದು ಕರೆಯಲಾಗುತ್ತದೆ. ಸೆಂಟ್ರಲ್ ಸಿಲ್ಕ್ ಬೋರ್ಡ್ (ಸೇಂಟ್ ಜಾನ್ಸ್ ಆಸ್ಪತ್ರೆ ಸಮೀಪ) ಮತ್ತು ಹೆಬ್ಬಾಳ ಜಂಕ್ಷನ್ (ಎಸ್ಟೀಮ್ ಮಾಲ್) ನಡುವೆ ಸಂಪರ್ಕ ಕಲ್ಪಿಸುತ್ತದೆ. ಈ ಸುರಂಗ ಕಾರಿಡಾರ್‌ನಲ್ಲಿ 14 ಪ್ರವೇಶ–ನಿರ್ಗಮನ ರ್‍ಯಾಂಪ್‌ಗಳಿರಲಿವೆ. **₹17,698 ಕೋಟಿ ವೆಚ್ಚದ ಯೋಜನೆಯನ್ನು ನಿರ್ಮಾಣ,** ಕಾರ್ಯಾಚರಣೆ, ವರ್ಗಾವಣೆ (ಬೂಟ್) ಮಾದರಿಯಲ್ಲಿ ಕೈಗೊಳ್ಳಲಾಗುತ್ತಿದೆ. ಸರ್ಕಾರ ಶೇ 40ರಷ್ಟು ವೆಚ್ಚವನ್ನು ಭರಿಸಲಿದ್ದು, ಗುತ್ತಿಗೆಪಡೆದುಕೊಂಡ ಕಂಪನಿಯವರು ಉಳಿದ ವೆಚ್ಚ ಮಾಡಲಿದ್ದಾರೆ.

ಬೆಂಗಳೂರು: ಭಾರಿ ವಿರೋಧದ ಕಾರಣಕ್ಕೆ ಸ್ತಬ್ಧಗೊಂಡ ಬಸವೇಶ್ವರ ವೃತ್ತ–ಹೆಬ್ಬಾಳ ವರೆಗಿನ 'ಸ್ಟೀಲ್ ಬ್ರಿಡ್ಜ್', ಇದೇ ಮಾರ್ಗದಲ್ಲಿ ನಿರ್ಮಿಸಲು ಆಶಿಸಿ, ಅನುಷ್ಠಾನವೇ ಆಗದ 'ಸುರಂಗ ರಸ್ತೆ'ಯ ಯೋಜನೆಗಳು ಪಳೆಯುಳಿಕೆಗಳಾಗಿದ್ದು, ಇದೀಗ 'ಸುರಂಗ ರಸ್ತೆ' ಹೊಸ ಯೋಜನೆ ವಿವಾದದ ತರಂಗದಲ್ಲಿ ಸಿಲುಕಿಕೊಂಡಿದೆ.

2013–2018ರ ಅವಧಿಯ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಬಹುಕೋಟಿ ವೆಚ್ಚದಲ್ಲಿ ಸ್ಟೀಲ್ ಬ್ರಿಡ್ಜ್ (ಉಕ್ಕಿನ ಸೇತುವೆ) ನಿರ್ಮಿಸುವ ಯೋಜನೆ ರೂಪಿಸಲಾಗಿತ್ತು. ಸಂಚಾರ ದಟ್ಟಣೆ ಪರಿಹಾರಕ್ಕೆ ಇದೊಂದೇ ಪರ್ಯಾಯ ಎಂದೂ ಸರ್ಕಾರ ಪ್ರತಿಪಾದಿಸಿತ್ತು. ಸಾರ್ವಜನಿಕರು, ಪರಿಸರವಾದಿಗಳ ವಿರೋಧದ ಕಾರಣಕ್ಕೆ ಯೋಜನೆಯನ್ನೇ ಸರ್ಕಾರ ಕೈಬಿಟ್ಟಿತು.

ಎಚ್.ಡಿ. ಕುಮಾರಸ್ವಾಮಿ ಎರಡನೇ ಅವಧಿಯಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಇದೇ ಮಾರ್ಗದಲ್ಲಿ ಸುರಂಗ ರಸ್ತೆಯನ್ನು ನಿರ್ಮಿಸುವ ಯೋಜನೆಯ ಕನಸು ಕಂಡಿದ್ದರು. ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರ ಪತನಗೊಂಡಿದ್ದರಿಂದಾಗಿ, ಯೋಜನೆ ದಡ ಹತ್ತಲಿಲ್ಲ. ಈಗಿನ ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಅಂತಹದೇ ಮತ್ತೊಂದು ಯೋಜನೆಯ ಮಹಾಕನಸನ್ನು ಹೊತ್ತುಕೊಂಡಿದ್ದಾರೆ.

'ಎಲ್ಲವನ್ನೂ ಸರಿಪಡಿಸಿಯೇ ಯೋಜನೆ ಅನುಷ್ಠಾನ ಮಾಡುತ್ತೇವೆ' ಎಂದು ಶಿವಕುಮಾರ್ ಅವರು ಪ್ರತಿಪಾದಿಸುತ್ತಿದ್ದರೂ, ಅವರ ಉತ್ತರ ಸಮಾಧಾಕರವಾಗಿಲ್ಲ ಎಂದು ಸುರಂಗ ರಸ್ತೆಯ ವಿರೋಧಿಗಳು ತಕರಾರು ಎತ್ತಿದ್ದಾರೆ.

ಸಂಚಾರ ದಟ್ಟಣೆ ನಿಯಂತ್ರಣಕ್ಕಾಗಿ ಹತ್ತಾರು ವರ್ಷಗಳಲ್ಲಿ ₹30 ಸಾವಿರ ಕೋಟಿಗೂ ಹೆಚ್ಚು ಮೊತ್ತವನ್ನು ಬೆಂಗಳೂರಿನ ರಸ್ತೆಗಳಿಗೆ ಸುರಿಯಲಾಗಿದ್ದರೂ ವಾಹನ ಸವಾರರಿಗೆ ರಸ್ತೆಯ ನರಕಯಾತನೆ ತಪ್ಪಿಲ್ಲ. ಸಂಚಾರ ದಟ್ಟಣೆಯಲ್ಲಿ ಸಿಲುಕಿ, ಬಿಸಿಲು, ಮಳೆಯಲ್ಲಿ ಹೈರಾಣಾಗುವುದರಿಂದ ಜನರನ್ನು ಪಾರು ಮಾಡಲು ಈವರೆಗೆ ಆಡಳಿತ ನಡೆಸಿದವರಿಗೆ ಸಾಧ್ಯವೂ ಆಗಿಲ್ಲ. ▶6

ರಾಜಕೀಯಕ್ಕಾಗಿ ವಿರೋಧ ಸಲ್ಲ: ಡಿಕೆಶಿ

'ಬೆಂಗಳೂರಿನ ಸಂಚಾರ ದಟ್ಟಣೆಗೆ ಸುರಂಗ ರಸ್ತೆಗಿಂತ ಪರ್ಯಾಯ ಯೋಜನೆ ಇಲ್ಲ. ರಾಜಕೀಯ ಕಾರಣಕ್ಕಾಗಿ ಯೋಜನೆಗೆ ವಿರೋಧ ಮಾಡುವುದು ಸರಿಯಲ್ಲ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಪಾದಿಸಿದರು.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, 'ಕೇಂದ್ರದ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ಅವರು ಸುರಂಗ ರಸ್ತೆ ಉತ್ತಮ ಯೋಜನೆ ಎಂದು ಹೇಳಿದ್ದಾರೆ. ಅವರೇ ಮಾಡುತ್ತೇವೆ ಎಂದಿದ್ದರು. ಹಾಗಾದಲ್ಲಿ, ಸುರಂಗ ರಸ್ತೆ ಪ್ರದೇಶದ ಆಸ್ತಿ ಮಾಲೀಕತ್ವವೆಲ್ಲ ಕೇಂದ್ರದ ಅಧೀನಕ್ಕೆ ಹೋಗಿ, ರಾಜ್ಯದ ನಿಯಂತ್ರಣವೇ ಇರುವುದಿಲ್ಲ. ಹೀಗಾಗಿ, ನಾವೇ ಮಾಡುತ್ತಿದ್ದೇವೆ. ಮುಂಬೈನಲ್ಲಿ ಸುರಂಗ ರಸ್ತೆ ಮಾಡಿಲ್ಲವೇ? ನಾವು ಮಾಡಿದರಷ್ಟೇ ಸರಿ ಇರುವುದಿಲ್ಲವೇ' ಎಂದು ಅವರು ಪ್ರಶ್ನಿಸಿದರು.

'ಬಿಜೆಪಿಯ ಎಲ್ಲ ಶಾಸಕರೊಂದಿಗೂ ಸುರಂಗ ರಸ್ತೆ ಬಗ್ಗೆ ಚರ್ಚಿಸಿದ್ದೇನೆ. ಎಲ್ಲರೂ ಒಪ್ಪಿದ್ದಾರೆ. ಒಬ್ಬ ಸಂಸದ, ಕೆಲವರಷ್ಟೇ ರಾಜಕೀಯಕ್ಕಾಗಿ ವಿರೋಧ ಮಾಡುತ್ತಿದ್ದಾರೆ' ಎಂದೂ ಅವರು ಹೇಳಿದರು. ▶6

ಪಾತಕಿ ಉಮೇಶ್ ರೆಡ್ಡಿ, ಉಗ್ರ ಜುಹಾದ್‌ಗೆ ಜೈಲೇ ಐಷಾರಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಕೊಲೆ ಪಾತಕಿ ಹಾಗೂ ಉಗ್ರ ಸಂಘಟನೆ ಮುಖಂಡ ಸೇರಿ ಹಲವರಿಗೆ ಐಷಾರಾಮಿ ಸೌಲಭ್ಯ ಕಲ್ಪಿಸುತ್ತಿರುವ ಫೋಟೊ ಹಾಗೂ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಅತ್ಯಾಚಾರ ಎಸಗಿ ಸರಣಿ ಕೊಲೆ ನಡೆಸಿರುವ ಪಾತಕಿ ಉಮೇಶ್ ರೆಡ್ಡಿ, ಲಷ್ಕರ್–ಎ– ತಯಬಾ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳಸಾಗಣೆ ಮಾಡಿದ ಪ್ರಕರಣದ ಆರೋಪಿ ತರುಣ್ ರಾಜ್, ತಾವಿರುವ ಬ್ಯಾರಕ್‌ನಲ್ಲಿ ಮೊಬೈಲ್ ಹಿಡಿದು ಮಾತನಾಡುತ್ತಿರುವ, ಬ್ಯಾರಕ್ ಒಳಗೆ ಎಲ್.ಇ.ಡಿ ಟಿ.ವಿ ವೀಕ್ಷಣೆ ಮಾಡುತ್ತಿರುವ ವಿಡಿಯೊಗಳು ಹರಿದಾಡುತ್ತಿವೆ.

ಈ ವಿಡಿಯೊಗಳು ಬಹಿರಂಗವಾದ ಬೆನ್ನಲ್ಲೇ, ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಮಹಾನಿರ್ದೇಶಕ ಬಿ.ದಯಾನಂದ ಅವರು ಪ್ರಕರಣದ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಸೂಚನೆ ನೀಡಿದ್ದಾರೆ. ತನಿಖಾ ತಂಡವು ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದೆ ಎಂಬುದು ಗೊತ್ತಾಗಿದೆ.

ವಿವರ ▶4

'ಭಾರತ ಹಿಂದೂ ರಾಷ್ಟ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತವು ಹಿಂದೂ ರಾಷ್ಟ್ರವಾಗಿದ್ದು, ಈ ರಾಷ್ಟ್ರದ ಹೊಣೆ ಹಿಂದೂಗಳ ಮೇಲಿದೆ' ಎಂದು ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಹೇಳಿದರು.



ಮೋಹನ್ ಭಾಗವತ್

ನಗರದ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 'ಸಂಘದ 100 ವರ್ಷದ ಪಯಣ: ನವ ಕ್ಷಿತಿಜ' ಕುರಿತು ಉಪನ್ಯಾಸದಲ್ಲಿ ಅವರು, ಸಂಘ ನಡೆದು ಬಂದ ಹಾದಿ ಮತ್ತು ಉದ್ದೇಶದ ಕುರಿತು ವಿವರಿಸಿದರು.

'ಸಾಮರಸ್ಯ ಬಯಸುವ ನಿಟ್ಟಿನಲ್ಲಿ ಸಂಘವು ಕೆಲಸ ಮಾಡುತ್ತದೆ. ಬ್ರಿಟಿಷರು ಭಾರತಕ್ಕೆ ರಾಷ್ಟ್ರೀಯತೆ ನೀಡಿಲ್ಲ. ಪ್ರಾಚೀನ ಕಾಲದಿಂದಲೇ ಭಾರತವು ತನ್ನದೇ ರಾಷ್ಟ್ರೀಯತೆಯನ್ನು ಹೊಂದಿದೆ' ಎಂದರು.

'ದೇಶದ ಎಲ್ಲ ಮುಸ್ಲಿಂ, ಕ್ರೈಸ್ತರ ಪೂರ್ವಜರೂ ಹಿಂದೂಗಳೇ. ಇಂದಿಗೂ ಕೆಲವು ಕ್ರೈಸ್ತರು, ಮುಸ್ಲಿಮರೂ ತಮ್ಮ ಗೋತ್ರವನ್ನು ಹೇಳುತ್ತಾರೆ. ಆದರೆ, ಅವರು ಅದನ್ನು ಮರೆತಿದ್ದಾರೆ ಅಷ್ಟೆ. ಹಾಗಾಗಿ ಇಡೀ ಭಾರತದಲ್ಲಿ 'ಅಹಿಂದೂ' ಎನ್ನುವವರು ಯಾರೂ ಇಲ್ಲ. ಇದು ಹಿಂದೂ ರಾಷ್ಟ್ರ ಎನ್ನುವುದರಲ್ಲೂ ಅನುಮಾನವಿಲ್ಲ. ಇದನ್ನು ಎಲ್ಲರಿಗೂ ನೆನಪಿಸುವುದು ಸಂಘಟನೆಯ ಕೆಲಸ' ಎಂದು ಹೇಳಿದರು. ▶8

'ಇಡೀ ಸಮಾಜದ ಹೃದಯ ಸಂಘದ ಪರ'

'ಅನೇಕರು ಸಂಘವನ್ನು ನಿಂದಿಸುತ್ತಾರಾದರೂ ಅವರಿಗೂ ಸಂಘಟನೆಯ ಕಾರ್ಯದ ನಿಜವಾದ ಅರಿವಿದೆ. ಆದ್ದರಿಂದ ಅವರ ನಿಂದನೆಯು ಕೇವಲ ಬಾಯಿಮಾತಿಗೆ ಸೀಮಿತವಾಗಿದೆ. ಹಾಗಾಗಿ ಇಡೀ ಸಮಾಜದ ಹೃದಯ ಸಂಘದ ಪರವಾಗಿದೆ. ರಾಷ್ಟ್ರೀಯ ಸ್ವಯಂಸೇವಕ ಸಂಘವು ಹಿಂದೂ ಸಮಾಜವನ್ನು ಸಂಘಟಿಸುತ್ತಿದೆ' ಎಂದು ಮೋಹನ್ ಭಾಗವತ್ ಪ್ರತಿಪಾದಿಸಿದರು.

ಧರಣಿ ವಾಪಸು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕಬ್ಬು ದರ ನಿಗದಿಗೆ ಒತ್ತಾಯಿಸಿ ಜಿಲ್ಲೆಯ ಗುರ್ಲಾಪುರ ಬಳಿ ಅನಿರ್ದಿಷ್ಟ ಧರಣಿ ನಡೆಸುತ್ತಿದ್ದ ರೈತರು, ಶನಿವಾರ ಸಕ್ಕರೆ ಸಚಿವರ ಮನವಿ ಆಧರಿಸಿ ಪ್ರತಿಭಟನೆಯನ್ನು ವಾಪಸು ಪಡೆದಿದ್ದಾರೆ.

ಧರಣಿ ನಿರತರನ್ನು ಭೇಟಿಯಾದ ಸಚಿವರು, 'ದರ ಗೊಂದಲಕ್ಕೆ ಕೇಂದ್ರ ಕಾರಣ. ರೈತರ ಮೇಲಿನ ಕಾಳಜಿಗೆ ನಾವು ಏನು ಮಾಡಲು ಸಾಧ್ಯವೋ ಮಾಡಿದ್ದೇವೆ. ಧರಣಿ ಕೈಬಿಡಬೇಕು' ಎಂದು ಕೋರಿದರು. ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ, ಅಧ್ಯಕ್ಷ ಚೂಣಪ್ಪ ಪೂಜಾರಿ ಧರಣಿ ಕೈಬಿಡಲಾಗಿದೆ ಎಂದು ಪ್ರಕಟಿಸಿದರು.

ಸಂಜೆ ಸಭೆ ನಡೆಸಿದ ಸಂಯುಕ್ತ ಕಿಸಾನ್ ಮೋರ್ಚಾ, ಸಂಯುಕ್ತ ಹೋರಾಟ ಕರ್ನಾಟಕದ (ವಿವಿಧ ಸಂಘಟನೆ) ನಾಯಕರು, 'ಸರ್ಕಾರ ಘೋಷಿಸಿರುವ ₹3,300 ದರ ಒಪ್ಪುವುದಿಲ್ಲ. ಹೋರಾಟ ತಾತ್ಕಾಲಿಕವಾಗಿ ಅಂತ್ಯವಾಗಿದೆ' ಎಂದರು.

ಪರಿಷ್ಕೃತ ದರ, ಆದೇಶ ಪ್ರಕಟ: ಟನ್ ಕಬ್ಬಿಗೆ ನಿಗದಿಪಡಿಸಿದ್ದ ಪರಿಷ್ಕೃತ ದರಕ್ಕೆ ಸಂಬಂಧಿಸಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಸಕ್ಕರೆ) ಶನಿವಾರ ಆದೇಶ ಹೊರಡಿಸಿದೆ. ಪರಿಷ್ಕೃತ ದರವು 2025–26ನೇ ಸಾಲಿನ ಹಂಗಾಮಿಗೆ ಅನ್ವಯ ಎಂದು ಆದೇಶ ತಿಳಿಸಿದೆ.

ಚಿನಕುರುಳಿ — ಪ್ರಕಾಶ್ ಶೆಟ್ಟಿ

PES UNIVERSITY ADMISSIONS 2026

ENGINEERING
B.Tech (CSE, CSE-AI&ML, ECE, EEE, ME, & BT)
M.Tech (CSE, ECE)

MEDICINE
MBBS

COMMERCE
B.Com (General/Hons.)
B.Com (Hons.) - ACCA / CMA / CFA / CA

ARTS
BA (Hons.) in Performing Arts

LAW
BBA, LLB (Hons.) / BA, LLB (Hons.) / LLB (Hons.)

ARCHITECTURE
Bachelor of Architecture (B.Arch)

DESIGN
B.Des / M.Des

PSYCHOLOGY
B.Sc (Hons.) / M.Sc.

RESEARCH
Ph.D / M.Tech by Research

JOURNALISM & MASS COMMUNICATION
B.Sc. (Hons.)

MANAGEMENT
MBA / BBA (Hons.) in Business Analytics / BBA - General / Hons. / Sports Management / Hospitality & Event Management

ECONOMICS
B.Sc (Hons.)

COMPUTER APPLICATIONS
BCA / MCA

NURSING
Bachelor of Science (B.Sc.)

PHARMACY
B.Pharm / M.Pharm / Pharm.D / Ph.D

ALLIED HEALTH SCIENCES
B.Sc (Hons) in Cardiac Care / Anaesthesia & OT / Medical Radiology & Imaging / Dialysis Therapy / Emergency / Medical Lab / Medical Science

PHYSIOTHERAPY
Bachelor of Physiotherapy (BPT)

PESU SCHOLARSHIPS
₹110+ Crore merit scholarships given till date
pes.edu/scholarships

RESEARCH DRIVEN LEARNING
pes.edu/research

FLEXIBLE CURRICULUM
B.Tech Major/Minor & M.Tech Switch Program
pes.edu/btech

INTERNATIONAL INTERNSHIPS
pes.edu/summer

Some leading companies our students are placed at include: Adobe, Amazon, Apple, Netflix, Facebook, Google, Goldman Sachs, Mercedes Benz, Microsoft, Morgan Stanley...

Was awarded by KSURF in 2019
#1 University in Karnataka
New Universities Under 5 Years

PES UNIVERSITY
admissions.pes.edu
A+ NAAC

100 Feet Ring Road, BSK III Stage, Bengaluru 560085 | admissions@pes.edu | 8010 297 297



ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

'ಕನ್ನಡ ಶಾಲೆಗಳಿಗೆ ಬೀಗ, ವೃದ್ಧಿಯಾಗದ ಜ್ಞಾನ'

'ಸಮಾಜಮುಖಿ' ಸಾಹಿತ್ಯ ಸಮ್ಮೇಳನ • ಮಾತೃಭಾಷೆ ಅನ್ನದ ಭಾಷೆಯಾಗಿ ರೂಪುಗೊಳ್ಳದಿರುವ ಬಗ್ಗೆ ಭಾಷಾ ತಜ್ಞರ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಕ್ಕಳಲ್ಲಿ ಕನ್ನಡ ಭಾಷೆಯ ಬಗೆಗಿನ ಅಭಿರುಚಿ ಬೆಳೆಸಬೇಕಾದ ಕನ್ನಡ ಮಾಧ್ಯಮ ಶಾಲೆಗಳಿಗೆ ಬೀಗ ಹಾಕಲಾಗುತ್ತಿದೆ. ಇಲ್ಲಿ ನೆಲೆ ಕಂಡುಕೊಂಡಿರುವ ಬಹುರಾಷ್ಟ್ರೀಯ ಕಂಪನಿಗಳು ಭಾಷೆಯನ್ನು ಬದಿಗಿಟ್ಟು, ಕೌಶಲಕ್ಕೆ ಮಾತ್ರ ಮಣೆ ಹಾಕುತ್ತಿವೆ. ಉನ್ನತ ಶಿಕ್ಷಣ ಹಾಗೂ ಜ್ಞಾನ ವೃದ್ಧಿಗೆ ಈಗಲೂ ಆಂಗ್ಲ ಭಾಷೆ ಹಾಗೂ ಅದರಲ್ಲಿನ ಸಾಹಿತ್ಯವನ್ನೇ ಅವಲಂಬಿಸಬೇಕಾಗಿದೆ...'

ಹೀಗೆ ಕನ್ನಡ ಭಾಷೆಯ ಬಗೆಗಿನ ವಾಸ್ತವವನ್ನು ತೆರೆದಿಟ್ಟಿದ್ದು ಸಮಾಜಮುಖಿ ಪತ್ರಿಕೆ ವತಿಯಿಂದ ಹಮ್ಮಿಕೊಂಡಿದ್ದ 'ಸಮಾಜಮುಖಿ' ಸಾಹಿತ್ಯ ಸಮ್ಮೇಳನದ 'ಕನ್ನಡದ ಭಾಷಾ ಬಿಕ್ಕಟ್ಟುಗಳು' ಗೋಷ್ಠಿ. ಈ ಸಂದರ್ಭದಲ್ಲಿ ಕನ್ನಡವು ಅನ್ನದ ಭಾಷೆಯಾಗಿ ರೂಪುಗೊಳ್ಳಲು ಸಾಧ್ಯವೆ? ಕನ್ನಡದ ಈ ಸ್ಥಿತಿಗೆ ಯಾರು ಹೊಣೆ? ಭಾಷೆಯ ಬಗೆಗಿನ ಕೀಳರಿಮೆ ಹೋಗಲಾಡಿಸುವುದು ಹೇಗೆ? ಇಂತಹ ಸಾಲು ಸಾಲು ಪ್ರಶ್ನೆಗಳನ್ನು ಹುಟ್ಟುಹಾಕಿದ ಈ ಗೋಷ್ಠಿಯಲ್ಲಿ, ಶಾಲೆಗಳ ಬಲವರ್ಧನೆ, ವಿಶ್ವವಿದ್ಯಾಲಯಗಳ ಕಾರ್ಯನಿರ್ವಹಣೆಯಲ್ಲಿ ಬದಲಾವಣೆ, ಆಯಾ ಕ್ಷೇತ್ರದ ತಜ್ಞರಿಂದ ಕನ್ನಡದಲ್ಲಿ ಸಾಹಿತ್ಯ ಸೃಷ್ಟಿ, ಸರ್ಕಾರ ಹಾಗೂ ವಿವಿಧ ಸಂಸ್ಥೆಗಳಿಂದ ಭಾಷೆ ಬಗೆಗಿನ ಕೀಳರಿಮೆ ಹೋಗಲಾಡಿಸುವಿಕೆ ಯಂತಹ ಸಲಹೆಗಳೂ ವ್ಯಕ್ತವಾದವು.

'ಕನ್ನಡ ಎದುರಿಸುತ್ತಿರುವ ಬಿಕ್ಕಟ್ಟನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು' ಎಂಬ ಸಮನ್ವಯಕಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ವಿಮರ್ಶಕ ರಾಜೇಂದ್ರ ಚೆನ್ನಿ, 'ನಮ್ಮ ಮನಸ್ಸು ವಸಾಹತೀಕರಣಗೊಂಡಿದೆ. ಇದರಿಂದಾಗಿ ಕನ್ನಡದಲ್ಲಿನ ಜ್ಞಾನ ಸ್ಥಳೀಯವಾದದ್ದು ಎಂಬ ತಪ್ಪು ತಿಳಿವಳಿಕೆಯಿದೆ. ಈಗ ನಮ್ಮ ಮೇಲೆ ಯಾರೋ ಅಥವಾ ನಾವೇ ಹೇರಿಕೊಂಡಿರುವ ಮಾನಸಿಕ ವಸಾಹತುಶಾಹಿ ಲಕ್ಷಣಗಳನ್ನು ಗುರುತಿಸಬೇಕು' ಎಂದರು.

ಕನ್ನಡ ಶಾಲೆಗಳು ಬೀಗ ಹಾಕುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, '8,500 ಕನ್ನಡ ಶಾಲೆಗಳು ಈಗಾಗಲೇ ಮುಚ್ಚಿವೆ. ಖಾಲಿ ಇರುವ 45 ಸಾವಿರ ಶಿಕ್ಷಕರ ಹುದ್ದೆಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತಿಲ್ಲ. ಕನ್ನಡವು ಉತ್ಪಾದನಾ ಭಾಷೆಯಲ್ಲ ಎಂದು ಪರಿಗಣಿಸಲಾಗಿದೆ. 'ಬೆಂಗಳೂರಿನಲ್ಲಿ ₹10 ಲಕ್ಷ ಕೋಟಿ ಹೂಡಿಕೆಯಿಂದ ಉದ್ಯೋಗ ಸೃಷ್ಟಿಯಾಗುತ್ತದೆ' ಎಂದು ಕೈಗಾರಿಕಾ ಸಚಿವರು ಹೇಳುತ್ತಾರೆ. ಆದರೆ, ಎಷ್ಟು ಉದ್ಯೋಗ ಸೃಷ್ಟಿಯಾಗಿದೆ? ಹೂಡಿಕೆ ಮಾಡುವವರು ಕನ್ನಡಿಗರಲ್ಲ. ಉದ್ಯೋಗ ಸೃಷ್ಟಿಯಾದರೂ ಆ ಉದ್ಯೋಗ ಕೆಲ ಕೌಶಲವನ್ನು ನಿರೀಕ್ಷೆ ಮಾಡುತ್ತದೆ. ಆ ಕೌಶಲಗಳನ್ನು ನಮ್ಮ ವಿಶ್ವವಿದ್ಯಾಲಯಗಳು ವೃದ್ಧಿಸುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ನಿವೃತ್ತ ಪ್ರಾಧ್ಯಾಪಕ ಎಸ್. ಚಂದ್ರಶೇಖರ್, 'ಕನ್ನಡ ಮಾಧ್ಯಮದಲ್ಲಿ ಓದಿದರೆ ಕೆಲಸ ಸಿಗುವುದಿಲ್ಲ ಎಂಬ ವದಂತಿ ಎಲ್ಲೆಡೆ ಹಬ್ಬಿದೆ. ಅದು ನಿಜ ಕೂಡ ಹೌದು. ಕಂಪನಿಗಳು ಕೌಶಲವನ್ನು ಮಾತ್ರ ಪರಿಗಣಿಸುತ್ತಿವೆ. ಇಂಗ್ಲಿಷ್ ಶ್ರೀಮಂತರ ಭಾಷೆಯೆಂದು ಬಿಂಬಿತವಾದರೆ, ಕನ್ನಡ ಬಡವರ ಭಾಷೆಯಾಗಿ ಗುರುತಿಸಿಕೊಂಡಿದೆ. ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಕನ್ನಡದ ಪಠ್ಯ ಸಿಗುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಸಂತೋಷ್ ನಾಯಕ್, 'ಕನ್ನಡದಲ್ಲಿ ನಾವು ಸುಮಾರು ನೂರು ವರ್ಷಗಳು ಹಿಂದೆ ಇದ್ದೇವೆ. ಕನ್ನಡ ಭಾವನಾತ್ಮಕ ಭಾಷೆಯಾಗಿ ಬೆಳೆದರೆ, ಬೌದ್ಧಿಕವಾಗಿ ಏನೂ ಬೆಳೆದಿಲ್ಲ. ಕನ್ನಡದಲ್ಲಿ ಕಲಿಯಲು ಸರಿಯಾದ ವಾತಾವರಣ ಸೃಷ್ಟಿಸಿಲ್ಲ' ಎಂದು ಹೇಳಿದರು.

ಸಮಾಜಮುಖಿ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸಾಹಿತ್ಯಾಸಕ್ತರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

> ಜ್ಞಾನ ಪ್ರಸರಣಕ್ಕೆ ಸಂಬಂಧಿಸಿದಂತೆ ಸ್ಪರ್ಧೆ ನೀಡಲು ಕನ್ನಡ ಭಾಷೆಯಿಂದ ಸಾಧ್ಯವಾಗುತ್ತಿಲ್ಲ. ನಮ್ಮ ವಿಶ್ವವಿದ್ಯಾಲಯಗಳು ಈಗ ಕೆಲಸ ಮಾಡುವುದನ್ನೇ ನಿಲ್ಲಿಸಿವೆ
> **ಪೃಥ್ವಿದತ್ತ ಚಂದ್ರಶೋಭಿ,** ಇತಿಹಾಸಕಾರ

> ಕನ್ನಡ ಭಾಷೆಯ ಈ ಸ್ಥಿತಿಗೆ ಪರಕೀಯರ ಜತೆಗೆ ನಾವು ಕೂಡ ಕಾರಣ. ತರಗತಿಗಳು ಮತ್ತು ವೇದಿಕೆಗಳ ಮೇಲೆ ಕನ್ನಡದ ಬಗ್ಗೆ ಮಾತನಾಡುತ್ತೇವೆ. ನಾವು ಸರಿಯಾಗಿ ಭಾಷೆ ಬೆಳೆಸುತ್ತಿಲ್ಲ
> **ಎಲ್.ಎನ್. ಮುಕುಂದರಾಜ್,** ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ

'ಬೆಂಗಳೂರಿನ ಶಾಲೆಗಳು ಆಂಗ್ಲಮಯ'

'ಪ್ರಾಥಮಿಕ ಹಂತದಲ್ಲಿ ಕಲಿಕೆಯ ಗುಣಮಟ್ಟ ಅಧೋಗತಿಗೆ ಹೋಗಿದೆ. ಶಿಕ್ಷಕರ ಕೊರತೆ, ಕಳಪೆ ಗುಣಮಟ್ಟ ಸೇರಿ ಹಲವು ಕಾರಣಗಳಿವೆ. ಇದಕ್ಕೆ ಯಾರೂ ಜವಾಬ್ದಾರರಾಗುತ್ತಿಲ್ಲ. ಇಂಗ್ಲಿಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡುತ್ತಿರುವವರ ಸಂಖ್ಯೆ ಜಾಸ್ತಿಯಾಗಿದೆ. 2024–25ನೇ ಸಾಲಿನಲ್ಲಿ 1ರಿಂದ 10ನೇ ತರಗತಿವರೆಗೆ 50.67 ಲಕ್ಷ ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದರೆ, 49.92 ಲಕ್ಷ ಮಕ್ಕಳು ಕನ್ನಡ ಮಾಧ್ಯಮದವರಾಗಿದ್ದಾರೆ. ಬೆಂಗಳೂರಿನಲ್ಲಿ ಶೇ 71 ರಷ್ಟು ಮಕ್ಕಳು ಆಂಗ್ಲ ಮಾಧ್ಯಮದಲ್ಲಿ ಓದುತ್ತಿದ್ದಾರೆ. ಕಲಬುರಗಿ ಮತ್ತು ಬೆಳಗಾವಿಯಲ್ಲಿ ಮಾತ್ರ ಕನ್ನಡ ಮಾಧ್ಯಮದಲ್ಲಿ ಹೆಚ್ಚಿನ ಮಕ್ಕಳು ಓದುತ್ತಿದ್ದಾರೆ' ಎಂದು ಶಿಕ್ಷಣ ಇಲಾಖೆಯ ನಿವೃತ್ತ ಅಧಿಕಾರಿ ವೆಂಕಟೇಶ ಮಾಚಕನೂರ ಹೇಳಿದರು.

ಸಾಹಿತ್ಯದ ಚಿಂತನ– ಮಂಥನ

ಸಮಾಜಮುಖಿ ಪತ್ರಿಕೆ ವತಿಯಿಂದ ಅರಮನೆ ರಸ್ತೆಯಲ್ಲಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಆವರಣದಲ್ಲಿ ಹಮ್ಮಿಕೊಂಡಿದ್ದ 'ಸಮಾಜಮುಖಿ ಸಾಹಿತ್ಯ ಸಮ್ಮೇಳನ'ವು ಕನ್ನಡ ಸಾಹಿತ್ಯದ ಚಿಂತನ–ಮಂಥನಕ್ಕೆ ವೇದಿಕೆಯಾಯಿತು. ಮೊದಲ ದಿನವಾದ ಶನಿವಾರ ಐದು ವೇದಿಕೆಗಳಲ್ಲಿ ನಡೆದ ವಿವಿಧ ಗೋಷ್ಠಿಗಳು ಕನ್ನಡ ಸಾಹಿತ್ಯದ ಸಮಕಾಲೀನ ಹಾಗೂ ಭವಿಷ್ಯದ ನೆಲೆ–ಬೆಲೆಗಳನ್ನು ಗುರುತಿಸಲು ಸಹಕಾರಿಯಾದವು.

ಪುಸ್ತಕ ಪ್ರದರ್ಶನ–ಮಾರಾಟ

ಸಮ್ಮೇಳನದಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟ ಹಮ್ಮಿಕೊಳ್ಳಲಾಗಿತ್ತು. ಪ್ರಮುಖ ಪ್ರಕಾಶನ ಸಂಸ್ಥೆಗಳ 16 ಮಳಿಗೆಗಳು ಇದ್ದವು. ಸಾಹಿತ್ಯಾಸಕ್ತರು ಪುಸ್ತಕಗಳನ್ನು ಖರೀದಿಸುವ ಜತೆಗೆ ಸಾಹಿತಿಗಳ ಜತೆಗೆ ಫೋಟೊಗಳನ್ನೂ ಕ್ಲಿಕ್ಕಿಸಿಕೊಂಡು ಸಂಭ್ರಮಿಸಿದರು. ಬೆಳಿಗ್ಗೆ ಹಮ್ಮಿಕೊಂಡಿದ್ದ ಸಮಾಜಮುಖಿ ಬಯಲು ಚಿತ್ರಕಲಾ ಶಿಬಿರದಲ್ಲಿ ನಾಡಿನ ಪ್ರಮುಖ ಕಲಾವಿದರು ಕಲಾಕೃತಿಗಳನ್ನು ರಚಿಸಿದರು.

'ಎರಡು ವರ್ಷ ಹಾಡಲು ಕಷ್ಟವಾಗಿತ್ತು'

ರೂಮಿ ಹರೀಶ್

ಬೆಂಗಳೂರು: 'ಲಿಂಗತ್ವ ಅಲ್ಪಸಂಖ್ಯಾತನಾಗಿ ಬದಲಾದಾಗ ಎರಡು ವರ್ಷ ಹಾಡಲು ಆಗಲಿಲ್ಲ. ಧ್ವನಿಯಲ್ಲಿ ಬದಲಾವಣೆ, ಖಿನ್ನತೆ ಸೇರಿ ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು' ಎಂದು ಸಂಗೀತಗಾರರಾದ ರೂಮಿ ಹರೀಶ್ ಹೇಳಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಸಮಾಜಮುಖಿ ಸಾಹಿತ್ಯ ಸಮ್ಮೇಳನದಲ್ಲಿ 'ಹೊಸ ತಲೆಮಾರಿನ ಸಂಗೀತ: ಶಬ್ದದೊಳಗಣ ನಿಶ್ಯಬ್ಧದತ್ತ ಪಯಣ' ಕುರಿತು ಮಾತನಾಡಿದರು.

'ಹೆಣ್ಣು ಗಂಡಾಗಿ ಬದಲಾಗಲು ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡರೆ ಧ್ವನಿಯಲ್ಲಿ ಬದಲಾವಣೆ ಆಗುತ್ತದೆ ಎಂಬುದು ಗೊತ್ತಿತ್ತು. ಆದರೆ, ದೊಡ್ಡ ಮಟ್ಟದಲ್ಲಿ ಏರಿಳಿತವಾಗುತ್ತದೆ ಅಂದುಕೊಂಡಿರಲಿಲ್ಲ. ಇದರಿಂದ ಹಾಡಲು ತೊಂದರೆ ಆಯಿತು. ಮಾನಸಿಕ ಖಿನ್ನತೆಗೆ ಒಳಗಾಗಿ, ಸಮಸ್ಯೆಯಿಂದ ಹೊರ ಬರಲು ಪರದಾಡಿದೆ. ಹಲವರ ಬಳಿ ಈ ವಿಷಯ ಚರ್ಚಿಸಿದರೂ ಪರಿಹಾರ ಸಿಕ್ಕಿರಲಿಲ್ಲ' ಎಂದರು.

'ಪಂಡಿತ್ ರಾಜೀವ ತಾರಾನಾಥ ಅವರು ಒಡನಾಟಕ್ಕೆ ಬಂದ ಬಳಿಕ ನನ್ನಲ್ಲಿ ಬದಲಾವಣೆ ಕಂಡುಕೊಂಡೆ. ರಾಜೀವ ಅವರೇ ಕರೆ ಮಾಡಿ ನನ್ನ ಧ್ವನಿಯ ಬಗ್ಗೆ ಚರ್ಚಿಸಿದರು. ಸಂಗೀತದಿಂದಲೇ ಪರಿಹಾರ ದೊರೆಯಿತು' ಎಂದು ನುಡಿದರು.

'ನಾನು ಖಾಯಲ್ ಹಾಗೂ ಠುಮ್ರಿ ಹೊರತುಪಡಿಸಿ ಬೇರೆ ಹಾಡುವುದಿಲ್ಲ. ನಾನು ಹಾಡದಿದ್ದರೆ ಜಗತ್ತು ಮುಳುಗುತ್ತಿರಲಿಲ್ಲ. ಆದರೆ, ನನಗೆ ತೊಂದರೆ ಆಯಿತು. ಖಿನ್ನತೆಗೆ ಒಳಗಾದೆ, ಪೇಂಟಿಂಗ್ ಮಾಡಿದರೂ ಸರಿಯಾಗಲಿಲ್ಲ. ಸಾಕಷ್ಟು ಸವಾಲುಗಳ ನಡುವೆ ಹಾಡಲು ನಿರ್ಧರಿಸಿದೆ. ಸಂಗೀತದಿಂದಲೇ ಪರಿಹಾರ ಸಿಕ್ಕಿತು' ಎಂದು ತಿಳಿಸಿದರು.

ಗಾಯಕಿ ಎಂ.ಡಿ.ಪಲ್ಲವಿ ಮಾತನಾಡಿ, 'ಸುಗಮ ಸಂಗೀತದಲ್ಲಿ ಹಾಡುವ ಭಾವಗೀತೆಗಳು ನನ್ನ ಜೀವನದ ಒಂದು ಭಾಗ. ಗಾಯಕರಾದ ಅನಂತಸ್ವಾಮಿ ಮತ್ತು ಅಶ್ವಥ್ ಅವರು ಸಂಗೀತದಲ್ಲಿ ಸಾಕಷ್ಟು ಪ್ರಯೋಗ ಮಾಡಿದರು. ಆದರೆ ನಾನು ಸಂಗೀತದಲ್ಲಿ ಪ್ರಯೋಗ ಮಾಡಿದಾಗ ಆರಂಭದಲ್ಲಿ ವಿರೋಧ ವ್ಯಕ್ತವಾಯಿತು. ಸಂಗೀತ ಕಾರ್ಯಕ್ರಮ ನೀಡುತ್ತಿದ್ದಾಗ ವೇದಿಕೆ ಬಳಿ ಬಂದು ಕೂಗಾಡಿದ್ದರು' ಎಂದು ನೆನಪಿಸಿಕೊಂಡರು.

ಪತ್ರಕರ್ತ ಎಸ್.ಆರ್.ರಾಮಕೃಷ್ಣ ಮಾತನಾಡಿ, 'ಹೊಸ ತಲೆಮಾರಿನವರು ಒಂದೇ ರೀತಿಯ ಯೋಚನೆ ಮಾಡುತ್ತಾರೆ. ಒಂದೇ ತರಹದ ಸಂಗೀತ ಕೇಳುತ್ತಾರೆ ಮತ್ತು ಸಿನಿಮಾ ನೋಡುತ್ತಾರೆ ಎಂಬುದು ಸುಳ್ಳು. ಅವರಲ್ಲೂ ಸಾಕಷ್ಟು ವೈವಿಧ್ಯತೆ ಇರುತ್ತದೆ' ಎಂದರು ವಿಶ್ಲೇಷಿಸಿದರು.

ಹಳಗನ್ನಡದ ಜುಗಲ್‌ಬಂದಿ: ತಲೆದೂಗಿದ ಪ್ರೇಕ್ಷಕ

ಬೆಂಗಳೂರು: 'ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯ ಲಂಪಿನಿಂಪುಗಳ್ಗಾಗರವಾದ ಮಾನಸರೆ...' ಎಂಬ ಪಂಪನ 'ವಿಕ್ರಮಾರ್ಜುನ ವಿಜಯ' ಕಾವ್ಯದ ಸಾಲುಗಳನ್ನು ನಿವೃತ್ತ ಕನ್ನಡ ಪ್ರಾಧ್ಯಾಪಕಿ ಎನ್.ಆರ್. ಲಲಿತಾಂಬ ಅವರು ವಾಚಿಸಿದರೆ, ಆ ಸಾಲುಗಳನ್ನು ರಾಗಬದ್ಧವಾಗಿ ಹಾಡಿದವರು ಎಂ.ಡಿ. ಪಲ್ಲವಿ.

ಹೀಗೆ ಹಳಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡ ಕಾವ್ಯಗಳಲ್ಲಿನ ಆಯ್ದ ಸಾಲುಗಳ ವಾಚನಕ್ಕೆ ಕಿವಿಯಾದ ಪ್ರೇಕ್ಷಕರು, ಗಾಯನಕ್ಕೆ ತಲೆದೂಗಿದರು. ಇದಕ್ಕೆ ಕಾರಣ ವಾಚನ–ಗಾಯನದ ಜುಗಲ್‌ಬಂದಿ. ಸಮಾಜಮುಖಿ ಸಾಹಿತ್ಯ ಸಮ್ಮೇಳನದ ಮುಖ್ಯವೇದಿಕೆಯಲ್ಲಿ ಶನಿವಾರ ನಡೆದ 'ಹಳಗನ್ನಡ ಸಾಹಿತ್ಯ–ಹಿಂದಣಹೆಜ್ಜೆಯನರಿತಲ್ಲದೆ' ಗೋಷ್ಠಿಯು ಪ್ರೇಕ್ಷಕರನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಯಶಸ್ವಿಯಾಯಿತು. ಹಳಗನ್ನಡದ ಅಗತ್ಯ, ಮಹತ್ವ ಹಾಗೂ ಉಚ್ಚಾರಣೆಯ ವೈಶಿಷ್ಟ್ಯವನ್ನೂ ಸಾರಿತು.

ರನ್ನನ 'ಗದಾಯುದ್ಧ' ಕಾವ್ಯದಲ್ಲಿ ಬರುವ ದುರ್ಯೋಧನನ ಅವಸಾನದ ಪ್ರಸಂಗವನ್ನು ಪ್ರಾಧ್ಯಾಪಕ ಶಾಂತರಾಜು ವಾಚಿಸಿದರು. ಇದನ್ನು ಗಮಕ ರೂಪದಲ್ಲಿ ಪ್ರಸ್ತುತಪಡಿಸಿದವರು ಪ್ರಸಿದ್ಧ ಗಮಕಿ ಗಂಗಮ್ಮ ಕೇಶವಮೂರ್ತಿ. ಧ್ವನಿಯಲ್ಲಿನ ಏರಿಳಿತ ಸನ್ನಿವೇಶವನ್ನು ಕಟ್ಟಿಕೊಡುವಂತಿತ್ತು. ನಿವೃತ್ತ ಪ್ರಾಧ್ಯಾಪಕ ಚಂದ್ರಶೇಖರ ನಾದೂರು ಅವರು ರಾಘವಾಂಕನ 'ಹರಿಶ್ಚಂದ್ರ' ಕಾವ್ಯದಲ್ಲಿ ಬರುವ ಚಂದ್ರಮತಿ ಪ್ರಲಾಪವನ್ನು ವಾಚಿಸಿದರು. ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಶ್ಯಾಮಲಾ ಪ್ರಕಾಶ್ ಅವರು ಗಮಕ ರೂಪದಲ್ಲಿ ಹಾಡಿದರು. ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಕಾವ್ಯದ ಸಾಲುಗಳನ್ನು ಕಥಾ ಕೀರ್ತನಕಾರ ಲಕ್ಷ್ಮಣದಾಸ್ ವಾಚಿಸಿದರೆ, ಗಮಕಿ ಎಂ.ಆರ್. ಸತ್ಯನಾರಾಯಣ ಅವರು ಗಮಕ ಗಾಯನ ಪ್ರಸ್ತುತಪಡಿಸಿದರು.

ಈ ಗೋಷ್ಠಿಯಲ್ಲಿ ಆಶಯ ನುಡಿಗಳನ್ನಾಡಿದ ಸಾಹಿತಿ ಹಂಪ ನಾಗರಾಜಯ್ಯ, 'ಹಳಗನ್ನಡದಲ್ಲಿ ಇತಿಹಾಸ, ಭಾಷೆಯ ಸೊಬಗು, ಛಂದಸ್ಸು ಎಲ್ಲವೂ ಇದೆ. ಹಳಗನ್ನಡ ಕವಿಗಳು ನಮಗೆ ದೊಡ್ಡ ಆಸ್ತಿಯನ್ನು ಬಿಟ್ಟು ಹೋಗಿದ್ದಾರೆ. ಆದರೆ, ಇತ್ತೀಚೆಗೆ ಹಳಗನ್ನಡಕ್ಕೆ ಪ್ರಾಧಾನ್ಯ ಕಡಿಮೆ ಆಗುತ್ತಿದೆ' ಎಂದರು.

ಸಮ್ಮೇಳನದಲ್ಲಿ ಸಾಹಿತ್ಯಾಸಕ್ತರು ಪುಸ್ತಕಗಳನ್ನು ಖರೀದಿಸಿದರು

ಮಸೀದಿಗಳಲ್ಲಿ 'ಜಾಗೃತಿ': ಕ್ರಮಕ್ಕೆ ಆಗ್ರಹ

ಮಂಗಳೂರು: ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಮಸೀದಿಗಳಿಗೆ ತೆರಳಿದ ಪೊಲೀಸರು ಕರ್ನಾಟಕ ಗೋವಧೆ ಮತ್ತು ಗೋಸಂರಕ್ಷಣಾ ಕಾಯ್ದೆಯ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಮುಸ್ಲಿಮರನ್ನು ಅಪರಾಧಿ ಎನಿಸುವ ಸಮುದಾಯ ಎಂದು ಬಿಂಬಿಸಿದೆ. ಇದಕ್ಕೆ ಆದೇಶ ನೀಡಿದ ಅಧಿಕಾರಿ ಮತ್ತು ಮಸೀದಿಗಳಿಗೆ ತೆರಳಿದ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಿಪಿಎಂ ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಈ ಕುರಿತು ಪಶ್ಚಿಮ ವಲಯ ಐಜಿಪಿ ಅಮಿತ್ ಸಿಂಗ್ ಅವರಿಗೆ ಮನವಿ ಸಲ್ಲಿಸಿರುವ ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಮುನೀರ್ ಕಾಟಿಪಳ್ಳ, ಬೆಳ್ತಂಗಡಿ ತಾಲ್ಲೂಕಿನ ಕೊಕ್ಕಡ, ಸುಳ್ಯದ ಕೇಂದ್ರ ಜುಮ್ಮಾ ಮಸೀದಿ, ಮೊಗರ್ಪಣೆ ಜುಮಾ ಮಸೀದಿ, ದುಗ್ಗಲಡ್ಕ ಮಸೀದಿ, ಸುಣ್ಣಮೂಲೆ, ಕುಂಭಕ್ಕೋಡು, ಅರಂತೋಡು ಮಸೀದಿಗಳಲ್ಲಿ ಪೊಲೀಸರು ಕಾಯ್ದೆಯ ಬಗ್ಗೆ ಕಾರ್ಯಕ್ರಮ ಆಯೋಜಿಸಿದ್ದಾರೆ ಎಂದು ದೂರಿದ್ದಾರೆ.

'ಕಾಯ್ದೆಯೊಂದನ್ನು ಮುಸ್ಲಿಂ ಸಮುದಾಯಕ್ಕೆ ಮಾತ್ರ ಸೀಮಿತಗೊಳಿಸಿ ಸಮುದಾಯವನ್ನು ಅವಮಾನಿಸುವ ಮತ್ತು ಧಾರ್ಮಿಕ ಕೇಂದ್ರವನ್ನು ಅಪರಾಧೀಕರಣಗೊಳಿಸುವ ಕೃತ್ಯ ಪೊಲೀಸರಿಂದ ನಡೆದಿದೆ. ಕೊಕ್ಕಡ ಮಸೀದಿಯಲ್ಲಿ ಧರ್ಮಸ್ಥಳ ಪೊಲೀಸರು ಜಾಗೃತಿಯ ಹೆಸರಿನಲ್ಲಿ ಕಾನೂನು ಕ್ರಮದ ಎಚ್ಚರಿಕೆ ನೀಡಿದ್ದಾರೆ. ಸುಳ್ಯ ತಾಲ್ಲೂಕಿನ ವಿವಿಧ ಮಸೀದಿಗಳಲ್ಲಿ ಪ್ರಾರ್ಥನೆಗೆ ಬಂದವರನ್ನು ನಿಲ್ಲಿಸಿ ಕಾಯ್ದೆಯ ಬಗ್ಗೆ ವಿವರಿಸಿದ್ದಾರೆ. ಕಾಯ್ದೆ ಉಲ್ಲಂಘಿಸಿದವರ ಮನೆಗಳನ್ನು ಜಪ್ತಿ ಮಾಡಲಾಗುವುದು ಎಂದು ಬೆದರಿಸಿದ್ದಾರೆ. ಕಾಯ್ದೆಯನ್ನು ಮುಸ್ಲಿಮರು ಮಾತ್ರ ಉಲ್ಲಂಘಿಸುತ್ತಾರೆ ಎಂಬಂತೆ ವರ್ತಿಸಿದ್ದಾರೆ' ಎಂದು ಮನವಿಯಲ್ಲಿ ಹೇಳಿದ್ದಾರೆ.

ಚಟುವಟಿಕೆ ಸ್ಥಗಿತಗೊಳಿಸಿದ ಬಾಗನ್

ಕೋಲ್ಕತ್ತ (ಪಿಟಿಐ): ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ವಾಣಿಜ್ಯ ಹಕ್ಕುಗಳಿಗೆ ಒಂದೂ ಬಿಡ್ ಪಡೆಯುವಲ್ಲಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ವಿಫಲವಾದ ಬೆನ್ನಲ್ಲೇ ಮೋಹನ್‌ಬಾಗನ್ ಸೂಪರ್ ಜೈಂಟ್ ತಂಡ ಶನಿವಾರದಿಂದಲೇ ಜಾರಿಗೆ ಬರುವಂತೆ ಅನಿರ್ದಿಷ್ಟಾವಧಿಗೆ ಫುಟ್‌ಬಾಲ್ ಚಟುವಟಿಕೆಗಳನ್ನು ಅಮಾನತುಗೊಳಿಸಿದೆ.

ಆಟಗಾರರು ಮತ್ತು ನೆರವು ಸಿಬ್ಬಂದಿಯ ಗುತ್ತಿಗೆ ಬಗ್ಗೆ ಮುಂದಿನ ತಿಂಗಳು ಪರಿಶೀಲನೆ ನಡೆಸುವುದಾಗಿ ಕ್ಲಬ್ ತಿಳಿಸಿದೆ.

ಐಎಸ್‌ಎಲ್‌ಗೆ ವಾಣಿಜ್ಯ ಹಕ್ಕುಗಳನ್ನು ಪಡೆಯಲು ಯಾವ ಸಂಸ್ಥೆಯೂ ಮುಂದೆ ಬಂದಿಲ್ಲ ಎಂದು ಎಐಎಫ್‌ಎಫ್ ಶುಕ್ರವಾರ ತಡರಾತ್ರಿ ತಿಳಿಸಿತ್ತು. ಇದರಿಂದಾಗಿ ದೇಶೀ ಫುಟ್‌ಬಾಲ್ ಸ್ಥಿತಿಗತಿ ಅತಂತ್ರಗೊಂಡಿದೆ.

'ಐಎಸ್‌ಎಲ್ ಆರಂಭದ ಬಗ್ಗೆ ಸ್ಪಷ್ಟನೆ ಸಿಗುವವರೆಗೆ ನಾವು ಚಟುವಟಿಕೆ ನಡೆಸುವುದಿಲ್ಲ' ಎಂದು ಮೋಹನ್ ಬಾಗನ್ ಕ್ಲಬ್‌ನ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು. 'ಐಎಸ್‌ಎಲ್ ಮೇಲೆ ಅನಿಶ್ಚಿತತೆಯ ಕಾರ್ಮೋಡ ಕವಿದಿದ್ದರೂ ಆಟಗಾರರ ವೇತನ ನಿಲ್ಲಿಸಿಲ್ಲ' ಎಂದರು.

ಬಿಸಿಸಿಐಗೆ ಮನವಿ: ಭಾರತ ಫುಟ್‌ಬಾಲ್ ಅನ್ನು ಈಗಿನ ಬಿಕ್ಕಟ್ಟಿನಿಂದ ಹೊರತರಲು ನೆರವಾಗುವಂತೆ ವಿಶ್ವದ ಶ್ರೀಮಂತ ಕ್ರಿಕೆಟ್ ಸಂಸ್ಥೆಯಾದ ಬಿಸಿಸಿಐಗೆ ಈಸ್ಟ್ ಬೆಂಗಾಲ್‌ನ ಕಾರ್ಯಕಾರಿ ಸಮಿತಿಯ ಹಿರಿಯ ಸದಸ್ಯ ದೇವವ್ರತ (ನಿತು) ಸರ್ಕಾರ್ ಮನವಿ ಮಾಡಿದ್ದಾರೆ.

ಮುಂದಿನ ಐದು ವರ್ಷಗಳಿಗೆ ಬಿಸಿಸಿಐ ಪ್ರಾಯೋಜಕತ್ವ ವಹಿಸಲಿ. ಅವರಿಗೆ ₹100 ಕೋಟಿ– ₹150 ಕೋಟಿ ನೀಡುವುದು ದೊಡ್ಡ ವಿಷಯೇನಲ್ಲ. ಅವರು ಜವಾಬ್ದಾರಿ ವಹಿಸಿದಲ್ಲಿ ಭಾರತದ ಫುಟ್‌ಬಾಲ್ ಏಳಿಗೆ ಕಾಣಲಿದೆ' ಎಂದು ಅವರು ಹೇಳಿದ್ದಾರೆ.

ಐಎಸ್‌ಎಲ್ ಮುಂದುವರಿಯುವ ವಿಶ್ವಾಸವಿದೆ ಎಂದೂ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಇಂದು

'ಸಿಂಧೂರ ನಮನ' ನೃತ್ಯೋತ್ಸವ: ಅತಿಥಿಗಳು: ರಾಮಮೋಹನ್, ರಂಗನಾಥ ಭಾರದ್ವಾಜ್, ಆಯೋಜನೆ: ಶ್ರೀ ಅಕಾಡೆಮಿ ಆಫ್ ಮ್ಯೂಸಿಕ್ ಆ್ಯಂಡ್ ಆರ್ಟ್ಸ್, ಸ್ಥಳ: ಜಯರಾಮ ಸೇವಾ ಮಂಡಲಿ, ಜಯನಗರ ಎಂಟನೇ ಬ್ಲಾಕ್, ಬೆಳಿಗ್ಗೆ 8.30ರಿಂದ

ದಿ ಕಾಂ ಡೀಲ್ ಟ್ರಸ್ಟ್ ರಜತ ಮಹೋತ್ಸವದ ಮೂರನೇ ದಿನದ ಕಾರ್ಯಕ್ರಮ: 'ಟ್ರೈನಿಂಗ್ ವರ್ಕ್‌ಶಾಪ್–ಸ್ಮಾಲ್ ಗ್ರ್ಯಾಂಟ್ ಪ್ರಪೋಸಲ್ ರೈಟಿಂಗ್, ಟ್ರೈನಿಂಗ್ ವರ್ಕ್‌ಶಾಪ್–ಗ್ರ್ಯಾಂಟ್ ರೀವಿವ್ಯೂ ಆ್ಯಂಡ್ ಮಾನಿಟರಿಂಗ್, ಆಯೋಜನೆ: ದಿ ಕಾಂ ಡೀಲ್ ಟ್ರಸ್ಟ್ (ಟಿಸಿಡಿಟಿ), ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 9ರಿಂದ

ಮಂಜುನಾಥ ಅದ್ದೆ ಅವರ 'ಬಡವರ ರಾಜಕುಮಾರ' ಪುಸ್ತಕ ಬಿಡುಗಡೆ: ಜಿ.ಸಿ. ಚಂದ್ರಶೇಖರ್, ಪುಸ್ತಕದ ಕುರಿತು: ಕೆ.ವೈ. ನಾರಾಯಣಸ್ವಾಮಿ, ಅತಿಥಿಗಳು: ಎಲ್. ಹನುಮಂತಯ್ಯ, ಡಾ. ವಸುಂಧರಾ ಭೂಪತಿ, ಉಪಸ್ಥಿತಿ: ಅಬ್ದುಲ್ ವಾಜಿದ್, ಕೇಶವ ರಾಜಣ್ಣ, ಮಮತಾ ಕೆ.ಎನ್., ಹುಲಿಕುಂಟೆ ಮೂರ್ತಿ, ಆಯೋಜನೆ: ಹೆಸರಘಟ್ಟ ಹೋಬಳಿ ಸಾಹಿತ್ಯ–ಸಹೃದಯರ ವೇದಿಕೆ, ಕೌದಿ ಪ್ರಕಾಶನ, ಸ್ಥಳ: ಅನುಬಂಧ ರೆಸಾರ್ಟ್, ಕಾಕೋಳು ಗ್ರಾಮ, ಹೆಸರಘಟ್ಟ ಹೋಬಳಿ, ಯಲಹಂಕ, ಬೆಳಿಗ್ಗೆ 10.30



ವಿ.ಆರ್.ಹನುಮಂತಯ್ಯ ಅವರ 'ಕುರುಬರ ಚರಿತ್ರೆ' ಗ್ರಂಥ ಪ್ರಕಟಣೆಯ ಶತಮಾನ ಸ್ಮರಣೆ ಒಂದು ದಿನದ ವಿಚಾರ ಸಂಕಿರಣ: ಈಶ್ವರಾನಂದ ಸ್ವಾಮೀಜಿ, ಉದ್ಘಾಟನೆ: ಎಚ್.ಎಂ. ರೇವಣ್ಣ, ಅಧ್ಯಕ್ಷತೆ: ಡಿ.ವಿ. ಪರಮಶಿವಮೂರ್ತಿ, ಎಫ್.ಟಿ. ಹಳ್ಳಿಕೇರಿ ಅವರು ಸಂಪಾದಿಸಿದ 'ವಿ.ಆರ್. ಹನುಮಂತಯ್ಯ–ಜೀವನ ಮತ್ತು ಸಾಹಿತ್ಯ' ಪುಸ್ತಕ ಬಿಡುಗಡೆ: ಆಶಯ ಭಾಷಣ: ಚನ್ನಪ್ಪ ಕಟ್ಟಿ, ಅತಿಥಿ: ಎಂ.ಆರ್. ಹುಲಿನಾಯ್ಕರ, ಆಯೋಜನೆ: ಹಾಲುಮತ ಅಧ್ಯಯನ ಪೀಠ ಕನ್ನಡ ವಿಶ್ವವಿದ್ಯಾಲಯ ಹಂಪಿ, ಕನಕದಾಸ ಆಧ್ಯಾತ್ಮ ಪ್ರತಿಷ್ಠಾನ, ಸ್ಥಳ: ಕಾಸಿಯಾ ಉದ್ಯೋಗ ಭವನ, ವಿಜಯನಗರ, ಬೆಳಿಗ್ಗೆ 10.30

ಸಂಸ್ಥಾಪನಾ ದಿನಾಚರಣೆ, ಕರ್ನಾಟಕ ರಾಜ್ಯೋತ್ಸವ, ದತ್ತಿ ಪುರಸ್ಕಾರ, 'ಆರ್ಯವೈಶ್ಯ ಸಾಧಕ ಸಿರಿ' ಪ್ರಶಸ್ತಿ ಪ್ರದಾನ: ಉದ್ಘಾಟನೆ: ಪಿ.ಎನ್. ಗೋವಿಂದರಾಜುಲು, ಅತಿಥಿಗಳು: ಕೆ.ವಿ. ರಾಮ್‌ಪ್ರಸಾದ್, ಆಯೋಜನೆ: ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತು, ಸ್ಥಳ: ಮಾರುತಿ ಸಭಾಂಗಣ, ವಾಸವಿ ವಿದ್ಯಾನಿಕೇತನ ಶಾಲೆ, ವಾಣಿ ವಿಲಾಸ ರಸ್ತೆ, ವಿ.ವಿ. ಪುರ, ಬೆಳಿಗ್ಗೆ 10.30

ಕವಿಗೋಷ್ಠಿ, ಗೀತ ಗಾಯನ, ಪ್ರಶಸ್ತಿ ಪ್ರದಾನ: ಬಿ. ಶೃಂಗೇಶ್ವರ್, ಅಧ್ಯಕ್ಷತೆ: ವಿ. ರೇಣುಕಾ ಪ್ರಸನ್ನ, ವಿ. ಮಲ್ಲಿಕಾರ್ಜುನಯ್ಯ, ರಾಧಿಕಾರಂಜಿನಿ, ಆಯೋಜನೆ: ಸಮ್ಮಿಲನ, ಸ್ಥಳ: ಕೆನ್ ಕಲಾಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಈಶಾನ್ಯ ರಾಜ್ಯಗಳ ಸಮ್ಮಿಲನೋತ್ಸವ–2025, ನಮ್ಮ ಬೆಂಗಳೂರಿನಲ್ಲಿ ಸಂಸ್ಕೃತಿ, ಏಕತೆ, ವೈವಿಧ್ಯತೆಯ ಸಂಭ್ರಮಾಚರಣೆ: ಅತಿಥಿಗಳು: ಕೆ. ಸಂಗ್ಮಾ, ಪ್ರದ್ಯೋತ್ ಬಿಕ್ರಮ್ ಮಾಣಿಕ್ಯ ದೆಬ್ಬರ್ಮಾ, ಅತಿಥಿಗಳು: ಸುರೇಶ್ ಬಾಬು, ಸತೀಶ್ ರೆಡ್ಡಿ ಎಂ., ಜೇಮ್ಸ್ ಪಿ.ಕೆ. ಸಂಗ್ಮಾ, ಆಯೋಜನೆ: ನಾರ್ತ್ ಈಸ್ಟ್ ಫ್ಯೂಷನ್ ಕಾರ್ನಿವಲ್, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಶಾಂತಿನಗರ, ಬೆಳಿಗ್ಗೆ 11

ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವ 'ಮನೋತ್ಸವ': ಆಯೋಜನೆ: ನಿಮ್ಹಾನ್ಸ್, ರೋಹಿಣಿ ನಿಲೇಕಣಿ ಫಿಲಾಂತ್ರೊಪಿಸ್ ಫೌಂಡೇಷನ್, ಸ್ಥಳ: ಹೋಟೆಲ್ ಲಲಿತ್ ಅಶೋಕ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11ರಿಂದ

'ಪಾತಿವ್ರತ್ಯ ಪಾರಮ್ಯ' ತಾಳಮದ್ದಳೆ ಪ್ರದರ್ಶನ: ಸ್ಥಳ: ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನ, ಜ್ಞಾನಶಕ್ತಿನಗರ, ಕೊಡಿಗೆಹಳ್ಳಿ, ಮಧ್ಯಾಹ್ನ 2.27

'ದ್ರೌಪದಿ ಅಪಹರಣ' 'ದ್ರೌಪದಿ ಪ್ರತಾಪ' ಯಕ್ಷಗಾನ ಪ್ರದರ್ಶನ: ಆಯೋಜನೆ: ಸುವರ್ಣ ಪ್ರಸಾಧನ ಯಕ್ಷರಂಗ, ಸ್ಥಳ: ನಿಸರ್ಗ ಗ್ರೌಂಡ್, ಯಲಹಂಕ ಉಪನಗರ, ಐದನೇ ಹಂತ, ಮಧ್ಯಾಹ್ನ 3.30ರಿಂದ

ಸಮಾಜಮುಖಿ ಸಾಹಿತ್ಯ ಸಮ್ಮೇಳನ–2025:

ಐದು ವೇದಿಕೆಗಳಲ್ಲಿ ಕಾರ್ಯಕ್ರಮ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಆವರಣ, ಅರಮನೆ ರಸ್ತೆ, **ಬೆಳಿಗ್ಗೆ 10ಕ್ಕೆ ಚಿತ್ರಕಲಾ ಪ್ರದರ್ಶನದ ಉದ್ಘಾಟನೆ,** 10: 'ಬಿಕ್ಕಟ್ಟಿನಲ್ಲಿ ಗಣತಂತ್ರ ಮತ್ತು ಪ್ರಜಾಪ್ರಭುತ್ವ?': ಬಿ.ಎಲ್.ಶಂಕರ್, ರಾಜಾರಾಮ್ ತೋಳ್ಪಾಡಿ, ಅಗ್ರಹಾರ ಕೃಷ್ಣಮೂರ್ತಿ, ಎ.ನಾರಾಯಣ, ಪ್ರಕಾಶ್ ಶೇಷರಾಘವಾಚಾರ್, ಆಯಿಷಾ ಪರ್ಝಾನಾ ಯು.ಟಿ., ಎಂ.ಕೆ.ಆನಂದರಾಜೇ ಅರಸ್, 'ಹುಳಿಮಾವಿನ ಮರ ಮತ್ತು ಸುರಗಿ–ಆತ್ಮಕಥನಗಳ ತೌಲನಿಕ ಚರ್ಚೆ': ಕೆ.ಸಿ.ಶಿವಾರೆಡ್ಡಿ, ತಾರಿಣಿ ಶುಭದಾಯಿನಿ, ಸುಬ್ಬು ಹೊಲೆಯಾರ್, ಸೌಮ್ಯಾ ಕೋಡೂರು, 'ಜಾಗತಿಕ ಭಾಷೆಯೆಡೆಗೆ ಪ್ರಾಚೀನ ಸಾಹಿತ್ಯದ ನಡಿಗೆ': ಎಸ್. ಎಲ್.ಶ್ರೀನಿವಾಸಮೂರ್ತಿ, ವನಮಾಲಾ ವಿಶ್ವನಾಥ್, ರಾಜಶೇಖರ ಮಠಪತಿ, ಸೂರ್ಯಕೀರ್ತಿ, 'ಪೊಯೆಟ್ರಿ ಆ್ಯಸ್ ರೆಸ್ಪಾನ್ಸ್': ಎಚ್.ಎಸ್.ಶಿವಪ್ರಕಾಶ, ಮೀನಾ ಕಂದಸಾಮಿ, ಸುಮನಾ ರಾಯ್, ಸ್ಮಿತಾ ಸೆಹಗಲ್, 'ನಿಚ್ಚಂ ಪೊಸದು ಜನಪದ–ಸಂಶೋಧನೆಯ ಸವೆದ ದಾರಿ': ಹಿ.ಚಿ. ಬೋರಲಿಂಗಯ್ಯ, ಇಂದಿರಾ ಹೆಗ್ಗಡೆ, ಕೃಷ್ಣಮೂರ್ತಿ ಹನೂರು, ಅರುಣ್ ಜೋಳದಕೂಡ್ಲಿಗಿ.

ಬೆಳಿಗ್ಗೆ 11: 'ಅಸಹನೆಯ ಯುಗದಲ್ಲಿ ಹೊಸಕಾವ್ಯದ ಧಾತುಗಳು–(ಪರಿಣಿತ ತರಗತಿ): ಎಚ್.ಎಲ್. ಪುಷ್ಪ, ವಿಲ್ಸನ್ ಕಟೀಲ್, ಪ್ರತಿಭಾ ನಂದಕುಮಾರ್, ಬಿ.ಆರ್.ರವಿಕಾಂತೇಗೌಡ, ಮಂಜುಳಾ ಹುಲಿಕುಂಟೆ, 'ಸಾಹಿತ್ಯ ಚರಿತ್ರೆಯಲ್ಲಿ ಬಿಟ್ಟುಹೋದ ದನಿಗಳನರಸುತ್ತ': ಕೆ.ಆರ್.ಸಂಧ್ಯಾರೆಡ್ಡಿ, ಎಚ್.ಶಶಿಕಲಾ, ಹಳೆಮನೆ ರಾಜಶೇಖರ್, 'ದಿ ವರ್ಡ್ ಆ್ಯಸ್ ವಿಟ್‌ನೆಸ್': ಗೀತಾ ಹರಿಹರನ್, ಸುಗತ ಶ್ರೀನಿವಾಸರಾಜು, 'ರಂಗಭೂಮಿ–ಹೊಸ ರಂಗರೂಪದ ಹುಡುಕಾಟ ಅಲಕ್ಷಿತ ಅನುಭವ ಲೋಕ': ಕೆ.ಪಿ. ಲಕ್ಷ್ಮಣ, ಮಹಾಂತೇಶ ನಬಲ್ಕಲ್, ಮಹಾದೇವ ಹಡಪದ.

ಮಧ್ಯಾಹ್ನ 12: 'ಕನ್ನಡದಲ್ಲಿ ಹೋರಾಟದ ಸಾಹಿತ್ಯ ಏಕಿಲ್ಲ?': ಕೆ.ರಾಮಯ್ಯ, ಸುನಂದ ಜಯರಾಮ್, ಹಿ.ಶಿ. ರಾಮಚಂದ್ರೇಗೌಡ, ಪಿಚ್ಚಳ್ಳಿ ಶ್ರೀನಿವಾಸ್, 'ಇಂದಿನ ಮುಂದಿನ ಸಾಹಿತ್ಯದಲ್ಲಿ ಭಾಷಾ ಬಳಕೆ–ಸುಲಭ ಭಾಷೆ, ಹೆಣ್ಣು ಭಾಷೆ, ತಂತ್ರಾಂಶದ ಭಾಷೆ, ಭವಿಷ್ಯದ ಭಾಷೆ': ಮೇಟಿ ಮಲ್ಲಿಕಾರ್ಜುನ, ರಂಗನಾಥ್ ಕಂಟನಕುಂಟೆ, ಅಮರೇಶ್ ನುಗಡೋಣಿ, ಆರ್. ಸುನಂದಮ್ಮ, 'ಭಕ್ತಿ–ಕಟ್ಟುವ ಮತ್ತು ಕಳಚುವ ಶಕ್ತಿಯಾಗಿ': ಜಿ. ಪ್ರಶಾಂತ್ ನಾಯಕ್, ಎಸ್. ಕಾರ್ತಿಕ್, ಕೆ.ರವೀಂದ್ರನಾಥ್, 'ಕಾಸ್ಟ್ ರಿಲಿಜನ್ ಆ್ಯಂಡ್ ನ್ಯಾಷನಲಿಸಂ': ಮನೋಜ್ ಮಿತ್ತ, ಮಧು ಭೂಷಣ್, ಎಚ್.ಎನ್.ನಾಗಮೋಹನದಾಸ್, 'ಶಾಸ್ತ್ರ ಮತ್ತು ಯೋಗಶೀಲತೆಯ ಬಿಕ್ಕಟ್ಟಿನಲ್ಲಿ ನೃತ್ಯ': ಸ್ನೇಹ ಕಪ್ಪಣ್ಣ, ಪ್ರತಿಭಾ ರಾಮಸ್ವಾಮಿ, ಪ್ರೀತಿ ಭಾರದ್ವಾಜ್.

ಮಧ್ಯಾಹ್ನ 2: 'ಕ್ಯಾನ್ ಡೆಕೊಲೊನಿಸೇಷನ್ ಹ್ಯಾಪನ್ ವಿತ್‌ಔಟ್ ಥಿಂಕಿಂಗ್ ಆ್ಯಂಡ್ ರೈಟಿಂಗ್ ಇನ್ ಅವರ್ ಲ್ಯಾಂಗ್ವೇಜ್': ಬಿಷ್ಣು ಮೊಹಪಾತ್ರ, ಪೆಗ್ಗಿ ಮೋಹನ್, ರಾಜೇಂದ್ರ ಚೆನ್ನಿ, 'ಭಾಷಾ ಸಾಧ್ಯತೆಗಳ ಮೀರಿದ ಅನುವಾದ ಸಾಹಿತ್ಯ': ಓ.ಎಲ್. ನಾಗಭೂಷಣಸ್ವಾಮಿ, ಜಯಶ್ರೀನಿವಾಸ ರಾವ್, ಆರಿಫ್ ರಾಜಾ, ಭೂಮಿಕಾ, ಮಹಾದೇವ, 'ಶ್ರಮ ಸಂಸ್ಕೃತಿ–ಪರ್ಯಾಯ ಚರಿತ್ರೆ': ಚಕ್ಕರೆ ಶಿವಶಂಕರ್, ಡಿ. ಡೊಮಿನಿಕ್, ಅಮರೇಂದ್ರ ಹೊಲ್ಲಂಬಳ್ಳಿ, 'ಸ್ಟ್ರಿಪ್ಪಿಂಗ್ ಪ್ರೊಟೆಸ್ಟ್–ಥಿಯೇಟರ್ ಆ್ಯಂಡ್ ಸೊಸೈಟಿ': ಸುಧನ್ವ ದೇಶಪಾಂಡೆ, ಪ್ರಸನ್ನ, ಶ್ರೀಜೀತ್ ರಮಣನ್, ಲಕ್ಷ್ಮಿ ಚಂದ್ರಶೇಖರ್, 'ಅಳಿವನರಿಯದ ಕನ್ನಡ ಸಾಹಿತ್ಯ ಪತ್ರಿಕೆಗಳು': ಅಭಿನವ ರವಿಕುಮಾರ್, ಆರ್.ಜಿ.ಹಳ್ಳಿ ನಾಗರಾಜ್, ಚಲಂ ಹಾಡ್ಲಹಳ್ಳಿ, ಟಿ.ಎಸ್. ಗೊರವರ.

ಮಧ್ಯಾಹ್ನ 3: 'ನಮಗೆ ದಕ್ಕಿರುವ ಸೃಜನಶೀಲ ಸಾಹಿತ್ಯದ ಹೊಸ ಪ್ರಕಾರಗಳು': ಕೃಪಾಕರ ಸೇನಾನಿ, ಕೆ. ಪುಟ್ಟಸ್ವಾಮಿ, ಸಂಜಯ್ ಗುಬ್ಬಿ, ಕಲೀಮ್ ಉಲ್ಲಾ, 'ನಿರಂಜನ 100– ನಿರಂಜನರ ಕಾದಂಬರಿಗಳ ಮರುಚಿಂತನ': ನಿತ್ಯಾನಂದ ಬಿ. ಶೆಟ್ಟಿ, ಬಂಜಗೆರೆ ಜಯಪ್ರಕಾಶ್, ಸಿದ್ಧನಗೌಡ ಪಾಟೀಲ, ಬಿ.ಆರ್. ಮಂಜುನಾಥ್, 'ಆಧುನಿಕಪೂರ್ವ ಕನ್ನಡ ಸಾಹಿತ್ಯದಲ್ಲಿ ಕಿರಿಯರಿಗೊಂದಿಷ್ಟು ಕಿವಿಮಾತು': ಚಂದ್ರಶೇಖರ ನಾದೂರು, ಶಾಂತರಾಜು, ಶಿವಸ್ವಾಮಿ ಎ.ಎಂ., 'ಲಿಟರರಿ ಆಕ್ಟಿವಿಟಿಸಂ': ಅಮಿತ್ ಚೌಧರಿ, ಕಮಲಾಕರ್ ಭಟ್, ಇಂದಿರಾ ಚಂದ್ರಶೇಖರ್, ಜಯರಾಂ ರಾಯಪುರ, 'ಬಾಲವನ': ಕವಿತ ರತ್ನ, ಲಲಿತಾ ಹೊಸಪ್ಯಾಟಿ, ಕೆ. ಶಿವಲಿಂಗಪ್ಪ ಹಂದಿಹಾಳು, ಎಸ್.ಎಫ್. ಹುಸೇನಿ, ಶ್ರೀಜಾ ವಿ.ಎನ್., ಲಲಿತಾ ಕೆ. ಹೊಸಪ್ಯಾಟಿ, ಹೇಮಾ ಖುರ್ಸಾಪೂರ.

ಸಂಜೆ 4: ಸಮಾರೋಪ ಸಮಾರಂಭ: ಜಿ. ರಾಮಕೃಷ್ಣ, ಮಾಲತಿ ಪಟ್ಟಣಶೆಟ್ಟಿ, ಎಸ್.ಜಿ. ಸಿದ್ಧರಾಮಯ್ಯ, ಕೆ. ರಾಮಯ್ಯ, ಚೆನ್ನಬಸಣ್ಣ, ಜಯಪ್ರಕಾಶಗೌಡ, ಎಚ್. ಎಲ್. ಪುಷ್ಪ, ಬಿ.ಆರ್. ರವಿಕಾಂತೇಗೌಡ, ಪ್ರಕಾಶಮೂರ್ತಿ, ಆಯೋಜನೆ: ಸಮಾಜಮುಖಿ.



ಜಿ.ರಾಮಕೃಷ್ಣ

ಶಂಕರನಾಗ್ ಜನುಮದಿನದ ಅಂಗವಾಗಿ ಚಾಲಕರ ದಿನಾಚರಣೆ, ಡಾ. ವಿಷ್ಣುವರ್ಧನ್ ಗೌರವ ನಮನ, ಕರ್ನಾಟಕ ರಾಜ್ಯೋತ್ಸವ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ರಾಮಲಿಂಗಾರೆಡ್ಡಿ, ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಸಿ.ಕೆ. ರಾಮಮೂರ್ತಿ, ಯೋಗೀಶ್ ಎ.ಎಂ., ಎಂ.ಎ. ಸಲೀಂ, ರಚಿತಾ ರಾಮ್, ಆಯೋಜನೆ: ಪೀಸ್ ಆಟೊ, ವಿಷ್ಣುಸೇನಾ ಸಮಿತಿ, ಆದರ್ಶ ಆಟೊ ಮತ್ತು ಟ್ಯಾಕ್ಸಿ ಚಾಲಕರ ಸಂಘ, ಸ್ಥಳ: ಚಂದ್ರಗುಪ್ತ ಆಟದ ಮೈದಾನ (ಶಾಲಿನಿ ಗ್ರೌಂಡ್), ಜಯನಗರ ಐದನೇ ವಿಭಾಗ, ಸಂಜೆ 4ರಿಂದ

ರಚಿತಾ ರಾಮ್

ಕಾದಂಬರಿ ಸಾರ್ವಭೌಮ ಅ.ನ.ಕೃ. ಪ್ರಶಸ್ತಿ ಪ್ರದಾನ: ಎಸ್.ಆರ್. ರಾಮಸ್ವಾಮಿ, ಪ್ರಶಸ್ತಿ ಸ್ವೀಕರಿಸುವವರು: ಎಸ್.ವಿ. ಶಾಂತಕುಮಾರಿ, ಶತಾವಧಾನಿ ಆರ್. ಗಣೇಶ್, ಅಭಿನಂದನಾ ನುಡಿ: ಶಶಿಕಿರಣ ಬಿ.ಎನ್., ಅಧ್ಯಕ್ಷತೆ: ಅಶೋಕ ಹಾರನಹಳ್ಳಿ, ಆಯೋಜನೆ: ಅ.ನ.ಕೃ. ಪ್ರತಿಷ್ಠಾನ, ಸ್ಥಳ: ಕೇಶವಶಿಲ್ಪ ಸಭಾಂಗಣ, ರಾಷ್ಟ್ರೋತ್ಥಾನ ಪರಿಷತ್‌ನ ಆವರಣ, ಕೆಂಪೇಗೌಡನಗರ, ಸಂಜೆ 5

ಮಾಡರ್ನ್ ಪೈಥಾನ್ ಗೇಮ್ಸ್ ಸಮಾರೋಪ: ನಾಸೀರ್ ಹುಸೇನ್, ರಾಮಲಿಂಗಾರೆಡ್ಡಿ, ಡಾ.ಎಂ. ಸಿ. ಸುಧಾಕರ್, ಗಂಗಾಧರ ರಾಜು, ಸ್ಥಳ: ಸೆಂಟ್ರಲ್ ಕಾಲೇಜಿನ ಆವರಣ, ಸಂಜೆ 5.30

ಕೆ.ಕೆ. ಮೂರ್ತಿ ಸ್ಮಾರಕ ಸಂಗೀತೋತ್ಸವ, ಅಕಾಡೆಮಿ ಆಫ್ ಮ್ಯೂಸಿಕ್ ಚೌಡಯ್ಯ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಸ್ವೀಕರಿಸುವವರು: ಆನೂರು ಅನಂತಕೃಷ್ಣ ಶರ್ಮ, 'ಅಕಾಡೆಮಿ ಆಫ್ ಮ್ಯೂಸಿಕ್ ಪ್ರತಿಭಾ ಪ್ರಶಸ್ತಿ ಸ್ವೀಕರಿಸುವವರು: ಎಸ್.ವಿ. ಸಹನಾ, ಅತಿಥಿ: ವೇದವ್ಯಾಸಚಾರ್ ಶ್ರೀಶಾನಂದ, ಪಿಟೀಲು: ಎಲ್. ಸುಬ್ರಹ್ಮಣ್ಯಂ ಮತ್ತು ತಂಡ, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 6

'ಕುಚಿಪುಡಿ' ನೃತ್ಯ ಪ್ರದರ್ಶನ: ಆರತಿ ನಾಯರ್, ಅತಿಥಿಗಳು: ಕೆ. ರಾಧಕೃಷ್ಣನ್, ಉಷಾ ಆರ್.ಕೆ., ಆಯೋಜನೆ: ಕುಚಿಪುಡಿ ಪರಂಪರಾ ಫೌಂಡೇಷನ್, ಸ್ಥಳ: ರಮಣ ಮಹರ್ಷಿ ಹೆರಿಟೇಜ್ ಸಭಾಂಗಣ, ಸಂಜಯನಗರ, ಸಂಜೆ 6

ಭರತನಾಟ್ಯ ಪ್ರದರ್ಶನ: ಪಲ್ಲವಿ ಡಿ.ಎಚ್., ಅತಿಥಿಗಳು: ಜಯಂತಿ ನಾಯರ್, ರಶ್ಮಿ ಪ್ರಸಾದ್, ಸಾಯಿನಾರಾಯಣ ಕಲ್ಮಡ್ಕ, ಆಯೋಜನೆ: ಭರತ ನೃತ್ಯ ಸಂಗೀತ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

'ನಾಯಿ ಕಳೆದಿದೆ' ನಾಟಕ ಪ್ರದರ್ಶನ: ನಿರ್ದೇಶನ: ರಾಜೇಂದ್ರ ಕಾರಂತ್, ಆಯೋಜನೆ: ನಮ್ಮೆ ನಟನೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7

ನೈರುತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. 23/2025/ಎಸ್‌ಬಿಸಿ
ದಿನಾಂಕ : 04–11–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಐಟಂಗಳ ಸರಬರಾಜಿಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.
ಸಂಕ್ಷಿಪ್ತ ವಿವರಣೆ : ಆರ್‌ಡಿಎಸ್‌ಓ ನಿರ್ದಿಷ್ಟತೆಗೆ ಅನುಸಾರವಾಗಿ ಕಂಟ್ರೋಲ್ ಟ್ರಾನ್ಸ್‌ಫಾರ್ಮರ್‌ನ ಸರಬರಾಜು, ಸ್ಥಾಪನೆ, ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು (ಟೆಂಡರ್ ಸಂ. ಎಲ್8256585) (ಪ್ರಮಾಣ : 1050 ಸಂಖ್ಯೆಗಳು)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 03–12–2025 ರಂದು 10:30 ಗಂಟೆಯವರೆಗೆ
ವಿವರಗಳಿಗೆ www.ireps.gov.in ಗೆ ಲಾಗ್ ಆನ್ ಮಾಡಿ
ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು
ಪಿಯುಬಿ/620/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

PUBLIC NOTICE
Publics are hereby informed that my client **M/s DS-Max Properties Pvt. Ltd.**, having its office at No. 1794, 14th Main, 30th Cross, HBR Layout, 1st Stage, 5th Block, Bengaluru - 560043 and intend to enter into Joint Development Agreement with Owner **Smt Rangalakshmi @ Rangalakshmamma** w/o Sri N.Devarajaiah is the absolute owner of converted land property bearing Sy. No **132**, which measuring **1 acre 22 guntas**, situated at **Suradenapura Village**, Hesaraghatta Hobli, Yelahanka Taluk, Bangalore North District in vide; Conversion Order dated **18/03/2009**, in order **No.ALN(NAH)SR:92/2007-08**, for residential use, issued by Special Deputy Commissioner, Bangalore District and bounded on **East by:** Land of Hanumakka w/o Patalappa, **West by:** Land of Marappa, **North by:** Land of M.S.R Company, **South by:** Land of Patalappa and childrens and referred to as schedule property of **Item No. I**.
WHEREAS Sri N.Devarajaiah s/o Late Narasimhaiah is the absolute owner of converted land property bearing Sy. No **132**, which measuring **2 acres**, situated at **Suradenapura Village**, Hesaraghatta Hobli, Yelahanka Taluk, Bangalore North District, in vide; Conversion Order dated **18/03/2009** in order No.**ALN(NAH)SR:93/2007-08**, for residential use, issued by Special Deputy Commissioner, Bangalore District and bounded on **East by:** Land of Patalappa and childrens, **West by:** Land of Patalappa and childrens, **North by:** Remaining Land of Sy.No. 132, **South by:** Land of Hanumakka w/o Patalappa and referred to as schedule property of **Item No. II**.
WHEREAS Sri D.Narasimhamurthy s/o Sri N.Devarajaiah is the absolute owner of Agricultural land property bearing old Sy.No. 81/2, New Sy. No **81/7**, which measuring **14.04 Guntas** and exclusive of **04.08 guntas 'B'** Kharab land, situated at **Kadathanamale Village**, Hesaraghatta Hobli, Yelahanka Taluk, Bangalore North District and bounded on **East by:** Land of Sri Channappa and Suradenapura Gadi, **West by:** S.H. Road, **North by:** Land of Avalahalli K.C.M.Gowda, **South by:** Remaining Land of same Sy.No and referred to as schedule property of **Item No.III**,
which total measuring of **Item.No.I to III = 1 Acres 22 Guntas + 2 Acres + 14.04 Guntas = 3 Acres 36.04 Guntas** and exclusive of **04.08 guntas 'B'** Kharab land in New Sy. No **81/7** and commonly bounded on **East by:** Private Lands, **West by:** State Highway Road, **North by:** Private Lands, **South by:** Private Lands and referred to as **"Composite Schedule Property"**.
Any person or Any Authority or Any promoters having any asserting right, title, interest and claims to oppose for Joint Development Agreement of property and further having any manner of right, title, claims etc., and may lodge their objections, claims over the property along with relevant papers in support of their claims, right to the below address within **10** days from the date of this notice, if any objections fails to comply, my client shall take further steps for entering into Joint Development Agreement.
LINGARAJ. S. NADAGOUDA., ADVOCATE
No.1854, 17th Main, 30th 'B' Cross, HBR Layout, 1st Stage, 5th Block, Bangalore - 560 043.
Mob : 96204 74780 , 94481 35970

ನೈರುತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/156/2025
ದಿನಾಂಕ : 04–11–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಶಿವಮೊಗ್ಗ – ಶೃಂಗೇರಿ – ಮಂಗಳೂರು (332 ಕಿಮೀ), ತಾಳಗುಪ್ಪ – ಹೊನ್ನಾವರ (95 ಕಿಮೀ), ಆಲಮಟ್ಟಿ – ಯಾದಗಿರ್ (162 ಕಿಮೀ) ಮತ್ತು ಭದ್ರಾವತಿ – ಚಿಕ್ಕಜಾಜೂರು (73 ಕಿಮೀ) ನಡುವೆ ಹೊಸ ಮಾರ್ಗಕ್ಕಾಗಿ ಅಂತಿಮ ಸ್ಥಳ ಸರ್ವೇ ನಡೆಸುವುದು (ಟೆಂಡರ್ ಉಲ್ಲೇಖ ಸಂ. ಎಸ್‌ಡಬ್ಲ್ಯುಆರ್–ಎಫ್‌ಎಲ್‌ಎಸ್–ರೇಟ್–ಕಾಂಟ್ರಾಕ್ಟ್–03)	ರೂ. 33,52,62,609/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 15–12–2025 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು
ಪಿಯುಬಿ/623/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

ನೈರುತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಸಿಎಒ/ಸಿಎನ್/ಬಿಎನ್‌ಸಿ/ಇಪಿಸಿ/153/2025
ದಿನಾಂಕ : 31–10–2025
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ತೋರಣಗಲ್ಲು (ಒಳಗೊಂಡು) ಮತ್ತು ರಣಜಿತ್‌ಪುರ (ಹೊರತುಪಡಿಸಿ) (21.460 ಕಿ.ಮೀ) ನಡುವೆ ಸಿಗ್ನಲ್ ಮತ್ತು ಟೆಲಿ ಕಮ್ಯುನಿಕೇಶನ್, ಹೊಸ ಮಾರ್ಗದ ವಿದ್ಯುದೀಕರಣ ಮತ್ತು ಹಾಲಿ ಇರುವ ಮಾರ್ಗದ ಓಹೆಚ್‌ಇ ಉನ್ನತೀಕರಣ ಮತ್ತು ವಿದ್ಯುತ್ ಸಾಮಾನ್ಯ ಸೇವಾ ಕಾಮಗಾರಿಗಳನ್ನು ಒಳಗೊಂಡಂತೆ ಉದ್ದೇಶಿತ ಟ್ರ್ಯಾಕ್ ಡಬ್ಲಿಂಗ್‌ನ ನಿರ್ಮಾಣ (ಟೆಂಡರ್ ಉಲ್ಲೇಖ ಸಂ. ಟಿಎನ್‌ಜಿಎಲ್–ಆರ್‌ಎನ್‌ಜೆಪಿ–ಇಪಿಸಿ–01)	ರೂ. 314,62,71,018/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30–01–2026 ರಂದು 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು
ಪಿಯುಬಿ/618/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26
ಕಾಯ್ದಿರಿಸಿಲ್ಲದ ಟಿಕೆಟ್‌ಗಳನ್ನು ಸುಲಭವಾಗಿ ಬುಕ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆಪ್‌ನ್ನು ಡೌನ್‌ಲೋಡ್ ಮಾಡಿ
South Western Railway-SWR | SWRRLY | @SWRAILWAYHQ | @sw_railways

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂಖ್ಯೆ: ಮುಇಂವಿ/ಎಸ್‌ಎಲ್‌ಡಿಸಿ/ಅಇಂವಿ–ಎಸ್‌ಸಿಎಡಿಎ/ಕಾನಿಇಂ(ಡಿ)/2025–26/3072 ದಿನಾಂಕ: 07.11.2025
ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಕವಿಪ್ರನಿನಿಯ ಟೆಂಡರ್ ಸಂಖ್ಯೆ **KPTCL/CEE-SLDC/SEE-SCADA/ENQ.NO. 011/2025-26**ರ ಸಂಬಂಧ–**Upgradation of KPTCL SCADA-VSAT Communication Network on percentage tender basis** ಗಾಗಿ ಬಿಡ್ ಆಹ್ವಾನಿಸಿದೆ.
ಕೆಪಿಪಿ ಪೋರ್ಟಲ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು **htpps://kppp.karnataka.gov.in** ಗೆ ದಿನಾಂಕ **11-11-2025** ರಂದು ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು ಮತ್ತು ಬಿಡ್‌ಗಳ ಸ್ವೀಕೃತಿಯ ಕೊನೆಯ ದಿನಾಂಕವನ್ನು ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಲಾಗಿದೆ.
ಬಿಡ್ ಸಲ್ಲಿಕೆಯ ಕೊನೆಯ ದಿನಾಂಕದ ಯಾವುದೇ ವಿಸ್ತರಣೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತಿಳಿಸಲಾಗುತ್ತದೆ. ಈ ನಿಟ್ಟಿನಲ್ಲಿ ಅಗತ್ಯವಿರುವ ಯಾವುದೇ ವಿವರಗಳನ್ನು ಕಛೇರಿ ಸಮಯದಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯಿಂದ ಪಡೆಯಬಹುದು.
ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮೊದಲು ಬಿಡ್‌ದಾರರು ಎಲ್ಲಾ ತಿದ್ದುಪಡಿ/ಅನುಬಂಧಗಳನ್ನು ಗಮನಿಸಬೇಕು.
ಸಹಿ/– ಮುಖ್ಯ ಇಂಜಿನಿಯರ್ (ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ, ನಂ. 28, ರೇಸ್ ಕೋರ್ಸ್ ಕ್ರಾಸ್ ರಸ್ತೆ, ಆನಂದ ರಾವ್ ವೃತ್ತ, ಬೆಂಗಳೂರು–560009.

ಸಾರ್ವಜನಿಕ ಪ್ರಕಟಣೆ
ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷೀದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯುಲ್ ಸ್ವತ್ತನ್ನು ಮಾಲೀಕರಾದ ದಿವಂಗತ ಶಾರದಾ ಎನ್ ಶಾಸ್ತ್ರೀ ರವರ ಮಗನಾದ ಶ್ರೀ. ಎ. ಎನ್. ವಿಶ್ವನಾಥ ("ಮಾಲೀಕರು") ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಷೆಡ್ಯುಲ್ ಸ್ವತ್ತು ಸದರಿ ಮಾಲೀಕರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಅನಿರ್ಬಂಧಿತ ಮಾರಾಟದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.
ಸದರಿ ಷೆಡ್ಯುಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 14 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷೀದಾರರು, ಸದರಿ ಶ್ರೀ. ಎ. ಎನ್. ವಿಶ್ವನಾಥ ರವರ ಮಾಲೀಕತ್ವಕ್ಕೆ ಮತ್ತು ಸದರಿ ಖರೀದಿಗೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯುಲು ಸ್ವತ್ತನು ಖರೀದಿಸಲು ಮುಂದಾಗುವರು.
ಷೆಡ್ಯೂಲ್ ಸ್ವತ್ತಿನ ವಿವರ
ಬೆಂಗಳೂರು ನಗರ, ರಾಜ್ ಮಹಲ್ ವಿಲಾಸ್ ಎಕ್ಸ್‌ಟೆಂಷನ್, 7ನೇ ಅಡ್ಡ ರಸ್ತೆ, 11 ನೇ ಮುಖ್ಯ ರಸ್ತೆ ಯಲ್ಲಿರುವ ಪೂರ್ವ-ಪಶ್ಚಿಮ 38 ಅಡಿ 3 ಇಂಚು, ಉತ್ತರ-ದಕ್ಷಿಣ 57 ಅಡಿ 3 ಇಂಚು, ಒಟ್ಟು ವಿಸ್ತೀರ್ಣ 2194.59 ಚದರ ಅಡಿಉಳ್ಳ ಸ್ವತ್ತಿನ ಮುನ್ಸಿಪಲ್ ನಂ. 17, (ಹಿಂದಿನ ನಿವೇಶನ ನಂ. 464) ಪಿಐಡಿ ನಂ.99-24-17 ಉಳ್ಳ ಸ್ವತ್ತು ಮತ್ತು ಸದರಿ ಸ್ವತ್ತಿನಲ್ಲಿ ನಿರ್ಮಿಸಿರುವ ನೆಲ ಮತ್ತು ಮೊದಲನೇ ಅಂತಸ್ತುಉಳ್ಳ ಸ್ವತ್ತಿಗೆ ಚಕ್ಕುಬಂದಿ:
ಪೂರ್ವಕ್ಕೆ : ರಸ್ತೆ; **ಪಶ್ಚಿಮಕ್ಕೆ** : ನಿವೇಶನ ನಂ. 464/A; **ಉತ್ತರಕ್ಕೆ** : ರಸ್ತೆ; ಮತ್ತು **ದಕ್ಷಿಣಕ್ಕೆ** : ನಿವೇಶನ ನಂ. 465.
ಸ್ಥಳ : ಬೆಂಗಳೂರು **ದಿನಾಂಕ : ನವೆಂಬರ್ 09, 2025**
ಸಹಿ./- ಎ. ಸುಪ್ರೀತ್ , **ಕ್ರೆಸ್ಟ್ ಲಾ ಪಾರ್ಟ್ನರ್ಸ್**, ವಕೀಲರು, 33, ಝೆವಿಯರ್ ಲೇಔಟ್, 1ನೇ ಅಡ್ಡ ರಸ್ತೆ, ವಿಕ್ಟೋರಿಯಾ ರಸ್ತೆ, ಬೆಂಗಳೂರು – 560 047. **ದೂ: 080 41473535 / 080 41473536**

ಮೆಟ್ರೊ ಪಾರ್ಕಿಂಗ್: ‘ನಿಮಿಷ’ ಸಮಸ್ಯೆ

ರಾತ್ರಿ 12 ಗಂಟೆ ದಾಟಿದರೆ ದುಪ್ಪಟ್ಟು ಶುಲ್ಕ ವಸೂಲಿ • ಪ್ರಯಾಣಿಕರ ವಿರೋಧ

• ಬಾಲಕೃಷ್ಣ ಪಿ.ಎಚ್.

ನಮ್ಮ ಮೆಟ್ರೊ

ದರ ವಿವರ (₹ಗಳಲ್ಲಿ)			
ವಾಹನ	ಮೊದಲ ಒಂದು ಗಂಟೆಗೆ	ನಂತರದ ಪ್ರತಿ ಗಂಟೆಗೆ	ಗರಿಷ್ಠ
ದ್ವಿಚಕ್ರ ವಾಹನ	15	5	30
ನಾಲ್ಕುಚಕ್ರ ವಾಹನ	30	10	60
ಲಘು ವಾಣಿಜ್ಯ ವಾಹನ	75	25	150
ಬೈಸಿಕಲ್	ಪ್ರತಿ ಗಂಟೆಗೆ 1		

ಬೆಂಗಳೂರು: ಮೆಟ್ರೊ ಪಾರ್ಕಿಂಗ್‌ಗೆ ಸಂಬಂಧಪಟ್ಟಂತೆ ನಿಗದಿಪಡಿಸಿರುವ ಸಮಯವು ಸಮಸ್ಯೆಯನ್ನು ಉಂಟು ಮಾಡಿದೆ. ರಾತ್ರಿ 12ಕ್ಕೆ ದಿನದ ಪಾರ್ಕಿಂಗ್ ಸಮಯ ಮುಕ್ತಾಯಗೊಳ್ಳುತ್ತಿದೆ. ಮೆಟ್ರೊ ಒಂದು ನಿಮಿಷ ತಡವಾಗಿ ಬಂದರೂ ಪ್ರಯಾಣಿಕರು ಹೆಚ್ಚುವರಿಯಾಗಿ ಹಣ ಪಾವತಿಸಬೇಕಾಗಿದೆ. ಕೆಲವು ನಿಲ್ದಾಣಗಳಲ್ಲಿ ಪಾರ್ಕಿಂಗ್ ಸ್ಥಳಕ್ಕೆ ಬೀಗ ಹಾಕಲಾಗುತ್ತಿದೆ.

‘ಯಲಚೇನಹಳ್ಳಿ ನಿಲ್ದಾಣಕ್ಕೆ ಕೊನೇ ರೈಲು ತಲುಪುವಾಗ ರಾತ್ರಿ 12 ಗಂಟೆ ದಾಟಿರುತ್ತದೆ. ನಾನು ಇತ್ತೀಚೆಗೆ 12 ಗಂಟೆ 2 ನಿಮಿಷಕ್ಕೆ ತಲುಪಿದೆ. ರೈಲು ನಿಲ್ದಾಣದಿಂದ ಪಾರ್ಕಿಂಗ್ ಸ್ಥಳಕ್ಕೆ ಹೋಗಲು ಮತ್ತೆರಡು ನಿಮಿಷ ಬೇಕಾಯಿತು. ನಾಲ್ಕು ನಿಮಿಷಕ್ಕೆ ಹೆಚ್ಚುವರಿಯಾಗಿ ₹15 ನೀಡಬೇಕು ಎಂದು ಕೇಳಿದರು. ನಾನೇನು ತಡವಾಗಿ ಹೋಗಿದ್ದಲ್ಲ. ಕೊನೇ ರೈಲು ಮೆಜೆಸ್ಟಿಕ್‌ನಲ್ಲಿ 15 ನಿಮಿಷ ನಿಲ್ಲಿಸಿ, ಆ ನಂತರ ಹೊರಟಿತು. ಇದರಿಂದ ತಡವಾಗಿತ್ತು. ನಾಲ್ಕೂ ಕಡೆಯಿಂದ ಬರುವ ಯಾರಿಗೂ ಕೊನೇ ಮೆಟ್ರೊ ರೈಲು ತಪ್ಪದಿರಲಿ ಎಂದು ಸ್ವಲ್ಪ ನಿಲ್ಲಿಸುವುದು ಒಳ್ಳೆಯದೇ. ಆದರೆ, ಇದು ಪಾರ್ಕಿಂಗ್ ಸ್ಥಳಗಳಲ್ಲಿ ಸಮಸ್ಯೆ ಉಂಟು ಮಾಡುತ್ತಿದೆ’ ಎಂದು ಪ್ರಯಾಣಿಕ ಚಂದ್ರಪ್ರಕಾಶ್ ತಿಳಿಸಿದರು.

ಇದೇ ಹಸಿರು ಮಾರ್ಗದಲ್ಲಿ ಇನ್ನೊಂದು ದಿಕ್ಕಿಗೆ ಇರುವ ನಾಗಸಂದ್ರ ನಿಲ್ದಾಣದಲ್ಲಿಯೂ ಇಂಥದ್ದೇ ಸಮಸ್ಯೆ ಇರುವುದರನ್ನು ಪ್ರಯಾಣಕರೊಬ್ಬರು ಬಿಚ್ಚಿಟ್ಟಿದ್ದಾರೆ.

‘ನಾಗಸಂದ್ರಕ್ಕೆ ರಾತ್ರಿ 12.10ಕ್ಕೆ ಕೊನೆಯ ರೈಲು ತಲುಪುತ್ತದೆ. ಒಂದು ಬಾರಿ ನಾನು ಹೋಗುವಾಗ 12 ಗಂಟೆಗೆ ಬೀಗ ಹಾಕಿ ಹೋಗಿದ್ದರು. ನನ್ನ ಬೈಕ್ ಒಳಗೆಯೇ ಇತ್ತು. ಅದನ್ನು ಹೊರತುಪಡಿಸಿದರೆ ಉಳಿದ ಸಂದರ್ಭಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ನೋಡಿಕೊಳ್ಳುವವರಿದ್ದರೂ ಎರಡುಪಟ್ಟು ಪಾವತಿ ಮಾಡುವಂತೆ ಸೂಚಿಸಿದ್ದರು. ಇಡೀ ದಿನಕ್ಕೆ ಬೈಕ್‌ಗೆ ₹30 ಪಾವತಿಸಬೇಕು. 10 ನಿಮಿಷಕ್ಕೆ ಮತ್ತೆ ₹30 ನೀಡಬೇಕು ಎಂಬುದು ಸರಿಯಲ್ಲ. ನಾಗಸಂದ್ರದ ನಂತರವೂ ಮೂರು ನಿಲ್ದಾಣಗಳಿವೆ. ಅಲ್ಲಿ ಇನ್ನೂ ತಡವಾಗುತ್ತದೆ’ ಎಂದು ತಿಳಿಸಿದ್ದಾರೆ.

ರಾತ್ರಿ 12ರವರೆಗೆ ಪಾರ್ಕಿಂಗ್ ಎಂದು ಬೋರ್ಡ್ ಹಾಕಿರುತ್ತಾರೆ. ಭಾನುವಾರ ಕೊನೇ ರೈಲಿಗಿಂತ ಮೊದಲಿನ ರೈಲು ಇರುವುದಿಲ್ಲ. ಹಾಗಾಗಿ ಮೆಜೆಸ್ಟಿಕ್‌ನಲ್ಲೇ 20 ನಿಮಿಷಕ್ಕೂ ಅಧಿಕ ಸಮಯ ಕಾದಿರುತ್ತೇವೆ. ಕೊನೇ ರೈಲಿನಲ್ಲಿ ಬರುವವರನ್ನು ಸುಲಿಗೆ ಮಾಡಲೆಂದೇ ಮಾಡಿದ ಕಿತಾಪತಿಯಂತೆ ಕಾಣುತ್ತಿದೆ. ಮೆಟ್ರೊದಿಂದ ಇಳಿದು ಹೋಗುವ ಸಮಯವನ್ನೂ ಸೇರಿಸಿ ಪಾರ್ಕಿಂಗ್ ಅವಧಿಯನ್ನು ಕೊನೇ ಮೆಟ್ರೊ ತಲುಪಿದ ಐದು ನಿಮಿಷದವರೆಗೆ ವಿಸ್ತರಿಸಬೇಕು ಎಂದು ಒತ್ತಾಯಿಸಿದ್ದಾರೆ.

‘ಕೋಣನಕುಂಟೆ, ಚಿಕ್ಕಬಿದರಕಲ್ಲು ಮುಂತಾದ ನಿಲ್ದಾಣಗಳಲ್ಲಿ ಇಂಟರ್‌ಲಾಕ್ ಹಾಕಿ ಪಾರ್ಕಿಂಗ್ ಸ್ಥಳವನ್ನು ಚೆನ್ನಾಗಿ ಇಟ್ಟುಕೊಂಡಿದ್ದಾರೆ. ಆದರೆ, ಯಲಚೇನಹಳ್ಳಿಯಂಥ ನಿಲ್ದಾಣಗಳಲ್ಲಿ ಬೇಸಿಗೆಯಲ್ಲಿ ದೂಳು ಹಾರುತ್ತಿರುತ್ತದೆ. ಮಳೆಗಾಲದಲ್ಲಿ ಕೆಸರು ತುಂಬಿರುತ್ತದೆ. ಅದರಲ್ಲಿಯೇ ವಾಹನಗಳನ್ನು ನಿಲ್ಲಿಸಿ ಬರಬೇಕಿದೆ. ಶುಲ್ಕ ಪಾವತಿಸಿ ನಾವು ವಾಹನಗಳನ್ನು ನಿಲ್ಲಿಸುವುದರಿಂದ ಉತ್ತಮ ಸೌಲಭ್ಯವನ್ನು ಬಿಎಂಆರ್‌ಸಿಎಲ್ ಕಲ್ಪಿಸಬೇಕು’ ಎಂದು ಆಗ್ರಹಿಸಿದ್ದಾರೆ.

17 ನಿಲ್ದಾಣಗಳಲ್ಲಿಲ್ಲ ಪಾರ್ಕಿಂಗ್: ನಮ್ಮ ಮೆಟ್ರೊ ನೇರಳೆ, ಹಸಿರು ಮತ್ತು ಹಳದಿ ಮಾರ್ಗಗಳಲ್ಲಿ ಒಟ್ಟು 83 ನಿಲ್ದಾಣಗಳಿವೆ. ಅದರಲ್ಲಿ 66 ನಿಲ್ದಾಣಗಳಲ್ಲಿ ಪಾರ್ಕಿಂಗ್ ವ್ಯವಸ್ಥೆ ಇದೆ. ಉಳಿದ 17ರಲ್ಲಿ ಪಾರ್ಕಿಂಗ್‌ಗೆ ಜಾಗವೇ ಇಲ್ಲ. ಇಂಟರ್‌ಚೇಂಜ್ ನಿಲ್ದಾಣವಾದ ಆರ್‌.ವಿ. ರಸ್ತೆಯಲ್ಲಿಯೇ ಪಾರ್ಕಿಂಗ್ ಇಲ್ಲ ಎಂದು ಪ್ರಯಾಣಿಕರು ದೂರಿದ್ದಾರೆ.

ಕೆಲವೇ ವಾಹನಗಳಿಗೆ ವ್ಯವಸ್ಥೆ

ನಮ್ಮ ಮೆಟ್ರೊದಲ್ಲಿ ಸರಾಸರಿ 9.5 ಲಕ್ಷ ಜನರು ನಿತ್ಯ ಸಂಚರಿಸುತ್ತಿದ್ದಾರೆ. ರಜಾದಿನಗಳಲ್ಲಿ ಕಡಿಮೆ ಇದ್ದರೆ ಕೆಲವು ದಿನಗಳಲ್ಲಿ 10 ಲಕ್ಷ ದಾಟಿರುತ್ತದೆ. ಆದರೆ, ಕೆಲವೇ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಇದೆ. ಒಟ್ಟು 12,700 ದ್ವಿಚಕ್ರವಾಹನಗಳು ಹಾಗೂ 2,300 ಇತರ ವಾಹನಗಳು ಪಾರ್ಕಿಂಗ್ ಮಾಡಲಷ್ಟೇ ನಮ್ಮ ಮೆಟ್ರೊ ನಿಲ್ದಾಣಗಳಲ್ಲಿ ಅವಕಾಶವಿದೆ.

ಗುತ್ತಿಗೆದಾರರಿಗೆ ಸೂಚನೆ

ಕೊನೇ ಮೆಟ್ರೊ ರೈಲು ಬರುವವರೆಗೆ ಪಾರ್ಕಿಂಗ್ ತೆರೆದಿರಬೇಕು. ಹೆಚ್ಚುವರಿಯಾಗಿ ಶುಲ್ಕ ವಸೂಲಿ ಮಾಡಬಾರದು ಎಂದು ಗುತ್ತಿಗೆದಾರರಿಗೆ ಸೂಚಿಸುವುದಾಗಿ ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಚಿರತೆ ಸೆರೆಹಿಡಿದ ಅರಣ್ಯ ಇಲಾಖೆ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಮಧುಗಿರಿ: ತಾಲ್ಲೂಕು ದೊಡ್ಡೇರಿ ಹೋಬಳಿಯ ಕೃಷ್ಣಸಾಗರ ಗ್ರಾಮದ ಸಣ್ಣರಂಗಪ್ಪ ಎಂಬುವರ ಜಮೀನಿನ ಪೊದೆಯಲ್ಲಿ ಅಡಗಿ ಕುಳಿತಿದ್ದ ಎರಡು ವರ್ಷದ ಚಿರತೆಯನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸೆರೆ ಹಿಡಿದಿದ್ದಾರೆ.

ಎರಡು ದಿನಗಳಿಂದ ಗ್ರಾಮದ ಸುತ್ತಮುತ್ತಲಿನ ಜಮೀನಿನಲ್ಲಿ ಚಿರತೆ ಆಗಾಗ್ಗೆ ಕಾಣಿಸಿಕೊಂಡು ರೈತರಲ್ಲಿ ಆತಂಕವನ್ನುಂಟು ಮಾಡಿತ್ತು. ಪೊದೆಯಲ್ಲಿ ಅಡಗಿ ಕುಳಿತ ಚಿರತೆಯನ್ನು ಬಲೆ ಬೀಸಿ ಸೆರೆ ಹಿಡಿಯಲಾಯಿತು. ಅರಣ್ಯ ಅಧಿಕಾರಿ ಸುರೇಶ್, ಮುತ್ತುರಾಜ್ ಹಾಜರಿದ್ದರು.

ಸಾಂದರ್ಭಿಕ ಚಿತ್ರ

ಮಲ್ಲೇಶ್ವರ: ಕಡಲೆಕಾಯಿ ಪರಿಷೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಮಲ್ಲೇಶ್ವರ ಗೆಳೆಯರ ಬಳಗವು ಮಲ್ಲೇಶ್ವರದಲ್ಲಿ ಆಯೋಜಿಸಿರುವ ಒಂಬತ್ತನೇ ವರ್ಷದ ಕಡಲೆಕಾಯಿ ಪರಿಷೆಗೆ ಶನಿವಾರ ಚಾಲನೆ ನೀಡಲಾಯಿತು. ಸೋಮವಾರದವರೆಗೆ ಪರಿಷೆ ನಡೆಯಲಿದೆ. ಮಲ್ಲೇಶ್ವರದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ಕಾಡು ಮಲ್ಲೇಶ್ವರ ದೇವಾಲಯದ ರಥ ಬೀದಿಯಲ್ಲಿ ಬೇಯಿಸಿದ ಕಡಲೆಕಾಯಿ ಘಮ, ಹಲವು ಬಗೆಯ ತಿಂಡಿ ತಿನಿಸುಗಳು, ಆಲಂಕಾರಿಕ ವಸ್ತುಗಳು, ಮಕ್ಕಳ ಆಟಿಕೆಗಳನ್ನು ಮಾರಾಟ ಮಾಡುವ ಮಳಿಗೆಗಳನ್ನು ತೆರೆಯಲಾಗಿದೆ. ಪರಿಷೆಯಲ್ಲಿ 400ಕ್ಕೂ ಹೆಚ್ಚು ಮಳಿಗೆಗಳನ್ನು ಉಚಿತವಾಗಿ ನೀಡಲಾಗಿದ್ದು, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ತುಮಕೂರು, ಹಾಸನ, ಮೈಸೂರು, ಚಿಕ್ಕಬಳ್ಳಾಪುರದ ರೈತರು ಶೇಂಗಾ ಮಾರಾಟ ಮಾಡುತ್ತಿದ್ದಾರೆ. ಪರಿಷೆಗೆ ಸಾವಿರಾರು ಜನರು ಭೇಟಿ ನೀಡಿದ್ದರು.

ಹೊರ ರಾಜ್ಯದ ಶೇಂಗಾ: ತಮಿಳುನಾಡು, ಆಂಧ್ರಪ್ರದೇಶದ ವಿವಿಧೆಡೆಯಿಂದಲೂ ಹಾಲ್ಗಡಲೆ, ಕೆಂಪುಕಡಲೆ ಸೇರಿ ಎರಡು, ಮೂರು ಹಾಗೂ ನಾಲ್ಕು ಬೀಜದ ನಾಟಿ, ಹೈಬ್ರಿಡ್ ತಳಿಗಳ ಕಡಲೆಕಾಯಿಗಳು ಬಂದಿವೆ. ರೈತರು ಒಂದು ಸೇರಿಗೆ ₹50 ರಿಂದ ₹60 ದರದಲ್ಲಿ ಮಾರಾಟ ಮಾಡುತ್ತಿದ್ದಾರೆ.

ದೇವಸ್ಥಾನದ ಆವರಣದಲ್ಲಿರುವ ನಂದಿಗೆ ಕಡಲೆಕಾಯಿಂದ ಅಲಂಕಾರ ಮಾಡಲಾಗಿದ್ದು, ಸಾರ್ವಜನಿಕರು ಇದರ ಮುಂಭಾಗದಲ್ಲಿ ನಿಂತುಕೊಂಡು ಫೋಟೊ ತೆಗೆಸಿಕೊಳ್ಳುತ್ತಿದ್ದರು. ಕಾಡು ಮಲ್ಲಿಕಾರ್ಜುನ ಸ್ವಾಮಿ ಹಾಗೂ ಗಂಗಮ್ಮದೇವಿಗೆ ಕಡಲೆಕಾಯಿಯಿಂದಲೇ ಅಭಿಷೇಕ ಮಾಡಲಾಯಿತು.

ಪರಿಷೆಗೆ ಚಾಲನೆ ನೀಡಿ ನಂತರ ಮಾತನಾಡಿದ ಸಾರಿಗೆ ಮತ್ತು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ, ‘ಮುಜರಾಯಿ ಇಲಾಖೆ ವತಿಯಿಂದ ಬಸವನಗುಡಿಯಲ್ಲಿ ಐದು ದಿನ ಹಾಗೂ ಮಲ್ಲೇಶ್ವರದಲ್ಲಿ ಮೂರು ದಿನ ಕಡಲೆಕಾಯಿ ಪರಿಷೆಯನ್ನು ನಡೆಸಲಾಗುತ್ತಿದೆ. ನವೆಂಬರ್ 17ರಂದು ಬಸವನಗುಡಿಯ ಕಡಲೆಕಾಯಿ ಪರಿಷೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ’ ಎಂದು ತಿಳಿಸಿದರು.

‘ಕಡಲೆಕಾಯಿ ಪರಿಷೆಯಲ್ಲಿ ಪಾಲ್ಗೊಳ್ಳುವ ರೈತರಿಗೆ ಸುಂಕ ವಿಧಿಸುತ್ತಿಲ್ಲ. ಪ್ಲಾಸ್ಟಿಕ್ ಮುಕ್ತ ಪರಿಷೆ ನಡೆಸಲು 1 ಲಕ್ಷಕ್ಕೂ ಅಧಿಕ ಬಟ್ಟೆ, ಪೇಪರ್ ಬ್ಯಾಗ್‌ಗಳನ್ನು ಉಚಿತವಾಗಿ ವಿತರಿಸಲಾಗಿದೆ’ ಎಂದರು.

ವಿಧಾನ ಪರಿಷತ್ ಸದಸ್ಯರಾದ ಬಿ.ಕೆ. ಹರಿಪ್ರಸಾದ್, ಟಿ.ಎ.ಶರವಣ ಮತ್ತು ಕಾಡು ಮಲ್ಲೇಶ್ವರ ಬಳಗದ ಅಧ್ಯಕ್ಷ ಬಿ.ಕೆ.ಶಿವರಾಂ, ಉಪಾಧ್ಯಕ್ಷೆ ಲೀಲಾ ಸಂಪಿಗೆ, ಸಮಾಜ ಸೇವಕರಾದ ಅನೂಪ್ ಅಯ್ಯಂಗಾರ್, ಶ್ರೀವಲ್ಲಭ ಉಪಸ್ಥಿತರಿದ್ದರು.

ಮಲ್ಲೇಶ್ವರದಲ್ಲಿ ಶನಿವಾರ ಆರಂಭವಾದ ಪರಿಷೆಯಲ್ಲಿ ಮಹಿಳೆಯರು ಕಡಲೆಕಾಯಿ ಖರೀದಿಸಿದರು ಪ್ರಜಾವಾಣಿ ಚಿತ್ರ

‘ಮತಕಳವು: ಕೋಟಿ ಸಹಿ ಸಂಗ್ರಹ’

ಸಹಿ ಸಂಗ್ರಹದ ಅರ್ಜಿ 10ರಂದು ದೆಹಲಿಗೆ ರವಾನೆ– ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಹಾಗೂ ದೇಶದಲ್ಲಿ ಬಿಜೆಪಿ ನಡೆಸಿರುವ ಮತ ಕಳವು ವಿರುದ್ಧ ಕರ್ನಾಟಕದಲ್ಲಿ ನಡೆದ ಸಹಿ ಸಂಗ್ರಹ ಅಭಿಯಾನದಲ್ಲಿ 1.12 ಕೋಟಿ ಸಹಿಗಳನ್ನು ಸಂಗ್ರಹಿಸಲಾಗಿದೆ. ಈ ಸಹಿ ಸಂಗ್ರಹದ ಅರ್ಜಿಗಳನ್ನು ಇದೇ 10ರಂದು ದೆಹಲಿಗೆ ರವಾನಿಸಲಾಗುವುದು’ ಎಂದು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಜೊತೆ ಕೆಪಿಸಿಸಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಇದೇ 25ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ಸಮಾವೇಶ ಆಯೋಜಿಸಲು ಎಐಸಿಸಿ ಚಿಂತನೆ ನಡೆಸಿದೆ’ ಎಂದರು.

‘ನಮ್ಮ ಪಕ್ಷ ರಾಜಕೀಯವಾಗಿ ವಿಂಗಡಿಸಿರುವ 40 ಜಿಲ್ಲೆಗಳಿಂದ ಸಹಿ ಸಂಗ್ರಹಿಸಿದೆ. 8-10 ಕಡೆ ಹೊರತುಪಡಿಸಿ ಉಳಿದ ಕಡೆಗಳಲ್ಲಿ ಸಹಿ ಸಂಗ್ರಹ ಚೆನ್ನಾಗಿಯೇ ಆಗಿದೆ. ಅಭಿಯಾನ ನಡೆಯದ ಭಾಗಗಳಲ್ಲಿ ಇನ್ನೂ 3–4 ದಿನ ಕಾಲಾವಕಾಶ ನೀಡಿ ಸಹಿ ಸಂಗ್ರಹಿಸುವಂತೆ ಸೂಚಿಸಲಾಗುವುದು. ಈ ಅಭಿಯಾನದಲ್ಲಿ ಜವಾಬ್ದಾರಿಯಿಂದ ಕೆಲಸ ಮಾಡಿರುವ ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರ ಜೊತೆ ದೆಹಲಿಗೆ ವಿಮಾನದಲ್ಲಿ ತೆರಳಿ ಸಹಿ ಸಂಗ್ರಹಿಸಿರುವ ಅರ್ಜಿಗಳನ್ನು ತಲುಪಿಸಲಾಗುವುದು’ ಎಂದರು.

ಮುಖ್ಯಾಂಶಗಳು

- ಸಹಿ ಸಂಗ್ರಹ ಅಭಿಯಾನ: ರಾಜ್ಯ ಮೊದಲ ಸ್ಥಾನ
- ಅಕ್ರಮದಲ್ಲಿ ಚುನಾವಣಾ ಆಯೋಗ ಭಾಗಿ: ಕಿಡಿ
- 25ರಂದು ದೆಹಲಿಯ ರಾಮಲೀಲಾ ಮೈದಾನ ದಲ್ಲಿ ಬೃಹತ್ ಸಮಾವೇಶ

ಮತಪತ್ರ ಬಳಕೆ: ‘ಚುನಾವಣಾ ಅಕ್ರಮದ ತನಿಖೆಗೆ ಪೂರಕ ದಾಖಲೆ ನೀಡುವಂತೆ ಕೇಳಿದರೆ, ಆಯೋಗವೇ ನಮ್ಮ ಬಳಿ ಸಾಕ್ಷ್ಯ ಕೇಳುತ್ತಿದೆ. ಹೀಗಾಗಿ, ನಗರಪಾಲಿಕೆ ಚುನಾವಣೆಗಳನ್ನು ಮತ ಪತ್ರಗಳ ಮೂಲಕ ನಡೆಸಲು ಚಿಂತನೆ ನಡೆಸಿದ್ದೇವೆ. ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಕೇಂದ್ರ ಆಯೋಗದ ಮತ ಪಟ್ಟಿ ಬದಲು ರಾಜ್ಯ ಚುನಾವಣಾ ಆಯೋಗ ಪ್ರತ್ಯೇಕ ಮತದಾರರ ಪಟ್ಟಿಯನ್ನು ಬಳಸಲು ತೀರ್ಮಾನಿಸಿದೆ’ ಎಂದರು.

‘ಈ ಸಹಿ ಸಂಗ್ರಹ ಅಭಿಯಾನವನ್ನು ಯಶಸ್ವಿಯಾಗಿ ನಡೆಸಿರುವ ರಾಜ್ಯಗಳ ಪೈಕಿ ಕರ್ನಾಟಕ ಮೊದಲ ಸ್ಥಾನದಲ್ಲಿದೆ ಎಂದು ಪಕ್ಷದ ವರಿಷ್ಠರು ತಿಳಿಸಿದ್ದಾರೆ’ ಎಂದರು.

‘ಮತ ಕಳವು ಆರೋಪಗಳ ಬಗ್ಗೆ ಕಾಂಗ್ರೆಸ್ ಪ್ರಮಾಣಪತ್ರ ಸಲ್ಲಿಸಿಲ್ಲ ಎಂದು ಚುನಾವಣಾ ಆಯೋಗ ಹೇಳಿದೆ. ಅಲ್ಲದೆ, ನ್ಯಾಯಾಲಯದ ಮೆಟ್ಟಿಲೂ ಏರಿಲ್ಲ ಯಾಕೆ’ ಎಂದು ಕೇಳಿದಾಗ, ‘ನಾವು ಚುನಾವಣಾ ಅಯೋಗದ ಬಳಿ ಪೂರಕ ದಾಖಲೆಗಳನ್ನು ಕೇಳುತ್ತಿದ್ದೇವೆ. ಅವರು ಮಾಹಿತಿ ನೀಡುತ್ತಿಲ್ಲ. ಆಯೋಗದವರು ಮೊದಲು ದಾಖಲೆ ನೀಡಲಿ. ನಂತರ ಪ್ರಮಾಣಪತ್ರ ಸಲ್ಲಿಸುತ್ತೇವೆ’ ಎಂದರು.

‘ನಾವು ಹೋರಾಟ ಆರಂಭಿಸಿದ ನಂತರ ಚುನಾವಣಾ ಆಯೋಗ ಎಸ್‌ಐಆರ್ ಮಾಡುವುದಾಗಿ ಹೇಳುತ್ತಿದೆ. ನಾವು ಈ ವಿಚಾರವಾಗಿ ಯಾಕೆ ನ್ಯಾಯಾಲಯದ ಮೆಟ್ಟಿಲೇರಬೇಕು? ಆಯೋಗ ಸಾಂವಿಧಾನಿಕ ಸಂಸ್ಥೆ’ ಎಂದರು.

ಅಕ್ರಮದಲ್ಲಿ ಆಯೋಗ ಭಾಗಿ: ‘ಈಗಿರುವ ತಂತ್ರಜ್ಞಾನದಲ್ಲಿ ಚುನಾವಣಾ ಅಕ್ರಮ ತಡೆಯಲು ಯಾಕೆ ಸಾಧ್ಯವಾಗಿಲ್ಲ? ಚುನಾವಣಾ ಆಯೋಗ ಕೂಡಾ ಈ ಅಕ್ರಮದಲ್ಲಿ ಭಾಗಿಯಾಗಿದೆ’ ಎಂದು ಆರೋಪಿಸಿದರು.

ಸಚಿವ ಸತೀಶ ಜಾರಕಿಹೊಳಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್, ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಇದ್ದರು.



ಸಹಿ ಸಂಗ್ರಹಿಸಿದ ಅರ್ಜಿಗಳ ಪೆಟ್ಟಿಗೆಯನ್ನು ಡಿ.ಕೆ. ಶಿವಕುಮಾರ್ ಮತ್ತು ಸಿದ್ಧರಾಮಯ್ಯ ಪ್ರದರ್ಶಿಸಿದರು. ಸಲೀಂ ಅಹ್ಮದ್, ಸತೀಶ ಜಾರಕಿಹೊಳಿ, ಜಿ.ಸಿ. ಚಂದ್ರಶೇಖರ್ ಜತೆಗಿದ್ದರು– ಪ್ರಜಾವಾಣಿ ಚಿತ್ರ

ಮತ ಕಳವಿನಲ್ಲೂ ಬಿಜೆಪಿಯವರು ನಿಸ್ಸೀಮರು– ಸಿ.ಎಂ

‘ಬಿಜೆಪಿಯವರು ಕೇವಲ ಸುಳ್ಳು ಹೇಳುವುದರಲ್ಲಿ ಅಷ್ಟೇ ಅಲ್ಲ, ಮತಗಳನ್ನು ಕಳವು ಮಾಡುವುದರಲ್ಲೂ ನಿಸ್ಸೀಮರು ಎನ್ನುವುದು ಸಾಬೀತಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮ್ಯಯ ಹೇಳಿದರು.

’ಮೋದಿ ಪ್ರಧಾನಿಯಾದ ಬಳಿಕ ಎಲ್ಲ ಸಾಂವಿಧಾನಿಕ ಸಂಸ್ಥೆಗಳ ಮೌಲ್ಯವನ್ನು ಹಾಳು ಮಾಡಿದ್ದಾರೆ. ಅಲ್ಲದೆ, ಚುನಾವಣಾ ಆಯೋಗ, ಸಿಬಿಐ ಸೇರಿ ಎಲ್ಲ ಸಾಂವಿಧಾನಿಕ ಸಂಸ್ಥೆಗಳನ್ನು ಕೇಂದ್ರ ಸರ್ಕಾರದ ಅಡಿಯಾಳಾಗಿಸಿಕೊಂಡಿದ್ದಾರೆ’ ಎಂದು ಆರೋಪಿಸಿದರು.

‘ಮತ ಕಳವು ಆಗುವುದನ್ನು ನಾವು ಸಹಿಸುವುದಿಲ್ಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಮೌಲ್ಯ ಕಾಪಾಡಲು ಹೋರಾಟದ ಮಾರ್ಗ ಹಿಡಿಯುತ್ತೇವೆ’ ಎಂದರು.

‘ಬಿಜೆಪಿ ಮತ ಕಳವು ಮೂಲಕ ಅನೇಕ ರಾಜ್ಯಗಳಲ್ಲಿ ಮತ್ತು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವುದು ಸ್ಪಷ್ಟವಾಗಿ ಗೊತ್ತಾಗಿದೆ. ಲೋಕಸಭೆ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿಯವರು ಅಧ್ಯಯನ ನಡೆಸಿದ ಬಳಿಕ ದಾಖಲೆಗಳ ಸಹಿತ ಮತಗಳ್ಳತನವನ್ನು ಜನರಿಗೆ ಮನವರಿಕೆ ಮಾಡಿಸಿದ್ದಾರೆ’ ಎಂದು ವಿವರಿಸಿದರು.

‘ಸಂವಿಧಾನಬಾಹಿರವಾಗಿ ಅಧಿಕಾರ ಹಿಡಿಯುವುದು ಸಂವಿಧಾನಕ್ಕೆ ಎಸಗುವ ದ್ರೋಹ. ಪ್ರಜಾಪ್ರಭುತ್ವಕ್ಕೆ ಎಸಗಿದ ವಂಚನೆ. ಬೆಂಗಳೂರು ಕೇಂದ್ರ ಲೋಕಸಭೆ ಚುನಾವಣೆಯಲ್ಲಿ ನಡೆದ ಮತಗಳ್ಳತನವನ್ನು ಸ್ಪಷ್ಟವಾಗಿ, ದಾಖಲೆ ಸಮೇತ ಬಹಿರಂಗಪಡಿಸಿದರೂ ಚುನಾವಣಾ ಆಯೋಗ ನಮ್ಮ ಪ್ರಶ್ನೆಗಳಿಗೆ ಉತ್ತರಿಸುತ್ತಿಲ್ಲ. ದೇಶದ ಜನರ ಮುಂದೆ ಇರಿಸಿದ ದಾಖಲೆಗಳಿಗೂ ಉತ್ತರ ನೀಡುತ್ತಿಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಚಟಿಕೆ ಸುದ್ದಿ

ಆಫ್ರಿಕಾದಿಂದ ಮತ್ತೆ 8 ಚೀತಾಗಳು ಭಾರತಕ್ಕೆ

ಭೋಪಾಲ್ (ಪಿಟಿಐ): ಭಾರತಕ್ಕೆ ಚೀತಾಗಳನ್ನು ಮರುಪರಿಚಯಿಸುವ 2022ರ ಕಾರ್ಯಕ್ರಮದ ಅಡಿಯಲ್ಲಿ ಸ್ಥಳಾಂತರಿಸಲು 8 ಚೀತಾಗಳನ್ನು ದಕ್ಷಿಣ ಆಫ್ರೀಕಾದ ಬೋಟ್ಸ್‌ವಾನಾದಲ್ಲಿ ಸೆರೆಹಿಡಿಯಲಾಗಿದೆ ಎಂದು ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಎರಡು ಗಂಡು ಚೀತಾಗಳು ಸೇರಿ ಒಟ್ಟು ಎಂಟು ಚೀತಾಗಳನ್ನು ಒಂದು ತಿಂಗಳ ಕಾಲ ಪ್ರತ್ಯೇಕವಾಸದಲ್ಲಿ ಇರಿಸಲಾಗುತ್ತದೆ. ಭಾರತಕ್ಕೆ ಕಳುಹಿಸುವ ಮೊದಲು ಅವುಗಳನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಕಳ್ಳಸಾಗಣೆದಾರರಿಂದ ದಾಳಿ: ಯೋಧರಿಗೆ ಗಾಯ

ಅಗರ್ತಲಾ, ತ್ರಿಪುರ (ಪಿಟಿಐ): ಇಲ್ಲಿನ ಸಿಪಾಹಿಜಾಲಾ ಜಿಲ್ಲೆಯಲ್ಲಿ ಶಂಕಿತ ದನ ಕಳ್ಳಸಾಗಣೆದಾರರು ನಡೆಸಿದ ದಾಳಿಗೆ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಐದು ಮಂದಿ ಯೋಧರು ಗಾಯಗೊಂಡಿದ್ದಾರೆ.

ಭಾರತ– ಬಾಂಗ್ಲಾದೇಶ ಗಡಿಭಾಗದ ಬಿಶಾಲ್‌ಗಢ ಹಾಗೂ ಕಮ್‌ಥಾನಾ ರಸ್ತೆಯಲ್ಲಿ ಈ ಘಟನೆ ನಡೆದಿದೆ.

‘ಕಮ್‌ಥಾನಾ ಗಡಿಯ ಹೊರ ಠಾಣೆಯ ಬಳಿ ರಸ್ತೆಯಲ್ಲಿ ಬರುತ್ತಿದ್ದ ವಾಹನವೊಂದನ್ನು ಬಿಎಸ್‌ಎಫ್ ಯೋಧರು ತಡೆದಿದ್ದಾರೆ, ಆಗ ವಾಹನದ ಚಾಲಕ ನಿಲ್ಲಿಸದೇ, ಸೀದಾ ಸ್ಥಳೀಯ ಮಾರುಕಟ್ಟೆಗೆ ಕಡೆಗೆ ಕೊಂಡೊಯ್ದಿದ್ದಾನೆ. ಬಿಎಸ್‌ಎಫ್ ಯೋಧರು ವಾಹನವನ್ನು ಬೆನ್ನತ್ತಿದ್ದು, ಈ ವೇಳೆ ಕಳ್ಳ ಸಾಗಣೆದಾರರು ಹಾಗೂ ಯೋಧರ ನಡುವೆ ಮಾತಿನ ಚಕಮಕಿ ನಡೆದಿದೆ. ಎರಡು ಕಡೆ ಮಾತಿನ ಚಕಮಕಿ ಜೋರಾಗಿ ಯೋಧರ ಮೇಲೆ ಹಲ್ಲೆ ನಡೆಸಿದ್ದಾರೆ. ಈ ವೇಳೆ ಯೋಧರು ಗಾಯಗೊಂಡಿದ್ದು, ವಾಹನಗಳು ಜಖಂಗೊಂಡಿವೆ’ ಎಂದು ಬಿಶಾಲ್‌ಗಢ ಪೊಲೀಸ್ ಠಾಣೆಯ ಠಾಣಾಧಿಕಾರಿ ಬಿಕಾಶ್ ದಾಸ್ ತಿಳಿಸಿದ್ದಾರೆ.

ಅಂಗೋಲಾ ಪ್ರವಾಸಕ್ಕೆ ಮುರ್ಮು

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಆಫ್ರಿಕಾದ ದಕ್ಷಿಣ ಭಾಗದ ಅಂಗೋಲಾ ಹಾಗೂ ಬೋಟ್ಸ್‌ವಾನಾ ದೇಶಗಳಿಗೆ 6 ದಿನಗಳ ಪ್ರವಾಸಕ್ಕೆ ಶನಿವಾರ ತೆರಳಿದರು. ಈ ದೇಶಗಳಿಗೆ ಭಾರತದ ರಾಷ್ಟ್ರಪತಿಯೊಬ್ಬರು ಭೇಟಿ ನೀಡುತ್ತಿರುವುದು ಇದೇ ಮೊದಲು.

ಆ ದೇಶಗಳೊಂದಿಗೆ ಸಹಯೋಗ ಹಾಗೂ ಪಾಲುದಾರಿಕೆಯನ್ನು ವಿಸ್ತರಿಸುವ ಭಾರತದ ಪ್ರಯತ್ನದ ಭಾಗವಾಗಿ ಈ ಪ್ರವಾಸ ಕೈಗೊಂಡಿದ್ದಾರೆ.

ಮೊದಲು ಅಂಗೋಲಾ ರಾಜಧಾನಿ ಲೌಂಡಾಕ್ಕೆ ಮುರ್ಮು ಬಂದಿಳಿಯಲಿದ್ದಾರೆ. ಇಲ್ಲಿ ನ.8 ರಿಂದ 11ರವರೆಗೆ ಪ್ರವಾಸದಲ್ಲಿರಲಿರುವ ಅವರು ದೇಶದ 50ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗಿಯಾಗಲಿದ್ದಾರೆ.

ಅಂಗೋಲಾ ಅಧ್ಯಕ್ಷ ಜಾವೊ ಮ್ಯಾನುಯೆಲ್ ಗೊಂಕ್ಲಾವೆಸ್ ಲಿಯೊರೆಂಕೊ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಉನ್ನತ ಮಟ್ಟದ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ. ಆ ದೇಶದ ಸಂಸತ್ತನ್ನು ಉದ್ದೇಶಿಸಿ ಮುರ್ಮು ಮಾತನಾಡಲಿದ್ದಾರೆ.

ಸುದ್ದಿ 2 ನಿಮಿಷ

‘ಕೆಪಿಸಿಸಿ ಸಾರಥ್ಯ: ಈಗೇನೂ ಇಲ್ಲ’

ಬೆಂಗಳೂರು: ‘ಕೆಪಿಸಿಸಿ ಸಾರಥ್ಯವಹಿಸುವ ವಿಚಾರದಲ್ಲಿ ಹೈಕಮಾಂಡ್‌ನ ತೀರ್ಮಾನವೇ ಅಂತಿಮ. ಅವರು ಏನು ಮಾಡುತ್ತಾರೆಂದು ನೋಡೋಣ’ ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಕಾಂಗ್ರೆಸ್‌ನ ಸಾರಥ್ಯ ವಹಿಸುವಂತೆ ಆಪ್ತರು ಸಲಹೆ ನೀಡುತ್ತಿರುವ ಕುರಿತು ಪ್ರಸ್ತಾಪಿಸಿದಾಗ ಪ್ರತಿಕ್ರಿಯಿಸಿದ ಅವರು, ‘ಅದೆಲ್ಲ ಈಗ ಏನೂ ಆಗಲ್ಲ’ ಎಂದರು.

‘ಯಾವ ಕ್ರಾಂತಿಯೂ ಇಲ್ಲ. ಏನೂ ಇಲ್ಲ’ ಎಂಬ ಡಿ.ಕೆ. ಶಿವಕುಮಾರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ಕ್ರಾಂತಿ ಇಲ್ಲ ಎಂದು ಅವರೇ ಹೇಳಿದ್ದಾರಲ್ಲ. ರಾಮಲಿಂಗಾರೆಡ್ಡಿಯವರೂ ಹೇಳಿದ್ದಾರೆ. ಸುರೇಶ್ ಕೂಡ ಕ್ರಾಂತಿ ಇಲ್ಲ ಎನ್ನುತ್ತಿದ್ದಾರೆ. ಎಲ್ಲರೂ ಇಲ್ಲ ಅಂದಮೇಲೆ ಇನ್ನೇನಿದೆ? ನಾನು ಅದನ್ನೇ ಹೇಳುತ್ತಿದ್ದೇನೆ’ ಎಂದರು.

ಆಪ್ತರ ಜೊತೆ ಮತ್ತೆ ಔತಣಕೂಟಕ್ಕೆ ಸೇರುವ ಬಗ್ಗೆ ಕೇಳಿದ ಪ್ರಶ್ನೆಗೆ, ‘ಆ ಯಾವ ಯೋಚನೆಯೂ ಇಲ್ಲ. ನಾವು ಸುಮ್ಮನಿದ್ದರೂ ಆ ವಿಚಾರ ನಮ್ಮನ್ನೇ ಸುತ್ತು ಹಾಕುತ್ತಿದೆ’ ಎಂದರು.

ಗುಜರಾತ್ ಮಾದರಿಯಲ್ಲಿ ರಾಜ್ಯ ಸಚಿವ ಸಂಪುಟ ಪುನರ್‌ರಚನೆ ಬಗ್ಗೆ ಶಿವಕುಮಾರ್ ಬಣ ಆಗ್ರಹಿಸಿದೆ ಎಂಬ ಮಾತು ಇದೆಯಲ್ಲ ಎಂಬ ಪ್ರಶ್ನೆಗೆ, ‘ಆ ಕುರಿತು ಶಿವಕುಮಾರ್ ಅವರನ್ನೇ ನೀವು ಕೇಳಬೇಕು’ ಎಂದು ಜಾರಕಿಹೊಳಿ ಪ್ರತಿಕ್ರಿಯಿಸಿದರು.

ಬೃಹತ್ ಗೀತೋತ್ಸವಕ್ಕೆ ಚಾಲನೆ

ಉಡುಪಿ: ಪರ್ಯಾಯ ಪುತ್ತಿಗೆ ಶ್ರೀಕೃಷ್ಣ ಮಠವು ಆಯೋಜಿಸಿರುವ ಒಂದು ತಿಂಗಳ ಬೃಹತ್ ಗೀತೋತ್ಸವಕ್ಕೆ ಪೇಜಾವರ ಮಠಾಧೀಶ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಕೃಷ್ಣಮಠದ ರಾಜಾಂಗಣದಲ್ಲಿ ಭಗವದ್ಗೀತೆ ಗ್ರಂಥವನ್ನು ರಥದಲ್ಲಿರಿಸುವ ಮೂಲಕ ಶನಿವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ‘ಅವರವರು ಅವರವರ ಕರ್ತವ್ಯ ನಿಭಾಯಿಸದಿರುವುದು ಜಗತ್ತು ಹಿಂದೆ ಉಳಿಯಲು ಕಾರಣ. ನಿತ್ಯ ಬದುಕಿನಲ್ಲಿ ಕೃಷ್ಣೋಪದೇಶ ಅಳವಡಿಸಿಕೊಂಡರೆ ಒಳಿತಾಗುತ್ತದೆ’ ಎಂದರು.

‘ಭಗವದ್ಗೀತೆಯು ಮತಿ ಉಳ್ಳವರಿಗೆ ಬೇಕಾದ ಗ್ರಂಥವಾಗಿರುವುದರಿಂದ ಅದು ಮತೀಯ ಗ್ರಂಥ. ಮತಿವಂತರು ಅದನ್ನು ಸ್ವೀಕರಿಸಬೇಕು’ ಎಂದು ಹೇಳಿದರು. ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರ ತೀರ್ಥ ಸ್ವಾಮೀಜಿ, ಕಿರಿಯ ಯತಿ ಸುಶ್ರೀಂದ್ರ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು.

ಬೃಹತ್ ಗೀತೋತ್ಸವದ ಅಂಗವಾಗಿ ಇದೇ 28ರಂದು ಲಕ್ಷ ಕಂಠ ಗೀತಾ ಪಾರಾಯಣ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳಲಿದ್ದಾರೆ.

ಕುರ್ಚಿಗಾಗಿ ‘ಮತಕಳವು’ ಆರೋಪ: ಅಶೋಕ

ಪ್ರಜಾವಾಣಿ ವಾರ್ತೆ

ಆರ್. ಅಶೋಕ

ಬೆಂಗಳೂರು: ‘ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗೆ ಮನಸ್ಸಿಲ್ಲದಿದ್ದರೂ ತಮ್ಮ ಕುರ್ಚಿ ಉಳಿಸಿಕೊಳ್ಳಲು, ಕುರ್ಚಿ ಗಿಟ್ಟಿಸಿಕೊಳ್ಳಲು ಸುದ್ದಿಗೋಷ್ಠಿ ನಡೆಸಿ ಮತ ಕಳವು ವಿಷಯ ಪ್ರಸ್ತಾಪಿಸಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ದೂರಿದ್ದಾರೆ.

ಬಿಹಾರ ಚುನಾವಣೆಯಲ್ಲಿ ಸೋಲಿನ ಮುಖಭಂಗ ಖಚಿತವಾಗುತ್ತಿದ್ದಂತೆ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬಲವಂತವಾಗಿ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಅವರಿಂದ ಸುದ್ದಿಗೋಷ್ಠಿ ಮಾಡಿಸಿದ್ದಾರೆ. ಮತ ಕಳವಿನ ಮೆಗಾ ಧಾರಾವಾಹಿಯ ಮತ್ತೊಂದು ಸಂಚಿಕೆ ಬಿಡುಗಡೆ ಮಾಡಿಸಿದ್ದಾರೆ. ಆಟಂ ಬಾಂಬ್, ಹೈಡ್ರೋಜನ್ ಬಾಂಬ್ ಎಂದು ಹೇಳಿದ ಸುಳ್ಳನ್ನೇ ಮತ್ತೆ ಹೇಳಿ ಜನರ ಮುಂದೆ ಈಗಾಗಲೇ ನಗೆಪಾಟಲಿಗೆ ಒಳಗಾಗಿದ್ದಾರೆ’ ಎಂದು ಟೀಕಿಸಿದ್ದಾರೆ.

‘ರಾಹುಲ್ ಅವರು ಮಾಡುತ್ತಿರುವ ಆರೋಪದಲ್ಲಿ ಹುರುಳಿದ್ದರೆ ಚುನಾವಣಾ ಆಯೋಗ ಕೇಳಿದಂತೆ ಅಫಿಡವಿಟ್ ಏಕೆ ಸಲ್ಲಿಸುತ್ತಿಲ್ಲ? ಮೊಕದ್ದಮೆ ಏಕೆ ದಾಖಲಿಸುತ್ತಿಲ್ಲ? ಅವರ ಪ್ರತಿಯೊಂದು ಆರೋಪಕ್ಕೂ ಚುನಾವಣಾ ಆಯೋಗ ಸೂಕ್ತ ಉತ್ತರ ನೀಡಿದೆ. ಇಷ್ಟಾದರೂ ಸುಳ್ಳು ಹೇಳುತ್ತಿರುವ ರಾಹುಲ್ ಭಂಡತನವನ್ನು ಮೆಚ್ಚಲೇಬೇಕು’ ಎಂದಿದ್ದಾರೆ.

‘ಕಾಂಗ್ರೆಸ್ ಪಕ್ಷಕ್ಕೆ ಮತ ಕಳವು ಬಗ್ಗೆ ನಿಜವಾದ ಬದ್ಧತೆ ಇದ್ದರೆ ಅಕ್ರಮ ಬಾಂಗ್ಲಾ ವಲಸಿಗರ ಮೇಲೆ ಕ್ರಮ ಕೈಗೊಂಡು, ಅವರನ್ನು ಗಡಿಪಾರು ಮಾಡಬೇಕು’ ಎಂದು ಒತ್ತಾಯಿಸಿದ್ದಾರೆ.

ಮತ ಕಳವಿನಿಂದಲೇ ಕಾಂಗ್ರೆಸ್‌ಗೆ ಅಧಿಕಾರ: ಎಚ್‌ಡಿಕೆ

ಎಚ್. ಡಿ.ಕುಮಾರಸ್ವಾಮಿ

ಬೆಂಗಳೂರು: ‘ರಾಜ್ಯದಲ್ಲಿ 2023ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮತ ಕಳವು ಮಾಡಿದ್ದರಿಂದಲೇ 136 ಸ್ಥಾನಗಳಲ್ಲಿ ಗೆದ್ದು, ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ’ ಎಂದು ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು ‘ಮತ ಕಳವಿನಿಂದಲೇ ಬಿಜೆಪಿ ಗೆಲ್ಲುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಆರೋಪ ಮಾಡುತ್ತಿದ್ದಾರೆ. ಮತಕಳವು ಮಾಡಿ ಅಧಿಕಾರಕ್ಕೆ ಬಂದವರು ಈಗ ಬೇರೆಯವರ ಮೇಲೆ ಸುಳ್ಳು ಆರೋಪ ಮಾಡುತ್ತಿದ್ದಾರೆ’ ಎಂದು ದೂರಿದರು.

‘ವಿಧಾನಸಭೆ ಚುನಾವಣೆಯಲ್ಲಿ 136 ಸೀಟು ಬರುತ್ತೆ ಎಂದು ಅಷ್ಟು ನಿಖರವಾಗಿ ಹೇಗೆ ಹೇಳಿದರು? ಆ ಸಂಖ್ಯೆ ಅವರಿಗೆ ಹೇಗೆ ಗೊತ್ತಿತ್ತು? ಯಾವ ಆಧಾರದಲ್ಲಿ ಹೇಳಿದರು? ಇದೆಲ್ಲ ಗಮನಿಸಿದರೆ ಮತ ಕಳವು ಮಾಡಿರುವುದೇ ಕಾಂಗ್ರೆಸ್ ಪಕ್ಷ. ಈಗ ಪ್ರಧಾನಿ ನರೇಂದ್ರ ಮೋದಿ ಅವರನ್ನು ಟೀಕೆ ಮಾಡುತ್ತಿದೆ. ನರೇಂದ್ರ ಮೋದಿ ರಾಜ್ಯದಲ್ಲಿ ಬಿಜೆಪಿಗೆ 67 ಸೀಟು ಗೆಲ್ಲಿಸುವುದಕ್ಕೆ ಮತ ಕಳವು ಮಾಡಿಸಿದ್ದರಾ? ಕಾಂಗ್ರೆಸ್ ಜನರನ್ನು ಯಾಮಾರಿಸಿ, ವ್ಯರ್ಥ ಹೇಳಿಕೆ ಕೊಡುತ್ತಾ ಕಾಲಹರಣ ಮಾಡುತ್ತಿದೆ. ರಾಜ್ಯದಲ್ಲಿ ಹಲವು ಗಂಭೀರ ಸಮಸ್ಯೆಗಳನ್ನು ಜನರು ಎದುರಿಸುತ್ತಿದ್ದಾರೆ. ಅತ್ತ ಗಮನ ಹರಿಸಬೇಕು’ ಎಂದು ಸಲಹೆ ನೀಡಿದರು.

‘ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಜಂಟಿ ಪತ್ರಿಕಾಗೋಷ್ಠಿ ಎಂಬ ಮಾಹಿತಿ ತಿಳಿದಾಗ ಯಾವುದೋ ಮಹತ್ವದ ವಿಷಯ ಇರಬೇಕು ಎಂದುಕೊಂಡೆ. ಮತ ಕಳವಿನ ಬಗ್ಗೆ ಪತ್ರಿಕಾಗೋಷ್ಠಿ ನಡೆಸಿರುವುದು ಅವರ ಸಣ್ಣತನ. ಈ ಸಣ್ಣತನವನ್ನು ರಾಜ್ಯದ ಜನರು ನೋಡಿದ್ದಾರೆ. ಅವರನ್ನು ಶಾಶ್ವತವಾಗಿ ಮನೆಗೆ ಕಳಿಸುವ ದಿನ ದೂರ ಇಲ್ಲ’ ಎಂದರು.

‘ಖಾಲಿ ಆಗಿರುವ ಖಜಾನೆ ತುಂಬಿಸಲು ಒಂದು ದಿನದ ಹಿಂದಷ್ಟೇ ಸಭೆ ಮಾಡಿದ್ದಾರೆ. ಜನರ ಮೇಲೆ ನಿರಂತರ ತೆರಿಗೆ ವಿಧಿಸುವ ಮೂಲಕ ಹಣವನ್ನು ಲೂಟಿ ಮಾಡುತ್ತಿದ್ದಾರೆ. ತಪ್ಪು ತಿದ್ದಿಕೊಂಡು ಕೆಲಸ ಮಾಡುವಂತೆ ಹೇಳುವ ಬುದ್ಧಿಮಾತು ಕೇಳುವುದಿಲ್ಲ. ಬುದ್ಧಿಯೂ ಬಂದಿಲ್ಲ’ ಎಂದು ದೂರಿದರು.

ರಜೆ ಸರಿದೂಗಿಸಲು ಹೆಚ್ಚುವರಿ ಅವಧಿ ಪಾಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಗಾಗಿ ಹತ್ತು ದಿನಗಳು ವಿಸ್ತರಿಸಿದ್ದ ದಸರಾ ರಜೆಯನ್ನು ಸರಿದೂಗಿಸಲು ಮುಂದಾಗಿರುವ ಶಾಲಾ ಶಿಕ್ಷಣ ಇಲಾಖೆ, ಪ್ರತಿದಿನ ಒಂದು ಅವಧಿ ಹೆಚ್ಚುವರಿ ಪಾಠ ಮಾಡುವಂತೆ ಸರ್ಕಾರಿ, ಅನುದಾನಿತ ಶಾಲೆಗಳಿಗೆ ಸೂಚಿಸಿದೆ.

ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಈ ಬಗ್ಗೆ ಪ್ರತ್ಯೇಕ ಸುತ್ತೋಲೆ ಹೊರಡಿಸಲಾಗಿದೆ. ಪ್ರಾಥಮಿಕ ಶಾಲೆಗಳು 2026ರ ಫೆಬ್ರವರಿ 5ರವರೆಗೆ ಹಾಗೂ ಪ್ರೌಢಶಾಲೆಗಳು ಜನವರಿ 24ರವರೆಗೆ ಹೆಚ್ಚುವರಿ ಪಾಠಗಳನ್ನು ನಡೆಸಬೇಕು. ಬೆಳಿಗ್ಗೆ ಅಥವಾ ಸಂಜೆ ಯಾವ ಸಮಯ ಹೊಂದಾಣಿಕೆಯಾಗುತ್ತದೆ ಎನ್ನುವುದನ್ನು ಆಯಾ ಶಾಲಾ ಮುಖ್ಯಸ್ಥರೇ ನಿರ್ಧಾರ ಮಾಡಬೇಕು ಎಂದು ಸೂಚಿಸಲಾಗಿದೆ.

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಜನವರಿಯಿಂದ ಮಾರ್ಚ್‌ವರೆಗೆ ವಿಶೇಷ ತರಗತಿಗಳನ್ನು ನಡೆಸುವಂತೆಯೂ ಇಲಾಖೆ ಸೂಚಿಸಿದೆ.

ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿ ಕೈದಿಗಳ ವಿಲಾಸಿ ಜೀವನ; ಹರಿದಾಡಿದ ವಿಡಿಯೊ

ಉಗ್ರ, ಪಾತಕಿ ಕೈಯಲ್ಲಿ ಸ್ಮಾರ್ಟ್‌ಫೋನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ಸಜಾ ಬಂದಿಗಳು ಹಾಗೂ ವಿಚಾರಣಾಧೀನ ಕೈದಿಗಳಿಗೆ ಜೈಲಿನಲ್ಲಿ ಸಕಲ ಸೌಲಭ್ಯ ದೊರೆಯುತ್ತಿರುವುದಕ್ಕೆ ಸಾಕ್ಷ್ಯಗಳಾಗಿ ಫೋಟೊ, ವಿಡಿಯೊಗಳು ಲಭ್ಯವಾಗಿವೆ.

ಶಿಕ್ಷೆಗೆ ಗುರಿಯಾಗಿ ಜೈಲುವಾಸ ಅನುಭವಿಸುತ್ತಿರುವ ಉಗ್ರ ಸಂಘಟನೆಗಳ ಮುಖಂಡರು, ಕೊಲೆ ಹಾಗೂ ಅತ್ಯಾಚಾರ ಪ್ರಕರಣದ ಅಪರಾಧಿಗಳು, ಚಿನ್ನ ಸಾಗಣೆ ಪ್ರಕರಣದ ಆರೋಪಿಗಳಿಗೆ ಜೈಲಿನ ಸಿಬ್ಬಂದಿಯೇ ವಿಶೇಷ ಸೌಲಭ್ಯ ಕಲ್ಪಿಸುತ್ತಿದ್ದಾರೆ ಎಂಬ ಆರೋಪವಿತ್ತು. ಆ ಆರೋಪಕ್ಕೆ ಪುರಾವೆಯಾಗಿ ಸಾಮಾಜಿಕ ಜಾಲತಾಣದಲ್ಲಿ ಹಲವು ಫೋಟೊ ಹಾಗೂ ವಿಡಿಯೊಗಳು ಹರಿದಾಡುತ್ತಿವೆ. ಕೈದಿಗಳು ವಿಲಾಸಿ ಜೀವನ ನಡೆಸುತ್ತಿರುವುದು ದೃಢಪಟ್ಟಿದೆ.

ಅತ್ಯಾಚಾರ ನಡೆಸಿ ಸರಣಿ ಕೊಲೆ ಮಾಡಿದ್ದ ಅಪರಾಧಿ ಉಮೇಶ್ ರೆಡ್ಡಿ, ಲಷ್ಕರ್ -ಎ-ತಯಬಾ ಸಂಘಟನೆಯ ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ, ದುಬೈನಿಂದ ಚಿನ್ನ ಕಳ್ಳ ಸಾಗಣೆ ಪ್ರಕರಣದ ಆರೋಪಿ ತರುಣ್ ರಾಜ್ ಇರುವ ಬ್ಯಾರಕ್‌ನಲ್ಲಿ ಮೊಬೈಲ್ ಫೋನ್ ಹಿಡಿದುಕೊಂಡು ತಮ್ಮ ಸಹಚರರು ಹಾಗೂ ಸಂಬಂಧಿಕರ ಜತೆಗೆ ಮಾತುಕತೆ ನಡೆಸುತ್ತಿರುವ ವಿಡಿಯೊಗಳು ಹರಿದಾಡುತ್ತಿವೆ.

ಈ ಮೂವರಿಗೆ ನೀಡಲಾಗಿರುವ ಹೆಚ್ಚಿನ ಭದ್ರತೆಯುಳ್ಳ ಬ್ಯಾರಕ್‌ನಲ್ಲಿ ಎಲ್‌ಇಡಿ ಟಿ.ವಿ ವ್ಯವಸ್ಥೆ ಸಹ ಮಾಡಿರುವುದು ಬಹಿರಂಗವಾಗಿದೆ.

ಹಮೀದ್ ಶಕೀಲ್ ಮನ್ನಾ ಎಂಬಾತನಿಗೂ ವಿಶೇಷ ಆತಿಥ್ಯ ದೊರೆಯುತ್ತಿದೆ. ಈತ ಯುವಕರ ಮನಪರಿವರ್ತನೆ ಮಾಡಿ ಭಯೋತ್ಪಾದನಾ ಚಟುವಟಿಕೆಗೆ ಸೆಳೆಯುತ್ತಿದ್ದ. ಅಲ್ಲದೇ ಉಗ್ರ ಸಂಘಟನೆಗೂ ನೇಮಕ ಮಾಡಿಕೊಳ್ಳುತ್ತಿದ್ದ. ಜೈಲಿನೊಳಗೆ ಮನ್ನಾಗೂ ಸ್ಮಾರ್ಟ್‌ಫೋನ್ ಸಿಕ್ಕಿದೆ. ಈತ ಜೈಲಿನಲ್ಲೇ ಫೋನ್ ಬಳಕೆ ಮಾಡುತ್ತಿರುವುದು ದೃಢಪಟ್ಟಿದೆ. ₹5 ಸಾವಿರ ಕಳುಹಿಸುವುದಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ವ್ಯಕ್ತಿಯ ಜತೆಗೆ ಉಗ್ರ ಚರ್ಚೆ ನಡೆಸುತ್ತಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.

ದುಬೈನಿಂದ ಚಿನ್ನ ಕಳ್ಳ ಸಾಗಣೆ ಮಾಡಿದ್ದ ಪ್ರಕರಣದಲ್ಲಿ ನಟಿ ರನ್ಯಾರಾವ್ ಅವರನ್ನು ಬಂಧಿಸಲಾಗಿತ್ತು. ಅದೇ ಪ್ರಕರಣದಲ್ಲಿ ತರುಣ್ ರಾಜ್‌ನನ್ನು ಕಂದಾಯ ಗುಪ್ತಚರ ನಿರ್ದೇಶನಾಲಯದ (ಡಿಆರ್‌ಐ) ಅಧಿಕಾರಿಗಳು ಕೆಲವು ತಿಂಗಳ ಹಿಂದೆ ಬಂಧಿಸಿದ್ದರು. ಆತನಿಗೂ ಜೈಲಿನ ಒಳಗೆ ವಿಶೇಷ ಸೌಲಭ್ಯಗಳು ದೊರೆಯುತ್ತಿವೆ. ತರುಣ್ ಸಹ ತನ್ನ ಬ್ಯಾರಕ್‌ನಿಂದಲೇ ಆತ್ಮೀಯರ ಜತೆಗೆ ಮಾತನಾಡುತ್ತಾ ಜೈಲಿನಲ್ಲಿ ದಿನ ಕಳೆಯುತ್ತಿರುವುದು ಗೊತ್ತಾಗಿದೆ.

‘ಮೂವರಿಗೆ ಯಾರು ಮೊಬೈಲ್ ಪೂರೈಸಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಯಾರ ಜತೆಗೆ ಅವರು ಸಂಪರ್ಕದಲ್ಲಿದ್ದರು ಎಂಬುದನ್ನೂ ಪತ್ತೆ ಹಚ್ಚಲಾಗುವುದು. ಬ್ಯಾರಕ್‌ಗಳನ್ನು ಪರಿಶೀಲನೆ ನಡೆಸಿ ಮೊಬೈಲ್ ವಶಕ್ಕೆ ಪಡೆದುಕೊಳ್ಳಲಾಗಿದೆ. ತಪ್ಪಿತಸ್ಥ ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಕಾರಾಗೃಹ ಇಲಾಖೆಯ ಮೂಲಗಳು ತಿಳಿಸಿವೆ.

‘ಉಗ್ರನಿಗೆ ದೊರೆಯುತ್ತಿರುವ ವಿಐಪಿ ಸೌಲಭ್ಯಗಳು ಮತ್ತು ಮೊಬೈಲ್ ಫೋನ್‌ಗಳು ದೇಶದ ಭದ್ರತೆಗೆ ಗಂಭೀರ ಸವಾಲೊಡ್ಡಿದೆ. ತಪ್ಪಿತಸ್ಥ ಸಿಬ್ಬಂದಿಯ ವಿರುದ್ಧ ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು’ ಎಂದು ನಿವೃತ್ತ ಪೊಲೀಸ್ ಅಧಿಕಾರಿಯೊಬ್ಬರು ಆಗ್ರಹಿಸಿದರು.

‘ಜೈಲುಗಳಲ್ಲಿ ಕೈದಿಗಳಿಗೆ ವಿಶೇಷ ಸೌಲಭ್ಯಗಳನ್ನು ನೀಡದಂತೆ ಸುಪ್ರೀಂ ಕೋರ್ಟ್ ಎಲ್ಲ ಜೈಲು ಅಧಿಕಾರಿಗಳಿಗೆ ಸೂಚನೆ ನೀಡಿತ್ತು. ಈ ಆದೇಶವನ್ನು ಉಲ್ಲಂಘಿಸಿ ಕೈದಿಗಳಿಗೆ ವಿಶೇಷ ಆತಿಥ್ಯ ಕಲ್ಪಿಸಲಾಗುತ್ತಿದೆ’ ಎಂದು ಅವರು ಹೇಳಿದರು.

ಜೈಲಿನ ಬ್ಯಾರಕ್‌ನಲ್ಲಿ ಉಮೇಶ್ ರೆಡ್ಡಿ ಮೊಬೈಲ್‌ನಲ್ಲಿ ಚರ್ಚಿಸುತ್ತಿರುವುದು (ಎಡಚಿತ್ರ) ಉಗ್ರ ಜುಹಾದ್ ಹಮೀದ್ ಶಕೀಲ್ ಮನ್ನಾ ಕೈಯಲ್ಲಿ ಸ್ಮಾರ್ಟ್‌ಫೋನ್

ಕೈದಿಗಳಿಗೆ ವಿಶೇಷ ಆತಿಥ್ಯ ನೀಡಿರುವುದಕ್ಕೆ ಸಂಬಂಧಿಸಿದ ವಿಡಿಯೊಗಳು ಹರಿದಾಡುತ್ತಿವೆ. ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕ್ರಮಕ್ಕೆ ಸೂಚಿಸುತ್ತೇನೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಬ್ಯಾರಕ್ ಒಳಗೇ ಜನ್ಮದಿನಾಚರಣೆ

ಕೈದಿಗಳ ಜನ್ಮದಿನಾಚರಣೆಗೆ ಹೊರಗಿನಿಂದ ಕೇಕ್ ಹಾಗೂ ಸೇಬಿನ ಹಾರ ಬರುತ್ತಿರುವುದು ಇತ್ತೀಚೆಗೆ ಪತ್ತೆಯಾಗಿತ್ತು. ಆಗ ತನಿಖೆ ನಡೆಸಿ ಏಳು ಮಂದಿ ಜೈಲು ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗಿತ್ತು.

ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ಗುಬ್ಬಚ್ಚಿ ಸೀನನ ಜನ್ಮದಿನವನ್ನು ಇತ್ತೀಚೆಗೆ ಜೈಲಿನ ಒಳಗೆ ಆಚರಣೆ ಮಾಡಲಾಗಿತ್ತು. ಆತನ ಸಹಚರರು ಗ್ರೂಪ್ ಫೋಟೊಶೂಟ್ ನಡೆಸಿದ್ದರು. ಪಾರಿವಾಳ ಹಿಡಿದುಕೊಂಡು ಜೈಲಿನ ಒಳಗೆ ಫೋಟೊ ತೆಗೆಸಿಕೊಂಡಿದ್ದರು. ಜನ್ಮದಿನ ಆಚರಣೆಯ ಫೋಟೊಗಳನ್ನು ಗುಬ್ಬಚ್ಚಿ ಸೀನನ ಸಹಚರ, ಕೊಲೆ ಆರೋಪಿ ಅರವಿಂದ್, ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ. ಜೈಲಿನ ಒಳಗಿಂದಲೇ ಫೋಟೊಗ ಳನ್ನು ಅಪ್‌ಲೋಡ್ ಮಾಡಿರುವುದು ತನಿಖೆಯಿಂದ ಗೊತ್ತಾಗಿತ್ತು.

ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ, ನಟ ದರ್ಶನ್‌ಗೂ ವಿಶೇಷ ಆತಿಥ್ಯ ನೀಡಿದ್ದ ಫೋಟೊವೊಂದು ಕಳೆದ ವರ್ಷ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.

ಅಡುಗೆ ಮಾಡಿಕೊಳ್ಳಲು ಸ್ಟೌ, ಪಾತ್ರೆ

ಕೈದಿಗಳಿಗೆ ಎಲ್‌ಇಡಿ ಟಿ.ವಿ ಸೌಲಭ್ಯದ ಜೊತೆಗೆ ಅಡುಗೆ ಮಾಡಿಕೊಳ್ಳಲು ಸ್ಟೌ, ಪಾತ್ರೆಗಳೂ ಸಿಗುತ್ತಿವೆ. ಬ್ಯಾರಕ್‌ನಲ್ಲೇ ಪ್ರತ್ಯೇಕವಾಗಿ ಅಡುಗೆ ಮಾಡಿಕೊಳ್ಳಲು ಕೋಳಿ ಮಾಂಸವನ್ನೂ ಪೂರೈಸಲಾಗುತ್ತಿದೆ. ಪಾರ್ಟಿ ನಡೆಸಲು ಸ್ಪೀಕರ್ ವ್ಯವಸ್ಥೆಯನ್ನೂ ಮಾಡಲಾಗುತ್ತಿದೆ. ಹಣದಾಸೆಗೆ ಕೈದಿಗಳ ಜೊತೆ ಜೈಲಿನ ಅಧಿಕಾರಿಗಳು ಮತ್ತು ಸಿಬ್ಬಂದಿ ಶಾಮೀಲಾಗಿದ್ದಾರೆ ಎಂಬ ಆರೋಪವಿದ್ದು, ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಸಮಾಜಮುಖಿ ಸಾಹಿತ್ಯ ಸಮ್ಮೇಳನ • ಬಹುಸಂಸ್ಕೃತಿಯ ನಾಶಕ್ಕೆ ಕೇಂದ್ರ ಸರ್ಕಾರದ ಹುನ್ನಾರ: ಸಾಹಿತಿಗಳ ಕಳವಳ

ಏಕ ಭಾಷೆ–ಸಂಸ್ಕೃತಿ ಹೇರಿಕೆಗೆ ಒಕ್ಕೊರಲ ವಿರೋಧ

ಬೆಂಗಳೂರು: ‘ಕೇಂದ್ರ ಸರ್ಕಾರವು ದೇಶದಾದ್ಯಂತ ಏಕ ಭಾಷೆ, ಏಕ ಸಂಸ್ಕೃತಿ, ಏಕ ಚುನಾವಣೆ ಹೇರಿ, ಬಹುಮುಖಿ ಸಮಾಜವನ್ನು ಇಲ್ಲವಾಗಿಸುವ ಹುನ್ನಾರ ನಡೆಸುತ್ತಿದೆ’ ಎಂಬ ಕಳವಳ ‘ಸಮಾಜಮುಖಿ ಸಾಹಿತ್ಯ ಸಮ್ಮೇಳನ’ದಲ್ಲಿ ವ್ಯಕ್ತವಾಯಿತು. ಸಮಾಜಮುಖಿ ಬಳಗವು ಆಯೋಜಿಸಿರುವ ಈ ನುಡಿಹಬ್ಬದ ಉದ್ಘಾಟನಾ ವೇದಿಕೆ ಹಂಚಿಕೊಂಡಿದ್ದ ಸಾಹಿತಿಗಳು, ‘ಈ ಹುನ್ನಾರದ ವಿರುದ್ಧ ದನಿಯೆತ್ತದೆ ಬೇರೆ ದಾರಿಯಿಲ್ಲ’ ಎಂಬ ಮಾತುಗಳನ್ನಾಡಿದರು.

‘ಭಸ್ಮಾಸುರನ ಪ್ರಶ್ನಿಸದಿದ್ದರೆ ಪ್ರಜಾತಂತ್ರ ಇತಿಹಾಸಕ್ಕೆ’

ಒಂದು ದೇಶ, ಒಂದು ಭಾಷೆ, ಒಂದು ಸಂಸ್ಕೃತಿ, ಒಂದು ಚುನಾವಣೆ ಎಂಬ ಆಕರ್ಷಕ ಘೋಷವಾಕ್ಯಗಳನ್ನು 12 ವರ್ಷಗಳಿಂದ ಕೇಳುತ್ತಿದ್ದೇವೆ. ಈ ಘೋಷವಾಕ್ಯಗಳು ಮೇಲ್ನೋಟಕ್ಕೆ ಆಕರ್ಷಕವಾಗಿ ಕಂಡರೂ ಇದೊಂದು ಭಯಂಕರ ಭಸ್ಮಾಸುರನಾಗಿದ್ದು, ಈ ಘೋಷಣೆ ತಂದೊಡ್ಡಬಹುದಾದ ಅಪಾಯವನ್ನು ಪ್ರಶ್ನಿಸುವ ಕಾಲ ಬಂದಿದೆ. ಈಗಲೂ ತಡಮಾಡಿದರೆ ಪ್ರಜಾಪ್ರಭುತ್ವ ಗತ ಇತಿಹಾಸ ಆಗಲಿದೆ.

ಜನಭಾಷೆಗಳನ್ನು ಹತ್ತಿಕ್ಕಿ ಸಂಸ್ಕೃತವನ್ನು ಅರಳಿಸುವ ಯತ್ನವನ್ನು ಕೇಂದ್ರ ಸರ್ಕಾರ ನಡೆಸುತ್ತಿದೆ. ಸಂಸ್ಕೃತ, ಹಿಂದಿ ನಮ್ಮ ಶತ್ರುಗಳಲ್ಲ. ಎರಡೂ ಶ್ರೀಮಂತ ಪ್ರಾಕೃತ ಭಾಷೆಗಳೇ. ಅವುಗಳನ್ನು ನಮ್ಮ ಮೇಲೇ ಬಲವಂತವಾಗಿ ಹೇರುವ ಅಗತ್ಯವಿಲ್ಲ. ಇದೊಂದು ಬಗೆಯಲ್ಲಿ ದ್ರಾವಿಡ ಭಾಷೆಗಳ ಮೇಲೆ ಸೇಡು ತೀರಿಸಿಕೊಳ್ಳುವ ಯತ್ನ. ಕೆಲವೇ ಮಂದಿ ವ್ಯವಹಾರಕ್ಕೆ ಬಳಸುವ ಸಂಸ್ಕೃತದ ಅಭಿವೃದ್ಧಿಗೆ ಎಂದು ಕೇಂದ್ರ ಸರ್ಕಾರವು ₹2,532 ಕೋಟಿ ಅನುದಾನ ನೀಡಿದೆ. ಕೋಟಿ–ಕೋಟಿ ಜನರು ಮಾತನಾಡುವ ಕನ್ನಡಕ್ಕೆ ₹12.28 ಕೋಟಿ, ತಮಿಳಿಗೆ ₹13.1 ಕೋಟಿ, ತೆಲುಗಿಗೆ ₹12.65 ಕೋಟಿ, ಮಲಯಾಳಕ್ಕೆ ₹4.52 ಕೋಟಿ ನೀಡಿದೆ. ಈ ಹುನ್ನಾರದ ವಿರುದ್ಧ ನಾವೆಲ್ಲರೂ ದನಿಯೆತ್ತಬೇಕಾದ, ಅದನ್ನು ಪ್ರಶ್ನಿಸಬೇಕಾದ ಒತ್ತಡ ಈಗ ನಿರ್ಮಾಣವಾಗಿದೆ. ಆ ಕೆಲಸವನ್ನು ಮಾಡದೇ ಇದ್ದರೆ, ದೇಶದ ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗಲಿದೆ.

ಹಂಪ ನಾಗರಾಜಯ್ಯ, ಸಾಹಿತಿ

ಸಮಾಜಮುಖಿ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಸಮಾಜಮುಖಿ ಬಳಗದ ಜಯರಾಮ್ ರಾಯಪುರ, ಸಾಹಿತಿಗಳಾದ ಬರಗೂರು ರಾಮಚಂದ್ರಪ್ಪ, ಹಂಪ ನಾಗರಾಜಯ್ಯ, ಎಚ್.ಎಸ್. ಶಿವಪ್ರಕಾಶ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

‘ಪ್ರತಿಗಾಮಿ ಪರಿಭಾಷೆ’

ಪ್ರಗತಿಪರ ಪರಿಭಾಷೆಗಳನ್ನು ಈಗ ಪ್ರತಿಗಾಮಿ ನೆಲೆಯಲ್ಲಿ ಬಳಸಲಾಗುತ್ತಿದೆ. ನೀವು ಏಕತೆ ಎಂದು ಹೇಳಿದರೆ, ಅದನ್ನು ಯಾರೂ ರಾಷ್ಟ್ರೀಯ ಏಕತೆ ಎಂದು ಪರಿಗಣಿಸುವುದಿಲ್ಲ. ಬದಲಿಗೆ ‘ಧಾರ್ಮಿಕ ಏಕತೆ’ ಎಂದು ಪ್ರತಿಪಾದಿಸಲಾಗುತ್ತದೆ. ಸಮಾಜಮುಖಿ ಎಂಬುದನ್ನು ಧಾರ್ಮಿಕ ಸಮಾಜಮುಖಿ– ಜಾತೀಯ ಸಮಾಜಮುಖಿ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಅಂತಹದ್ದೊಂದು ಅಪಾಯಕಾರಿ ಸ್ಥಿತಿಗೆ ಬಂದು ನಿಂತಿದ್ದೇವೆ.

ಇಡೀ ಸಮಾಜದಲ್ಲಿ ವಿಷಮಕಾರಿ ವಾತಾವರಣ ನಿರ್ಮಾಣವಾಗಿದೆ. ಸಂವಾದದ ಜಾಗವನ್ನು ಉನ್ಮಾದ, ವಿವೇಕವನ್ನು ಅವಿವೇಕ, ಮಾನವೀಯತೆಯನ್ನು ಮತೀಯತೆ, ಸತ್ಯವನ್ನು ಅಸತ್ಯ ಅತಿಕ್ರಮಿಸುತ್ತಿವೆ. ಏಕ ಭಾಷೆ, ಏಕ ಸಂಸ್ಕೃತಿಯ ಹೆಸರಿನಲ್ಲಿ ಈ ಅತಿಕ್ರಮಗಳು ನಡೆಯುತ್ತಿವೆ. ಕನ್ನಡ ಸಾಹಿತ್ಯವು ನಾಯಕ–ಪ್ರತಿನಾಯಕ ಪರಂಪರೆಯನ್ನು ಪೋಷಿಸುತ್ತಾ ಬಂದಿದೆ. ಆದರೆ ಈಚೆಗೆ ನಾಯಕ–ಖಳನಾಯಕ ಪರಿಕಲ್ಪನೆಗಳು ಸಾಹಿತ್ಯಕ್ಕೆ ಇಳಿಯುತ್ತಿವೆ.ಸಾಹಿತ್ಯ ಕ್ಷೇತ್ರಕ್ಕೂ ಕಾರ್ಪೊರೇಟ್, ಬಹುರಾಷ್ಟ್ರೀಯ ಸಂಸ್ಕೃತಿ ಪ್ರವೇಶಿಸಿದೆ. ಜೈಪುರ ಲಿಟರೇಚರ್ ಫೆಸ್ಟಿವಲ್, ಬೆಂಗಳೂರು ಲಿಟರೇಚರ್ ಫೆಸ್ಟಿವಲ್ ಇದಕ್ಕೆ ಸ್ಪಷ್ಟ ನಿದರ್ಶನಗಳು. ಸಮಾಜಮುಖಿ ಸಾಹಿತಿಗಳು ಇಂತಹ ಫೆಸ್ಟಿವಲ್‌ಗಳಿಂದ ದೂರ ಉಳಿಯಬೇಕಾಗಿದೆ.

ಬರಗೂರು ರಾಮಚಂದ್ರಪ್ಪ, ಸಾಹಿತಿ

‘ಅನೇಕ’ದ ಕತ್ತುಹಿಸುಕುತ್ತಿರುವ ‘ಏಕ’

ಭಾರತದ ಸಂದರ್ಭದಲ್ಲಿ ‘ಏಕ’ ಎಂಬುದು ಬಹಳ ಹಿಂದಿನಿಂದಲೂ ಇದೆ. ಆದರೆ ಆ ‘ಏಕ’ ಎಂಬುದು ಯಾವತ್ತಿಗೂ ‘ಅನೇಕ’ದ ವಿರುದ್ಧ ಇರಲಿಲ್ಲ. ಆದರೆ ಈಗ ‘ಏಕ’ವನ್ನು ‘ಅನೇಕ’ ವಿರುದ್ಧ ಎತ್ತಿಕಟ್ಟಲಾಗುತ್ತಿದೆ. ‘ಅನೇಕ’ದ ಕತ್ತುಹಿಸುಕಲಾಗುತ್ತಿದೆ. ಇದು ಈ ಹೊತ್ತಿನ ಅಪಾಯ. ಈ ಎಲ್ಲವನ್ನೂ ಬಹಳ ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಕಾರ್ಪೊರೇಟ್ ಸಾಹಿತ್ಯ ಫೆಸ್ಟಿವಲ್‌ಗಳು ಈ ಹುನ್ನಾರದ ಇನ್ನೊಂದು ಮುಖ. ನಾನು ಇನ್ನೆಂದಿಗೂ ಅಂತಹ ಫೆಸ್ಟಿವಲ್‌ಗಳಲ್ಲಿ ಭಾಗಿಯಾಗುವುದಿಲ್ಲ.

ವಚನಕಾರರ ವಿಚಾರದಲ್ಲೂ ಏಕ ಸಂಸ್ಕೃತಿಯನ್ನು ಮುನ್ನೆಲೆಗೆ ತರುವ ಕೆಲಸ ಕನ್ನಡ ಸಾಹಿತ್ಯ ಲೋಕದಲ್ಲಾಗಿದೆ. ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಪ್ರಭುವನ್ನಷ್ಟೇ ವಚನ ಸಂಸ್ಕೃತಿಯ ರೂವಾರಿಗಳು ಎಂದು ತೋರಿಸಲಾಗಿದೆ. ಇತರ ವಚನಕಾರರ ಸಂಸ್ಕೃತಿಯನ್ನು ಈ ಮೂಲಕ ಹತ್ತಿಕ್ಕಲಾಗಿದೆ. ಇದು ಮಹಾ ತಪ್ಪು.

ಏಕ ಭಾಷೆ, ಏಕಸಂಸ್ಕೃತಿ ಹೆಸರಿನಲ್ಲಿ ದಕ್ಷಿಣದ ಮತ್ತು ದ್ರಾವಿಡ ಭಾಷಾ ಸಂಸ್ಕೃತಿಗಳ ಮೇಲಷ್ಟೇ ದಾಳಿಯಾಗುತ್ತಿಲ್ಲ. ಬಹಳ ಹಿಂದೆಯೇ ಉತ್ತರ ಭಾರತದ ಪ್ರಾದೇಶಿಕ ಭಾಷೆಗಳನ್ನು ಹಿಂದಿ ಹತ್ತಿಕ್ಕಿದೆ.

ಎಚ್.ಎಸ್.ಶಿವಪ್ರಕಾಶ್, ಕವಿ, ನಾಟಕಕಾರ

‘13ರಿಂದ ನಾಲ್ಕು ದಿನ ಕೃಷಿ ಮೇಳ’

ವಿ.ವಿ. ಅಭಿವೃದ್ಧಿ ಪಡಿಸಿದ ತಳಿಗಳ ಬಿಡುಗಡೆ: ಕುಲಪತಿ ಎಸ್.ವಿ. ಸುರೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆಶ್ರಯದಲ್ಲಿ ನವೆಂಬರ್ 13ರಿಂದ 16ರವರೆಗೆ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ‘ಸಮೃದ್ಧ ಕೃಷಿ ವಿಕಸಿತ ಭಾರತ- ನೆಲ, ಜಲ, ಬೆಳೆ’ ಎಂಬ ಘೋಷ ವಾಕ್ಯದಡಿ ಕೃಷಿ ಮೇಳ ನಡೆಯಲಿದೆ’ ಎಂದು ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕೃಷಿ ಪ್ರವಾಸೋದ್ಯಮ ಎಂಬ ಹೊಸ ಪರಿಕಲ್ಪನೆಯೊಂದಿಗೆ ಈ ಬಾರಿಯ ಕೃಷಿ ಮೇಳವನ್ನು ಆಯೋಜಿಸಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಪಾರಂಪರಿಕ ಕೃಷಿ ಪದ್ಧತಿ, ದೈನಂದಿನ ಕೃಷಿ ಚಟುವಟಿಕೆಗಳು, ಗ್ರಾಮೀಣ ಕಲೆ–ಸಂಸ್ಕೃತಿ, ಆಹಾರ ಪದ್ಧತಿ, ಉಡುಗೆ–ತೊಡುಗೆ ಮುಂತಾದವುಗಳನ್ನು ನಗರವಾಸಿಗಳಿಗೆ ಪರಿಚಯಿಸಲಾಗುವುದು’ ಎಂದರು.

‘ಪ್ರವಾಸಿಗರನ್ನು ಕೃಷಿ ಜಮೀನಿಗೆ ಕರೆತರುವುದು ಮತ್ತು ಅವರಿಗೆ ಕೃಷಿ ಆಧಾರಿತ ಚಟುವಟಿಕೆಗಳನ್ನು ತೋರಿಸುವುದು ಮತ್ತು ಭಾಗವಹಿಸಲು ಅವಕಾಶ ನೀಡುವುದು. ಆಸಕ್ತರಿಗೆ ಪರಿಚಯಿಸುವ ಮೂಲಕ ಆದಾಯವನ್ನು ಕಂಡುಕೊಳ್ಳುವುದು ಕೃಷಿ ಪ್ರವಾಸೋದ್ಯಮದ ಉದ್ದೇಶವಾಗಿದೆ’ ಎಂದು ತಿಳಿಸಿದರು.

‘ಮೇಳದಲ್ಲಿ 700ಕ್ಕೂ ಹೆಚ್ಚು ಮಳಿಗೆಗಳು ಇರಲಿವೆ. ಕೃಷಿಕರ ಅನುಕೂಲಕ್ಕಾಗಿ ಜಿಕೆವಿಕೆ ಮುಖ್ಯದ್ವಾರದಿಂದ ಕೃಷಿ ಮೇಳದ ಸಭಾಂಗಣಕ್ಕೆ ತಲುಪಲು ಉಚಿತ ಸಾರಿಗೆ ವ್ಯವಸ್ಥೆ, ಪ್ರತ್ಯೇಕ ವಾಹನ ನಿಲುಗಡೆ ಮತ್ತು ರಿಯಾಯಿತಿ ದರದಲ್ಲಿ ಮುದ್ದೆ ಊಟದ ವ್ಯವಸ್ಥೆ ಕಲ್ಪಿಸಲಾಗುವುದು’ ಎಂದರು.

ಮೊದಲ ಬಾರಿಗೆ ಕೀಟ ವಿಸ್ಮಯ ವಿಶೇಷ ಪ್ರದರ್ಶನವನ್ನು ಆಯೋಜಿಸಿದ್ದು ಮಕ್ಕಳಿಗೆ ಮತ್ತು ಕೃಷಿ ಆಸಕ್ತರಿಗೆ ಆಕರ್ಷಣೆ ಆಗಲಿದೆ. ಭಾರತೀಯ, ಸ್ಥಳೀಯ ಆಲಂಕಾರಿಕ ಮೀನುಗಳು, ಸಿಹಿನೀರು ಮುತ್ತಿನ ಕೃಷಿ ಹಾಗೂ ಸುಧಾರಿತ ತಳಿಗಳ ಪ್ರದರ್ಶನ ಮತ್ತು ಮಾರಾಟವನ್ನು ಒಳಗೊಂಡಿರುವ ಮತ್ಸ್ಯಲೋಕ ಅನಾವರಣಗೊಳಿಸಲಾಗುತ್ತದೆ.

‘ಮೇಳದಲ್ಲಿ ವಿಶ್ವವಿದ್ಯಾಲಯದ ಸಂಶೋಧಕರು ಅಭಿವೃದ್ಧಿಪಡಿಸಿರುವ, ನಾಲ್ಕು ಹೊಸ ತಳಿಗಳಾದ ಧಾನ್ಯ ಜೋಳ, ಕಪ್ಪು ಅರಿಸಿನ ಮತ್ತು ಅರಿಸಿನ, ಸೂರ್ಯಕಾಂತಿ ಮತ್ತು ಹರಳು ಬೆಳೆಯಲ್ಲಿ ತಲಾ ಒಂದರಂತೆ ಎರಡು ಸಂಕರಣ ತಳಿಗಳನ್ನು ಬಿಡುಗಡೆ ಮಾಡಲಾಗುತ್ತದೆ’ ಎಂದು ತಿಳಿಸಿದರು.

ನ. 13ರಂದು ಬೆಳಿಗ್ಗೆ 11ಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮೇಳಕ್ಕೆ ಚಾಲನೆ ನೀಡಲಿದ್ದಾರೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಧ್ಯಕ್ಷತೆ ವಹಿಸಲಿದ್ದು, ಹೊಸಕೋಟೆ ಶಾಸಕ ಶರತ್ ಬಚ್ಚೇಗೌಡ ಅವರು ಭಾಗವಹಿಸಲಿದ್ದಾರೆ.

‘ಸಮೃದ್ಧ ಕೃಷಿ–ವಿಕಸಿತ ಭಾರತ ಸಂವಾದ’

ಮೇಳದಲ್ಲಿ ನ. 14ರಂದು ಸಮೃದ್ಧ ಕೃಷಿಯಿಂದ ವಿಕಸಿತ ಭಾರತ, ನ. 15ರಂದು ಕೃಷಿ ಪ್ರವಾಸೋದ್ಯಮ–ಅವಕಾಶಗಳು ಮತ್ತು ಸವಾಲು, ನ. 16ರಂದು ದೇಸಿಯ ತಳಿಗಳು ಮತ್ತು ಕೃಷಿ ಪದ್ಧತಿಗಳು ಕುರಿತು ಚರ್ಚಾಗೋಷ್ಠಿಗಳು ನಡೆಯಲಿವೆ’ ಎಂದು ಎಸ್.ವಿ. ಸುರೇಶ ತಿಳಿಸಿದರು.

ಎರ್ನಾಕುಲಂ–ಬೆಂಗಳೂರು ರೈಲಿಗೆ ಸಚಿವ ಎಚ್‌ಡಿಕೆ ಸ್ವಾಗತ

‘ಸ್ವಾವಲಂಬಿ ಭಾರತದ ಪ್ರತೀಕ ವಂದೇ ಭಾರತ್’

ಪ್ರಜಾವಾಣಿ ವಾರ್ತೆ

ಎರ್ನಾಕುಲಂ–ಬೆಂಗಳೂರು ‘ವಂದೇ ಭಾರತ್’ ರೈಲು ಬೆಂಗಳೂರು ಕೆಎಸ್‌ಆರ್ ನಿಲ್ದಾಣಕ್ಕೆ ತಲುಪಿದಾಗ ಎಚ್.ಡಿ. ಕುಮಾರಸ್ವಾಮಿ, ಪಿ.ಸಿ. ಮೋಹನ್, ನೈರುತ್ಯ ರೈಲ್ವೆಯ ಅಧಿಕಾರಿಗಳು ಸ್ವಾಗತಿಸಿದರು

ಬೆಂಗಳೂರು: ರೈಲ್ವೆ ಜಾಲಕ್ಕೆ ಸೇರ್ಪಡೆಯಾಗುವ ಪ್ರತಿಯೊಂದು ‘ವಂದೇ ಭಾರತ್’ ರೈಲು ಕೂಡ ಸ್ವಾವಲಂಬಿ ಭಾರತದ ಪ್ರತೀಕವಾಗಿದೆ. ಭವಿಷ್ಯವನ್ನು ರೂಪಿಸುವ ನಾವೀನ್ಯತೆ, ವಿಶ್ವಾಸ ಮತ್ತು ಸಾಮರ್ಥ್ಯದ ದ್ಯೋತಕ ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳ ಮೂಲಕ ಸಂಚರಿಸುವ ಎರ್ನಾಕುಲಂ-ಬೆಂಗಳೂರು ‘ವಂದೇ ಭಾರತ್’ ರೈಲಿಗೆ ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಶನಿವಾರ ಚಾಲನೆ ನೀಡಿದ್ದರು. ಈ ರೈಲು ಮೆಜೆಸ್ಟಿಕ್‌ನಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣಕ್ಕೆ ಬಂದಾಗ ಸ್ವಾಗತಕೋರಿ ಕುಮಾರಸ್ವಾಮಿ ಅವರು ಮಾತನಾಡಿದರು.

‘ಮೇಕ್ ಇನ್ ಇಂಡಿಯಾದ ಅಡಿಯಲ್ಲಿ ನಮ್ಮದೇ ಎಂಜಿನಿಯರ್‌ಗಳು ವಿನ್ಯಾಸಗೊಳಿಸಿದ ಮತ್ತು ನಿರ್ಮಿಸಿದ ಈ ರೈಲುಗಳು ಭಾರತವು ತಾಂತ್ರಿಕವಾಗಿ ಮತ್ತು ವೇಗವಾಗಿ ಹೇಗೆ ಪ್ರಗತಿ ಸಾಧಿಸುತ್ತಿದೆ ಎಂಬುದನ್ನು ಬಿಂಬಿಸುತ್ತಿವೆ’ ಎಂದು ಹೇಳಿದರು.

ಅಂತರ ರಾಜ್ಯ ಸಂಪರ್ಕ ಮಾರ್ಗವು ಅಗತ್ಯವಾಗಿದ್ದು, ವಾಣಿಜ್ಯ, ಶಿಕ್ಷಣ ಮತ್ತು ಸಂಸ್ಕೃತಿಯ ಎರಡು ಕೇಂದ್ರಗಳಾದ ಎರ್ನಾಕುಲಂ–ಬೆಂಗಳೂರನ್ನು ಈ ‘ವಂದೇ ಭಾರತ್’ ರೈಲು ಜೋಡಿಸುತ್ತಿದೆ ಎಂದು ಅವರು ಹೇಳಿದರು.

ಸಂಸದ ಪಿ.ಸಿ. ಮೋಹನ್ ಮತ್ತು ನೈರುತ್ಯ ರೈಲ್ವೆಯ ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಶೀಘ್ರ 900 ಕೆಪಿಎಸ್ ಆರಂಭ ಮಧು ಬಂಗಾರಪ್ಪ

ಸೋಮವಾರಪೇಟೆ (ಕೊಡಗು ಜಿಲ್ಲೆ): ‘ರಾಜ್ಯದಲ್ಲಿ 900 ಕರ್ನಾಟಕ ಪಬ್ಲಿಕ್ ಸ್ಕೂಲ್‌ಗಳನ್ನು ಶೀಘ್ರದಲ್ಲಿ ಪ್ರಾರಂಭಿಸಲಾಗುವುದು’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಖಾತೆ ಸಚಿವ ಎಸ್. ಮಧು ಬಂಗಾರಪ್ಪ ತಿಳಿಸಿದರು.

ಶನಿವಾರ ಬೇಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸಮಾರೋಪ ಸಮಾರಂಭ ಉದ್ಘಾಟಿಸಿ ಮಾತನಾಡಿ, ‘ಅದಕ್ಕಾಗಿ 18 ಸಾವಿರ ಶಿಕ್ಷಕರ ಆಯ್ಕೆ ಪ್ರಕ್ರಿಯೆ ನಡೆಸಲು ತೀರ್ಮಾನಿಸಲಾಗಿದೆ. 51 ಸಾವಿರ ಅತಿಥಿ ಶಿಕ್ಷಕರಿದ್ದು, 46 ಸಾವಿರ ಸರ್ಕಾರಿ ಶಾಲೆಗಳಿಗೆ ಉಚಿತ ವಿದ್ಯುತ್ ಸಂಪರ್ಕ ನೀಡಲಾಗಿದೆ’ ಎಂದರು.

‘ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳು ಅನುತ್ತೀರ್ಣಗೊಂಡು ವಿದ್ಯಾಭ್ಯಾಸ ಮೊಟಕುಗೊಳಿಸಬಾರದು ಎಂದು ಒಟ್ಟು 3 ಬಾರಿ ಪರೀಕ್ಷೆ ಬರೆಯುವ ಅವಕಾಶ ನೀಡಿದ್ದರಿಂದ ಪ್ರಸಕ್ತ ಸಾಲಿನಲ್ಲಿ ಶೇ 79.89ರಷ್ಟು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ’ ಎಂದರು.

ಬ್ರಾಹ್ಮಣ ಸಮುದಾಯಕ್ಕೆ ಸಚಿವ ದಿನೇಶ್ ಗುಂಡೂರಾವ್ ಸಲಹೆ

‘ಒಗ್ಗಟ್ಟಿನಿಂದ ಸೌಲಭ್ಯಗಳನ್ನು ಪಡೆಯಿರಿ’

ಪ್ರಜಾವಾಣಿ ವಾರ್ತೆ

ಬಬ್ಬೂರುಕಮ್ಮೆ ಸೇವಾ ಸಮಿತಿ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಆಯೋಜಿಸಿದ್ದ ತತ್ವಜ್ಞಾನಿಗಳ ದಿನಾಚರಣೆ ಪ್ರಯುಕ್ತ ಆಚಾರ್ಯತ್ರಯರ ಜಯಂತ್ಯುತ್ಸವದಲ್ಲಿ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಲಾಯಿತು. ಮಾಜಿ ಅಡ್ವೊಕೇಟ್ ಜನರಲ್ ಅಶೋಕ್ ಹಾರನಹಳ್ಳಿ, ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್. ವಿ. ದೇಶಪಾಂಡೆ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್. ರಘುನಾಥ್ ಮತ್ತು ಸದಸ್ಯರು ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಪ್ರಬಲ ಜಾತಿಗಳು, ಅಲ್ಪಸಂಖ್ಯಾತರು, ಹಿಂದುಳಿದವರಿಗೆ ರಾಜಕೀಯ ಅಧಿಕಾರ, ಸರ್ಕಾರದ ಹೆಚ್ಚಿನ ಸೌಲಭ್ಯಗಳು ಸಿಗುತ್ತಿದ್ದು, ಬ್ರಾಹ್ಮಣರೂ ಒಗ್ಗಟ್ಟಿನಿಂದ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಶುಕ್ರವಾರ ಇಲ್ಲಿ ಹಮ್ಮಿಕೊಂಡಿದ್ದ ಆಚಾರ್ಯತ್ರಯರ ಜಯಂತಿ, ವಿಪ್ರ ನೇರ ಸಾಲ ಯೋಜನೆ, ಚಾಣಕ್ಯ ಆಡಳಿತ ತರಬೇತಿ ಯೋಜನೆ ಉದ್ಘಾಟಿಸಿ ಅವರು ಮಾತನಾಡಿದರು.

‘ಬ್ರಾಹ್ಮಣರಿಗೆ ಸಮಸ್ಯೆಯೇ ಇಲ್ಲ ಎನ್ನುವುದು ತಪ್ಪು. ಈ ಸಮಾಜದಲ್ಲೂ ಬಡವರು, ನಿರುದ್ಯೋಗಿಗಳು ಇದ್ದಾರೆ. ಅವರ ಬದುಕಿಗೆ ನೆಲೆ ನೀಡಲು ಯೋಜನೆಗಳನ್ನು ರೂಪಿಸಿ ಆರ್ಥಿಕ ಬಲ ತುಂಬಬೇಕಾಗಿದೆ. ಬ್ರಾಹ್ಮಣರ ಸಮಸ್ಯೆಗೆ ದನಿಯಾಗುವ ಪ್ರಯತ್ನ ಆಗಿಲ್ಲ ಎನ್ನುವ ಅಭಿಪ್ರಾಯವಿದೆ. ನಮ್ಮ ಸರ್ಕಾರ ಮಂಡಳಿಗೆ ಹೆಚ್ಚು ಅನುದಾನವನ್ನು ನೀಡಿ ಸಮುದಾಯದ ಪ್ರಗತಿಗೆ ನೆರವಾಗಲಿದೆ’ ಎಂದರು.

ಉಪನ್ಯಾಸ ನೀಡಿದ ಚಿಂತಕ ವ್ಯಾಸನಕೆರೆ ಪ್ರಭಂಜನಾಚಾರ್ಯ ಅವರು, ‘ಸರ್ಕಾರದಿಂದ ಶಂಕರ ಹಾಗೂ ರಾಮಾನುಜ ಜಯಂತಿ ಆಚರಿಸಿದರೂ ಮಧ್ವ ಜಯಂತಿಗೆ ಮಹತ್ವ ನೀಡಿಲ್ಲ. ಇವರಿಗೂ ಮಹತ್ವ ನೀಡಿದರೆ ಮೂವರು ಆಚಾರ್ಯರಿಗೂ ಸಮಾನ ಗೌರವ ನೀಡಿದಂತೆ ಆಗಲಿದೆ’ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಹಿರಿಯ ವಕೀಲ ಅಶೋಕ್ ಹಾರನಹಳ್ಳಿ, ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ರಘುನಾಥ್, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ವ್ಯವಸ್ಥಾಪಕ ನಿರ್ದೇಶಕಿ ದೀಪಶ್ರಿ ಹಾಜರಿದ್ದರು. ಶೆಲ್ವಪಿಳ್ಳೈ ಅಯ್ಯಂಗಾರ್ ಅವರು ಉಪನ್ಯಾಸ ನೀಡಿದರು.

ಇದೇ ವೇಳೆ ಸಮಾಜದ ಸಾಧಕರಾದ ಬಿ.ವಿ.ಆಚಾರ್ಯ, ಡಾ.ಎನ್. ಅನಂತ ರಾಮನ್, ಡಾ.ಶ್ರೀನಾಥ, ಆರ್.ವಿ. ಜಾಗೀರದಾರ್, ಕ್ಯಾಪ್ಟನ್ ಗೋಪಿನಾಥ್, ಬಿ.ಕೆ.ಅನಂತರಾವ್, ರಘೋತ್ತಮ ಕೊಪ್ಪರ್, ಗಂಗಮ್ಮ ಕೇಶವಮೂರ್ತಿ, ತ್ರಿವೇಣಿಬಾಯಿ, ನರಸಿಂಹಮೂರ್ತಿ ನಾರಾಯಣ, ರಾಘವ ವಿಷ್ಣು ಬಾಳೇರಿ, ಬಿ.ಎಸ್.ಜಯಪ್ರಕಾಶ ನಾರಾಯಣ ಅವರನ್ನು ಗೌರವಿಸಲಾಯಿತು. ವಿಪ್ರ ಸಾಲ ಯೋಜನೆಯ ಫಲಾನುಭವಿಗಳಿಗೆ ಪತ್ರ ವಿತರಿಸಲಾಯಿತು.

ಕಾಲೆಳೆಯುವುದನ್ನು ಬಿಡಿ: ದೇಶಪಾಂಡೆ

ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷ ಆರ್.ವಿ.ದೇಶಪಾಂಡೆ ಮಾತನಾಡಿ, ‘ಬ್ರಾಹ್ಮಣ ಸಮುದಾಯದಲ್ಲಿ ಸಂಘಟನೆ ಮಾಡಿ ಒಳ್ಳೆಯದು ಮಾಡಲು ಹೋದರೆ ಸಹಕಾರ ನೀಡುವುದಕ್ಕಿಂತ ಕಾಲು ಎಳೆಯುವವರು ಹೆಚ್ಚಿದ್ದಾರೆ. ಇಂತಹವರ ಬಗ್ಗೆ ತಲೆ ಕೆಡಿಸಿಕೊಳ್ಳದೇ ಒಳ್ಳೆಯ ಕೆಲಸ ಮಾಡಿ. ಇತರೆ ಸಮುದಾಯಗಳಂತೆಯೇ ಸೌಲಭ್ಯ ಪಡೆದುಕೊಂಡು ಮುಂದೆ ಬನ್ನಿ’ ಎಂದು ಕಿವಿಮಾತು ಹೇಳಿದರು.

‘ಸಮುದಾಯದವರ ಪ್ರಗತಿಗೆಂದೇ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಸ್ಥಾಪಿಸಲು 2018ರಲ್ಲಿ ಮುಖ್ಯಮಂತ್ರಿಯಾಗಿದ್ದ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಮನವಿ ಮಾಡಿದ್ದೆ. ಅವರು ಒಪ್ಪಿ ಅನುದಾನವನ್ನೂ ನೀಡಿದ್ದರು. ಯುವ ಸಮುದಾಯದವರಿಗೆ ಒತ್ತು ನೀಡಿ ಅವರ ಪ್ರಗತಿಗೆ ಶ್ರಮಿಸಬೇಕು’ ಎಂದು ಸಲಹೆ ನೀಡಿದರು.

ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಯ ಘಟಿಕೋತ್ಸವ

ಶ್ರೇಷ್ಠತಾ ಕೇಂದ್ರ ಸ್ಥಾಪನೆ: ಖೇಣಿ

ಪ್ರಜಾವಾಣಿ ವಾರ್ತೆ

ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಯ ಘಟಿಕೋತ್ಸವದಲ್ಲಿ ನೈಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಖೇಣಿ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು

ಬೆಂಗಳೂರು: ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಯಲ್ಲಿ ಸಂಶೋಧನೆ ಮತ್ತು ಸಮುದಾಯ ಕೇಂದ್ರಿತ ನಾವೀನ್ಯತೆಗಳನ್ನು ಉತ್ತೇಜಿಸಲು ಶ್ರೇಷ್ಠತಾ ಕೇಂದ್ರ ಸ್ಥಾಪನೆ ಮಾಡಲಾಗುವುದು ಎಂದು ನೈಸ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಖೇಣಿ ಹೇಳಿದರು.

ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಯ ಘಟಿಕೋತ್ಸವದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯ 4,527 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ನಾವೀನ್ಯತೆಗೆ ಬದ್ಧತೆ ಹೊಂದಿರುವ ಈ ಸಂಸ್ಥೆಯಲ್ಲಿ ಶ್ರೇಷ್ಠತಾ ಕೇಂದ್ರವನ್ನು ಸ್ಥಾಪಿಸಲಾಗುವುದು. ಸಮಾಜಕ್ಕೆ ಸೇವೆ ಸಲ್ಲಿಸುವಲ್ಲಿ ಸಂಸ್ಥೆಯ ಪಾತ್ರವನ್ನು ಈ ಕೇಂದ್ರ ಮತ್ತಷ್ಟು ಬಲಪಡಿಸುತ್ತದೆ. ಜಾಗತಿಕವಾಗಿ ಉದ್ಯೋಗಾವಕಾಶಗಳು ಹೆಚ್ಚಿದಂತೆ ಸ್ಪರ್ಧೆ ಹೆಚ್ಚಿದೆ. ಉದ್ಯೋಗಾವಕಾಶ ಬಳಸಿಕೊಂಡು ಯುವ ಜನರು ದೇಶದ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡಬೇಕು’ ಎಂದು ಕರೆ ನೀಡಿದರು.

‘ನಗರದಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸುಗಮ ಹಾಗೂ ಅಡೆತಡೆಯಿಲ್ಲದ ವಾಹನ ಸಂಚಾರಕ್ಕಾಗಿ ನಮ್ಮ ಸಂಸ್ಥೆಯು ನೈಸ್ ರಸ್ತೆಯನ್ನು ಅಭಿವೃದ್ಧಿಪಡಿಸಿದೆ. ಸಂಸ್ಥೆಯು ಈವರೆಗೂ 43 ಪ್ರಮುಖ ಯೋಜನೆಗಳನ್ನು ಪೂರ್ಣಗೊಳಿಸಿದೆ. ಗುಂಡಿ ಇಲ್ಲದಂತೆ ರಸ್ತೆಗಳ ನಿರ್ವಹಣೆ ಮಾಡಲಾಗುತ್ತಿದೆ’ ಎಂದರು.

ದಯಾನಂದ ಸಾಗರ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ.ಡಿ.ಹೇಮಚಂದ್ರ ಸಾಗರ್, ಉಪಾಧ್ಯಕ್ಷ ಡಾ.ಡಿ.ಪ್ರೇಮಚಂದ್ರ ಸಾಗರ್, ಜಿಯುವಿಐ ಸಂಸ್ಥೆಯ ಸಹ ಸಂಸ್ಥಾಪಕ ಎಸ್.ಪಿ.ಬಾಲಮುರುಗನ್, ಇಂಡೋ–ಜಪಾನ್ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿಯ ಕಾರ್ಯಕಾರಿ ಸಮಿತಿ ಸದಸ್ಯ ಎಸ್.ಎನ್.ಶಮಂತ್ ಹಾಜರಿದ್ದರು.

‘ವಸ್ತ್ರೋದ್ಯಮ ಕೋಶ ಪರಿಷ್ಕರಣೆ ಯತ್ನ’

ಕರಕುಶಲ ಕಾರ್ಯಾಗಾರದಲ್ಲಿ ನೈಸರ್ಗಿಕ ಬಣ್ಣ ಬಳಸಿದ ಹಾಸಿಗೆ, ಹೊದಿಕೆ ಬಿಡುಗಡೆ

ಪ್ರಮುಖ ಅಂಶಗಳು
- ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ ಮೇಳ
- ಹೊಸ ಯೋಜನೆಗಳ ಜಾರಿಯ ಸಂಪೂರ್ಣ ಅಧಿಕಾರವನ್ನು ಕೋಶಕ್ಕೆ ನೀಡಲು ಪ್ರಸ್ತಾಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹಾತ್ಮ ಗಾಂಧಿ ವಸ್ತ್ರೋದ್ಯಮ ಕೋಶವನ್ನು ನೇಕಾರ ಸ್ನೇಹಿಗೊಳಿಸಲು ಪರಿಷ್ಕೃತ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅನುಮತಿ ಸಿಗುವ ವಿಶ್ವಾಸವಿದೆ’ ಎಂದು ಕೈಮಗ್ಗ ಮತ್ತು ಜವಳಿ ಇಲಾಖೆಯ ಅಭಿವೃದ್ಧಿ ಆಯುಕ್ತೆ ಕೆ.ಜ್ಯೋತಿ ಹೇಳಿದರು.

ಚಿತ್ರಕಲಾ ಪರಿಷತ್ತಿನಲ್ಲಿ ಸಾಗರದ ಹೆಗ್ಗೋಡು-ಹೊನ್ನೇಸರದ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ, ರಾಜ್ಯ ಕೈಮಗ್ಗ ಮತ್ತು ಜವಳಿ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿರುವ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ, ಕರಕುಶಲ ಕಾರ್ಯಾಗಾರದಲ್ಲಿ ಕೈಮಗ್ಗ ಹಾಗೂ ನೈಸರ್ಗಿಕ ಬಣ್ಣ ಬಳಸಿದ ಹಾಸಿಗೆ ಮೇಲು ಹೊದಿಕೆ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಕೈಯಿಂದ ನೇಯ್ದ ಮತ್ತು ಕೈಮಗ್ಗ ಬಟ್ಟೆಯ ಉತ್ಪಾದಕರ ನಡುವೆ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ಮಾರುಕಟ್ಟೆ ಅಗತ್ಯವಿದೆ. ಈ ಕಾರ್ಯ ಗಾಂಧಿ ವಸ್ತ್ರೋದ್ಯಮ ಕೋಶದಿಂದ ಸಾಧ್ಯ. ಸರ್ಕಾರದ ಕನಿಷ್ಠಮಟ್ಟದ ಹಸ್ತಕ್ಷೇಪ ಇರುವಂತೆ ಕ್ರಮವಹಿಸಲಾಗುವುದು. ಕೈಮಗ್ಗ ನೇಕಾರರಿಗೆ ಜಾರಿಯಲ್ಲಿರುವ ಯೋಜನೆ ಅನುಕೂಲಕರವಾಗಿದ್ದರೆ ಮುಂದುವರಿಸಲಾಗುವುದು. ಇಲ್ಲವೇ, ಕೈಬಿಟ್ಟು ಹೊಸ ಯೋಜನೆಗಳನ್ನು ಜಾರಿಗೊಳಿಸುವ ಸಂಪೂರ್ಣ ಅಧಿಕಾರ ಕೋಶಕ್ಕೆ ನೀಡಲು ಪ್ರಸ್ತಾಪ ಮಾಡಲಾಗಿದೆ ಎಂದರು.

ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾ ರೆಡ್ಡಿ ಮೇಳ ಉದ್ಘಾಟಿಸಿದರು. ಚರಕ ಕುರಿತ ‘ದಿ ಚರಕ ಸ್ಟೋರಿ ಕಾಫಿ ಟೇಬಲ್’ ಪುಸ್ತಕವನ್ನು ಲೇಖಕಿ ಸಾಧನಾ ರಾವ್ ಬಿಡುಗಡೆ ಮಾಡಿದರು. ಚರಕದ ಸಂಸ್ಥಾಪಕ ಪ್ರಸನ್ನ, ಅಧ್ಯಕ್ಷೆ ಮಹಾಲಕ್ಷ್ಮಿ, ಕಾರ್ಯದರ್ಶಿ ಎನ್.ರಮೇಶ್, ಸಿಇಒ ಟೆರೆನ್ಸ್ ಪೀಟರ್, ಶಾರದಾ ರಿತೀಶ್, ವೀಣಾ ಹೆಗಡೆ, ರಾಮಚಂದ್ರಪ್ಪ ಉಪಸ್ಥಿತರಿದ್ದರು.

ಚಿತ್ರಕಲಾ ಪರಿಷತ್‌ನಲ್ಲಿ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘ ಆಯೋಜಿಸಿದ್ದ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳದಲ್ಲಿ ಮಹಿಳೆಯರು ಕೈಮಗ್ಗ ಬಟ್ಟೆಗಳನ್ನು ಖರೀದಿಸಿದರು ಪ್ರಜಾವಾಣಿ ಚಿತ್ರ

ಗಮನ ಸೆಳೆದ ನೈಸರ್ಗಿಕ ಬಟ್ಟೆಗಳು

ಚರಕದ ವಿನೂತನ ವಿನ್ಯಾಸದ ನೈಸರ್ಗಿಕ ಬಣ್ಣದ ಕೈಮಗ್ಗದ ಸಿದ್ಧ ಉಡುಪು-ಬಟ್ಟೆಗಳ ಜತೆಗೆ ಚೆನ್ನೈನ ತುಲಾ ಸಂಸ್ಥೆಯ ಕೈಮಗ್ಗ ವಸ್ತುಗಳು, ಶಿರಸಿಯ ಚೇತನಾ ಫೌಂಡೇಷನ್ ಅವರ ಬಾಳೆನಾರಿನ ಉತ್ಪನ್ನಗಳು, ಆಂಧ್ರಪ್ರದೇಶದ ಟಿಂಬಕ್ಟು ಕಲೆಕ್ಟಿವ್‌ನ ಸಹಜ ಬಣ್ಣದ ವಸ್ತುಗಳು ಗಮನ ಸೆಳೆದವು.

ಮರಳಿ ಮಣ್ಣಿಗೆಯ ಕೈಮಗ್ಗ ಮತ್ತು ಕರಕುಶಲ ವಸ್ತುಗಳು, ಉತ್ತರ ಕರ್ನಾಟಕದ ದಖನಿ ಡೈರಿಯ ಉಣ್ಣೆಯ ವಸ್ತುಗಳು, ಸಹನಾ ರೀಡ್ಸ್‌ನ ಹುಲ್ಲಿನ ಬ್ಯಾಗ್‌ಗಳು, ಜಿಯೋಸ್ಮಿನ್ ಕರಕುಶಲ ವಸ್ತುಗಳು, ನೇಚರ್ ಆಲಿಯ ಸಹಜ ಬಣ್ಣದ ಉಡುಪುಗಳು, ಟೆರಾಬಾನ್ ಅವರ ಮಣ್ಣಿನ ಮಡಿಕೆ-ಕುಡಿಕೆಗಳು, ಟೆರಾಕೋಟಾ ವಸ್ತುಗಳು, ಮಾಯ ಅವರ ಕಸೂತಿಯ ಬಟ್ಟೆಗಳು ಹಾಗೂ ಉತ್ತರ ಕರ್ನಾಟಕದ ವಿವಿಧ ನೇಕಾರರು ಸಿದ್ಧಪಡಿಸಿದ ತರಹೇವಾರಿ ಉಡುಪುಗಳು ಜನರನ್ನು ಆಕರ್ಷಿಸಿದವು.

ಆರಂಭವಾಗದ ಕಾಮಗಾರಿ ರಾಮಲಿಂಗಾರೆಡ್ಡಿ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟಿಎಂ ಲೇಔಟ್ ವಿಧಾನ ಸಭಾ ಕ್ಷೇತ್ರದಲ್ಲಿ 2024–25ನೇ ಸಾಲಿನಲ್ಲಿ ₹27 ಕೋಟಿ ವೆಚ್ಚದ ಕಾಮಗಾರಿಗಳು ಅನುಮೋದನೆಗೊಂಡಿದ್ದವು. ಅದರಲ್ಲಿ ಕೆಲವು ಕಾಮಗಾರಿಗಳು ಇನ್ನೂ ಆರಂಭವಾಗಿಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅಸಮಾಧಾನ ವ್ಯಕ್ತಪಡಿಸಿದರು.

ಬೆಂಗಳೂರು ದಕ್ಷಿಣ ನಗರ ಪಾಲಿಕೆ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳೊಂದಿಗೆ ನಡೆಸಿದ ಕ್ಷೇತ್ರದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಎಲ್ಲ ಕಾಮಗಾರಿಗಳನ್ನು ಶುರು ಮಾಡಬೇಕು. ಜೆ.ಡಿ. ಮರ ಕಾಲೊನಿ, ಎನ್.ಎಸ್. ಪಾಳ್ಯ ವಾರ್ಡ್‌ಗಳ ಅಂಗನವಾಡಿ ಕಟ್ಟಡ ಕಾಮಗಾರಿಗಳನ್ನು ಕೂಡಲೇ ಪ್ರಾರಂಭಿಸಬೇಕು ಎಂದು ಸೂಚಿಸಿದರು.

ಮಂದಗತಿಯಲ್ಲಿ ಕಾಮಗಾರಿ ನಿರ್ವಹಿಸುತ್ತಿರುವ ಗುತ್ತಿಗೆದಾರರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಆದರೂ ಕಾಮಗಾರಿ ಸರಿಯಾಗಿ ನಿರ್ವಹಿಸದಿರುವ ಪ್ರಕರಣಗಳಲ್ಲಿ ಟೆಂಡರ್ ರದ್ದುಪಡಿಸಿ ಮರುಟೆಂಡರ್ ಕರೆಯಿರಿ ಎಂದು ಹೇಳಿದರು.

ಹಿಂದಿನ ಆರ್ಥಿಕ ವರ್ಷಗಳಲ್ಲಿ ಕರೆಯಲಾಗಿರುವ ಟೆಂಡರ್‌ಗಳಲ್ಲಿ ಕಾಮಗಾರಿಗಳು ಸಮರ್ಪಕವಾಗಿ ಮುಗಿದ ನಂತರವೇ ಈ ಸಾಲಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್ ಕರೆಯಬೇಕು ಎಂದರು.

ಪಾದಚಾರಿ ಮಾರ್ಗದ ನಿರ್ವಹಣೆ ಸರಿ ಇಲ್ಲ. ಸಿ.ಸಿ.ಟಿ.ವಿ ಕ್ಯಾಮೆರಾಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಪಾದಚಾರಿ ಮೇಲ್ಸೇತುವೆಗಳು ಸರಿ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಎಂಜಿನಿಯರ್‌ಗಳು ಬೈಕ್‌ನಲ್ಲಿ ಸಂಚರಿಸಿ ಎಲ್ಲ ಕಡೆ ಪರಿಶೀಲನೆ ನಡೆಸಿ ಸರಿಪಡಿಸಬೇಕು ಎಂದು ಸಲಹೆ ನೀಡಿದರು.

ಈಜಿಪುರ ಮೇಲ್ಸೇತುವೆ ಬಳಿ ಬೀದಿ ದೀಪಗಳನ್ನು ಅಳವಡಿಸಬೇಕು. ಮಡಿವಾಳ ಕೆರೆ ಸಂಪೂರ್ಣ ಅಭಿವೃದ್ಧಿಗೆ ಅಗತ್ಯವಿರುವ ಹೆಚ್ಚುವರಿ ಅನುದಾನಕ್ಕೆ ಒತ್ತು ಕೊಡಬೇಕು. ಅನಗತ್ಯವಾದ ಕಡೆ ವೈಟ್‌ಟಾಪಿಂಗ್ ರದ್ದುಗೊಳಿಸಿ ಕೆರೆ ಅಭಿವೃದ್ಧಿಗೆ ಪ್ರಸ್ತಾವ ಸಲ್ಲಿಸಬೇಕು ಎಂದರು.

ಪಾಲಿಕೆ ಆಯುಕ್ತ ಕೆ.ಎನ್. ರಮೇಶ್, ಆಡಳಿತ ವಿಭಾಗದ ಹೆಚ್ಚುವರಿ ಆಯುಕ್ತ ರಾಚಪ್ಪ, ಜಂಟಿ ಆಯುಕ್ತ ಸತೀಶ್ ಬಾಬು, ಮುಖ್ಯ ಎಂಜಿನಿಯರ್‌ಗಳಾದ ಬಸವರಾಜ ಕಬಾಡೆ, ಕೆ.ವಿ. ರವಿ, ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.

ನಗರದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ದಿ ಕಾಂ ಡೀಲ್ ಟ್ರಸ್ಟ್‌ನ (ಟಿಸಿಡಿಟಿ) ರಜತ ಮಹೋತ್ಸವದಲ್ಲಿ ಟ್ರಸ್ಟ್‌ನ ಸಂಸ್ಥಾಪಕ ನಿರ್ದೇಶಕಿ ಡಾ. ಪ್ರತಿಭಾ ಕಾರಂತ್ (ಎಡದಿಂದ ಮೊದಲನೆಯವರು) ಲೇಖಕಿಯರಾದ ಪ್ರಿಜಾ ಬಾಲನ್, ನೀತು ಕೃಷ್ಣ ಅವರಿಗೆ ‘ಸಿ.ಬಿ. ಕಾರ್ಯಪ್ಪ ಸ್ಮಾರಕ ಪ್ರಶಸ್ತಿ’ಯನ್ನು ನೀಡಿ ಗೌರವಿಸಿದರು

ಲಾರಿ ಡಿಕ್ಕಿ: ಅಂಚೆ ಪೇದೆ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಚಂದಾಪುರ ಸೂರ್ಯಸಿಟಿ ಪೊಲೀಸ್ ಠಾಣೆ ವ್ಯಾಪ್ತಿಯ ಕಿತ್ತಗಾನಹಳ್ಳಿ ಗೇಟ್ ಬಳಿ ಶನಿವಾರ ಅಂಚೆ ವಿತರಣೆಗೆ ತೆರಳುತ್ತಿದ್ದ ಮಹಿಳೆಯ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದು ಆಕೆ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಂಚೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಪ್ರಿಯ ಮೃತರು. ಬೈಕ್‌ನಲ್ಲಿ ಪೋಸ್ಟ್ ಕೊಡಲು ಹೋಗುತ್ತಿದ್ದಾಗ ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದಿದೆ. ಲಾರಿ ಚಕ್ರ ಹರಿದ ಪರಿಣಾಮ ಪ್ರಿಯ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಅಪಘಾತದ ಬಳಿಕ ಲಾರಿ ಚಾಲಕ ಪರಾರಿಯಾಗಿದ್ದಾನೆ. ಚಂದಾಪುರ ಸೂರ್ಯಸಿಟಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಅಪಘಾತದ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಅಸಭ್ಯ ವರ್ತನೆ ಟ್ಯಾಕ್ಸಿ ಸವಾರ ಸೆರೆ

ಬೆಂಗಳೂರು: ಹೊರ ರಾಜ್ಯದ ವಿದ್ಯಾರ್ಥಿನಿಗೆ ಡ್ರಾಪ್ ಕೊಡುವ ಸಂದರ್ಭದಲ್ಲಿ ಅಸಭ್ಯವಾಗಿ ವರ್ತಿಸಿದ್ದ ಬೈಕ್ ಟ್ಯಾಕ್ಸಿ ಸವಾರನನ್ನು ವಿಲ್ಸನ್ ಗಾರ್ಡನ್ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಲೋಕೇಶ್

ಉಲ್ಲಾಳದ ಮುನಿಯಪ್ಪ ಲೇಔಟ್‌ನ ನಿವಾಸಿ ಲೋಕೇಶ್ (28) ಬಂಧಿತ ಆರೋಪಿ.

‘ನ.6ರಂದು ಘಟನೆ ನಡೆದಿತ್ತು. ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ಸುಧಾಮನಗರದ ಪಿ.ಜಿಯೊಂದರಲ್ಲಿ ನೆಲಸಿದ್ದ ವಿದ್ಯಾರ್ಥಿನಿ ಚರ್ಚ್‌ಸ್ಟ್ರೀಟ್ ನಲ್ಲಿರುವ ಸ್ನೇಹಿತೆ ನೋಡಲು ಹೋಗಿದ್ದರು. ವಾಪಸ್ ಬರಲು ಬುಕ್ ಮಾಡಿದ್ದ ಬೈಕ್ ಟ್ಯಾಕ್ಸಿ ಸವಾರ ವಿದ್ಯಾರ್ಥಿನಿ ಜತೆ ಅಸಭ್ಯವಾಗಿ ವರ್ತಿಸಿ, ಮೈಮುಟ್ಟಿ ಕಿರುಕುಳ ನೀಡಿದ್ದ. ಸಂತ್ರಸ್ತೆ ಸ್ನೇಹಿತ ಟ್ಯಾಕ್ಸಿ ಸವಾರನನ್ನು ತರಾಟೆಗೆ ತೆಗೆದುಕೊಂಡ ಬಳಿಕ ಆರೋಪಿ ಕ್ಷಮೆ ಕೇಳಿದ್ದ. ಘಟನೆ ವಿಡಿಯೊ ಮಾಡಿಕೊಂಡಿದ್ದ ವಿದ್ಯಾರ್ಥಿನಿ ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದರು.

ಚಾಲಕನ ಯಡವಟ್ಟು: ಮಗು ಸಾವು

ಚಾಲಕ ಪರಾರಿ, ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಕ್ರೀಟ್ ಮಿಕ್ಸರ್ ಲಾರಿ ಚಾಲಕನ ಯಡವಟ್ಟಿನಿಂದ ಎರಡು ವರ್ಷದ ಮಗುವೊಂದು ಮೃತಪಟ್ಟಿರುವ ಘಟನೆ ಎಚ್‌ಎಎಲ್ ಪೊಲೀಸ್ ಠಾಣಾ ವ್ಯಾಪ್ತಿಯ ಕುಂದಲಹಳ್ಳಿಯಲ್ಲಿ ಶುಕ್ರವಾರ ಸಂಜೆ ನಡೆದಿದೆ.

ಕುಂದಲಹಳ್ಳಿಯ ನಿವಾಸಿ ಸಿದ್ದಪ್ಪ ಹಾಗೂ ಲಾವಣ್ಯ ದಂಪತಿಯ ಪುತ್ರ ಪ್ರಣವ್ ಮೃತಪಟ್ಟಿದ್ದಾನೆ.

ಲಾರಿ ಚಾಲಕನ ನಿರ್ಲಕ್ಷ್ಯದಿಂದ ಸಂಭವಿಸಿದ ಅವಘಡದಲ್ಲಿ ಗೋಡೆ ಕುಸಿದ ಪರಿಣಾಮ ಮಗು ಸ್ಥಳದಲ್ಲೇ ಮೃತಪಟ್ಟಿದೆ.

‘ಹೊಸ ಮನೆಯೊಂದರ ಮೋಲ್ಡಿಂಗ್ ಕೆಲಸಕ್ಕಾಗಿ ಕಾಂಕ್ರೀಟ್ ಮಿಕ್ಸರ್ ಲಾರಿಯನ್ನು ಕರೆಸಲಾಗಿತ್ತು. ಶುಕ್ರವಾರ ಸಂಜೆ 4ರ ಸುಮಾರಿಗೆ ಕೆಲಸ ಮುಗಿದಿತ್ತು. ಕಿರಿದಾದ ಮಾರ್ಗದಲ್ಲಿ ಲಾರಿ ತೆರಳು ತ್ತಿರುವಾಗ ಮೇಲ್ಭಾಗದಲ್ಲಿ ಹಾದು ಹೋಗಿದ್ದ ವಿದ್ಯುತ್ ತಂತಿಯು ಲಾರಿಗೆ ಸಿಲುಕಿಕೊಂಡಿತ್ತು. ಅದನ್ನು ಗಮನಿಸದೇ ಲಾರಿ ಚಾಲಕ ವಾಹನವನ್ನು ಮುಂದಕ್ಕೆ ಕೊಂಡೊಯ್ದ. ಆಗ ವಿದ್ಯುತ್ ಕಂಬ ಕಿತ್ತುಕೊಂಡು, ಮನೆಯೊಂದರ ಗೋಡೆಗೆ ತಾಗಿತ್ತು. ಗೋಡೆ ಪಕ್ಕದಲ್ಲೇ ಆಟವಾಡುತ್ತಿದ್ದ ಮಗುವಿನ ಮೇಲೆ ಗೋಡೆಯ ಅವಶೇಷಗಳು ಬಿದ್ದ ಪರಿಣಾಮ ಮಗು ಸ್ಥಳದಲ್ಲೇ ಮೃತಪಟ್ಟಿದೆ’ ಎಂದು ಪೊಲೀಸರು ಹೇಳಿದರು.

‘ಘಟನೆಗೂ ಎರಡು ನಿಮಿಷಗಳ ಮುನ್ನ ಪುತ್ರನ ಜತೆಗೆ ತಂದೆ ಸಿದ್ದಪ್ಪ ಮನೆಯ ಆವರಣದಲ್ಲೇ ಆಟ ವಾಡುತ್ತಿದ್ದರು. ಮಗುವನ್ನು ಅಲ್ಲೇ ಬಿಟ್ಟು ಕ್ಯಾನ್‌ನಲ್ಲಿ ನೀರು ತರಲು ಮನೆಯ ಒಳಕ್ಕೆ ತೆರಳಿದ್ದರು. ಆಗ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಘಟನಾ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದೇವೆ. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಪರಾರಿಯಾಗಿರುವ ಲಾರಿ ಚಾಲಕನಿಗಾಗಿ ಹುಡುಕಾಟ ನಡೆಸುತ್ತಿದ್ದೇವೆ’ ಎಂದು ಪೊಲೀಸರು ಹೇಳಿದರು.

ಕಳ್ಳನ ಬಂಧನ; 10 ಬೈಕ್ ವಶ

ಕನಕಪುರ: ಕನಕಪುರ ಹಾಗೂ ಬೆಂಗಳೂರು ಸೇರಿದಂತೆ ವಿವಿಧೆಡೆ ಬೈಕ್ ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿ ₹10 ಲಕ್ಷ ಮೌಲ್ಯದ ಹತ್ತು ಬೈಕ್ ವಶಪಡಿಸಿಕೊಂಡಿದ್ದಾರೆ.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕಿನ ಕೊಳಗೆರೆ ಗ್ರಾಮದ ಕೆ.ಎಸ್.ಅರುಣ್ ಬಂಧಿತ ಆರೋಪಿ. ಈತ ಹಲವು ವರ್ಷಗಳಿಂದ ಕನಕಪುರದ ಮಹದೇಶ್ವರ ಬಡಾವಣೆಯಲ್ಲಿ ವಾಸವಾಗಿದ್ದಾನೆ.

‘ಕನಕಪುರ, ಹಾರೋಹಳ್ಳಿ, ಬಿಡದಿ, ಬೆಂಗಳೂರು ಪುಟ್ಟೇನಹಳ್ಳಿ, ಪೀಣ್ಯ, ಚಂದ್ರಾ ಲೇಔಟ್‌ನಲ್ಲಿ ಬೈಕ್, ಸ್ಕೂಟರ್ ಕಳ್ಳತನ ಮಾಡಿರುವುದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ’ ಎಂದು ಪೊಲೀಸರು ಹೇಳಿದ್ದಾರೆ. ಕನಕಪುರದ ಲಿಂಗಣ್ಣ ಬೀದಿಯ ಚೆನ್ನರಾಜು ಎಂಬುವರ ಸ್ಕೂಟರ್ ಅ.24 ರಂದು ರಾತ್ರಿ ಕಳ್ಳತನವಾಗಿತ್ತು. ಈ ಬಗ್ಗೆ ಪುರ ಠಾಣೆಗೆ ದೂರು ನೀಡಿದ್ದರು ಬೈಕ್ ಕಳ್ಳನ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು.

ನಿಧನ ವಾರ್ತೆ

ಹು.ಕ. ಜಯದೇವ್

ಬೆಂಗಳೂರು: ಬೆಂಗಳೂರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ಹು.ಕ. ಜಯದೇವ್ (85) ಶನಿವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರಿದ್ದಾರೆ. ಚಾಮರಾಜಪೇಟೆಯ ಟಿ.ಆರ್.ಮಿಲ್ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು. ಬೆಂಗಳೂರು ವಿವಿಯ ಪ್ರಸಾರಾಂಗ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು. ಶಾಸನಗಳು, ಕುವೆಂಪು ಕೃತಿಗಳ ಕುರಿತ ಲೇಖನ ಸಂಕಲನ ಹೊರತಂದಿದ್ದರು.

ವೃದ್ಧೆ ಕೊಂದು ಮೂಟೆ ಕಟ್ಟಿಟ್ಟಿದ್ದ ಗೃಹಿಣಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಕೂಗುರು ಗ್ರಾಮದ ಗೃಹಿಣಿಯೊಬ್ಬರು ಕಜ್ಜಾಯ ಕೊಡುವುದಾಗಿ ವೃದ್ಧೆಯನ್ನು ವಾರದ ಹಿಂದೆ ಮನೆಗೆ ಕರೆಸಿ, ಕೊಂದು ಮೂಟೆಯಲ್ಲಿ ತುಂಬಿಟ್ಟಿದ್ದರು.

ಕೂಗುರು ಗ್ರಾಮದ ಭದ್ರಮ್ಮ(68) ಎಂಬ ವೃದ್ಧೆಯನ್ನು ಅದೇ ಗ್ರಾಮದ ದೀಪಾ (30) ಎಂಬ ಗೃಹಿಣಿ ಕೊಂದು ಶವವನ್ನು ಮೂಟೆಯಲ್ಲಿ ತುಂಬಿ ಎರಡು ದಿನ ಮನೆಯಲ್ಲಿ ಇಟ್ಟಿದ್ದರು. ಭದ್ರಮ್ಮ ಧರಿಸಿದ್ದ ಚಿನ್ನಾಭರಣಕ್ಕಾಗಿ ಕೊಲೆ ಮಾಡಿರುವುದಾಗಿ ವಿಚಾರಣೆ ವೇಳೆ ದೀಪಾ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.



ಭದ್ರಮ್ಮ

ದೀಪಾ

ಅ.30ರಿಂದಲೂ ಭದ್ರಮ್ಮ ಕಾಣೆಯಾಗಿದ್ದರು. ವೃದ್ಧೆಗಾಗಿ ಹುಡುಕಾಟ ನಡೆಸಿದ್ದ ಕುಟುಂಬ ಸದಸ್ಯರು ಕೊನೆಗೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಅಕ್ಕಪಕ್ಕದ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದ ದೃಶ್ಯಗಳನ್ನು ಪೊಲೀಸರು ಪರಿಶೀಲಿಸಿದಾಗ ಕಾಣೆಯಾಗುವ ಮೊದಲು ಕೊನೆಯ ಬಾರಿಗೆ ಭದ್ರಮ್ಮ ಅವರು ದೀಪಾ ಮನೆಗೆ ಹೋಗಿದ್ದರು. ಅಲ್ಲಿಂದ ಮರಳಿ ಬಂದಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿರಲಿಲ್ಲ. ಈ ಬಗ್ಗೆ ದೀಪಾ ಅವರನ್ನು ವಿಚಾರಣೆ ನಡೆಸಿದಾಗ ನೈಜ ಘಟನೆ ಹೊರ ಬಿದ್ದಿದೆ. ಕೊಲೆ ಮಾಡಿ ಶವವನ್ನು ಮೂಟೆ ಕಟ್ಟಿ ಎರಡು ದಿನ ಮನೆಯಲ್ಲಿಯೇ ಇಟ್ಟುಕೊಂಡು, ಬಳಿಕ ದೊಡ್ಡತಿಮ್ಮಸಂದ್ರ ಕೆರೆಯ ಪೊದೆಯಲ್ಲಿ ಶವ ಇದ್ದ ಮೂಟೆಯನ್ನು ಎಸೆದು ಬಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಸರ್ಜಾಪುರ ಇನ್‌ಸ್ಪೆಕ್ಟರ್ ನವೀನ್ ನೇತೃತ್ವದ ತಂಡ ತನಿಖೆ ನಡೆಸಿ ಆರೋಪಿಯನ್ನು ಪತ್ತೆ ಹಚ್ಚಿದೆ. ಶವದ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಸರ್ಜಾಪುರ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ. ಸ್ಥಳಕ್ಕೆ ಎಎಸ್ಪಿ ವೆಂಕಟೇಶ್ ಪ್ರಸನ್ನ, ಡಿವೈಎಸ್ಪಿ ಮೋಹನ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

‘ಸಂಶೋಧನೆಗೆ ಹಣಕಾಸಿನ ನೆರವು ಅಗತ್ಯ’

‘ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವ– ಮನೋತ್ಸವ’ದಲ್ಲಿ ಫಿಲಾಂಥ್ರೋಪಿಸ್ಟ್ ಅಧ್ಯಕ್ಷೆ ರೋಹಿಣಿ ನಿಲೇಕಣಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಾನಸಿಕ ಆರೋಗ್ಯಕ್ಕೆ ದೇಶವು ಒತ್ತು ನೀಡಬೇಕು. ಸಂಶೋಧನೆಗೆ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕು’ ಎಂದು ರೋಹಿಣಿ ನಿಲೇಕಣಿ ಫಿಲಾಂಥ್ರೋಪಿಸ್ಟ್ ಅಧ್ಯಕ್ಷೆ ರೋಹಿಣಿ ನಿಲೇಕಣಿ ಹೇಳಿದರು.

ನಗರದಲ್ಲಿ ಶನಿವಾರ ಆರಂಭವಾದ ‘ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವ– ಮನೋತ್ಸವ’ ಉದ್ಘಾಟಿಸಿ ಅವರು ಮಾತನಾಡಿದರು.

ವಿಜ್ಞಾನವು ಮಾನವನ ಅಗತ್ಯಗಳನ್ನು ನಿಜವಾಗಿಯೂ ಪೂರೈಸಬೇಕಿದ್ದರೆ ಇಂಥ ಸಂಶೋಧನೆಗಳು ನಡೆಯಬೇಕು. ಮನೋತ್ಸವದ ಮೂಲಕ ಆರೋಗ್ಯದ ಬಗ್ಗೆ ಮುಕ್ತ ಚರ್ಚೆಗಳನ್ನು ನಡೆಸುವುದು, ಅರಿವು ಮೂಡಿಸುವುದು ಮತ್ತು ಎಲ್ಲರನ್ನು ಒಳಗೊಳ್ಳುವುದು ಸಾಧ್ಯವಾಗುತ್ತಿದೆ’ ಎಂದು ತಿಳಿಸಿದರು.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಆ್ಯಂಡ್ ನ್ಯೂರೋ ಸೈನ್ಸಸ್ (ನಿಮ್ಹಾನ್ಸ್) ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ ಮಾತನಾಡಿ, ‘ಉತ್ಸವದ ಮೂಲಕ ಮಾನಸಿಕ ಆರೋಗ್ಯ ಕುರಿತ ಸಂಶೋಧನೆ, ಚಿಕಿತ್ಸೆ ಮತ್ತು ಔಷಧೀಯ ಮಾಹಿತಿಗಳನ್ನು ಪ್ರಯೋಗಾಲಯದಿಂದ ಹೊರಗೆ ತಂದು ಸಮಾಜದ ಮುಂದೆ ಇಡುತ್ತಿದ್ದೇವೆ. ಎಲ್ಲ ವಯಸ್ಸಿನ ಜನರೊಂದಿಗೆ ಬೆರೆಯುತ್ತ, ತಜ್ಞರ ಅನುಭವವನ್ನು ಸಾರುತ್ತಾ ಮಾನಸಿಕ ಯೋಗಕ್ಷೇಮದ ಅರಿವನ್ನು ಗಟ್ಟಿಗೊಳಿಸಲಾಗುತ್ತಿದೆ’ ಎಂದರು.

ನ್ಯಾಷನಲ್ ಸೆಂಟರ್ ಫಾರ್ ಬಯೋಲಾಜಿಕಲ್ ಸೈನ್ಸಸ್ (ಎನ್‌ಸಿಬಿಎಸ್) ಸೆಂಟರ್‌ನ ನಿರ್ದೇಶಕ ಎಲ್.ಎಸ್. ಶಶಿಧರ ಮಾತನಾಡಿ, ‘ಮಾನಸಿಕ ಆರೋಗ್ಯದ ಜೀವ ವಿಜ್ಞಾನವನ್ನು ಆಧುನಿಕ ವಿಜ್ಞಾನ ಬಳಸಿ ಅರಿಯುವ ಪ್ರಯತ್ನ ಮಾಡಲಾಗುತ್ತಿದೆ. ಒಳನೋಟ, ಸಂವಾದಗಳ ಮೂಲಕ ಸಮಾಜವನ್ನು ಸಬಲೀಕರಣಗೊಳಿಸಲಾಗುತ್ತಿದೆ’ ಎಂದು ಹೇಳಿದರು.

ಎರಡು ದಿನಗಳ ಈ ಉತ್ಸವದಲ್ಲಿ ಒಟ್ಟು 26 ಗೋಷ್ಠಿಗಳು, 8 ಸಂವಾದಗಳು ನಡೆಯುತ್ತಿವೆ. 130ಕ್ಕೂ ಅಧಿಕ ಪರಿಣತರು ವಿಷಯ ಮಂಡನೆ ಮಾಡುತ್ತಿದ್ದಾರೆ. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ಆಟಗಳು, ಪುಸ್ತಕಗಳು ಸೇರಿದಂತೆ ವಿವಿಧ ಪ್ರದರ್ಶನಗಳ 32 ಮಳಿಗೆಗಳು ಗಮನ ಸೆಳೆಯುತ್ತಿವೆ. ಛಾಯಾಚಿತ್ರ ಪ್ರದರ್ಶನ, ಮಕ್ಕಳ ಆಟದ ವಿಭಾಗಗಳು, ಡಿಜಿಟಲ್ ಡಿಟಾಕ್ಸ್ ವಲಯ, ಭಾರತೀಯ ಸಂಗೀತ ವಾದ್ಯಗಳ ವಲಯಗಳು ಪ್ರಮುಖ ಆಕರ್ಷಣೆಯಾಗಿವೆ.

‘ಹೆರಿಗೆ ಸಮಯದಲ್ಲಿ ಖಿನ್ನತೆ ಹೆಚ್ಚು’

ಮಹಿಳೆಯರಿಗೆ ಹೆರಿಗೆ ಸಮಯದಲ್ಲಿ ಉಂಟಾಗುವ ಭಯ, ಒತ್ತಡ, ಕಾತರಗಳು ಮಿದುಳಿನ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ. ಬಾಣಂತಿಯರು ಖಿನ್ನತೆಗೆ ಜಾರುವ ಸಾಧ್ಯತೆಗಳಿರುತ್ತವೆ. ಪ್ರಸೂತಿ ತಜ್ಞರೊಂದಿಗೆ ಸಮಾಲೋಚನೆ ನಡೆಸುವ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಬಹುದು.

ನಗರದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ ‘ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವ’ದ ‘ತಾಯ್ತನದ ಆರೋಗ್ಯ: ಒತ್ತಡ, ಕಥೆಗಳು ಮತ್ತು ಅಧ್ಯಯನ’ ಗೋಷ್ಠಿಯಲ್ಲಿ ಮೂಡಿದ ತಜ್ಞರ ಅಭಿಪ್ರಾಯವಿದು.

ಮನೆಯ ವಾತಾವರಣ, ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಗಳು, ಅತಿಯಾದ ಭಾವುಕ ಅಂಶಗಳು ಕೂಡ ಹೆರಿಗೆ ಸಮಯದಲ್ಲಿ ಮತ್ತು ಹೆರಿಗೆಯಾದ ಬಳಿಕವೂ ಪರಿಣಾಮವನ್ನು ಬೀರುತ್ತಿವೆ ಎಂದು ತಜ್ಞರು ತಿಳಿಸಿದರು.

ನಿಮ್ಹಾನ್ಸ್‌ನ ಡಾ. ಪ್ರಭಾ ಚಂದ್ರ, ಮಮ್ಮಿ ಮಿಕ್ಸ್‌ಡ್ ಟೇಪ್ಸ್ ಸಂಸ್ಥೆಯ ಬಕುಲ್ ದುವಾ, ಗ್ರೀನ್ ಓಕ್ ಸಂಸ್ಥೆಯ ಪೂರ್ಣಿಮಾ ಮಹಿಂದ್ರು ಅಭಿಪ್ರಾಯ ವ್ಯಕ್ತಪಡಿಸಿದರು. ಆಸ್ತಿಕ ಫೌಂಡೇಷನ್‌ನ ಜಾಹ್ನವಿ ನಿಲೇಕಣಿ ಸಂವಾದ ನಡೆಸಿಕೊಟ್ಟರು.

‘ರಾಷ್ಟ್ರೀಯ ಮಾನಸಿಕ ಆರೋಗ್ಯ ಉತ್ಸವ ಮನೋತ್ಸವ’ದಲ್ಲಿ ‘ಸೃಷ್ಟಿ ಸ್ಪೆಶಲ್ ಅಕಾಡೆಮಿ’ಯ ಮಕ್ಕಳೊಂದಿಗೆ ರೋಹಿಣಿ ನಿಲೇಕಣಿ, ಡಾ. ಪ್ರತಿಮಾ ಮೂರ್ತಿ, ಎಲ್.ಎಸ್. ಶಶಿಧರ ಚರ್ಚೆ ನಡೆಸಿದರು —ಪ್ರಜಾವಾಣಿ ಚಿತ್ರ

ಇಸ್ಕಾನ್ ಆಸ್ತಿ ಪ್ರಕರಣ ‘ಸುಪ್ರೀಂ’ ಭಿನ್ನ ತೀರ್ಪು

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಇಸ್ಕಾನ್ ಘಟಕದ ಆಸ್ತಿಯ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಇಸ್ಕಾನ್ ಮುಂಬೈ ಘಟಕವು ಸಲ್ಲಿಸಿದ್ದ ಮರು ಪರಿಶೀಲನಾ ಅರ್ಜಿಯನ್ನು ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಭಿನ್ನ ಮತದ ತೀರ್ಪು ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಕೆ. ಮಾಹೇಶ್ವರಿ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರನ್ನೊಳಗೊಂಡ ಪೀಠವು ಈ ತೀರ್ಪು ನೀಡಿದ್ದು, ಮುಂದಿನ ನಿರ್ದೇಶನಗಳಿಗಾಗಿ ಮರು ಪರಿಶೀಲನಾ ಅರ್ಜಿಯನ್ನು ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರ ಮುಂದೆ ಇಡಲು ಸೂಚಿಸಿದೆ.

ನ್ಯಾಯಮೂರ್ತಿ ಮಾಹೇಶ್ವರಿ ಅವರು, ಮುಕ್ತ ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆಗೆ ಅನುಮತಿ ನೀಡಿ, ಕಕ್ಷಿದಾರರಿಗೆ ನೋಟಿಸ್ ಜಾರಿಗೊಳಿಸಿದರು. ನ್ಯಾಯಮೂರ್ತಿ ಅಗಸ್ಟಿನ್ ಅವರು, ‘ಮೇ 16ರಂದು ನೀಡಿದ್ದ ತೀರ್ಪಿನಲ್ಲಿ ಮೇಲ್ನೋಟಕ್ಕೆ ಯಾವುದೇ ದೋಷ ಕಂಡುಬಂದಿಲ್ಲ, ಈ ಬಗ್ಗೆ ತೃಪ್ತಿ ಇದೆ’ ಎಂದು ಅಭಿಪ್ರಾಯಪಟ್ಟು, ಮರು ಪರಿಶೀಲನಾ ಅರ್ಜಿಯನ್ನು ವಜಾಗೊಳಿಸಿದರು.

ಏನಿದು ಪ್ರಕರಣ: ಬೆಂಗಳೂರಿನ ಇಸ್ಕಾನ್ ಘಟಕದ ಆಸ್ತಿಯು ಮುಂಬೈನ ಇಸ್ಕಾನ್ ಘಟಕದ ನಿಯಂತ್ರಣಕ್ಕೆ ಸೇರಿದೆ ಎಂದು ಕರ್ನಾಟಕ ಹೈಕೋರ್ಟ್ 2011ರಲ್ಲಿ ತೀರ್ಪು ನೀಡಿತ್ತು. ಇದನ್ನು ಪ್ರಶ್ನಿಸಿ, ಇಸ್ಕಾನ್ ಬೆಂಗಳೂರು ಘಟಕ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಮೇ 16ರಂದು ಮಾನ್ಯ ಮಾಡಿತ್ತು.

ಬೆಂಗಳೂರಿನಲ್ಲಿರುವ ಇಸ್ಕಾನ್ ದೇವಸ್ಥಾನವು, ಕರ್ನಾಟಕ ಸಂಘಗಳ ಕಾಯ್ದೆಯಡಿ ನೋಂದಾಯಿಸಲಾಗಿರುವ ಬೆಂಗಳೂರಿನ ಇಸ್ಕಾನ್ ಸೊಸೈಟಿ ಭಾಗವಾಗಿದೆ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕಾ ಮತ್ತು ಅಗಸ್ಟಿನ್ ಜಾರ್ಜ್ ಮಸೀಹ್ ಅವರ ಪೀಠವು ಹೇಳಿತ್ತು.

‘ಇಸ್ಕಾನ್ ಮುಂಬೈ ಘಟಕಕ್ಕೆ ಬೆಂಗಳೂರು ಘಟಕದ ಜಮೀನನ್ನು ಹಂಚಿಕೆ ಮಾಡಿರುವ ಯಾವುದೇ ದಾಖಲೆಗಳು, ಪತ್ರಗಳು ಪರಿಶೀಲನೆಯಲ್ಲಿ ಕಂಡುಬಂದಿಲ್ಲ. ‘ಬೆಂಗಳೂರು ಶಾಖೆ’ ಎನ್ನುವ ಪದವೂ ಯಾವುದೇ ಭೌತಿಕ ದಾಖಲೆಗಳಲ್ಲಿ ಕಂಡುಬಂದಿಲ್ಲ. ಇದು ದಾಖಲೆ, ಸಾಕ್ಷ್ಯಗಳಿಗೆ ಸಂಪೂರ್ಣ ವಿರುದ್ಧವಾಗಿದೆ’ ಎಂದು ಅಭಿಪ್ರಾಯಪಟ್ಟಿದ್ದ ಪೀಠ, ಕರ್ನಾಟಕ ಹೈಕೋರ್ಟ್ ಆದೇಶವನ್ನು ರದ್ದುಗೊಳಿಸಿತ್ತು.

‘ಎಐಜೆಎಸ್ ಆರಂಭ ಕಷ್ಟಸಾಧ್ಯ’

ಕಲಬುರಗಿ: ‘ಭಾರತದಲ್ಲಿ ಪ್ರದೇಶಕ್ಕನುಗುಣವಾಗಿ ಕಾನೂನುಗಳಿವೆ. ಜೊತೆಗೆ ಬೇರೆ ಸವಾಲುಗಳೂ ಇವೆ. ಅಖಿಲ ಭಾರತ ನ್ಯಾಯಾಂಗ ಸೇವೆ (ಎಐಜೆಎಸ್) ಆರಂಭಿಸುವುದು ಕಷ್ಟದ ಕೆಲಸ’ ಎಂದು ಭಾರತೀಯ ಕಾನೂನು ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ದಿನೇಶ್ ಮಾಹೇಶ್ವರಿ ಅಭಿಪ್ರಾಯಪಟ್ಟರು.

ಶನಿವಾರ ಇಲ್ಲಿನ ಸೇಠ್ ಶಂಕರಲಾಲ್ ಲಾಹೋಟಿ ಕಾನೂನು ಕಾಲೇಜಿನ ಕಾರ್ಯಕ್ರಮದಲ್ಲಿ ಮಾತನಾಡಿ, ‘ಹಾಗೆಂದು, ಪ್ರಸ್ತಾವವನ್ನು ತಳ್ಳಿ ಹಾಕಲೂ ಸಾಧ್ಯವಿಲ್ಲ. ಹಲವು ವರ್ಷಗಳ ಬಳಿಕ ಎಐಜೆಎಸ್ ಸಾಧ್ಯವೂ ಆಗಬಹುದು. ನಾವು ಸಕಾರಾತ್ಮಕವಾಗಿರಬೇಕು ಅಷ್ಟೇ’ ಎಂದು ಹೇಳಿದರು.

ದಿನೇಶ್ ಮಾಹೇಶ್ವರಿ

ಕಾಂಗ್ರೆಸ್ ಭವನ ನಿರ್ಮಾಣಕ್ಕೆ ತಡೆ

ತುಮಕೂರು: ನಗರದ ಮರಳೂರಿನಲ್ಲಿ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಮಂಜೂರಾಗಿರುವ ಜಾಗದಲ್ಲಿ ಕಟ್ಟಡ ನಿರ್ಮಾಣ ಮಾಡದಂತೆ ಒಂದನೇ ಹೆಚ್ಚುವರಿ ಸಿವಿಲ್ ಹಾಗೂ ಜೆಎಂಎಫ್‌ಸಿ ನ್ಯಾಯಾಲಯ ತಡೆಯಾಜ್ಞೆ ನೀಡಿದೆ.

ಯಾವುದೇ ನಿರ್ಮಾಣ ಚಟುವಟಿಕೆಗಳನ್ನು ಕೈಗೊಳ್ಳಬಾರದು ಎಂದು ಸೂಚಿಸಿದ್ದು, ಸಂಬಂಧಿಸಿದವರಿಗೆ ನೋಟಿಸ್ ಜಾರಿಗೆ ಆದೇಶಿಸಿದೆ. ಈ ಆದೇಶದಿಂದಾಗಿ ಸದ್ಯಕ್ಕೆ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಹಿನ್ನಡೆಯಾಗಿದೆ.

ಮರಳೂರಿನ ಸರ್ವೆ ನಂ 87/2ರಲ್ಲಿ 2 ಎಕರೆ ಜಾಗವನ್ನು ಜಿಲ್ಲಾ ಕಾಂಗ್ರೆಸ್ ಭವನಕ್ಕೆ ಮಂಜೂರು ಮಾಡಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಳ್ಳಲಾಗಿತ್ತು. ನಗರಾಭಿವೃದ್ಧಿ ಇಲಾಖೆ ಆದೇಶದಂತೆ ಮಹಾನಗರ ಪಾಲಿಕೆಯು ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಭೂಮಿಯನ್ನು ನೋಂದಣಿ ಮಾಡಿಕೊಟ್ಟಿತ್ತು.

ಈ ಜಮೀನು ತಮಗೆ ಸೇರಿದ್ದು ಎಂದು ವಾದಿಸಿ ಗಂಗಮ್ಮ ಎಂಬವರು ಕೋರ್ಟ್ ಮೊರೆ ಹೋಗಿದ್ದರು. ವಿವಾದ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿ ಇರುವಾಗಲೇ ಕಾಂಗ್ರೆಸ್ ಭವನ ಟ್ರಸ್ಟ್‌ಗೆ ಭೂಮಿ ಮಂಜೂರು ಮಾಡಲಾಗಿತ್ತು.

ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ

‘ಜಾತಿ ಇರುವವರೆಗೆ ಮೀಸಲಾತಿ ಇರಬೇಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿ ಜಾತಿ ವ್ಯವಸ್ಥೆ ಇರುವವರೆಗೆ ಮೀಸಲಾತಿ ಇರಬೇಕು. ಇದನ್ನೇ ಅಂಬೇಡ್ಕರ್ ಅವರು ಪ್ರತಿಪಾದಿಸಿರುವುದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶನಿವಾರ ಹಮ್ಮಿಕೊಂಡಿದ್ದ ಕನಕದಾಸರ ಜಯಂತಿ, ಕನಕಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಉನ್ನತ ಜಾತಿಯಲ್ಲಿ ಬಡವರಿದ್ದರೂ ಸ್ವಾಮಿ, ಬುದ್ಧಿ ಎಂದು ಕರೆಯುತ್ತೇವೆ. ದಲಿತರಾಗಿದ್ದರೆ ಶ್ರೀಮಂತನಾಗಿದ್ದರೂ, ವಿದ್ಯಾವಂತನಾಗಿದ್ದರೂ ಏನಯ್ಯ ಚೆನ್ನಾಗಿದ್ದೀಯಾ ಎಂದು ಕೇಳುತ್ತೇವೆ. ಜಾತಿಯಿಂದ ಬಂದ ಅಸಮಾನತೆ ಆಳವಾಗಿ ಬೇರೂರಿರುವುದೇ ಇದಕ್ಕೆ ಕಾರಣ’ ಎಂದು ಹೇಳಿದರು.

‘ಸ್ವಾತಂತ್ರ್ಯ ಬಂದಿರುವುದು ಸಾರ್ಥಕ ಆಗಬೇಕಿದ್ದರೆ ಅಸಮಾನತೆ ಹೋಗಬೇಕು. ಎಲ್ಲರೂ ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾಜಿಕವಾಗಿ ಸಬಲರಾಗಬೇಕು. ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು. ಆದರೆ, ಜಾತಿ ವ್ಯವಸ್ಥೆ ಹೋಗದೇ ಸಮಸಮಾಜ ನಿರ್ಮಾಣವಾಗದು’ ಎಂದು ತಿಳಿಸಿದರು.

‘ಹಿಂದಿನ ಜನ್ಮದಲ್ಲಿ ಪಾಪ ಮಾಡಿದ್ದರಿಂದ ಹೀಗೆ ಜನಿಸಿದ್ದೆ. ಹಣೆಬರಹದಲ್ಲಿ ಇದ್ದಿದ್ದು ಆಗಿದೆ ಎಂದು ಅನೇಕರು ಹೇಳುತ್ತಾರೆ. ಹಿಂದಿನ ಜನ್ಮವೂ ಇಲ್ಲ. ಮುಂದಿನ ಜನ್ಮವೂ ಇಲ್ಲ. ಅದರಿಂದ ಹೊರಗೆ ಬರಬೇಕು. ಮೌಢ್ಯವನ್ನು ನಂಬಬೇಡಿ ಅಂದರೂ ಬಿಡಲು ಒಪ್ಪುವುದಿಲ್ಲ. ಯಾಕೆಂದರೆ ಪಟ್ಟಭದ್ರ ಹಿತಾಸಕ್ತಿಗಳು ಮೌಢ್ಯಗಳನ್ನು ಗಟ್ಟಿಗೊಳಿಸುತ್ತಿವೆ. ಮೌಢ್ಯಗಳಿಗೆ ದಾಸರಾಗಬೇಡಿ. ವಿಚಾರಗಳಿಗೆ ದಾಸರಾಗಿ’ ಎಂದು ಸಲಹೆ ನೀಡಿದರು.

‘ಮಹನೀಯರು ಆಕಸ್ಮಿಕವಾಗಿ ಒಂದು ಜಾತಿಯಲ್ಲಿ ಹುಟ್ಟಿರಬಹುದು. ಅದಕ್ಕೆ ಆಯಾ ಜಾತಿಯವರೇ ಜಯಂತಿ ಆಚರಿಸಬಾರದು. ಎಲ್ಲರೂ ಸೇರಿ ಆಚರಣೆ ಮಾಡಬೇಕು ಎಂಬ ಕಾರಣಕ್ಕೆ ಸರ್ಕಾರವೇ ಜಯಂತಿಗಳನ್ನು ಆಚರಿಸುತ್ತಿದೆ. ದಾರ್ಶನಿಕರು ಒಂದು ಜಾತಿಗಲ್ಲ, ಜಗತ್ತಿಗೆ ಸೇರಿದವರು ಎಂದು ಸಾರುವುದು ಇದರ ಉದ್ದೇಶ’ ಎಂದರು.

ಚಂದ್ರಕಾಂತ ಬಿಜ್ಜರಗಿ ಅವರಿಗೆ ‘ಕನಕಶ್ರೀ ಪ್ರಶಸ್ತಿ’ ಪ್ರದಾನ ಮಾಡಲಾಯಿತು ಅಕ್ಕಮಹಾದೇವಿ ಅವರಿಗೆ ‘ಕನಕ ಗೌರವ ಪ್ರಶಸ್ತಿ’, ರವೀಂದ್ರ ಲಂಜವಾಡಕರ್ ಅವರಿಗೆ ‘ಕನಕ ಯುವ ಪುರಸ್ಕಾರ’ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ಎಸ್.ತಂಗಡಗಿ, ಕಾಗಿನೆಲೆ ಗುರುಪೀಠದ ಸಿದ್ದರಾಮಾನಂದ ಸ್ವಾಮೀಜಿ, ಸಂತಕವಿ ಕನಕದಾಸ ಅಧ್ಯಯನ ಕೇಂದ್ರದ ಅಧ್ಯಕ್ಷ ಕಾ.ತ. ಚಿಕ್ಕಣ್ಣ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷ ಚನ್ನಪ್ಪಕಟ್ಟಿ, ಕರ್ನಾಟಕ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಎಂ.ಈರಣ್ಣ, ಇಲಾಖೆ ಕಾರ್ಯದರ್ಶಿ ಕುಮಾರ್ ಹಾಗೂ ನಿರ್ದೇಶಕಿ ಕೆ.ಎಂ. ಗಾಯಿತ್ರಿ ಉಪಸ್ಥಿತರಿದ್ದರು.

ಕನಕದಾಸರ ಜಯಂತಿ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರು ಚಂದ್ರಕಾಂತ ಬಿಜ್ಜರಗಿ ಅವರಿಗೆ ‘ಕನಕಶ್ರೀ ಪ್ರಶಸ್ತಿ’, ಅಕ್ಕಮಹಾದೇವಿ ಅವರಿಗೆ ‘ಕನಕ ಗೌರವ ಪ್ರಶಸ್ತಿ’, ರವೀಂದ್ರ ಲಂಜವಾಡಕರ್ ಅವರಿಗೆ ‘ಕನಕ ಯುವ ಪುರಸ್ಕಾರ’ ನೀಡಿ ಗೌರವಿಸಿದರು. ಸಚಿವ ಶಿವರಾಜ ತಂಗಡಗಿ, ಸಿದ್ದರಾಮಾನಂದ ಸ್ವಾಮೀಜಿ ಪಾಲ್ಗೊಂಡಿದ್ದರು

‘ಸಿದ್ದರಾಮಯ್ಯ ತಂಟೆಗೆ ಬಂದರೆ ಕಾಂಗ್ರೆಸ್ ಸ್ಮಶಾನಕ್ಕೆ’

ಪ್ರಜಾವಾಣಿ ವಾರ್ತೆ

ಕೋಲಾರ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರ್ಚಿಗೆ ಹೈಕಮಾಂಡ್ ಏನಾದರೂ ಕೈ ಹಾಕಿದರೆ ಕಾಂಗ್ರೆಸ್ ಸ್ಮಶಾನ ಸೇರುತ್ತದೆ. ಆ ಪಕ್ಷದ ಕಥೆ ಮುಗಿಯುತ್ತದೆ’ ಎಂದು ಮಾಜಿ ಸಚಿವ, ಬಿಜೆಪಿಯ ವರ್ತೂರು ಪ್ರಕಾಶ್ ಹೇಳಿದರು.

ವರ್ತೂರು ಪ್ರಕಾಶ್

ನಗರದಲ್ಲಿ ಶನಿವಾರ ನಡೆದ ಕನಕದಾಸ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘25 ಲಕ್ಷ ಕುರುಬರು ಕಾಂಗ್ರೆಸ್ ಸರ್ಕಾರಕ್ಕೆ ಘೇರಾವ್ ಹಾಕಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

‘ನಮಗೆ ಪಕ್ಷ ಮುಖ್ಯವಲ್ಲ; ಜಾತಿ ಮುಖ್ಯ. ಕೆಲ ದಿನಗಳಿಂದ ರಾಜ್ಯ ಸರ್ಕಾರದ ರಾಜಕೀಯ ಬೆಳವಣಿಗೆಗಳ ಬಗ್ಗೆ ನಾನಾ ಚರ್ಚೆಗಳಾಗುತ್ತಿವೆ. ಕಾಂಗ್ರೆಸ್‌ನ ಒಂದು ಗುಂಪು, ಬಿಜೆಪಿಯ ಒಂದು ಗುಂಪು ಈ ವಿಚಾರದ ಬಗ್ಗೆ ಮಾತನಾಡುತ್ತಿವೆ. ಏನಾದರೂ ಸಿದ್ದರಾಮಯ್ಯ ತಂಟೆಗೆ ಬಂದರೆ ಅವರ ಪರ ಅಹಿಂದ ವರ್ಗ ಒಗ್ಗಟ್ಟಾಗಿ ನಿಲ್ಲಲಿದೆ’ ಎಂದು ಅವರು ಹೇಳಿದರು.

‘ಸಿದ್ದರಾಮಯ್ಯ ಇಡೀ ಕುರುಬ ಸಮಾಜದ ಪ್ರಮುಖ ನಾಯಕ, ಅಹಿಂದ ವರ್ಗದ ಮುಖಂಡ. ಸಮಾಜ ಬೆಳೆಯಲು ಒಗ್ಗಟ್ಟು ಅಗತ್ಯ. ಒಗ್ಗಟ್ಟು ಇರುವ ಕಾರಣ ನಮ್ಮನ್ನು ಮುಟ್ಟಲು ಭಯಪಡುತ್ತಾರೆ. ಇಲ್ಲದಿದ್ದರೆ ಸಮಾಜ ಮುಗಿಸುತ್ತಾರೆ’ ಎಂದು ತಿಳಿಸಿದರು.

ಅಂಥ ಸಂದರ್ಭ ಬರಲ್ಲ ಬಿಡಿ: ಬೈರತಿ

ವರ್ತೂರು ಪ್ರಕಾಶ್ ಹೇಳಿಕೆಗೆ ಉತ್ತರಿಸಿದ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್, ‘ವರ್ತೂರು ಪ್ರಕಾಶ್ ಹೇಳಿದ ರೀತಿ ಸಂದರ್ಭ ಖಂಡಿತ ಬರುವುದಿಲ್ಲ. ನಮಗೆ ಹೈಕಮಾಂಡ್ ಇದೆ. ಮುಖ್ಯಮಂತ್ರಿ ಆಗಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಆಗಿ ಡಿ.ಕೆ.ಶಿವಕುಮಾರ್ ಇರುತ್ತಾರೆ. ಇವರಿಬ್ಬರು ಸಹೋದರರಂತೆ ಇದ್ದು ಯಾವುದೇ ಒಡಕು ಇಲ್ಲ’ ಎಂದು ಹೇಳಿದರು.

ಬೈರತಿ ಸುರೇಶ್

‘ರಾಜ್ಯದಲ್ಲಿ 50 ಲಕ್ಷ ಕುರುಬರು ಇದ್ದಾರೆ. ಅವರಿಗೆ ಮಾತ್ರವಲ್ಲ; ಎಲ್ಲಾ ಸಮುದಾಯದವರಿಗೂ ಸಿದ್ದರಾಮಯ್ಯ ನಾಯಕ. ಕಾಂಗ್ರೆಸ್‌ನಲ್ಲಿ ಎರಡು ಬಾರಿ ಮುಖ್ಯಮಂತ್ರಿ ಆಗುವುದು ಸುಲಭವಲ್ಲ. ಬಿಜೆಪಿ ರೀತಿ ಹೊಂದಾಣಿಕೆ ರಾಜಕಾರಣ ನಮ್ಮದಲ್ಲ. ಲಕೋಟೆಯಲ್ಲಿ ಮುಖ್ಯಮಂತ್ರಿ ಆದವರೂ ಅಲ್ಲ. 136 ಶಾಸಕರು ಹಾಗೂ ಹೈಕಮಾಂಡ್ ಆಶೀರ್ವಾದ ಅವರಿಗಿದೆ’ ಎಂದರು.

‘ಸಿದ್ದರಾಮಯ್ಯ ಅವರನ್ನು ಇಳಿಸಿಬಿಡುತ್ತಾರೆ, ಸರ್ಕಾರ ಬಿದ್ದು ಹೋಗುತ್ತದೆ ಎಂಬುದು ಸುಳ್ಳು. 2028ಕ್ಕೂ ಕಾಂಗ್ರೆಸ್ ಸರ್ಕಾರವೇ ಅಧಿಕಾರಕ್ಕೆ ಬರುತ್ತದೆ. ಈಗಿರುವ ಐದು ಗ್ಯಾರಂಟಿ ಜೊತೆಗೆ ಮತ್ತೆ ಐದು ಗ್ಯಾರಂಟಿ ನೀಡುತ್ತೇವೆ’ ಎಂದರು.

ಚಿತ್ರಾವಳಿ

ಮೈಸೂರಿನಲ್ಲಿ ಶನಿವಾರ ನಡೆದ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಹತ್ತನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಜಾನಪದ ಕಲಾವಿದ ಜಿ.ಎಂ. ಶಿವಪ್ರಸಾದ್, ರಂಗಕರ್ಮಿ ಎಚ್. ಜನಾರ್ಧನ ಹಾಗೂ ಸಂಗೀತ ವಿದ್ವಾಂಸ ಪ್ರೊ. ಬಿ.ಆರ್. ಶೇಷಾದ್ರಿ ಅಯ್ಯಂಗಾರ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು. ವಿ.ವಿ. ಕುಲಸಚಿವ ಪ್ರೊ. ಎಂ.ಜಿ. ಮಂಜುನಾಥ, ಕುಲಪತಿ ಪ್ರೊ. ನಾಗೇಶ್ ವಿ. ಬೆಟ್ಟಕೋಟೆ, ಕೇರಳ ಕಲಾಮಂಡಲಂ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ. ಅನಂತಕೃಷ್ಣನ್, ಸಂಗೀತ ವಿ.ವಿ. ಹಣಕಾಸು ಅಧಿಕಾರಿ ಸಿ.ಪಿ. ಸೌಮ್ಯಶ್ರೀ ಹಾಗೂ ಸಿಂಡಿಕೇಟ್ ಸದಸ್ಯೆ ದೀಪಿಕಾ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ನಗರದಲ್ಲಿ ಶನಿವಾರ ಏರ್ಪಡಿಸಿದ್ದ ರಾಜ್ಯ ಮಟ್ಟದ ಮಹಿಳಾ ಸಾಹಿತ್ಯ ಸಂಸ್ಕೃತಿ ಸಮಾವೇಶದಲ್ಲಿ ಸರ್ವಾಧ್ಯಕ್ಷೆ ಪುಷ್ಪಾ ಬಸವರಾಜ ಬಣಕಾರ್ ಅವರಿಗೆ ‘ಸಿದ್ಧಗಂಗಾಶ್ರೀ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ, ಸಂಸ್ಥೆಯ ಅಧ್ಯಕ್ಷ ರಾಮಲಿಂಗೇಶ್ವರ, ಲಯನ್ ಮಂಗಳಗೌರಿ, ಲೇಖಕ ವಾದಿರಾಜ್, ಅಂಬುಜಾ ಪ್ರಕಾಶ್, ಗಾಯಕಿ ಗೌರಮ್ಮ ಭಾಗವಹಿಸಿದ್ದರು

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ಜನ್ಮದಿನದ ಅಂಗವಾಗಿ ಪಕ್ಷದ ಒಬಿಸಿ ಮೋರ್ಚಾ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಬೆಂಗಳೂರಿನಲ್ಲಿ ಶುಭಾಶಯ ಕೋರಿದರು. ಪದಾಧಿಕಾರಿ ಎ.ಎಸ್. ವೆಂಕಟೇಶ್ ಜೊತೆಗಿದ್ದರು

ಗುಂಡಿ ಬಿದ್ದ ರಸ್ತೆಗಳನ್ನು ಗುರುತಿಸಿ, ಸರ್ಕಾರದ ಗಮನ ಸೆಳೆಯಲು ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು. ಶಾಸಕರಾದ ಮುನಿರತ್ನ, ಎಸ್.ಸುರೇಶ್ ಕುಮಾರ್ ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು

ಬೆಂಗಳೂರು ರೇಸ್

ಆಕ್ಟುವ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಸಿಟಿ ಪೋಲಿಸ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಆಕ್ಟುವ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಆರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ರೋಸಲಿನ್ 5, ಕೇಜಿಂಗ್ 4, ಡಿವೊ 1
2ನೇ ರೇಸ್: ಲೆಜೆಂಡರಿ ಇಂಪ್ಯಾಕ್ಟ್ 2, ಎಸ್ಟೆಫಾನಿಯಾ 4, ಫ್ಲೆಮಿಂಗೊ ಡ್ರೀಮ್ 1
3ನೇ ರೇಸ್: ಈಗಲ್ ಐಯ್ 1, ಕ್ವಾಂತೆ 2, ಗ್ಲೋರಿಯಸ್ ಸ್ಟ್ರೈಡ್ಸ್ 3
4ನೇ ರೇಸ್: ಲಕ್ಸ್ ಈಟರ್ನಾ 7, ಡಿಸಿಪಲ್ 1, ಕನೆಕ್ಟಿಂಗ್ ಡಾಟ್ಸ್ 3
5ನೇ ರೇಸ್: ಪೋಲ್ ಸ್ಟಾರ್ 3, ರನ್ ಫಾರ್ ದಿ ಸನ್ 7, ಸೀ ದಿ ಲೈಟ್ 6
6ನೇ ರೇಸ್: ಆಕ್ಟುವ್ 2, ಅಗ್ರೆಡಾರ್ 1, ವ್ಯಾಲಿಯಂಟ್ ಸ್ಟ್ರೀಮ್ 6
7ನೇ ರೇಸ್: ಎಫಿಕೆಸಿ 12, ಮಾಂಟೆರಿಯೊ 6, ವಿಕ್ಟೋರಿಯಾ ದೊರೆಸಾನಿ 4
8ನೇ ರೇಸ್: ಮಿಸ್ಟರ್ ಬ್ರೌನ್ 8, ಡಿಕ್ಟೇಟರ್ 1, ಹಾನೆಸ್ಟ್ ಡಿಸೈರ್ 7

ಉತ್ತಮ ಬೆಟ್: ರೋಸಲಿನ್

ಜಾಕ್‌ಪಾಟ್‌ಗೆ	1ನೇ ಟ್ರಬಲ್	2ನೇ ಟ್ರಬಲ್
4,5,6,7,8	3,4,5	6,7,8

‘ತಿಂಗಳಿಗೆ ₹18 ಸಾವಿರ ಬೇಕು’

ಸುರಂಗ ರಸ್ತೆ ಯೋಜನೆಗೆ ಮಹಾನಗರ ಯೋಜನಾ ಸಮಿತಿ, ಬಿಎಂಎಲ್‌ಟಿಎ ಅಥವಾ ಪರಿಸರ ಇಲಾಖೆಯಿಂದ ಯಾವುದೇ ಅನುಮೋದನೆ ಪಡೆದಿಲ್ಲ. ಸಮಗ್ರ ಸಂಚಾರ ಯೋಜನೆಯಲ್ಲಿ (ಸಿಎಂಪಿ) ಇದು ಇಲ್ಲ. ನಗರ ಭೂಸಾರಿಗೆ ನಿರ್ದೇಶನಾಲಯವು (ಡಿಯುಎಲ್‌ಟಿ) ‘ಈ ಯೋಜನೆಯು ಅಪೇಕ್ಷಣೀಯವಲ್ಲ’ ಎಂದು ಹೇಳಿದೆ. ಎಷ್ಟು ಜನರು ಸುರಂಗ ರಸ್ತೆ ಬಳಸಲಿದ್ದಾರೆ ಎಂದು ಅಂದಾಜಿಸಲು ಯಾವುದೇ ಅಧ್ಯಯನ ಮಾಡಿಲ್ಲ. ಸುರಂಗ ರಸ್ತೆ ‘ಕಾರುಗಳಿಗೆ ಮಾತ್ರ’ ಎಂದು ಡಿಪಿಆರ್ ಹೇಳಿದೆ. ಈಗ ನಗರದಲ್ಲಿ ಕೇವಲ 25 ಲಕ್ಷ ಕಾರುಗಳಿವೆ. ಅವರಲ್ಲಿ ಎಷ್ಟು ಮಂದಿ 16 ಕಿ.ಮೀ. ಪ್ರಯಾಣಿಸಲು ಪ್ರತಿದಿನ ಸುಮಾರು ₹600 ಪಾವತಿಸಲು ಶಕ್ತರು? ಅವರು ಈ ಮಾರ್ಗವನ್ನು ನಿಯಮಿತವಾಗಿ ಬಳಸುತ್ತಿದ್ದರೆ ತಿಂಗಳಿಗೆ ₹18 ಸಾವಿರ ಬೇಕಾಗುತ್ತದೆ. ಎಷ್ಟು ಜನ ಇಷ್ಟು ಮೊತ್ತವನ್ನು ಪಾವತಿಸಲು ಸಾಧ್ಯ?

ಕಾತ್ಯಾಯಿನಿ ಚಾಮರಾಜ್, ಸಿವಿಕ್–ಬೆಂಗಳೂರು ಸಂಸ್ಥೆಯ ಕಾರ್ಯಕಾರಿ ಟ್ರಸ್ಟಿ

‘ಮಂಕುಬೂದಿ ಎರಚುವ ಯೋಜನೆ’

ಸಾಲ ಮಾಡಿ ಸುರಂಗ ನಿರ್ಮಿಸಿ, ಶುಲ್ಕ ವಿಧಿಸುವುದರಿಂದ ಯಾರಿಗೆ ಉಪಯೋಗ? ಯಾರೋ ಕೆಲವರಿಗೆ ಅನುಕೂಲ ಮಾಡಿಕೊಡಲು ಜನಸಾಮಾನ್ಯರ ತೆರಿಗೆ ಹಣ ಬಳಸಿಕೊಳ್ಳುವುದು ಯಾವ ನ್ಯಾಯ? ಬೆಂಗಳೂರಿನ ಭೂಗರ್ಭದಲ್ಲಿ ಅತ್ಯಂತ ಗಟ್ಟಿಮುಟ್ಟಾದ ಬಂಡೆಗಳಿವೆ. ಇಂತಹ ‘ಹಾರ್ಡ್ ರಾಕ್’ ಕೊರೆಯಲು ಬಿಲ್ ಹೆಚ್ಚು ಮಾಡಿಕೊಳ್ಳುತ್ತಾರೆ. ಇದರಿಂದ ಸಮಸ್ಯೆಗಳೇ ಹೆಚ್ಚು. ನಗರ ತಜ್ಞನಾಗಿ ನಾನು ಸರ್ಕಾರಗಳ ಮಟ್ಟದಲ್ಲಿ ಹಲವು ಯೋಜನೆಗಳಿಗೆ ಸಲಹೆಗಳನ್ನೂ ನೀಡಿದ್ದೇನೆ. ಈ ಸುರಂಗ ರಸ್ತೆ ಜನರಿಗೆ ಮಂಕುಬೂದಿ ಎರಚುವ ಅತ್ಯಂತ ದುಬಾರಿ ಯೋಜನೆಯಷ್ಟೇ.

ಪ್ರೊ.ಎಂ.ಎನ್.ಶ್ರೀಹರಿ, ಸಂಚಾರ ತಜ್ಞ

‘ಕದ್ದುಮುಚ್ಚಿ ಅನುಷ್ಠಾನ’

ಸುರಂಗ ರಸ್ತೆಯಿಂದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತೇವೆ ಎಂದು ಹೇಳುವವರು ಯಾವ ರೀತಿ ಪರಿಹಾರ ಸಿಗಲಿದೆ ಎಂಬುದನ್ನು ಯಾರಿಗೂ ತಿಳಿಸಿಲ್ಲ. ಬೃಹತ್ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮುನ್ನ ನಾಗರಿಕರು, ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ಪರಿಸರ ಹಾಗೂ ನಾಗರಿಕರ ಆಸ್ತಿ ಮೇಲಾಗುವ ಪರಿಣಾಮವನ್ನು ಹೇಗೆ ನಿಭಾಯಿಸಲಾಗುತ್ತದೆ ಎಂಬುದನ್ನೂ ಹೇಳಿಲ್ಲ. ಸುರಂಗ ರಸ್ತೆ ಯೋಜನೆ ಬಗ್ಗೆ ನಾಗರಿಕರಿಗೆ ಮಾಹಿತಿ ನೀಡದೆ, ಎಲ್ಲವನ್ನೂ ಕದ್ದುಮುಚ್ಚಿ ಮಾಡಲಾಗುತ್ತಿದೆ. ಸುರಂಗ ರಸ್ತೆ ಲಾಲ್‌ಬಾಗ್‌ಗೆ ಧಕ್ಕೆಯನ್ನುಂಟು ಮಾಡಲಿದೆ. ಲಾಲ್‌ಬಾಗ್, ಸ್ಯಾಂಕಿ ಕೆರೆ, ಹೆಬ್ಬಾಳ ಕೆರೆಗೆ ಮಾತ್ರವಲ್ಲ, ನಗರದ ಎಲ್ಲ ಭಾಗಗಳಿಗೂ ತೊಂದರೆಯಾಗಲಿದೆ

ಡಿ.ಟಿ. ದೇವರೆ, ಪರಿಸರ ಕಾರ್ಯಕರ್ತ

‘ಹಸಿರುನಾಶದ ಅಭಿವೃದ್ಧಿ ಬೇಡ’

ಯೋಜನೆ ಬಗ್ಗೆ ಯಾರೂ ಸವಿವರವಾದ ಮಾಹಿತಿಯನ್ನು ಸಾರ್ವಜನಿಕವಾಗಿ ನೀಡಿಲ್ಲ. ಮಾಹಿತಿ ನೀಡದೆ ಮುಚ್ಚಿಡುವಂತಹದ್ದು ಏನಿದೆ ಎಂಬುದೇ ಹಲವಾರು ಗೊಂದಲಕ್ಕೆ ಕಾರಣ. ಲಾಲ್‌ಬಾಗ್‌ನಲ್ಲಿ ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಬಂಡೆ ಬಗ್ಗೆ ಹಲವು ರೀತಿಯ ವ್ಯಾಖ್ಯಾನಗಳಿವೆ. ಇದಕ್ಕೆ ಹೊಂದಿಕೊಂಡಂತೆಯೇ ಮೂರ್ನಾಲ್ಕು ಜಲಮೂಲಗಳಿವೆ. ಸುರಂಗ ರಸ್ತೆ ಇವುಗಳ ಕೆಳಗೆ ನಿರ್ಮಾಣವಾಗುವುದರಿಂದ ತೊಂದರೆಯಾಗುವುದು ನಿಶ್ಚಿತ. ಇನ್ನು ಮೇಲ್ಭಾಗದಲ್ಲಿ ಕೆಲವು ಎಕರೆಯ ಲಾಲ್‌ಬಾಗ್ ಪ್ರದೇಶದಲ್ಲಿ ‘ಶಾಫ್ಟ್’ ನಿರ್ಮಾಣವಾದರೆ ವಾಹನ ದಟ್ಟಣೆಯ ಜೊತೆಗೆ ಜನದಟ್ಟಣೆಯೂ ಉಂಟಾಗುತ್ತದೆ

ವಿಜಯ್ ನಿಶಾಂತ್, ಪರಿಸರ ಕಾರ್ಯಕರ್ತ

ಜಲಮೂಲಗಳಿಗೆ ಧಕ್ಕೆ ಬೇರೆಡೆ ದಟ್ಟಣೆ ಉಲ್ಬಣ

ಉದ್ದೇಶಿತ ಸುರಂಗ ಮಾರ್ಗವು ಪ್ರತಿ ಕಾರಿಡಾರ್‌ನಲ್ಲಿ ಎರಡು ಸುರಂಗಗಳನ್ನು ಒಳಗೊಂಡಿರಲಿದೆ. ಪ್ರತಿ ಸುರಂಗದಲ್ಲೂ ಮೂರು ಪಥಗಳಂತೆ, ಒಟ್ಟು ಆರು ಪಥಗಳ ಸುರಂಗ ಮಾರ್ಗ ಜಾಲವಿದು. ಆದರೆ ಸುರಂಗ ಮಾರ್ಗದ ಪ್ರವೇಶ ಮತ್ತು ನಿರ್ಗಮನ ರ್‍ಯಾಂಪ್ ಬಳಿ ಸಂಚಾರ ದಟ್ಟಣೆ ವಿಠೀತವಾಗಲಿದೆ ಎಂಬುದು ತಜ್ಞರ ಆಕ್ಷೇಪ



ಪ್ರ.ವಾ ಗ್ರಾಫಿಕ್ಸ್: ಕಣಕಾಲಮಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುರಂಗ ರಸ್ತೆ ನಿರ್ಮಾಣ ಯೋಜನೆ ರೂಪಿಸುವ ಸಂದರ್ಭದಲ್ಲಿ ಪರಿಸರದ ಮೇಲಾಗುವ ಪರಿಣಾಮದ ಅಧ್ಯಯನ (ಇಐಎ) ಈವರೆಗೆ ಆಗಿಲ್ಲ.

ಲಾಲ್‌ಬಾಗ್ ಉದ್ಯಾನ, ಸ್ಯಾಂಕಿ ಕೆರೆ, ಹೆಬ್ಬಾಳ ಕೆರೆಯ ಮೂಲ ಸೇರಿದಂತೆ ಜೀವವೈವಿಧ್ಯಕ್ಕೆ ಸುರಂಗ ಕೊರೆತದಿಂದ ಧಕ್ಕೆಯಾಗಲಿದೆ.

ನಗರದ ವಾತಾವರಣಕ್ಕೆ ಹಸಿರ ಹಾಸು ಹೊಂದಿರುವ ಲಾಲ್‌ಬಾಗ್ ಕೆಳಗೆ ಹತ್ತು ಸುರಂಗ ರಸ್ತೆಗಳು ಹಾದುಹೋಗುವ ಜೊತೆಗೆ, ಲಾಲ್‌ಬಾಗ್‌ನೊಳಗಿನ ಎಂಟು ಎಕರೆ ಪ್ರದೇಶದಲ್ಲಿ ವಾಣಿಜ್ಯ ಸಂಕೀರ್ಣ, ಬಸ್–ಟ್ಯಾಕ್ಸಿ ನಿಲ್ದಾಣ ಹಾಗೂ ಹೈಟೆಕ್ ಮಾಲ್‌ಗಳ ನಿರ್ಮಾಣಕ್ಕೆ ಎಂಟು ಎಕರೆ ಭೂಮಿಯನ್ನು ಬಳಸಿಕೊಳ್ಳಲು ಡಿಪಿಆರ್‌ನಲ್ಲಿ ಉಲ್ಲೇಖಿಸಿರುವುದಕ್ಕೆ ಪರಿಸರ ಕಾರ್ಯಕರ್ತರು ತೀವ್ರ ವಿರೋಧ ವ್ಯಕ್ತ ಪಡಿಸಿದ್ದಾರೆ.

ಲಾಲ್‌ಬಾಗ್ ಸಿದ್ದಾಪುರ ಮುಖ್ಯರಸ್ತೆಯಲ್ಲಿ ಲಾಲ್‌ಬಾಗ್ ದಕ್ಷಿಣ ಗೇಟ್ (ಸಿದ್ದಾಪುರ ಗೇಟ್) ಪ್ರವೇಶದ್ವಾರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಸುರಂಗ ಮಾರ್ಗದ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶ ಕೊಡಲಾಗುತ್ತದೆ.

ಅಂತಿಮ ಡಿಪಿಆರ್‌ನಲ್ಲಿ ಇಲ್ಲದ ಹೊಸ ನಿರ್ಗಮನ ಪಥ ಸ್ಯಾಂಕಿ ಕೆರೆಯ ಸಮೀಪ ತೆರೆದುಕೊಳ್ಳುವುದರಿಂದ ಈಗಾಗಲೇ ಒತ್ತುವರಿಯಿಂದ ಬಳಲುತ್ತಿರುವ ಕೆರೆಗೆ ಕಂಟಕ ಎದುರಾಗಿದೆ.

ಹೆಬ್ಬಾಳ – ಎಸ್ಟೀಮ್ ಮಾಲ್ ಜಂಕ್ಷನ್‌ನಲ್ಲಿ ಸುರಂಗ ರಸ್ತೆಯ ಪ್ರವೇಶ– ನಿರ್ಗಮನ ಟ್ಯೂಬ್‌ಗಳಿರಲಿವೆ. ಅಂತಿಮ ಡಿಪಿಆರ್‌ನಲ್ಲಿರುವ ಈ ಜಂಕ್ಷನ್‌ನಲ್ಲಿ ಶಾಫ್ಟ್ ನಿರ್ಮಾಣ ಪ್ರದೇಶದಲ್ಲಿ ಹೆಚ್ಚು ಸ್ಥಳವನ್ನು ಪಡೆದುಕೊಳ್ಳಲು ಉದ್ದೇಶಿಸಿರುವುದರಿಂದ ಹೆಬ್ಬಾಳ ಕೆರೆ ಅಂಗಳ ಹಾಗೂ ರಾಜಕಾಲುವೆ ಮಾರ್ಗವನ್ನು ಬದಲಿಸಲಾಗುತ್ತಿದೆ. ಇದಕ್ಕೆ ಹೆಚ್ಚಿನ ಆಕ್ಷೇಪ ವ್ಯಕ್ತವಾಗಿದೆ.

ಹೆಬ್ಬಾಳ ಕೆರೆ ಹಾಗೂ ಸ್ಯಾಂಕಿ ಕೆರೆಯ ಬಫರ್ ವಲಯದಲ್ಲಿ ಟನಲ್ ರ್‍ಯಾಂಪ್‌ಗಳು ನಿರ್ಮಿಸಲು ಯೋಜಿಸಲಾಗಿದೆ. ಆದರೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (ಕೆಟಿಸಿಡಿಎ) ಬಿಬಿಎಂಪಿ, ಜಿಬಿಎ, ಬಿ–ಸ್ಮೈಲ್ ಅಥವಾ ಡಿಪಿಆರ್ ತಯಾರಿಸಿದ ಸಂಸ್ಥೆ ಅನುಮತಿಯನ್ನು ಪಡೆದಿಲ್ಲದಿರುವುದು ಪ್ರಮುಖ ಲೋಪವೆಂದೇ ಪರಿಗಣಿಸಲಾಗಿದೆ.

‘ಅಂತರ್ಜಲ, ಜಲಮೂಲಗಳನ್ನು ಯಾವುದೇ ವರದಿಯಲ್ಲೂ ಪರಿಗಣಿಸಿಲ್ಲ. ಇದು ಸುರಂಗ ರಸ್ತೆ ತಂದೊಡ್ಡುವ ಅತ್ಯಧಿಕ ಅಪಾಯವಾಗಿದೆ. ಜಲಮೂಲಗಳನ್ನು ಗುರುತಿಸಲು ‘ಎಲೆಕ್ಟ್ರಿಕಲ್ ರೆಸಿಸ್ಟಿವಿಟಿ ಟೊಮೊಗ್ರಫಿ’ಯನ್ನು (ಇಆರ್‌ಟಿ) ಏಕೆ ಬಳಸಿಲ್ಲ’ ಎಂದು ರಾಜ್ಯ ಸರ್ಕಾರ ರಚಿಸಿರುವ ‘ತಜ್ಞರ ಸಮಿತಿ’ಯ ಪ್ರಶ್ನೆಗೆ ಡಿಪಿಆರ್ ತಯಾರಿಸುವ ವರಲ್ಲಿ ಉತ್ತರವಿಲ್ಲ.



16.74 ಕಿ.ಮೀ ಸುರಂಗ ರಸ್ತೆ ಸಿಲ್ಕ್ ಬೋರ್ಡ್ ಮತ್ತು ಹೆಬ್ಬಾಳವನ್ನು ಸಂಪರ್ಕಿಸುತ್ತದೆ ಎಂದು ಸರ್ಕಾರ ಹೇಳುತ್ತಿದ್ದರೂ, ದಕ್ಷಿಣ ಕಾರಿಡಾರ್ ಸಿಲ್ಕ್ ಬೋರ್ಡ್ ಮೇಲ್ಸೇತುವೆಗಿಂತ ಸುಮಾರು ಒಂದೂವರೆ ಕಿಲೋ ಮೀಟರ್ ಹಿಂದೆಯೇ ಮುಗಿಯಲಿದೆ. ಇದರಿಂದ ಈ ಭಾಗದಲ್ಲಿ ವಾಹನ ದಟ್ಟಣೆ ಕಡಿಮೆಯಾಗದೆ, ಮತ್ತಷ್ಟು ಹೆಚ್ಚಾಗುವ ಸಾಧ್ಯತೆ ಇದೆ. ಹೊಸೂರು ರಸ್ತೆ ಮತ್ತು ಸರ್ಜಾಪುರ ರಸ್ತೆಯಲ್ಲಿ ಪ್ರತ್ಯೇಕ ಪ್ರವೇಶ ಮತ್ತು ನಿರ್ಗಮನ ರ್‍ಯಾಂಪ್‌ಗಳನ್ನು ನಿರ್ಮಿಸುವ ಯೋಜನೆ ಇದೆ. ಹೊಸೂರು ರಸ್ತೆಯಲ್ಲಿನ ನಿರ್ಗಮನ ರ್‍ಯಾಂಪ್ ಹೆಚ್ಚಿನ ವಾಹನ ದಟ್ಟಣೆಯಾಗುವ ನಿರೀಕ್ಷೆ ಇದ್ದು, ಈಗಾಗಲೇ ಅತ್ಯಂತ ದಟ್ಟಣೆಯ ಮಡಿವಾಳ ಮಾರುಕಟ್ಟೆ ಬಳಿ ಅಲೈನ್‌ಮೆಂಟ್ ಸೇರಿಕೊಳ್ಳಲಿದೆ. ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ 10.33 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರ ಯೋಜಿಸಿದೆ.

ಲಾಲ್‌ಬಾಗ್ ಉದ್ಯಾನದ ಸುಮಾರು ಆರು ಎಕರೆ ಪ್ರದೇಶದಲ್ಲಿ ಸುರಂಗ ಕೊರೆಯುವ ಯಂತ್ರ (ಟಿಬಿಎಂ) ಕಾರ್ಯಾಚರಣೆ ನಡೆಸಲಿದ್ದು, ಅದರ ನಂತರ ಆ ಪ್ರದೇಶದಲ್ಲಿ ಶಾಫ್ಟ್ ನಿರ್ಮಿಸಲಾಗುತ್ತದೆ. ಬೆಂಗಳೂರಿನ ಅತಿದೊಡ್ಡ ಪಾರಂಪರಿಕ ತಾಣ ಹಾಗೂ ಪರಿಸರ ಸೂಕ್ಷ್ಮ ಪ್ರದೇಶವಾದ ಲಾಲ್‌ಬಾಗ್‌ನಡಿ ಒಟ್ಟು 10 ಪಥಗಳೂ ಸಾಗಲಿವೆ. ಅಶೋಕ ಪಿಲ್ಲರ್ ವೃತ್ತದಿಂದ ಎರಡು ಪಥಗಳ ಪ್ರವೇಶ ರ್‍ಯಾಂಪ್ ಆರಂಭವಾಗಿ, ಲಾಲ್‌ಬಾಗ್‌ನ ಕಾಂಪೌಂಡ್ ಮೂಲಕ ಸಾಗಿ, ಹೆಬ್ಬಾಳಕ್ಕೆ ಸಂಪರ್ಕಿಸುವ ಆರು–ಪಥಗಳ ಸುರಂಗ ರಸ್ತೆ ಸೇರಿಕೊಳ್ಳಲಿದೆ. ಮತ್ತೊಂದು, 1.1 ಕಿ.ಮೀ ಉದ್ದ ಎರಡು ಪಥಗಳ ರ್‍ಯಾಂಪ್, ಮೂರು ಶತಕೋಟಿ ಹಳೆಯ ಬಂಡೆಯ ಕೆಳಭಾಗದಿಂದ ಸಾಗಿ, ಈಗಾಗಲೇ ಸಾಕಷ್ಟು ವಾಹನದಟ್ಟಣೆ ಇರುವ ಸಿದ್ದಾಪುರ ರಸ್ತೆಯಲ್ಲಿರುವ ಮರೀಗೌಡ ಜಂಕ್ಷನ್‌ನಲ್ಲಿ ನಿರ್ಗಮನ ಹೊಂದಲಿದೆ. ತಜ್ಞರ ಸಮಿತಿ ಈ ವಿನ್ಯಾಸವನ್ನು ಮರುವಿಮರ್ಶಿಸಲು ಸೂಚಿಸಿದ್ದರೂ, ಯೋಜನೆ ಇನ್ನೂ ಬದಲಾಗಿಲ್ಲ. ಈ ಭಾಗದಲ್ಲಿ ಹಲವು ವರ್ಷಗಳಿಂದಿರುವ, ಪಶ್ಚಿಮ ಘಟ್ಟ ಮೂಲದ ವಿಶೇಷ ಪ್ರಭೇಧದ 50ರಿಂದ 100 ಮರಗಳಿಗೆ ಕತ್ತರಿ ಹಾಕುವ ಯೋಜನೆಯಿದೆ.

ವಿ–ವಾದ ತರಂಗ

ಒಂದನೇ ಪುಟದಿಂದ...

‘ಮಣ್ಣು ಪರೀಕ್ಷೆ ಮಾಡದೇ ಭೂಗರ್ಭವನ್ನೇ ಸೀಳುವ ಯೋಜನೆ ಇದಾಗಿದೆ. ಅಂತರ್ಜಲದ ಬುಡವನ್ನೇ ಕೊರೆಯುವ ಸುರಂಗ, ಕೆರೆ, ಉದ್ಯಾನಗಳನ್ನೂ ಆಪೋಶನ ತೆಗೆದುಕೊಳ್ಳಲಿದೆ. ಭೂವೈಜ್ಞಾನಿಕ ಪರೀಕ್ಷೆ, ಪರಿಸರಸೂಕ್ಷ್ಮಗಳ ವಿಷಯದಲ್ಲಿ ಗೊಂದಲ ಹುಟ್ಟು ಹಾಕಿರುವ ಸುರಂಗ ರಸ್ತೆ ಯೋಜನೆ, ಸುಗಮ ಸಂಚಾರದ ತರಂಗಗಳನ್ನು ಮೀಟುವುದೇ’ ಎಂಬ ಪ್ರಶ್ನೆಯನ್ನು ಯೋಜನೆ ವಿರೋಧಿಸುತ್ತಿರುವ ಪರಿಸರವಾದಿಗಳು, ಸಾಮಾಜಿಕ ಕಾರ್ಯಕರ್ತರು ಸರ್ಕಾರದ ಮುಂದಿಟ್ಟಿದ್ದಾರೆ.

ಭೂಗರ್ಭದಲ್ಲಿ ಕೊರೆಯುವ ಸುರಂಗ ರಸ್ತೆ ಯೋಜನೆಗೆ ಮೊದಲು ಮಾಡಬೇಕಾದ ಕೆಲಸವೆಂದರೆ ಭೂತಳದ ಮಣ್ಣಿನ ಪದರ ಹಾಗೂ ಶಿಲಾ ಸಾಮರ್ಥ್ಯದ ಅಧ್ಯಯನ. ಈ ಬಗ್ಗೆ ಆಳ ತಿಳಿವಳಿಕೆ ಇಲ್ಲದ ಎಂಜಿನಿಯರ್‌ಗಳು ಅರ್ಧ ಶತಕೋಟಿಗೂ ಹೆಚ್ಚು ವೆಚ್ಚದ ಸುರಂಗ ರಸ್ತೆಯ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರು ಮಾಡಿ, ಟೆಂಡರ್ ಅನ್ನೂ ಆಹ್ವಾನಿಸಿದ್ದಾರೆ. ಅಷ್ಟೇ ಅಲ್ಲ, ಭೂಮಿ ಮೇಲ್ಭಾಗ ಹಾಗೂ ಅದರ ಒಳಗೆ ನಡೆಯುವ ಸುರಂಗ ರಸ್ತೆಯ ಕಾಮಗಾರಿಯಿಂದ ಪರಿಸರದ ಮೇಲಾಗುವ ಪರಿಣಾಮದ ಅಧ್ಯಯನವನ್ನೂ (ಇಐಎ) ಮಾಡದೆ ಯೋಜನೆ ಮಾಡುತ್ತೇವೆ ಎನ್ನುತ್ತಿರುವುದು ಜನರನ್ನು ಮೂರ್ಖರನ್ನಾಗಿಸುವ ಕ್ರಮ ಎಂಬುದು ಹೋರಾಟಗಾರರ ವಾದ.

ಸುರಂಗ ರಸ್ತೆಯ ಸಂಪೂರ್ಣ ವಿನ್ಯಾಸ, ಯಾವ ರೀತಿಯ ಅನುಕೂಲಗಳಾಗುತ್ತವೆ, ಯಾವುದರಿಂದ ತೊಂದರೆ ಇದೆ ಅಥವಾ ಸಮಸ್ಯೆ ನಿವಾರಿಸಲಾಗುತ್ತದೆ ಎಂಬುದೂ ಸೇರಿದಂತೆ ಯಾವ ಮಾಹಿತಿಗಳನ್ನೂ ಸಾರ್ವಜನಿಕವಾಗಿ ಹಂಚಿಕೊಂಡಿಲ್ಲ. ಸುರಂಗ ರಸ್ತೆ ಯೋಜನೆ ನಿರ್ವಹಣೆ ಜವಾಬ್ದಾರಿ ಹೊತ್ತಿರುವ ಬೆಂಗಳೂರು ಸ್ಮಾರ್ಟ್ ಇನ್‌ಫ್ರಾಸ್ಟ್ರಕ್ಚರ್ (ಬಿ–ಸ್ಮೈಲ್), ಅಂತರರಾಷ್ಟ್ರೀಯ ಮಟ್ಟದಲ್ಲಿ ಯೋಜನೆ ರೂಪಿಸಲಾಗುತ್ತದೆ ಎಂದು ಹೇಳಿಕೊಂಡಿದ್ದರೂ, ತಳಮಟ್ಟದಲ್ಲಿ ಆಗಬೇಕಾದಂತಹ ಕೆಲಸಗಳನ್ನೇ ಮಾಡಿಲ್ಲ. ಯೋಜನೆಯನ್ನು ಅಂತಿಮಗೊಳಿಸುವ ಮುನ್ನ ತಜ್ಞರ ಸಲಹೆ, ಸಾರ್ವಜನಿಕರ ಅಭಿಪ್ರಾಯವನ್ನೂ ಪಡೆದಿಲ್ಲ ಎನ್ನುತ್ತಾರೆ ಅವರು.

ಐದಾರು ಕೋಟಿ ರೂಪಾಯಿ ವೆಚ್ಚ ಮಾಡಿ ಡಿಪಿಆರ್ ಅನ್ನೂ ತಯಾರಿಸಲಾಗಿದೆ. ಬೆಂಗಳೂರಿನಲ್ಲಿ ನಿರ್ಮಾಣವಾಗಲಿರುವ ಸುರಂಗ ರಸ್ತೆಯ ಡಿಪಿಆರ್‌ನಲ್ಲಿ ಮುಂಬೈನ ಪ್ರದೇಶಗಳು ಸೇರಿಕೊಂಡಿದ್ದವು. ಬೇರೊಂದು ಯೋಜನೆಯ ವಿವರಗಳನ್ನು ‘ಕಟ್ ಆ್ಯಂಡ್ ಪೇಸ್ಟ್’ ಮಾಡಿದ್ದರಿಂದ ಇಂತಹ ಪ್ರಮಾದವಾಗಿತ್ತು. ಇದಕ್ಕೆ ಆಕ್ಷೇಪ ವ್ಯಕ್ತವಾಯಿತು. ಡಿಪಿಆರ್ ಸಿದ್ಧಪಡಿಸಿದವರಿಗೆ ಹಿಂದಿನ ಬಿಬಿಎಂಪಿ ಆಯುಕ್ತರು ₹5 ಲಕ್ಷ ದಂಡವನ್ನಷ್ಟೇ ವಿಧಿಸಿದರು. ಜನಾಕ್ರೋಶ ಹೆಚ್ಚಾದಾಗ ಸರ್ಕಾರ, ಡಿಪಿಆರ್ ಅನ್ನು ಪರಿಶೀಲಿಸಲು ‘ತಜ್ಞರ ಸಮಿತಿ’ಯನ್ನು ರಚಿಸಿತು. ಮಣ್ಣಿನ ಪರೀಕ್ಷೆ, ಭೂವೈಜ್ಞಾನಿಕ ಪರೀಕ್ಷೆಗಳೇ ಆಗಿಲ್ಲ ಎಂದು ಆ ತಜ್ಞರ ಸಮಿತಿಯೇ ಹೇಳಿದೆ.

ಬೆಂಗಳೂರಿನ ‘ಕಿರೀಟ’ದಂತಿರುವ ಲಾಲ್‌ಬಾಗ್‌ನಲ್ಲಿ ಆರು ಎಕರೆ ಜಾಗವನ್ನು ಸುರಂಗ ರಸ್ತೆ ಕಬಳಿಸಲಿರುವುದು ಪರಿಸರ ಕಾರ್ಯಕರ್ತರನ್ನು ಕೆರಳಿಸಿದೆ. ಸ್ಯಾಂಕಿ ಕೆರೆಯ ದಡದಲ್ಲಿ ಸುರಂಗ ರಸ್ತೆಯ ರ್‍ಯಾಂಪ್ ಹಾಗೂ ಹೆಬ್ಬಾಳ ಕೆರೆಯ ದಡದಲ್ಲಿ ರಾಜಕಾಲುವೆಯನ್ನೇ ಪಕ್ಕಕ್ಕೆ ಸರಿಸಿ ನಿರ್ಮಿಸಲಾಗುವ ‘ಎಕ್ಸಿಟ್ ರ್‍ಯಾಂಪ್’ಗಳ ನಿರ್ಮಾಣದ ಮಾಹಿತಿಗಳು ಹೋರಾಟಗಾರರ ಕೋಪಕ್ಕೆ ಕಾರಣ.

‘ನಮ್ಮ ಮೆಟ್ರೊ’ ರೈಲುಗಳ ಸುರಂಗ ಮಾರ್ಗದ ಬಹುಪಾಲು ಹಾಲಿ ಇರುವ ರಸ್ತೆಯ ತಳಭಾಗದಲ್ಲಿ ಇದೆ. ಉದ್ದೇಶಿತ ಸುರಂಗ ರಸ್ತೆಯು ಹಾಲಿ ರಸ್ತೆಯ ಕೆಳಭಾಗದಲ್ಲಿ ಮಾತ್ರ ಸಾಗುವುದಿಲ್ಲ. ಮುಖ್ಯ ಟನಲ್‌ಗಳಿಂದ (ಎರಡು ಟ್ಯೂಬ್) ಪ್ರವೇಶ ಮತ್ತು ನಿರ್ಗಮನದ ರ್‍ಯಾಂಪ್‌ಗಳು ಸುಮಾರು ಒಂದೂವರೆ ಕಿಲೋ ಮೀಟರ್ ಸಾಗಿ ನೆಲಮಟ್ಟದ ರಸ್ತೆಯ ಜಂಕ್ಷನ್‌ಗಳಿಗೆ ಸಂಪರ್ಕ ಕಲ್ಪಿಸುತ್ತವೆ. ತಲಾ 45 ಮೀಟರ್ ಸುತ್ತಳತೆ ಇರುವ ಮುಖ್ಯವಾದ ಎರಡು ಟ್ಯೂಬ್‌ಗಳು ಭೂಮೇಲ್ಮೈನಿಂದ ಭೂಗರ್ಭದ 100 ಅಡಿ ಕೆಳಗೆ ಕಟ್ಟಡ, ಸಂಕೀರ್ಣ, ಅಪಾರ್ಟ್‌ಮೆಂಟ್ ಸೇರಿದಂತೆ ಬೃಹತ್ ನಿರ್ಮಾಣಗಳ ಕೆಳಗೇ ಹಾದುಹೋಗಲಿವೆ. ಇಷ್ಟು ದೊಡ್ಡ ಅಳತೆಯಲ್ಲಿ ಸುರಂಗ ಕೊರೆದಾಗ ಅದರ ಮೇಲಿನ ಕಟ್ಟಡಗಳಿಗೆ ಹಾನಿಯಾಗುವುದಲ್ಲದೆ, ಕನಿಷ್ಠ 300 ಅಡಿ ಆಳಕ್ಕೆ ಕೊರೆಯಲಾಗಿರುವ ಕೊಳವೆಬಾವಿಗಳಿಗೆ ಹರಿಯುವ ನೀರಿಗೆ ತಡೆ ಉಂಟು ಮಾಡಲಿದೆ. ಸುರಂಗ ರಸ್ತೆಗಾಗಿ ಕೊರೆಯುವ ಪ್ರಕ್ರಿಯೆಯು, ಅಂತರ್ಜಲದ ಹರಿವಿಗೆ ಅಡ್ಡಿ ಉಂಟು ಮಾಡುವ ಬಗ್ಗೆ ಅಧ್ಯಯನ ಮಾಡದೇ ಸುರಂಗ ರಸ್ತೆಯ ಡಿಪಿಆರ್ ತಯಾರಿಸಿರುವುದು ಸರಿಯಲ್ಲ ಎನ್ನುತ್ತಾರೆ ತಜ್ಞರು.





ಹೆಬ್ಬಾಳ ಮತ್ತು ಸಿಲ್ಕ್ ಬೋರ್ಡ್‌ನಿಂದ ಬರುವ ಎರಡು ನಿರ್ಗಮನ ರ್‍ಯಾಂಪ್‌ಗಳು ಶೇಷಾದ್ರಿ ರಸ್ತೆ, ಮಹಾರಾಣಿ ಕಾಲೇಜು ಕಡೆಗೆ ಸಂಪರ್ಕ ಕಲ್ಪಿಸಲಿದ್ದು, ಇದರಿಂದ ಈಗಾಗಲೇ ಹೆಚ್ಚು ವಾಹನ ದಟ್ಟಣೆ ಇರುವ ಕೆ.ಆರ್. ರಸ್ತೆ ಇನ್ನಷ್ಟು ದಟ್ಟಣೆಗೆ ಒಳಗಾಗಲಿದೆ. ಈ ಮೊದಲು ಉದ್ದೇಶಿಸಲಾಗಿದ್ದ ವಿಧಾನಸೌಧದ ಬಳಿಯ ಪ್ರವೇಶ ರ್‍ಯಾಂಪ್ ಅನ್ನು ಕೈಬಿಟ್ಟು, ಕೆ.ಆರ್. ರಸ್ತೆಗೆ ವರ್ಗಾಯಿಸಲಾಗಿದೆ. ಭೂಮಿಯೊಳಗಿರುವ ಮೆಟ್ರೊ ಮಾರ್ಗದ ಸಮೀಪವೇ ಸುರಂಗ ರಸ್ತೆಯೂ ಬರುವುದರಿಂದ ಈ ಪ್ರದೇಶದಲ್ಲಿ ಅತಿಹೆಚ್ಚು ಅಪಾಯವಾಗಲಿದೆ.



ಜಯಮಹಲ್ ರಸ್ತೆಯಲ್ಲಿ ಒಂದು ಪ್ರವೇಶ ರ್‍ಯಾಂಪ್ ಇರಲಿದ್ದು, ಇಲ್ಲಿಂದ ಸಿಲ್ಕ್‌ಬೋರ್ಡ್ ಕಡೆಗೆ ಸಾಗಬಹುದು. ಇದು ಸುತ್ತಮುತ್ತಲಿನ ಕೆಲವರಿಗೆ ಮಾತ್ರ ಉಪಯೋಗವಾಗಲಿದೆ. ನಿರ್ಗಮನ ರ್‍ಯಾಂಪ್ 2 ಕಿ.ಮೀ ಉದ್ದವಿರಲಿದ್ದು, ದಕ್ಷಿಣ ಭಾಗದಿಂದ ಬರುವ ವಾಹನಗಳು ಸ್ಯಾಂಕಿ ರಸ್ತೆಯಲ್ಲಿ ನಿರ್ಗಮನಿಸಬಹುದು. ಕೆರೆಯ ದಡದ ಅಂಚಿನಲ್ಲೇ ಈ ರ್‍ಯಾಂಪ್ ಅನ್ನು ಪ್ರಸ್ತಾಪಿಸಲಾಗಿರುವುದರಿಂದ ಕಳವಳ ವ್ಯಕ್ತವಾಗಿದೆ. ಮಣ್ಣು ಪರೀಕ್ಷೆ ನಡೆಸದೆ ಈ ವಿನ್ಯಾಸವನ್ನು ಅಂತಿಮಗೊಳಿಸಲಾಗಿದೆ.



ಹೆಣ್ಣೂರು ಮತ್ತು ನಾಗವಾರದ ಕಡೆಯ ಪ್ರವೇಶ ಮತ್ತು ನಿರ್ಗಮನ ರ್‍ಯಾಂಪ್‌ಗಳ ಕಾರಣದಿಂದ ಸಂಚಾರ ದಟ್ಟಣೆ ಹೆಚ್ಚುವ ಸಾಧ್ಯತೆ

ಮುಖ್ಯ ಸುರಂಗ ಟ್ಯೂಬ್ ಅಲ್ಲದೆ, ಹೆಬ್ಬಾಳ ಜಂಕ್ಷನ್‌ನಲ್ಲಿ ಎರಡು ಪ್ರವೇಶ ಮತ್ತು ಒಂದು ನಿರ್ಗಮನ ರ್‍ಯಾಂಪ್ ನಿರ್ಮಾಣವಾಗಲಿದೆ. ಇಲ್ಲಿ ಈಗಾಗಲೇ ಹೆಚ್ಚು ವಾಹನ ದಟ್ಟಣೆ ಉಂಟಾಗುತ್ತಿದೆ. ಹೆಬ್ಬಾಳ ಕೆರೆಯ ಅಂಚಿನಲ್ಲೇ ಮತ್ತೊಂದು ಪ್ರವೇಶ ರ್‍ಯಾಂಪ್ ಅನ್ನು ಯೋಜಿಸಲಾಗಿದ್ದು, ಇದಕ್ಕಾಗಿ ರಾಜಕಾಲುವೆಯ ಮಾರ್ಗ ಬದಲಾಯಿಸಬೇಕಾದ ಅಗತ್ಯವಿದೆ. ಕೆ.ಆರ್. ಪುರದಿಂದ ಹೊರ ವರ್ತುಲ ರಸ್ತೆಯಲ್ಲಿ ಸುರಂಗ ರಸ್ತೆಗೆ ವಾಹನಗಳು ಪ್ರವೇಶ ಪಡೆಯಬಹುದು. ಇದು ಹಳ್ಳಭಾಗವಾದ್ದರಿಂದ ನೀರು ಒಳಬರುವ ಅಥವಾ ಸೋರಿಕೆಯ ಅಪಾಯ ಹೆಚ್ಚಾಗಿದೆ.

ರಾಜಕೀಯಕ್ಕಾಗಿ ವಿರೋಧ ಸಲ್ಲ: ಡಿಕೆಶಿ



ಒಂದನೇ ಪುಟದಿಂದ...

‘ಸುರಂಗ ರಸ್ತೆಯಿಂದ ಕೊಳವೆಬಾವಿ, ಅಂತರ್ಜಲ ಸೇರಿದಂತೆ ಕೆಲವು ‘ಯುಟಿಲಿಟಿ’ಗೆ ಸಮಸ್ಯೆ ಆಗುವ ಸಂಭವವಿದೆ. ಅದನ್ನು ನಿವಾರಿಸಲು ಪ್ರಯತ್ನಿಸಲಾಗುತ್ತದೆ. ಲಾಲ್‌ಬಾಗ್‌ನಲ್ಲಿ ಸುರಂಗ ರಸ್ತೆಯ ನಿರ್ಮಾಣ ಕಾರ್ಯಕ್ಕೆ ಮಾತ್ರ ಭೂಮಿ ಬಳಸಲಾಗುತ್ತದೆ. ಅಲ್ಲಿನ ವಾಣಿಜ್ಯ ಕೇಂದ್ರವನ್ನು ಬೇಕಾದರೆ ಬದಲಿಸುತ್ತೇವೆ. ಸುಮಾರು ಅರ್ಧ ಎಕರೆಯಷ್ಟು ಪ್ರದೇಶ ಮಾತ್ರ ರ್‍ಯಾಂಪ್‌ಗೆ ಬಳಸಲಾಗುತ್ತದೆ’ ಎಂದು ಹೇಳಿದರು.

‘ಯೋಜನೆಯಿಂದ ಐಟಿ–ಬಿಟಿ ವರ್ಗದವರಿಗೆ ಹೆಚ್ಚು ಅನುಕೂಲವಾಗುತ್ತದೆ. ಸಮಯವೇ ಸಂಪತ್ತು ಆಗಿರುವ ಈ ಕಾಲದಲ್ಲಿ, ಹೆಬ್ಬಾಳದಿಂದ ಸಿಲ್ಕ್‌ಬೋರ್ಡ್ ಜಂಕ್ಷನ್‌ಗೆ ಈಗಿನ ರಸ್ತೆಯಲ್ಲೇ ಹೋದರೆ ಸುಮಾರು ಎರಡು ಗಂಟೆ ಬೇಕಾಗುತ್ತದೆ. ಅಷ್ಟು ಸಮಯವನ್ನು ಉದ್ಯಮಿಗಳು ವ್ಯಯ ಮಾಡಲು ಬಯಸುವುದಿಲ್ಲ. ಹೀಗಾಗಿ, ಸುರಂಗ ರಸ್ತೆಯಿಂದ ಅವರಿಗೆಲ್ಲ ಅನುಕೂಲವಾಗುತ್ತದೆ’ ಎಂದು ಶಿವಕುಮಾರ್ ವಿವರಿಸಿದರು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸಚಿವರ ಮನವಿ: ಧರಣಿ ಕೈಬಿಟ್ಟ ರೈತರು

ಸಮಸ್ಯೆಗೆ ಕೇಂದ್ರವೇ ಕಾರಣ, ಕಾರ್ಖಾನೆ ಅವರಿಗೂ ಸಮಸ್ಯೆಗಳಿವೆ: ಸಕ್ಕರೆ ಸಚಿವ

ಪ್ರಜಾವಾಣಿ ವಾರ್ತೆ

ಗುರ್ಲಾಪುರ (ಬೆಳಗಾವಿ): ತಾಲ್ಲೂಕಿನ ಗುರ್ಲಾಪುರ ಬಳಿ ಶನಿವಾರ ಧರಣಿ ಮುಂದುವರಿಸಿದ್ದ ರೈತರು, ಸಕ್ಕರೆ ಸಚಿವ ಶಿವಾನಂದ ಪಾಟೀಲ ಅವರ ಕೋರಿಕೆ ಮೇರೆಗೆ ಸಂಜೆ ಧರಣಿ ಹಿಂದಕ್ಕೆ ಪಡೆದರು.

ಧರಣಿ ನಿರತ ಸ್ಥಳಕ್ಕೆ ಬಂದ ಸಚಿವರು, 'ರೈತರು ಸಂಕಷ್ಟದಲ್ಲಿದ್ದ ಕಾರಣ ಮುಖ್ಯಮಂತ್ರಿ ನೆರವು ಘೋಷಿಸಿದ್ದಾರೆ. ದರ ಗೊಂದಲಕ್ಕೆ ಕೇಂದ್ರ ಸರ್ಕಾರ ಕಾರಣ. ಆದರೂ ರೈತರ ಮೇಲಿನ ಕಾಳಜಿಗೆ ನಾವು ಏನು ಮಾಡಲು ಸಾಧ್ಯವೋ ಅದನ್ನು ಮಾಡಿದ್ದೇವೆ. ಧರಣಿ ಕೈಬಿಡಬೇಕು' ಎಂದರು.

ತದನಂತರ, ಧರಣಿ ನಿಲ್ಲಿಸುವುದಾಗಿ ರಾಜ್ಯ ರೈತ ಸಂಘದ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ, ಅಧ್ಯಕ್ಷ ಚೂಣಪ್ಪ ಪೂಜಾರಿ ಹೇಳಿದರು.

ನಂತರವೂ ಮಾತು ಮುಂದುವರಿಸಿದ ಸಚಿವರು, 'ಸಕ್ಕರೆ ಕಾರ್ಖಾನೆ ಅವರಿಗೂ ಹಲವು ಸಮಸ್ಯೆಗಳಿವೆ. ಗೃಹಬಳಕೆ ಸಕ್ಕರೆ ಹಾಗೂ ವಾಣಿಜ್ಯಕ್ಕೆ ಬಳಸುವ ಸಕ್ಕರೆ ಬೆಲೆ ಒಂದೇ ರೀತಿಯಲ್ಲಿದೆ. ಇದು ಕಾರ್ಖಾನೆಗಳಿಗೂ ನಷ್ಟ ತರುತ್ತದೆ' ಎಂದು ಅಭಿಪ್ರಾಯಪಟ್ಟರು.

'ಜಿಲ್ಲಾ ಉಸ್ತುವಾರಿ ಸಚಿವರೇ ಸಮಸ್ಯೆ ಬಗೆಹರಿಸುತ್ತಾರೆ ಎಂದು ನಂಬಿ ಕುಳಿತಿದ್ದೆ. ಅದು ತಪ್ಪಾಯಿತು. ನಿಮ್ಮ ಭೇಟಿ ತಡವಾಯಿತು. ನೀವು ನನ್ನ ಮೇಲೆ ಬಾಟಲಿ ಎಸೆದಿರಿ, ಕಾರಿನ ಮೇಲೆ ಚಪ್ಪಲಿ ಎಸೆದಿರಿ, ಭಾವಚಿತ್ರಕ್ಕೆ ಚಪ್ಪಲಿಯಿಂದ ಹೊಡೆದಿರಿ. ಅದೆಲ್ಲವನ್ನೂ ನಿಮ್ಮ ಆಕ್ರೋಶ ಎಂದು ನಾನು ಭಾವಿಸುತ್ತೇನೆ. 'ನೀವು ನನ್ನನ್ನು ಜೀವಂತ ಬಿಟ್ಟದ್ದೇ ದೊಡ್ಡದು' ಎಂದೂ ಹೇಳಿದರು.

ಆಗ ಜನ ಸಮುದಾಯದಿಂದ 'ಹೋಯ್...' ಎಂಬ ಕೂಗಾಟ ಕೇಳಿಬಂತು.

ಈ ವೇಳೆ ರೈತ ಮುಖಂಡರು, 'ಸದ್ಯ ಘೋಷಿಸಿರುವ ₹3,300 ದರವು ಇಳುವರಿ ಆಧರಿಸಿ ಹೆಚ್ಚು–ಕಡಿಮೆ ಆಗುತ್ತದೆ. ರಾಜ್ಯದ ಎಲ್ಲ ಕಾರ್ಖಾನೆಗಳೂ ಇದೇ ದರ ನೀಡುವಂತೆ ಆದೇಶಿಸಬೇಕು' ಎಂದು ಕೋರಿದರು.

'ಹಾಗೆ ಮಾಡಲು ಬರುವುದಿಲ್ಲ. ಕಡಿಮೆ ಇಳುವರಿ ಬರುವ ಕಡೆಯ ಸಮಸ್ಯೆಯನ್ನು ಮುಂದಿನ ದಿನಗಳಲ್ಲಿ ಬಗೆಹರಿಸೋಣ' ಎಂದು ಅವರು ಹೇಳಿದರು.

'ಕಬ್ಬು ತೂಕ ಮಾಡುವಲ್ಲಿ ಕಾರ್ಖಾನೆಗಳು ಮೋಸ ಮಾಡುತ್ತಿವೆ. ಇದನ್ನು ತಡೆಯಬೇಕು' ಎಂದು ರೈತರು ಕೂಗಾಡಿದರು.

'ಇದು ಸಚಿವ ಮುನಿಯಪ್ಪ ಅವರಿಗೆ ಸಂಬಂಧಿಸಿದ ಸಮಸ್ಯೆ. ಅವರ ಗಮನಕ್ಕೆ ತರುತ್ತೇನೆ' ಎಂದು ಶಿವಾನಂದ ಪಾಟೀಲ ಭರವಸೆ ನೀಡಿದರು.

ಮುಗಳಖೋಡ ಯಲ್ಲಾಲಿಂಗೇಶ್ವರ ಮಠದ ಮುರುಘರಾಜೇಂದ್ರ ಸ್ವಾಮೀಜಿ, ರೈತ ಮುಖಂಡರು, ಸಚಿವರು ಹಾಗೂ ಅಧಿಕಾರಿಗಳನ್ನು ಸನ್ಮಾನಿಸಿದರು.

> **ವಾಣಿಜ್ಯ ಬಳಕೆ ಸಕ್ಕರೆ ದರ ಪರಿಷ್ಕರಿಸುವಂತೆ ಕಾರ್ಖಾನೆಗಳವರು ಕೇಂದ್ರಕ್ಕೆ ಪತ್ರ ಬರೆದಿದ್ದಾರೆ. ಪ್ರಲ್ಹಾದ ಜೋಶಿ ಹೋರಾಟಕ್ಕೆ ಸಂಬಂಧವೇ ಇಲ್ಲದಂತೆ ವರ್ತಿಸುತ್ತಿದ್ದಾರೆ. ರೈತರು ಅವರನ್ನೂ ಕೈ ಹಿಡಿದು ಪ್ರಶ್ನಿಸಬೇಕು**
> **ಶಿವಾನಂದ ಪಾಟೀಲ,** ಸಕ್ಕರೆ ಸಚಿವ

> **ಹತ್ತರಗಿ ಟೋಲ್ ನಾಕಾ ಬಳಿ ಶುಕ್ರವಾರ ಕಲ್ಲು ತೂರಾಟದಲ್ಲಿ 11 ಪೊಲೀಸರು ಗಾಯಗೊಂಡಿದ್ದಾರೆ. ದಾಖಲೆ ಪರಿಶೀಲಿಸಿ ಆರೋಪಿಗಳ ಮೇಲೆ ಕ್ರಮ ಕೈಗೊಳ್ಳುತ್ತೇವೆ**
> **ಆರ್.ಹಿತೇಂದ್ರ,** ಎಡಿಜಿಪಿ (ಕಾನೂನು ಮತ್ತು ಸುವ್ಯವಸ್ಥೆ)

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಗುರ್ಲಾಪುರ ಬಳಿ ಶನಿವಾರ ರೈತರನ್ನು ಭೇಟಿ ಮಾಡಿದ ಸಚಿವ ಶಿವಾನಂದ ಪಾಟೀಲ, ಸರ್ಕಾರದ ಆದೇಶ ಪ್ರತಿಯನ್ನು ಮುಖಂಡರು ಹಾಗೂ ಸ್ವಾಮೀಜಿ ಅವರಿಗೆ ನೀಡಿದರು –ಚಿತ್ರ: ಬಾಲಶೇಖರ ಬಂದಿ

ಬೈಲಹೊಂಗಲ ಬಂದ್ ಯಶಸ್ವಿ

ರೈತಪರ ಸಂಘಟನೆಗಳು, ಕಬ್ಬು ಬೆಳೆಗಾರರು ಶನಿವಾರ ಕರೆ ನೀಡಿದ್ದ ಬೈಲಹೊಂಗಲ ಬಂದ್ ಯಶಸ್ವಿ ಆಯಿತು.

ಅಂಗಡಿಗಳು, ಬಸ್‌ಗಳು, ಹೊಸೂರ ರಸ್ತೆಯ ಇನಾಮದಾರ ಶುಗರ್ಸ್ ಫ್ಯಾಕ್ಟರಿ ಕಚೇರಿ ಮೇಲೆ ಹೋರಾಟಗಾರರು ಕಲ್ಲು ತೂರಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಎಲ್ಲ ಬಂದ್ ಮಾಡಲಾಯಿತು.

ಗುರ್ಲಾಪುರಕ್ಕೆ ಸಚಿವರ ಭೇಟಿ ಬಳಿಕ ಇಲ್ಲಿ ಹೋರಾಟ ಹಿಂಪಡೆಯಲಾಯಿತು.

ಮುಧೋಳ: ಮುಂದುವರೆದ ಪ್ರತಿಭಟನೆ

ಬಾಗಲಕೋಟೆ ವರದಿ: ಹಿಂದಿನ ವರ್ಷಗಳ ಬಾಕಿ ಬಿಲ್ ಪಾವತಿ ಮತ್ತು ಈ ವರ್ಷ ಕಬ್ಬಿನ ಬೆಲೆ ಗೊಂದಲ ಪರಿಹಾರಕ್ಕೆ ಒತ್ತಾಯಿಸಿ ರೈತರು ಪ್ರತಿಭಟನೆ ಮುಂದುವರೆಸಿದ್ದಾರೆ. 'ಬಾಕಿ ಬಿಲ್ ಪಾವತಿಸಬೇಕು. 2024–25ನೇ ಸಾಲಿನ ಎರಡನೇ ಕಂತು ನೀಡಬೇಕು' ಎಂದು ಪ್ರತಿಭಟನನಿರತ ರೈತರು ಆಗ್ರಹಿಸಿದರು.
ವಿಜಯಪುರ ವರದಿ: ಇಂಡಿಯಲ್ಲಿ ಪ್ರತಿಭಟನೆ ಮುಂದುವರಿದಿದೆ.

₹3,350 ಘೋಷಿಸಿದ ವೆಂಕಟೇಶ್ವರ ಕಾರ್ಖಾನೆ

ಚಿಕ್ಕೋಡಿ: ಸಮೀಪದ ಬೇಡಕಿಹಾಳದ ವೆಂಕಟೇಶ್ವರ ಪವರ್ ಪ್ರೊಜೆಕ್ಟ್‌ನ ವೆಂಕಟೇಶ್ವರ ಸಕ್ಕರೆ ಕಾರ್ಖಾನೆ ಟನ್ ಕಬ್ಬಿಗೆ ₹3,350 ದರ ಘೋಷಣೆ ಮಾಡಿದೆ.

ಮಹಾರಾಷ್ಟ್ರ ಮೂಲದ ಉದ್ಯಮಿ, ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ಸ್ವರೂಪ ಮಹಾಡಿಕ್ ಶನಿವಾರ ದರ ಘೋಷಣೆ ಮಾಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಮಸೀದಿ ನಿರ್ಮಾಣಕ್ಕೆ ಹಿಂದೂಗಳಿಂದ ದೇಣಿಗೆ

ಜಯಪುರ (ಮೈಸೂರು ಜಿಲ್ಲೆ): ಮೈಸೂರು ತಾಲ್ಲೂಕಿನ ಜಯಪುರದಲ್ಲಿ ಜಾಮಿಯಾ ಮಸೀದಿ ನಿರ್ಮಾಣ ಕಾರ್ಯಕ್ಕೆ ಗ್ರಾಮದ ಹಿಂದೂ ಮುಖಂಡರು ಶನಿವಾರ ₹50 ಸಾವಿರ ದೇಣಿಗೆ ನೀಡಿದರು.

ಮಸೀದಿ ಅಧ್ಯಕ್ಷ ಮಹಮ್ಮದ್ ಆಲಿ, ಕಾರ್ಯದರ್ಶಿ ಅಬ್ದುಲ್ ಮುತಾಲೀಫ್ ಅವರಿಗೆ ಮುಖಂಡರಾದ ಜವರನಾಯಕ, ಮಲ್ಲಪ್ಪ, ಮೂಗನಾಯಕ, ಡೇರಿ ಬಸವರಾಜು, ಕೆಂಪನಾಯಕ, ನಾಗರಾಜು, ರೇಣುಕಾ ದೇಣಿಗೆ ಹಸ್ತಾಂತರಿಸಿದರು. ಮೌಲ್ವಿಗಳಾದ ಮಸಿವುಲ್ಲಾ, ಜಿಯಾವುಲ್ಲಾ, ಸುಜಾತ್ ಆಲಿ ಹಾಜರಿದ್ದರು.

ಕ್ರಾಂತಿ ಮುಗಿಯಿತು: ಸಚಿವ

ಬಳ್ಳಾರಿ: 'ನವೆಂಬರ್ ತಿಂಗಳು ಆರಂಭವಾಗಿದೆ ಎಂದರೆ, ನವೆಂಬರ್ ಕ್ರಾಂತಿ ಮುಗಿದಿದೆ ಎಂದೇ ಅರ್ಥ' ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಶನಿವಾರ ಇಲ್ಲಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, 'ಮುಖ್ಯಮಂತ್ರಿ ಬದಲಾವಣೆ, ಸಂಪುಟ ಪುನರ್‌ರಚನೆ ವಿಚಾರಗಳನ್ನು ವರಿಷ್ಠರು ತೀರ್ಮಾನಿಸುತ್ತಾರೆ' ಎಂದರು.

'ವಿರೋಧಪಕ್ಷಗಳು ಮಾಧ್ಯಮಗಳನ್ನು ಬಳಸಿ ಕೊಂಡು ಗೊಂದಲ ಸೃಷ್ಟಿಸುತ್ತಿವೆ. ಸರ್ಕಾರ ಬಂದು ಎರಡೂವರೆ ವರ್ಷವಾಗಿದೆ. ಹೀಗಾಗಿ ಸಂಪುಟ ಪುನರ್ ರಚನೆ ಮಾತು ಕೇಳಿ ಬರುತ್ತಿದೆ' ಎಂದು ಸ್ಪಷ್ಟಪಡಿಸಿದರು.

'ವಂದೇ ಮಾತರಂ, ಜನಗಣಮನ ಎರಡೂ ರಾಷ್ಟ್ರಗೀತೆ'

ಜಗದೀಶ ಶೆಟ್ಟರ್

ಹುಬ್ಬಳ್ಳಿ: 'ವಂದೇ ಮಾತರಂ ಮತ್ತು ಜನಗಣಮನ ಎರಡೂ ರಾಷ್ಟ್ರ ಗೀತೆಗಳಾಗಿದ್ದು, ಅವುಗಳಿಗೆ ಅಪಮಾನಿಸುವ ಕೆಲಸ ಯಾರೂ ಮಾಡಬಾರದು' ಎಂದು ಸಂಸದ ಜಗದೀಶ್ ಶೆಟ್ಟರ್ ಇಲ್ಲಿ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ವಂದೇ ಮಾತರಂ ಗೀತೆ ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಆಗಿದ್ದರೆ, ಸಂವಿಧಾನದ ಪ್ರಕಾರ ಜನಗಣಮನ ಅಧಿಕೃತ ರಾಷ್ಟ್ರ ಗೀತೆಯಾಗಿದೆ' ಎಂದರು.

'ಈ ಎರಡೂ ಗೀತೆಗಳಿಗೆ ಅದರದ್ದೇ ಆದ ಗೌರವವಿದ್ದು, ಈ ಬಗ್ಗೆ ಚರ್ಚಿಸುವುದು ಅನಗತ್ಯ' ಎಂದರು. 'ಬಿಜೆಪಿಯಲ್ಲಿ ಆಂತರಿಕ ಕಲಹವಿಲ್ಲ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ಬದಲಾವಣೆ ಎನ್ನುವುದು ಊಹಾಪೋಹ. ಮೂರು ವರ್ಷಕ್ಕೊಮ್ಮೆ ಅಧ್ಯಕ್ಷರ ಬದಲಾವಣೆ ಇರುತ್ತದೆ' ಎಂದರು.

'ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಉಗ್ರರಿಗೆ ರಾಜಾತಿಥ್ಯ ಕುರಿತ ಪ್ರಶ್ನೆಗೆ, 'ಲಷ್ಕರ್ ಉಗ್ರರೇ ಇರಲಿ, ಉಮೇಶ ರೆಡ್ಡಿಯೇ ಇರಲಿ ರಾಜಾತಿಥ್ಯ ಸರಿಯಲ್ಲ, ಅಧಿಕಾರಿಗಳ ವಿರುದ್ಧ ಕ್ರಮಜರುಗಿಸಲಿ' ಎಂದರು.

ವಾಚರ್ ಮೇಲೆ ಚಿರತೆ ದಾಳಿ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಯಡವನಹಳ್ಳಿ ಬಳಿ ಶನಿವಾರ ಕಾರ್ಯಾಚರಣೆ ನಡೆಸುತ್ತಿದ್ದಾಗ ಓಂಕಾರ್ ಅರಣ್ಯ ವಲಯದ ವಾಚರ್ ಬಂಗಾರು ಎಂಬುವರ ಮೇಲೆ ಚಿರತೆ ದಾಳಿ ನಡೆಸಿದ್ದು, ತಲೆಗೆ ಗಂಭೀರ ಗಾಯಗಳಾಗಿವೆ.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಯಡಿಯಾಳ ಉಪವಿಭಾಗದ ಓಂಕಾರ್ ವಲಯಕ್ಕೆ ಸೇರಿದ ಹೊರೆಯಾಲ ಗ್ರಾಮದ ಕುರಿಗಾಹಿ ಜೋಗಯ್ಯ ಅವರು ಯಡವನಹಳ್ಳಿ ಸುತ್ತಮುತ್ತ ಮೇಕೆ ಮೇಯಿಸುತ್ತಿದ್ದಾಗ, ಚಿರತೆ ದಾಳಿ ನಡೆಸಿ ಮೇಕೆಗಳನ್ನು ಕೊಂದಿತ್ತು.

ಮಾಹಿತಿ ಪಡೆದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಕಾರ್ಯಾಚರಣೆ ನಡೆಸಿದ್ದರು. ಪಟಾಕಿ ಸಿಡಿಸಿದ್ದರು. ಪೊದೆಯಲ್ಲಿ ಅಡಗಿದ್ದ ಚಿರತೆಯು ಪಟಾಕಿ ಸದ್ದಿಗೆ ಬೆಚ್ಚಿ ಬಿದ್ದು ವಾಚರ್ ಮೇಲೆ ದಾಳಿ ನಡೆಸಿತು. ಜೊತೆಗಿದ್ದವರು ಕೂಗಾಡಿದಾಗ ಓಡಿಹೋಯಿತು.

ಬಂಗಾರು ಅವರ ಕೈ, ಕುತ್ತಿಗೆ, ತಲೆಗೆ ಗಂಭೀರ ಗಾಯಗಳಾಗಿವೆ. ಬೇಗೂರು ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ್ದು, ಮೈಸೂರಿನ ಆಸ್ಪತ್ರೆಗೆ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಡಿಕೆಶಿ ಪರ ಬೆಂಬಲಿಗನಿಂದ ಹೋಮ, ಯಾಗ

ಬಳ್ಳಾರಿ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆಗಬೇಕೆಂದು ಪ್ರಾರ್ಥಿಸಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ, ಕಾಂಗ್ರೆಸ್ ಮುಖಂಡ ಜೆ.ಎಸ್. ಆಂಜನೇಯುಲು ಎರಡು ದಿನಗಳ ಹೋಮ, ಯಾಗ ಆರಂಭಿಸಿದ್ದಾರೆ.

ಬಳ್ಳಾರಿ–ತಾಳೂರು ರಸ್ತೆಯ ಬಾಲಾಜಿನಗರ ಕ್ಯಾಂಪ್‌ನ ಅಮೃತೇಶ್ವರ ದೇವಾಲಯದಲ್ಲಿ ಶನಿವಾರ ಬೆಳಿಗ್ಗೆ 4 ಗಂಟೆಗೆ ಯಾಗ ಆರಂಭವಾಯಿತು. ಆಂಧ್ರಪ್ರದೇಶ, ತೆಲಂಗಾಣ ಮತ್ತು ತಮಿಳುನಾಡಿನಿಂದ ಬಂದಿರುವ 25 ಅರ್ಚಕರು ಇದರಲ್ಲಿ ಪಾಲ್ಗೊಂಡಿದ್ದಾರೆ ಎಂದು ಆಂಜನೇಯುಲು ಹೇಳಿದರು.

ಕಬ್ಬಿಗೆ ಪರಿಷ್ಕೃತ ದರ ಇಲಾಖೆ ಅಧಿಕೃತ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಕ್ಕರೆ ಕಾರ್ಖಾನೆ ಮಾಲೀಕರು ಮತ್ತು ರೈತ ಮುಖಂಡರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ನಿಗದಿ ಮಾಡಿದ್ದ ಪರಿಷ್ಕೃತ ದರಕ್ಕೆ ಸಂಬಂಧಿಸಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ (ಸಕ್ಕರೆ) ಶನಿವಾರ ಆದೇಶ ಹೊರಡಿಸಿದೆ.

ಪರಿಷ್ಕೃತ ದರ 2025–26ನೇ ಸಾಲಿನ ಹಂಗಾಮಿಗೆ ಅನ್ವಯವಾಗಲಿದೆ. ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬು ಸರಬರಾಜು ಮಾಡಿದ ರೈತರಿಗೆ ಈ ಮೊತ್ತ ಪಾವತಿಸಬೇಕಿದೆ. ಕಾರ್ಖಾನೆಗಳು ಮೊದಲ ಕಂತಿನಲ್ಲಿ ಶೇ 10.25 ಸಕ್ಕರೆ ಇಳುವರಿ ಪ್ರಮಾಣ ಇರುವ ಪ್ರತಿ ಟನ್ ಕಬ್ಬಿಗೆ ₹3,100, ಶೇ 11.25 ಇಳುವರಿ ಇರುವ ಕಬ್ಬಿಗೆ ₹3,200 ಪಾವತಿಸುತ್ತವೆ. ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಠ ಹೆಚ್ಚುವರಿ ದರ ಪ್ರತಿ ಟನ್‌ಗೆ ₹50 ಹಾಗೂ ರಾಜ್ಯ ಸರ್ಕಾರ ಒಂದು ಬಾರಿಗೆ ನೀಡುತ್ತಿರುವ ಆರ್ಥಿಕ ನೆರವು ₹50 ಎರಡನೇ ಕಂತಿನಲ್ಲಿ ಪಾವತಿಸಲಾಗುತ್ತದೆ.

ಶೇ 10.25–ಶೇ 9.5ರ ನಡುವಿನ ಇಳುವರಿ ಪ್ರಮಾಣದ ನಡುವೆ ಪ್ರತಿ 0.1 ಕಡಿಮೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ಪ್ರತಿ ಕ್ವಿಂಟಲ್‌ಗೆ ₹3.46 ಮೊತ್ತವನ್ನು ಪರಿಗಣಿಸಬೇಕು ಎಂದು ಕಬ್ಬು ಅಭಿವೃದ್ಧಿ ಆಯುಕ್ತ ಹಾಗೂ ಸಕ್ಕರೆ ನಿರ್ದೇಶಕರು ಸೂಚಿಸಿದ್ದಾರೆ.

ಕೇಂದ್ರ ಸರ್ಕಾರ ಸಾಗಣೆ ವೆಚ್ಚ ಸೇರಿ ಶೇ 9.5 ಇಳುವರಿ ಇರುವ ಪ್ರತಿ ಟನ್ ಕಬ್ಬಿಗೆ ₹3,290.50, ಶೇ 10.25 ಇಳುವರಿಗೆ ₹3,550 ಹಾಗೂ ಶೇ 11.25 ಇಳುವರಿಗೆ ₹3,896 ನ್ಯಾಯಯುತ ಮತ್ತು ಲಾಭದಾಯಕ ದರವನ್ನು (ಎಫ್‌ಆರ್‌ಪಿ) ನಿಗದಿ ಮಾಡಿತ್ತು. ನಂತರ ಕಬ್ಬು ನಿಯಂತ್ರಣ ಮಂಡಳಿ ಸಭೆಯಲ್ಲಿ ಕಬ್ಬು ಕಟಾವು, ಸಾಗಣೆ ವೆಚ್ಚ ಕುರಿತು ಮಾರ್ಗಸೂಚಿ ಹೊರಡಿಸಿತ್ತು.

ಕೇಂದ್ರ ಸರ್ಕಾರ ಹೊರಡಿಸಿದ ಎಫ್‌ಆರ್‌ಪಿ, ಮಾರ್ಗಸೂಚಿ ನ್ಯಾಯಯುತವಾಗಿಲ್ಲ. ರೈತರು ಬೆಳೆದ ಕಬ್ಬಿಗೆ ನ್ಯಾಯಸಮ್ಮತ ಬೆಲೆ ಸಿಗುತ್ತಿಲ್ಲ. ಉತ್ಪಾದನಾ ವೆಚ್ಚವನ್ನು ಗಣನೆಗೆ ತೆಗೆದುಕೊಳ್ಳದೆ ದರ ನಿಗದಿ ಮಾಡಲಾಗಿದೆ. ಇಳುವರಿ ನಿಗದಿಯೂ ಪಾರದರ್ಶಕವಾಗಲಿಲ್ಲ. ಹೆಚ್ಚಿನ ದರ ನಿಗದಿ ಮಾಡಬೇಕು ಎಂದು ಒತ್ತಾಯಿಸಿ ಬೆಳಗಾವಿ ಸೇರಿದಂತೆ ವಿವಿಧ ಜಿಲ್ಲೆಗಳ ಕಬ್ಬು ಬೆಳೆಗಾರರು ಪ್ರತಿಭಟನೆ ನಡೆಸಿದ್ದರು. ಈ ಬಗ್ಗೆ ವಿಧಾನಸೌಧದಲ್ಲಿ ಸಭೆ ನಡೆಸಿದ ಮುಖ್ಯಮಂತ್ರಿ ಪರಿಷ್ಕೃತ ದರ ಘೋಷಣೆ ಮಾಡಿದ್ದರು.

ಇಳುವರಿ ಪ್ರಮಾಣ	ಪರಿಷ್ಕೃತ ದರ
9.5%	₹3,390.50 (ಸಾಗಣೆ ವೆಚ್ಚ ಒಳಗೊಂಡು)
10.25%	₹3,200 (ಸಾಗಣೆ ವೆಚ್ಚ ಹೊರತುಪಡಿಸಿ)
11.25%	₹3,300 (ಸಾಗಣೆ ವೆಚ್ಚ ಹೊರತುಪಡಿಸಿ)

ಮಾಲೀಕರ ಸಮ್ಮುಖದಲ್ಲೇ ದರ ನಿಗದಿ: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಕ್ಕರೆ ಕಾರ್ಖಾನೆ ಮಾಲೀಕರ ಸಮ್ಮುಖದಲ್ಲಿಯೇ ಪ್ರತಿ ಟನ್ ಕಬ್ಬಿಗೆ ₹ 3,300 ದರ ನಿಗದಿ ಮಾಡಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಕಬ್ಬಿನ ದರ ನಿಗದಿ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರದ ಕುರಿತು ಮಾಜಿ ಸಚಿವ ಮುರುಗೇಶ ನಿರಾಣಿ ಸೇರಿದಂತೆ ಸಕ್ಕರೆ ಕಾರ್ಖಾನೆ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಅವರೆಲ್ಲರ ಸಮ್ಮುಖದಲ್ಲಿಯೇ ತೀರ್ಮಾನ ಆಗಿದೆ' ಎಂದರು.

'ಕಬ್ಬು ಬೆಳೆಗಾರರಿಗೆ ಕಾರ್ಖಾನೆ ಮಾಲೀಕರು ₹ 50 ಕೊಡಬೇಕೆಂದು ಬಹಳ ಸ್ಪಷ್ಟವಾಗಿ ತಿಳಿಸಲಾಗಿದೆ. ಪ್ರೋತ್ಸಾಹಧನವಾಗಿ ಸರ್ಕಾರ ₹ 50 ಪಾವತಿಸಲಿದೆ. ಶೇ 10.25 ಇಳುವರಿ ಪ್ರಮಾಣ ಇದ್ದರೆ ₹ 3,100 ಜೊತೆಗೆ ₹ 100 ಹಾಗೂ ಶೇ 11.25 ಇಳುವರಿ ಪ್ರಮಾಣ ಇದ್ದರೆ ₹ 3,200 ಜೊತೆಗೆ ₹ 100 ನೀಡಲಾಗುವುದು' ಎಂದರು.

'ಕಬ್ಬು ಬೆಳೆಗಾರರ ಇತರ ವಿಚಾರಗಳ ಬಗ್ಗೆ ಪ್ರತ್ಯೇಕ ಸಭೆ ನಡೆಸಲು ತೀರ್ಮಾನಿಸಲಾಗಿದೆ' ಎಂದೂ ಅವರು ಹೇಳಿದರು.

₹330 ಕೋಟಿ ಹೊರೆ: ಸತೀಶ

'ಪ್ರತಿ ಟನ್ ಕಬ್ಬಿಗೆ ರಾಜ್ಯ ಸರ್ಕಾರ ₹50 ಹೆಚ್ಚುವರಿ ನೀಡುವುದರಿಂದ ಬೊಕ್ಕಸಕ್ಕೆ ಸುಮಾರು ₹330 ಕೋಟಿ ಹೊರೆಯಾಗಲಿದೆ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿ, 'ಸರ್ಕಾರಕ್ಕೆ ಆಗುವಷ್ಟೇ ಹೊರೆ ಕಾರ್ಖಾನೆಗಳಿಗೂ ಆಗುತ್ತದೆ. ಕಾರ್ಖಾನೆಗಳಲ್ಲಿ ಅರೆಯುವ ಕಬ್ಬಿನ ಪ್ರಮಾಣ ಆಧರಿಸಿ ನಷ್ಟದ ಅಂದಾಜು ಸಿಗಲಿದೆ. ಹೀಗಾಗಿ, ಮಾಲೀಕರಿಗೆ ಆಗುವ ನಷ್ಟದ ವಿವರ ಈಗ ಹೇಳಲಾಗುವುದಿಲ್ಲ. ಹೊರೆ ಆಗುತ್ತದೆ ಎಂಬ ಕಾರಣಕ್ಕೇ ಸದ್ಯಕ್ಕೆ ಕೆಲ ಮಾಲೀಕರು ಒಪ್ಪಿಗೆ ನೀಡಿಲ್ಲ' ಎಂದು ತಿಳಿಸಿದರು.

'ಲಾಭನಷ್ಟ ಲೆಕ್ಕಹಾಕಲು ಇನ್ನೂ ನಾಲ್ಕು ತಿಂಗಳು ಬೇಕಿದೆ. ಆದರೆ, ರೈತರ ಹಿತಕ್ಕಾಗಿ ರಾಜ್ಯ ಸರ್ಕಾರ ತೆಗೆದುಕೊಂಡ ನಿರ್ಧಾರವನ್ನು ಎಲ್ಲರೂ ಒಪ್ಪಲೇಬೇಕು. ಮೊದಲು ಕಬ್ಬು ಅರೆಯುವ ಕೆಲಸ ಆರಂಭಿಸಲಿ. ಉಳಿದದ್ದು ಆ ಮೇಲೆ ನೋಡೋಣ' ಎಂದರು.

'ಗುಜರಾತ್, ಮಹಾರಾಷ್ಟ್ರ ಮಾದರಿಯಲ್ಲಿ ದರ ನಿಗದಿ ಮಾಡಬೇಕು. ಕಬ್ಬು ಬೆಳೆಗೆ ಸ್ಥಿರ ದರ ನಿಗದಿ ಸಾಧ್ಯವಿಲ್ಲ. ಆಯಾ ವರ್ಷದ ಸ್ಥಿತಿಗತಿ ಆಧಾರದಲ್ಲಿ ನಿರ್ಧಾರ ಮಾಡಲಾಗುತ್ತದೆ. ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್ ಅನ್ನು ಸರ್ಕಾರವೇ ಖರೀದಿಸಬೇಕು. ಕೇಂದ್ರ ಸರ್ಕಾರ ಎಥೆನಾಲ್ ಹಂಚಿಕೆ ಪ್ರಮಾಣ ಹೆಚ್ಚಿಸಬೇಕು. ಸಕ್ಕರೆಯ ಬೆಂಬಲ ಬೆಲೆ ಏರಿಕೆ ಮಾಡಬೇಕು. ಈ ಕುರಿತು ಕೇಂದ್ರಕ್ಕೆ ಮುಖ್ಯಮಂತ್ರಿ ಪತ್ರ ಬರೆದಿದ್ದಾರೆ. ಅವಕಾಶ ಸಿಕ್ಕರೆ ನಾನೂ ನಿಯೋಗದ ಜತೆ ಹೋಗುತ್ತೇನೆ' ಎಂದರು.

'ತಾತ್ಕಾಲಿಕವಾಗಿ ವಾಪಸು, ಕೇಂದ್ರಕ್ಕೆ ನಿಯೋಗ ಒಯ್ಯಲಿ'

ಬೆಳಗಾವಿ: 'ಕಬ್ಬಿಗೆ ರಾಜ್ಯ ಸರ್ಕಾರ ಘೋಷಿಸಿರುವ ₹3,300 ದರ ಒಪ್ಪುವುದೇ ಇಲ್ಲ. ಕೆಲವರು ತಾತ್ಕಾಲಿಕವಾಗಿ ಹೋರಾಟ ಕೈಬಿಟ್ಟಿದ್ದಾರೆ. ಹೋರಾಟ ಮುಂದುವರಿಸುತ್ತೇವೆ. ಈ ಬಗ್ಗೆ ಕೇಂದ್ರಕ್ಕೂ ನಿಯೋಗ ಹೋಗಲಾಗುವುದು' ರೈತ ಮುಖಂಡರು ಶನಿವಾರ ನಿರ್ಣಯ ಕೈಗೊಂಡರು.

ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಸಂಯುಕ್ತ ಹೋರಾಟ ಕರ್ನಾಟಕ (ವಿವಿಧ ಸಂಘಟನೆ)ದ ನಾಯಕರು ನಡೆಸಿದ ಸಮನ್ವಯ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು.

ನ್ಯಾಯಯುತ ಹಾಗೂ ಲಾಭದಾಯಕ ಬೆಲೆ (ಎಫ್‌ಆರ್‌ಪಿ) ಘೋಷಿಸುವಲ್ಲಿ ಕೇಂದ್ರ ವೈಜ್ಞಾನಿಕ ಕ್ರಮ ಅನುಸರಿಸಿಲ್ಲ. ಇದನ್ನು ಪ್ರಧಾನಿಗೆ ಮನವರಿಕೆ ಮಾಡಬೇಕು ಎಂದೂ ತೀರ್ಮಾನಿಸಲಾಯಿತು.

ಸಂಯುಕ್ತ ಕಿಸಾನ್ ಮೋರ್ಚಾದ ನೂರ್ ಶ್ರೀಧರ್, ಸಿರಿಮನೆ ನಾಗರಾಜ, ಎಚ್.ಆರ್.ಬಸವರಾಜಪ್ಪ, ಸಿದಗೌಡ ಮೋದಗಿ, ಡಿ.ಎಚ್.ಪೂಜಾರ, ಭಗವಾಣ್ ರಡ್ಡಿ ಸಭೆಯಲ್ಲಿದ್ದರು.

'ಕೇಂದ್ರದ ನೀತಿಯಿಂದ ರೈತರಿಗೆ ಸಂಕಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ವೆಚ್ಚ ಮತ್ತು ಕಬ್ಬಿನ ಬೆಲೆಯ ನಡುವಿನ ಅಂತರ ಹೆಚ್ಚಲು ಕೇಂದ್ರ ಸರ್ಕಾರವೇ ಕಾರಣ. ಅದನ್ನು ತಪ್ಪಿಸಲು ಯಾವುದೇ ಕ್ರಮ ತೆಗೆದುಕೊಳ್ಳದಿರುವುದರಿಂದ ಲಕ್ಷಾಂತರ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿಯವರು ಬರೆದ ಪತ್ರಕ್ಕೆ ಉತ್ತರಿಸಿರುವ ಅವರು, 'ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಲ್‌ಗೆ ಶೇ 10.25 ಇಳುವರಿ ಪ್ರಮಾಣಕ್ಕೆ ನಿಗದಿಪಡಿಸಿದ ₹ 3,550 ನ್ಯಾಯಯುತ ಮತ್ತು ಲಾಭದಾಯಕ ದರವನ್ನು (ಎಫ್‌ಆರ್‌ಪಿ) ಪ್ರಮುಖ ಸಾಧನೆ ಎಂದು ಬಿಂಬಿಸಲಾಗುತ್ತಿದೆ. ಎನ್‌ಡಿಎ ಆಡಳಿತಾವಧಿಯಲ್ಲಿ ಸತತ ಎರಡು ವರ್ಷಗಳ ಕಾಲ ಎಫ್‌ಆರ್‌ಪಿ ಹೆಚ್ಚಿಸಿಲ್ಲ. ಇದು ರೈತರಿಗೆ ಹೆಚ್ಚಿನ ನಷ್ಟ ಉಂಟು ಮಾಡಿದೆ' ಎಂದಿದ್ದಾರೆ.

'ಎಥೆನಾಲ್ ಮಿಶ್ರಣ ಮತ್ತು ಹೆಚ್ಚಿದ ಎಥೆನಾಲ್ ಸಂಗ್ರಹಣೆಯನ್ನು ಸಕ್ಕರೆ ವಲಯಕ್ಕೆ ವರದಾನವೆಂದು ಪತ್ರದಲ್ಲಿ ಉಲ್ಲೇಖಿಸಿದ್ದೀರಿ. ಆದರೆ, 2023ರ ವೇಳೆಗೆ ಎಥೆನಾಲ್ ಮಿಶ್ರಣವು ಶೇ 10ಕ್ಕೆ ತಲುಪಿದ್ದರೂ, ವಾಸ್ತವವಾಗಿ ಅದಕ್ಕಿಂತ ಹೆಚ್ಚಿದೆ. ಕರ್ನಾಟಕದ ಡಿಸ್ಟಿಲರಿಗಳಿಂದ ಎಥೆನಾಲ್ ಪೂರೈಕೆಯು 2022-23ರಲ್ಲಿ 38 ಕೋಟಿ ಲೀಟರ್‌ಗಳಿಂದ 2024-25ರಲ್ಲಿ ಕೇವಲ 47 ಕೋಟಿ ಲೀಟರ್‌ಗಳಿಷ್ಟೆ ಹೆಚ್ಚಾಗಿದೆ. ಆದರೆ, ಸ್ಥಾಪಿತ ಸಾಮರ್ಥ್ಯವು 270 ಕೋಟಿ ಲೀಟರ್‌ಗಳಷ್ಟಿದೆ. ಎಥೆನಾಲ್ ಮಿಶ್ರಣದ ಪ್ರಯೋಜನವನ್ನು ರೈತರಿಗೆ ಏಕೆ ವರ್ಗಾಯಿಸಿಲ್ಲ ಎಂಬ ಪ್ರಶ್ನೆಗೆ ಇನ್ನೂ ಉತ್ತರವಿಲ್ಲ' ಎಂದಿದ್ದಾರೆ.

'ಮುಖ್ಯಮಂತ್ರಿ ಹೇಳಿಕೆ ದುರುದ್ದೇಶಪೂರಿತ'

ಧಾರವಾಡ: 'ಕಳೆದ ವರ್ಷ 10 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ರಫ್ತಿಗೆ ಅನುಮೋದನೆ ನೀಡಿದ್ದು, ಸಕ್ಕರೆ ದರ ಸಮತೋಲನದಲ್ಲಿದೆ. ಕೇಂದ್ರದ ನೀತಿಯಿಂದ ತೊಂದರೆಯಾಗಿದೆ ಎಂಬ ಸಿ.ಎಂ ಸಿದ್ದರಾಮಯ್ಯ ಹೇಳಿಕೆ ದುರುದ್ದೇಶಪೂರಿತ' ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಕುಟುಕಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ, 'ಈ ವರ್ಷ 15 ಲಕ್ಷ ಟನ್ ಸಕ್ಕರೆ ರಫ್ತಿಗೆ ಅನುಮತಿ ನೀಡಲಾಗಿದೆ. ಸಕ್ಕರೆಗೆ ಎಂಎಸ್‌ಪಿಯನ್ನು ₹31ಕ್ಕೆ (ಕೆ.ಜಿ.ಗೆ) ಏರಿಸಲಾಗಿದೆ' ಎಂದು ತಿಳಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಭೆ ನಡೆಸಿ ನಿರ್ಧಾರ ಕೈಗೊಂಡಿದ್ದಾರೆ. ಈಗ ಕಬ್ಬಿಗೆ ನಿಗದಿಪಡಿಸಿರುವ ದರ ಪಾವತಿಗೆ ಕ್ರಮವಹಿಸಬೇಕು' ಎಂದು ಒತ್ತಾಯಿಸಿದರು.

ಜಿಲ್ಲಾ ಆಸ್ಪತ್ರೆಗಳಿಗೆ ಎಂಡಿ–ಎಂಎಸ್ ಕೋರ್ಸ್‌ಗೆ ಅನುಮತಿ



ಬೆಂಗಳೂರು: ರಾಜ್ಯದ ಎಂಟು ಸರ್ಕಾರಿ ಜಿಲ್ಲಾ ಆಸ್ಪತ್ರೆಗಳಲ್ಲಿ 2026-27ನೇ ಶೈಕ್ಷಣಿಕ ವರ್ಷದಿಂದ ಎಂಡಿ–ಎಂಎಸ್ ಕೋರ್ಸ್‌ಗಳನ್ನು ಪ್ರಾರಂಭಿಸಲು ಅನುಮತಿ ನೀಡಿ ಆರೋಗ್ಯ ಇಲಾಖೆ ಆದೇಶಿಸಿದೆ.

ಬೆಂಗಳೂರಿನ ಜಯನಗರ ಸಾರ್ವಜನಿಕ ಆಸ್ಪತ್ರೆ ಮತ್ತು ಕೆ.ಸಿ. ಜನರಲ್ ಆಸ್ಪತ್ರೆ, ವಿಜಯಪುರ, ಬಾಗಲಕೋಟೆ, ತುಮಕೂರು, ಕೋಲಾರ, ರಾಮನಗರ ಮತ್ತು ಮೈಸೂರು ಜಿಲ್ಲಾ ಆಸ್ಪತ್ರೆಗಳು ಈ ಕೋರ್ಸ್‌ಗಳನ್ನು ಪ್ರಾರಂಭಿಸಲು ಆಯ್ಕೆಯಾಗಿವೆ. ಈ ಕೋರ್ಸ್‌ಗಳ ಸಂಪೂರ್ಣ ಸಂಯೋಜನೆ ಮತ್ತು ಅನುಷ್ಠಾನದ ಜವಾಬ್ದಾರಿಯನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರಿಗೆ ನೀಡಲಾಗಿದೆ. ಈ ಕೋರ್ಸ್‌ಗಳನ್ನು ಪ್ರಾರಂಭಿಸುವುದರಿಂದ, ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣವನ್ನು ತೃತೀಯ ಹಂತದ ಕೇಂದ್ರಗಳಿಂದ ವಿಕೇಂದ್ರೀಕರಣಗೊಳಿಸಲು ಸಾಧ್ಯವಾಗಲಿದೆ.

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382–220556 ಇ–ಮೇಲ್: predkarwar@gmail.com
ಕ್ರ.ಸಂ:ಪಂರಾ.ಇಂ/ಕಾ/ಪಿಬಿ–1/2025–26/857 ದಿ: 07.11.2025

ಟೆಂಡರ್ ಪ್ರಕಟಣೆ–25/2025–26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಪ್ರ ವರ್ಗ 2 ಎ) (1) 2025–26 ನೇ ಸಾಲಿನ ಜಿ.ಪಂ ಅನಿರ್ಬಂಧಿತ ಯೋಜನೆಯಡಿಯಲ್ಲಿ ಕುಮಟಾ ತಾಲೂಕಿನ ಕೋಡ್ಕಣಿ ಪಂಚಾಯತ ಗ್ರಾಮ ಪಂಚಾಯತ್ ಗ್ರಂಥಾಲಯ ಹೊಸ ಕಟ್ಟಡ ನಿರ್ಮಾಣ. RDPR/2025-26/BD/WORK_INDENT19729, ಅಂದಾಜು ಮೊತ್ತ: ರೂ. 15.00 ಲಕ್ಷ, ಮುಂಗಡ ಠೇವಣಿ: ರೂ. 37500.00, ಕಾಲಮಿತಿ (ಮಳೆಗಾಲ ಸಹಿತ): 04 ತಿಂಗಳು

(ಮೀಸಲಾತಿ: ಸಾಮಾನ್ಯ) (2) –ಸದರ– ಕುಮಟಾ ತಾಲೂಕಿನ ಸೊಪ್ಪಿನಹೊಸಳ್ಳಿ ಗ್ರಾ.ಪಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೇದಿನಿಯಲ್ಲಿ ಅಡುಗೆಕೋಣೆ ನಿರ್ಮಾಣ. ಅಂದಾಜು ಮೊತ್ತ: ರೂ. 9.00 ಲಕ್ಷ, ಮುಂಗಡ ಠೇವಣಿ: ರೂ. 22500.00, ಕಾಲಮಿತಿ (ಮಳೆಗಾಲ ಸಹಿತ): 03 ತಿಂಗಳು

(ಮೀಸಲಾತಿ: ಸಾಮಾನ್ಯ) (3) –ಸದರ– ಕುಮಟಾ ತಾಲೂಕಿನ ಸೊಪ್ಪಿನಹೊಸಳ್ಳಿ ಗ್ರಾ.ಪಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮೇದಿನಿಯಲ್ಲಿ ಹೊಸ ಕೊಠಡಿ ನಿರ್ಮಾಣ. RDPR/2025-26/BD/WORK_INDENT19672, ಅಂದಾಜು ಮೊತ್ತ: ರೂ. 14.50 ಲಕ್ಷ, ಮುಂಗಡ ಠೇವಣಿ: ರೂ. 36250.00, ಕಾಲಮಿತಿ (ಮಳೆಗಾಲ ಸಹಿತ): 04 ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (4) –ಸದರ– ಕುಮಟಾ ತಾಲೂಕಿನ ಮಿರ್ಜಾನ ಗ್ರಾ.ಪಂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಿರ್ಜಾನ ಹೊಸ ಕೊಠಡಿ ನಿರ್ಮಾಣ. RDPR/2025-26/BD/WORK_INDENT19728, ಅಂದಾಜು ಮೊತ್ತ: ರೂ. 14.50 ಲಕ್ಷ, ಮುಂಗಡ ಠೇವಣಿ: ರೂ. 21750.00

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್–ಬಿಗಳನ್ನು ಮತ್ತು Technical Bid ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 14.11.2025 ರ ಸಂಜೆ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 15.11.2025 ಸಂಜೆ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/–, ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ
DIPR/KWR/KSMCA/685/25-26 Dt.07.11.2025

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ನಿರ್ದೇಶಕರವರ ಕಚೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಲೋಕೋಪಯೋಗಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು – 560 009
ಸಂಖ್ಯೆ: DWCD/2025-26/SE0605 ದಿನಾಂಕ: 07.11.2025

ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು (ICDS) ಯೋಜನೆಯ ಸುವರ್ಣ ಮಹೋತ್ಸವ ಸಮಾರಂಭಕ್ಕೆ – Event Management ಸೇವೆ ಪಡೆಯಲು ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಸಮಗ್ರ ಶಿಶು ಅಭಿವೃದ್ಧಿ ಸೇವೆಗಳು (ICDS) ಯೋಜನೆಯ ಸುವರ್ಣ ಮಹೋತ್ಸವ ಸಮಾರಂಭಕ್ಕೆ – Event Management ಸೇವೆ ಪಡೆಯಲು ಅರ್ಹ Event Management ಸಂಸ್ಥೆಗಳಿಂದ ತಾಂತ್ರಿಕ / ಆರ್ಥಿಕ ಬಿಡ್‌ಗಳನ್ನು (ಎರಡು ಲಕೋಟೆ ಪದ್ಧತಿ) ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಬಿಡ್‌ದಾರರು ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (http://kppp.karnataka.gov.in) ಮುಖಾಂತರ ಬಿಡ್‌ಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಕಾಣಿಸಿರುವಂತೆ ಇ.ಎಂ.ಡಿ. ಮೊತ್ತವನ್ನು ಪಾವತಿಸತಕ್ಕದ್ದು.

1. ಟೆಂಡರ್ ದಸ್ತಾವೇಜನ್ನು ಆನ್‌ಲೈನ್ ಮುಖಾಂತರ ಪಡೆಯಬಹುದಾದ ದಿನಾಂಕ: 07.11.2025.
2. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 10.11.2025 ಬೆಳಿಗ್ಗೆ 11.00 ಗಂಟೆಗೆ.
3. ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆಕ್ಷೇಪಣೆ ಸಲ್ಲಿಸುವ ಅಂತಿಮ ದಿನಾಂಕ:11.11.2025 ಸಂಜೆ 5.00 ಗಂಟೆಯವರೆಗೆ.
4. ಟೆಂಡರ್ ಅನ್ನು ಸಲ್ಲಿಸಲು ಅಂತಿಮ ದಿನಾಂಕ: 15.11.2025 ಸಂಜೆ 5.00 ಗಂಟೆಗೆ.
5. ತಾಂತ್ರಿಕ ಬಿಡ್ ಅನ್ನು ತೆರೆಯುವ ದಿನಾಂಕ: 16.11.2025 ಸಂಜೆ 5.05 ಗಂಟೆಗೆ.
6. ತಾಂತ್ರಿಕ ಬಿಡ್‌ನಲ್ಲಿ ಸಲ್ಲಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಆರ್ಥಿಕ ಬಿಡ್ ತೆರೆಯುವ ತಾತ್ಕಾಲಿಕವಾಗಿ ನಿಗದಿಪಡಿಸಲಾದ ದಿನಾಂಕ: 17.11.2025 ಸಂಜೆ 5.10 ಗಂಟೆಗೆ.

ಟೆಂಡರ್ ಪ್ರಕಟಣೆ ಮತ್ತು ಟೆಂಡರ್ ಡಾಕ್ಯುಮೆಂಟ್ ಪ್ರತಿಗಳು (ಅ) ಟೆಂಡರ್ ಆಹ್ವಾನಿಸುವ ಪ್ರಾಧಿಕಾರ – ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು (ಆ) ರಾಜ್ಯ ಟೆಂಡರ್ ಬುಲೆಟಿನ್ ಅಧಿಕಾರಿ – ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು, ಇವರ ಬಳಿ ಲಭ್ಯವಿರುತ್ತದೆ. ಹೆಚ್ಚಿನ ವಿವರಗಳನ್ನು ಜಂಟಿ ನಿರ್ದೇಶಕರು (ಐ.ಸಿ.ಡಿ.ಎಸ್.), ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆನಂದ್ ರಾವ್ ವೃತ್ತ, ಬೆಂಗಳೂರು ಇವರ ಕಛೇರಿಯಿಂದ (ದೂರವಾಣಿ ಸಂಖ್ಯೆ: 080–22353780) ಪಡೆಯಬಹುದಾಗಿದೆ.

ಸಹಿ/– ನಿರ್ದೇಶಕರು,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ,
ಬೆಂಗಳೂರು
ಡಿಐಪಿಆರ್/ಸಿಪಿ/3682/ಸಿಎಲ್/2025–26

ಪ್ರಜಾವಾಣಿ ದೀಪಾವಳಿ ವಿಶೇಷಾಂಕ 2025
ಮಾರುಕಟ್ಟೆಯಲ್ಲಿ ಲಭ್ಯ ₹60
ಯುದ್ಧ...ಮಾಸದ ಗಾಯ
ವಿಷಯ ಪರಿಣತರ ಒಳನೋಟವುಳ್ಳ ಲೇಖನಗಳು
ಬಹುಮಾನಿತ ಕಥೆ ಮತ್ತು ಕವಿತೆಗಳ ಓದಿನ ಖುಷಿ
ಸಿನಿಮಾ ರೀಲ್ಸ್ ಲೋಕದಲ್ಲಿ ವಿಹಾರ
ವೈವಿಧ್ಯಮಯ ಲೇಖನಗಳ ಗುಚ್ಛ

ವರ್ಷ ಭವಿಷ್ಯದ ಮುನ್ನೋಟ
ಬಿಡುವಿನ ಓದಿಗಾಗಿ ಮತ್ತಷ್ಟು ಬರಹಗಳು
ಪ್ರತಿಗಳಿಗಾಗಿ ಸಂಪರ್ಕಿಸಿ
•ಬೆಂಗಳೂರು : 45557199/219 •ಮೈಸೂರು : 2420532/129 •ಹುಬ್ಬಳ್ಳಿ: 2372081/516
•ಮಂಗಳೂರು : 2215852/2218334 •ಕಲಬುರಗಿ : 255539/221808 •ದಾವಣಗೆರೆ : 230846/255048
•ಕರ್ನಾಟಕ: 9008366666

ಬೆಂಗಳೂರು–ನಾಗ್ಪುರ ವಿಮಾನ ಡಿಸೆಂಬರ್ 10ರಿಂದ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಯಾನ ಕಂಪನಿಯು ಬೆಂಗಳೂರು ಮತ್ತು ಮಹಾರಾಷ್ಟ್ರದ ನಾಗ್ಪುರ ನಡುವೆ ಡಿಸೆಂಬರ್ 10ರಿಂದ ಹೊಸದಾಗಿ ವಿಮಾನ ಸೇವೆ ಆರಂಭಿಸಲಿದೆ ಎಂದು ಕಂಪನಿ ತಿಳಿಸಿದೆ.

ನವದೆಹಲಿ ಮತ್ತು ಪುಣೆಯಿಂದ ಅಬುಧಾಬಿಗೆ ಡಿಸೆಂಬರ್ 2ರಿಂದ ಹೊಸ ವಿಮಾನ ಸಂಚಾರ ಸೇವೆ ಆರಂಭಿಸಲಾಗುವುದು ಎಂದು ಕಂಪನಿ ಪ್ರಕಟಣೆಯಲ್ಲಿ ಶನಿವಾರ ತಿಳಿಸಿದೆ.

ಬೆಂಗಳೂರಿನಿಂದ ನಾಗ್ಪುರಕ್ಕೆ ಪ್ರತಿನಿತ್ಯ ಎರಡು ವಿಮಾನಗಳು ಸಂಚರಿಸಲಿವೆ. ಮೊದಲ ವಿಮಾನವು ಬೆಂಗಳೂರಿನಿಂದ ಬೆಳಿಗ್ಗೆ 7.25ಕ್ಕೆ ಹೊರಟು, 09.30ಕ್ಕೆ ನಾಗ್ಪುರ ತಲುಪಲಿದೆ. ಮತ್ತೊಂದು ವಿಮಾನವು ಸಂಜೆ 6.30ಕ್ಕೆ ಹೊರಟು ರಾತ್ರಿ 8.35ಕ್ಕೆ ತಲುಪಲಿದೆ.

ನಾಗ್ಪುರದಿಂದ ಬೆಳಿಗ್ಗೆ 10 ಗಂಟೆಗೆ ಹೊರಟು ಬೆಂಗಳೂರಿಗೆ 12.05ಕ್ಕೆ ತಲುಪಲಿದೆ. ಮತ್ತೊಂದು ವಿಮಾನ ರಾತ್ರಿ 9.05ಕ್ಕೆ ಹೊರಟು 11.10ಕ್ಕೆ ಬೆಂಗಳೂರಿಗೆ ಬರಲಿದೆ ಎಂದು ಕಂಪನಿ ತಿಳಿಸಿದೆ.

ಅಬುಧಾಬಿಗೆ ವಿಮಾನ: ಇದು ನವದೆಹಲಿಯಿಂದ ಬೆಳಿಗ್ಗೆ 10.10ಕ್ಕೆ ಹೊರಟು ಮಧ್ಯಾಹ್ನ 12.40ಕ್ಕೆ ಅಬುಧಾಬಿ ತಲುಪಲಿದೆ. ಅಬುಧಾಬಿಯಿಂದ 1.40ಕ್ಕೆ ಹೊರಟು ನವದೆಹಲಿಗೆ ಸಂಜೆ 7.10ಕ್ಕೆ ತಲುಪಲಿದೆ. ಈ ಸೇವೆ ಮಂಗಳವಾರ, ಬುಧವಾರ, ಗುರುವಾರ ಮತ್ತು ಶನಿವಾರ ಮಾತ್ರ ಇರಲಿದೆ.

ಪುಣೆಯಿಂದ ರಾತ್ರಿ 8.50ಕ್ಕೆ ಹೊರಡುವ ವಿಮಾನವು ಅಬುಧಾಬಿಗೆ 10.45ಕ್ಕೆ ತಲುಪಲಿದೆ. ಅಬುಧಾಬಿಯಿಂದ ರಾತ್ರಿ 11.45ಕ್ಕೆ ಹೊರಡುವ ವಿಮಾನವು ಬೆಳಿಗ್ಗೆ 04.15ಕ್ಕೆ ತಲುಪಲಿದೆ. ಈ ಸೇವೆ ಮಂಗಳವಾರ, ಗುರುವಾರ ಮತ್ತು ಶನಿವಾರ ಇರಲಿದೆ ಎಂದು ತಿಳಿಸಿದೆ. ಈಗಾಗಲೇ ಟಿಕೆಟ್ ಬುಕಿಂಗ್ ಆರಂಭವಾಗಿದೆ ಎಂದು ತಿಳಿಸಿದೆ.

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು: 100 ಕ್ಕೆ ₹620; 12 ಕ್ಕೆ ₹80; ಮೈಸೂರು: 100 ಕ್ಕೆ ₹622

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ): ಆರ್‌ಎಸ್‌ಎಸ್-4 ₹181; ಆರ್‌ಎಸ್‌ಎಸ್-5 ₹176; ಗುಡ್ ಲಾಟ್ ₹163

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿ.ಗೆ): ಶೇಂಗಾ (ರಿಫೈನ್ಡ್) ₹1415 (1410); ಸೋಯಾ (ರಿಫೈನ್ಡ್) ₹1260 (1255); ಸೂರ್ಯಕಾಂತಿ (ರಿಫೈನ್ಡ್) ₹1460 (1460); ಪಾಮೋಲಿನ್ ₹1250 (1250)

ಮುದ್ರಮನೆ ಕಾಫಿ (50 ಕೆ.ಜಿ.): ಎಪಿ ₹28750; ಎಸಿ ₹15540; ಆರ್‌ಪಿ ₹19000; ಆರ್‌ಸಿ ₹11080

ರಾಮನಗರ ರೇಷ್ಮೆಗೂಡು: ಮಿಶ್ರತಳಿ (ಪ್ರ.ಕೆ.ಜಿ.) ₹355-683; ದ್ವಿತಳಿ (ಪ್ರ.ಕೆ.ಜಿ.) ₹400-800

ಡಿಜಿಟಲ್ ಗೋಲ್ಡ್: ಸೆಬಿ ಎಚ್ಚರಿಕೆ

ಎಚ್ಚರಿಕೆಯಿಂದ ಇರುವಂತೆ ಹೂಡಿಕೆದಾರರಿಗೆ ಮಂಡಳಿ ಕಿವಿಮಾತು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಡಿಜಿಟಲ್ ಗೋಲ್ಡ್ ಸರಕುಜನ್ಯ ಹೂಡಿಕೆ ಉತ್ಪನ್ನ ಅಲ್ಲ
- ಡಿಜಿಟಲ್ ಗೋಲ್ಡ್ ಸೆಬಿ ಮಾನ್ಯತೆಯ ಹೂಡಿಕೆ ಉತ್ಪನ್ನಕ್ಕಿಂತ ಭಿನ್ನ
- ಚಿನ್ನದ ಇಟಿಎಫ್‌ಗಳು, ಇಜಿಆರ್ ಕಾನೂನು ಮಾನ್ಯತೆಯ ಉತ್ಪನ್ನಗಳು

ಬೆಂಗಳೂರು: 'ಡಿಜಿಟಲ್ ಗೋಲ್ಡ್'ನಲ್ಲಿ ಹೂಡಿಕೆ ಮಾಡುವವರು ಎಚ್ಚರಿಕೆಯಿಂದ ಇರಬೇಕು ಎಂಬ ಕಿವಿಮಾತು ಹೇಳಿರುವ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ), ಬಂಡವಾಳ ಮಾರುಕಟ್ಟೆಗಳ ವ್ಯಾಪ್ತಿಯಲ್ಲಿ ಹೂಡಿಕೆದಾರರ ರಕ್ಷಣೆಗೆ ಇರುವ ಯಾವುದೇ ವ್ಯವಸ್ಥೆಗಳು ಈ ಬಗೆಯ ಹೂಡಿಕೆಗಳಿಗೆ ಅನ್ವಯ ಆಗುವುದಿಲ್ಲ ಎಂದು ಸ್ಪಷ್ಟಪಡಿಸಿದೆ.

'ಡಿಜಿಟಲ್ ಗೋಲ್ಡ್ ಅಥವಾ ಇ–ಗೋಲ್ಡ್' ಹೆಸರಿನ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಸೆಬಿ ಈ ಕಿವಿಮಾತನ್ನು ಶನಿವಾರ ಹೇಳಿದೆ.

ಕೆಲವು ಡಿಜಿಟಲ್ ಅಥವಾ ಆನ್‌ಲೈನ್ ವೇದಿಕೆಗಳು 'ಡಿಜಿಟಲ್ ಗೋಲ್ಡ್ ಅಥವಾ ಇ– ಗೋಲ್ಡ್' ಹೆಸರಿನ ಹೂಡಿಕೆ ಉತ್ಪನ್ನಗಳಲ್ಲಿ ಹಣ ತೊಡಗಿಸಲು ಹೂಡಿಕೆದಾರರಿಗೆ ಅವಕಾಶ ಮಾಡಿಕೊಡುತ್ತಿವೆ. ಇದು ಸೆಬಿ ಗಮನಕ್ಕೆ ಬಂದಿದೆ. ಭೌತಿಕ ಚಿನ್ನದ ಮೇಲಿನ ಹೂಡಿಕೆಗೆ ಡಿಜಿಟಲ್ ಗೋಲ್ಡ್ ಪರ್ಯಾಯ ಎಂದು ಅದರ ಬಗ್ಗೆ ಹೇಳಲಾಗುತ್ತಿದೆ.

ಆದರೆ, ಇಂತಹ ಡಿಜಿಟಲ್ ಗೋಲ್ಡ್ ಹೂಡಿಕೆ ಉತ್ಪನ್ನಗಳು ಸೆಬಿ ನಿಯಂತ್ರಿತ ಚಿನ್ನದ ಹೂಡಿಕೆ ಉತ್ಪನ್ನಗಳಿಗಿಂತ ಭಿನ್ನ ಎಂದು ಪತ್ರಿಕಾ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಲಾಗಿದೆ. ಡಿಜಿಟಲ್ ಗೋಲ್ಡ್ ಅಥವಾ ಇ–ಗೋಲ್ಡ್ ಎಂಬುದು ಷೇರು ಅಥವಾ ಸಾಲಪತ್ರದಂತೆ ಅಧಿಸೂಚಿತ ಹೂಡಿಕೆ ಉತ್ಪನ್ನ ಅಲ್ಲ, ಅವುಗಳನ್ನು ಸರಕುಜನ್ಯ ಹೂಡಿಕೆ ಉತ್ಪನ್ನಗಳು ಎಂದು ಕೂಡ ಕಾನೂನಿನ ಅಡಿ ಪರಿಗಣಿಸಿಲ್ಲ ಎಂದು ಸೆಬಿ ವಿವರಿಸಿದೆ.

ಇವು ಸೆಬಿ ವ್ಯಾಪ್ತಿಯಿಂದ ಸಂಪೂರ್ಣವಾಗಿ ಹೊರಗೆ ಇವೆ. ಇಂತಹ ಡಿಜಿಟಲ್ ಗೋಲ್ಡ್ ಉತ್ಪನ್ನಗಳ ಮೇಲಿನ ಹೂಡಿಕೆಯು, ಹೂಡಿಕೆದಾರರ ಪಾಲಿಗೆ ಗಣನೀಯ ಮಟ್ಟದ ಹೂಡಿಕೆ ಅಪಾಯವನ್ನು ಹೊತ್ತುತರುತ್ತವೆ ಎಂದು ಸೆಬಿ ಎಚ್ಚರಿಸಿದೆ.

ಚಿನ್ನದ ಮೇಲೆ ಹಾಗೂ ಚಿನ್ನಕ್ಕೆ ಸಂಬಂಧಿಸಿದ ಉತ್ಪನ್ನಗಳ ಮೇಲೆ ಹೂಡಿಕೆಗೆ ಸೆಬಿ ಹಲವು ಮಾರ್ಗಗಳನ್ನು ಕಲ್ಪಿಸಿದೆ. ಮ್ಯೂಚುವಲ್ ಫಂಡ್ ಕಂಪನಿಗಳು ನೀಡುವ ಚಿನ್ನದ ಇಟಿಎಫ್‌ಗಳು, ಷೇರುಪೇಟೆಗಳ ವಹಿವಾಟಿನಲ್ಲಿ ಬಳಸಬಹುದಾದ ಎಲೆಕ್ಟ್ರಾನಿಕ್ ಗೋಲ್ಡ್ ರಿಸಿಪ್ಟ್ಸ್ (ಇಜಿಆರ್) ಅಂತಹ ಕಾನೂನು ಮಾನ್ಯತೆಯ ಉತ್ಪನ್ನಗಳು. ಸೆಬಿ ನೋಂದಾಯಿತ ಮಧ್ಯವರ್ತಿಗಳ ಮೂಲಕ, ಸೆಬಿಯ ನಿಯಂತ್ರಣ ಇರುವ ಇಂತಹ ಉತ್ಪನ್ನಗಳಲ್ಲಿ ಹೂಡಿಕೆ ಮಾಡಬಹುದು, ಇವು ಸೆಬಿ ಹೇಳಿರುವ ಕಾನೂನಿನ ಚೌಕಟ್ಟಿನ ವ್ಯಾಪ್ತಿಗೆ ಬರುತ್ತವೆ ಎಂದು ಪ್ರಕಟಣೆಯು ವಿವರಿಸಿದೆ.

ಸುದ್ದಿ 2 ನಿಮಿಷ

ಕರ್ಣಾಟಕ ಬ್ಯಾಂಕ್ ಲಾಭ ಶೇ 9.1ರಷ್ಟು ಏರಿಕೆ

ಬೆಂಗಳೂರು: ಖಾಸಗಿ ವಲಯದ ಕರ್ಣಾಟಕ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹319.12 ಕೋಟಿ ಲಾಭ ಗಳಿಸಿದ್ದು, ಜೂನ್‌ಗೆ ಕೊನೆಗೊಂಡ ತ್ರೈಮಾಸಿಕದ ಲಾಭಕ್ಕೆ ಹೋಲಿಸಿದರೆ ಶೇಕಡ 9.1ರಷ್ಟು ಹೆಚ್ಚಳ ಆಗಿದೆ.

ಜೂನ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹292.40 ಕೋಟಿ ಲಾಭ ಗಳಿಸಿತ್ತು. ಬ್ಯಾಂಕ್‌ನ ಆಡಳಿತ ಮಂಡಳಿಯ ಸಭೆಯು ಮಂಗಳೂರಿನಲ್ಲಿ ಶನಿವಾರ ನಡೆಯಿತು. ಹಣಕಾಸಿನ ಫಲಿತಾಂಶಕ್ಕೆ ಮಂಡಳಿಯು ಅನುಮೋದನೆ ನೀಡಿದೆ.

2025–26ನೇ ಹಣಕಾಸು ವರ್ಷದ ಮೊದಲಾರ್ಧದಲ್ಲಿ (ಸೆಪ್ಟೆಂಬರ್ 30ಕ್ಕೆ ಕೊನೆಗೊಂಡ 6 ತಿಂಗಳ ಅವಧಿ) ಬ್ಯಾಂಕ್‌ನ ನಿವ್ವಳ ಲಾಭವು ₹611.52 ಕೋಟಿ ಆಗಿದೆ. ಹಿಂದಿನ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ಬ್ಯಾಂಕ್ ₹736.40 ಕೋಟಿ ನಿವ್ವಳ ಲಾಭ ಕಂಡಿತ್ತು ಎಂದು ಪ್ರಕಟಣೆ ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ ಬ್ಯಾಂಕ್‌ನ ನಿವ್ವಳ ಬಡ್ಡಿ ವರಮಾನವು ₹728 ಕೋಟಿ ಆಗಿದೆ. ಬ್ಯಾಂಕ್‌ನ ಒಟ್ಟು ಎನ್‌ಪಿಎ ಪ್ರಮಾಣವು ಶೇ 3.33ಕ್ಕೆ ಇಳಿಕೆ ಆಗಿದೆ. ನಿವ್ವಳ ಎನ್‌ಪಿಎ ಪ್ರಮಾಣವು ಜೂನ್ ತ್ರೈಮಾಸಿಕದಲ್ಲಿ ಶೇ 1.44ರಷ್ಟು ಇದ್ದಿದ್ದು, ಈಗ ಶೇ 1.35ಕ್ಕೆ ತಗ್ಗಿದೆ.

'ಕೃಷಿ ವಲಯ, ವೈಯಕ್ತಿಕ ಹಣಕಾಸಿನ ಅಗತ್ಯಗಳು, ಎಂಎಸ್‌ಎಂಇ ವಲಯದ ಮೇಲೆ ಗಮನ ನೀಡುವುದನ್ನು ಬ್ಯಾಂಕ್ ಮುಂದುವರಿಸಲಿದೆ' ಎಂದು ಹಣಕಾಸಿನ ಫಲಿತಾಂಶವನ್ನು ಪ್ರಕಟಿಸುವ ಸಂದರ್ಭದಲ್ಲಿ ಬ್ಯಾಂಕ್‌ನ ಎಂ.ಡಿ. ಹಾಗೂ ಸಿಇಒ ರಾಘವೇಂದ್ರ ಎಸ್. ಭಟ್ ಹೇಳಿದ್ದಾರೆ.

ಎಚ್1–ಬಿ ವೀಸಾ ದುರುಪಯೋಗ 175 ಪ್ರಕರಣ ತನಿಖೆಗೆ ಆದೇಶ

ನ್ಯೂಯಾರ್ಕ್ (ಪಿಟಿಐ): ಎಚ್1–ಬಿ ವೀಸಾ ದುರುಪಯೋಗ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೇತೃತ್ವದ ಸರ್ಕಾರವು ಇಂಥ 175 ಪ್ರಕರಣಗಳ ಕುರಿತು ತನಿಖೆಗೆ ಆದೇಶಿಸಿದೆ.

ಇದರಲ್ಲಿ ಕಡಿಮೆ ವೇತನ, ಹುದ್ದೆಯೇ ಇಲ್ಲದೆ ವೀಸಾ ವಿತರಣೆ ಹಾಗೂ ವೀಸಾ ಹೊಂದಿದ ನೌಕರರಿಗೆ ಕೆಲಸ ನೀಡದೆ ಕೂರಿಸಿ ವೀಸಾ ದುರುಪಯೋಗ ಮಾಡಿಕೊಂಡ ಪ್ರಕರಣಗಳೂ ಸೇರಿವೆ.

'ಅಮೆರಿಕದವರಿಗೆ ನೌಕರಿ ಮೊದಲು' ಎಂಬ ಗುರಿಯೊಂದಿಗೆ ದೇಶದಲ್ಲಿರುವ ಉದ್ಯೋಗಾವಕಾಶಗಳನ್ನು ರಕ್ಷಿಸುವುದರ ಭಾಗವಾಗಿ ಈ ತನಿಖೆ ನಡೆಸಲಾಗುತ್ತಿದೆ ಎಂದು ಅಮೆರಿಕದ ಕಾರ್ಮಿಕ ಇಲಾಖೆ ಹೇಳಿದೆ.

ಕಾರ್ಮಿಕ ಇಲಾಖೆ ಕಾರ್ಯದರ್ಶಿ ಲೊರಿ ಚಾವೆಜ್ ಡೆರಿಮೆರ್ ಅವರು 'ಎಕ್ಸ್'ನಲ್ಲಿ, 'ಅಮೆರಿನ್ನರ ಉದ್ಯೋಗ ರಕ್ಷಣೆ ಮತ್ತು ಎಚ್-1ಬಿ ವೀಸಾ ದುರುಪಯೋಗ ತಡೆಗೆ ಪ್ರತಿಯೊಂದು ಸಂಪನ್ಮೂಲ ವನ್ನೂ ಸಮರ್ಥವಾಗಿ ಬಳಸಿಕೊಳ್ಳಲಾಗುವುದು. ಉತ್ಕೃಷ್ಟ ಕೌಶಲದ ಉದ್ಯೋಗಗಳು ಅಮೆರಿಕನ್ನರಿಗೆ ಮೊದಲು ಸಿಗಬೇಕು. ಈ ನಿಟ್ಟಿನಲ್ಲಿ ಇಲಾಖೆ ಕಾರ್ಯನಿರ್ವಹಿಸಲಿದೆ' ಎಂದಿದ್ದಾರೆ. ಅಮೆರಿಕದ ಎಚ್-1ಬಿ ವೀಸಾ ಪಡೆದವರಲ್ಲಿ ಭಾರತದ ಐಟಿ ಉದ್ಯೋಗಿಗಳು, ವೈದ್ಯರು ಮುಂಚೂಣಿಯಲ್ಲಿದ್ದಾರೆ. ಆದರೆ ಸದ್ಯ ತನಿಖೆಗೆ ಆದೇಶಿಸಿರುವ 175 ಪ್ರಕರಣಗಳು ಯಾವುವು ಎಂಬ ಮಾಹಿತಿಯನ್ನು ಇಲಾಖೆ ನೀಡಿಲ್ಲ.

---

15 ಮೃತದೇಹಗಳನ್ನು ಹಸ್ತಾಂತರಿಸಿದ ಇಸ್ರೇಲ್

ಖಾನ್ ಯೂನುಸ್ (ಎಪಿ): ಕದನವಿರಾಮ ಒಪ್ಪಂದದಂತೆ 15 ಪ್ಯಾಲೆಸ್ಟೀನಿಯನ್ನರ ಮೃತದೇಹಗಳನ್ನು ಇಸ್ರೇಲ್ ಶನಿವಾರ ಹಸ್ತಾಂತರಿಸಿದೆ ಎಂದು ಇಲ್ಲಿನ ನಾಸಿರ್ ಆಸ್ಪತ್ರೆ ಮಾಹಿತಿ ನೀಡಿದೆ. ಒಬ್ಬ ಒತ್ತೆಯಾಳುವಿನ ಮೃತದೇಹದ ಅವಶೇಷಗಳನ್ನು ಹಮಾಸ್‌ನವರು ಶುಕ್ರವಾರ ಹಸ್ತಾಂತರ ಮಾಡಿದ್ದರು.

ಪ್ರತಿ ಒತ್ತೆಯಾಳುವಿಗೆ 15 ಪ್ಯಾಲೆಸ್ಟೀನಿಯನ್ನರನ್ನು ವಾಪಸು ನೀಡುವುದಾಗಿ ಇಸ್ರೇಲ್ ಒಪ್ಪಿಕೊಂಡಿತ್ತು. 'ಶನಿವಾರದವರೆಗೂ ಒಟ್ಟು 300 ಮೃತದೇಹಗಳನ್ನು ಇಸ್ರೇಲ್ ಹಸ್ತಾಂತರಿಸಿದೆ. ಇವುಗಳಲ್ಲಿ 84 ಮೃತದೇಹಗಳ ಗುರುತು ಪತ್ತೆಗಾಗಿ ಡಿಎನ್‌ಎ ಪರೀಕ್ಷೆ ನಡೆಸಬೇಕಾಯಿತು' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಉಕ್ರೇನ್ ಮೇಲೆ ದಾಳಿ: ನಾಲ್ವರ ಸಾವು

ಕೀವ್ (ಎಪಿ): ಉಕ್ರೇನ್‌ನ ವಿವಿಧ ಪ್ರದೇಶಗಳ ಮೇಲೆ ರಷ್ಯಾದಿಂದ ಕ್ಷಿಪಣಿ ಮತ್ತು ಡ್ರೋನ್ ದಾಳಿ ಮುಂದುವರಿದಿದೆ. ಶನಿವಾರ ನಡೆದ ದಾಳಿಯಲ್ಲಿ ಕನಿಷ್ಠ ನಾಲ್ವರು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ.

ಶನಿವಾರ ಮುಂಜಾನೆ ಪೂರ್ವ ಉಕ್ರೇನ್‌ನ ಡ್ನಿಪ್ರೋ ನಗರದ ಅಪಾರ್ಟ್‌ಮೆಂಟ್‌ಗೆ ಡ್ರೋನ್ ದಾಳಿಯಿಂದ ಬೆಂಕಿ ಹೊತ್ತಿಕೊಂಡಿದೆ. ನಿದ್ರೆಯಲ್ಲಿದ್ದ ಮೂವರು ಸಾವಿಗೀಡಾಗಿ, 12 ಮಂದಿ ಗಾಯಗೊಂಡಿದ್ದಾರೆ. ಕಾರ್ಕೀವ್‌ನ ವಿದ್ಯುತ್ ಘಟಕಗಳ ಮೇಲೂ ದಾಳಿ ನಡೆದಿದ್ದು, ಕಾರ್ಮಿಕನೊಬ್ಬ ಜೀವಬಿಟ್ಟಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾ 458 ಡ್ರೋನ್, 45 ಕ್ಷಿಪಣಿಗಳನ್ನು ಬಳಸಿತ್ತು. 406 ಡ್ರೋನ್, 9 ಕ್ಷಿಪಣಿಗಳನ್ನು ವಿಫಲಗೊಳಿಸಲಾಗಿದೆ. 25 ಪ್ರದೇಶಗಳ ಮೇಲೆ ದಾಳಿ ನಡೆದಿದೆ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

ಸೇನೆ ಮಾತ್ರ ಗುರಿ– ರಷ್ಯಾ ಸ್ಪಷ್ಟನೆ: ರಷ್ಯಾ ನಿತ್ಯವೂ ದಾಳಿ ನಡೆಸಿ ನಾಗರಿಕರ ಹತ್ಯೆ ಮತ್ತು ಗಾಯಗೊಳಿಸುತ್ತಿದೆ ಎಂದು ಉಕ್ರೇನ್ ಆರೋಪಿಸುತ್ತಿದ್ದರೆ, ಸೇನಾ ನೆಲೆ ಮತ್ತು ಸೇನೆಗೆ ಇಂಧನ ಪೂರೈಸುವ ಘಟಕಗಳ ಮೇಲೆ ಮಾತ್ರ ದಾಳಿ ಮಾಡುತ್ತಿದ್ದೇವೆ ಎಂದು ರಷ್ಯಾ ರಕ್ಷಣಾ ಇಲಾಖೆ ಸ್ಪಷ್ಟನೆ ನೀಡಿದೆ. ಮತ್ತೊಂದೆಡೆ ರಷ್ಯಾದ ತೈಲ ಸಂಸ್ಕರಣಾ ಘಟಕಗಳನ್ನು ಗುರಿಯಾಗಿಸಿ ತಾನೂ ದಾಳಿ ಮಾಡುತ್ತಿರುವುದಾಗಿ ಉಕ್ರೇನ್ ಹೇಳಿಕೊಂಡಿದೆ. ಉಕ್ರೇನ್‌ನ ದಾಳಿಯಲ್ಲಿ ಸರಟೋವ್‌ನಲ್ಲಿ ಇಬ್ಬರಿಗೆ ಗಾಯಗಳಾಗಿವೆ. 82 ಡ್ರೋನ್ ಹೊಡೆದುರುಳಿಸಲಾಗಿದೆ ಎಂದು ರಷ್ಯಾ ತಿಳಿಸಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

PUBLIC NOTICE

IN THE COURT OF THE HON'BLE SENIOR CIVIL JUDGE AT MALUR
O.S. NO. 11/2024

PLAINTIFFS : Smt. Rathnamma and others
V/S
DEFENDANTS : Sri. Venkateshppa and others
SUMMONS TO DEFENDANT No. 2,3,11,17 and 27 to 30

2. **Smt. Ramakka** D/o. Late Venkatappa, W/o. Venkatappa Aged about 60 years
3. **Smt. Lakshmamma** D/o Late Venkatappa Aged about 58 years Defendant No.2 and 3 are R/o. No. 356, Budgareddy Layout, Neraluru, Bengaluru - 562187.
11. **Smt. M.Nirmala** D/o. Late Muni Mariyappa @ Mariyappa W/o. Gopalappa Aged about 65 years. R/o Jigani Village, Hargadde Post, Anekal Taluk, Bengaluru District.
17. **Smt. Yashodha** D/o. Late Sakappa W/o. Shiva, Aged about 50 years R/o Door No. 92/91, Near Innovative School, Dodda Basti, Ramasandra, Opp. Raju Mills, Bangalore - 560056.
27. **Smt. Chandrika** W/o. Late A.Manjunath, Aged about 45 years.
28. **Smt. M. Amulya** D/o. Late A.Manjunath, Aged about 27 years.
29. **Smt. M. Raksha** D/o. Late A.Manjunath, Aged about 24 years.
30. **Sri. M. Druva** S/o. Late A.Manjunath, Aged about 20 years.

The defendants No. 27 to 30 are R/o Door No.1914, 19th Cross, 35th D Main Road, 6th Block, Jayanagar, Near Muneshwar Temple, Doddanakkundi, Bengaluru - 560082.

Whereas the plaintiffs have instituted above suit against you the addressees and other defendants for the relief of partition and separate possession in OS No.11/2024 on the file of Senior Civil Judge and JMFC Court at Malur. Hence this suit summons published and intimating you to appear in the court in person or through advocate on **dated 15-12-2025 at 11 A.M.** failing which case will be proceeded in your absence.

SCHEDULE

All that piece and parcel of the land bearing old Sy.No.64 and its new Sy.No.64/2 measuring 2 acres 1 guntas bounded as:-
East by: Sy.No.64/1 belongs to Venkatesh, **West by:** Sy.No.65 belongs to Pillappa, **North by:** Doddakadatur Gadi and Sriramappa's land, **South by:** Malur Tekal Road
2) All that piece and parcel of the land bearing old Sy No. 73 and its new Sy.No, 73/2 measuring 2 acre 19 guntas bounded as:-
East by: Property belongs to Guttaswamy 32nd defendant Sy.No.38
West by: Road, **North by:** Sy.No.73/1 belongs to K.b. Muniswamy and Karade Venkob Rao and their childrens, **South by:** Malur Tekal Road and Property belongs to Guttaswamy 32nd defendant Sy.No.38
The suit item No.1 and 2 are situated at Chikka Shivara Village, Kasaba Hobli, Malur Taluk.
Given under my hand and seal of this court on this day of 03-11-2025.
By the order of
Sd/- SHERISTEDAR
Senior Civil Judge Court, Malur- 563130
R.V. Narayana Kumar, Advocate.
1st Floor, Annaiareddy Building,Near Bus Stand, Malur- 563130.
Kolar district Karnatata

ಉದ್ಯೋಗಾವಕಾಶ

General

ನಮಗೆ ಅನುಭವ ಇರುವ ವಿದ್ಯುತ್ ಸೋಲಾರ್ ಮತ್ತು ಬ್ಯಾಟರಿ ಹಾಗೂ ಯು.ಪಿ.ಎಸ್ (ಎಲೆಕ್ಟ್ರಿಷಿಯನ್) ಕೆಲಸಗಾರರು ಬೇಕಾಗಿದ್ದಾರೆ ಉಚಿತ ವಸತಿ ನೀಡಲಾಗುವುದು. ಸಂಪರ್ಕಿಸಿ: 9448511991.

ಬೆಂಗಳೂರಿನ ಗಂಗಾನಗರದ ಬಳಿ ಪೆಟ್ರೋಲ್ ಪಂಪ್ ಗಾಗಿ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಕರೆ ಮಾಡಿ. 8123615033 / 8792993263

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777503, 8884777502.

ಪ್ರವಾಸ

Travel

★ಶ್ರೀಶ್ರೇಯಸ್ ಟೂರ್ಸ್★ 04.12.2025,04.01.2026 4ದಿನಗಳು ಅಖಂಡ ಒರಿಸ್ಸಾರಾಜ್ಯ ಪ್ರವಾಸ.04.01.2026 04.02.2026 6ದಿನಗಳು ಅಡಮಾನ್ ದ್ವೀಪಪ್ರವಾಸ. 09.12.2025 15 ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ (ಅಮರಕಂಠಕ,ಮಯ್ಯಾರ್ ಸಹಿತ).01.12.2025 12.12.2025 10ದಿನಗಳು ಅಖಂಡ ಆಂದ್ರತೆಲಂಗಾಣ ರಾಜ್ಯಪ್ರವಾಸ.22.11.2025 12.12.2025,22.12.2025 10ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.06.12.2025 22.12.2025,22.01.2026 04/06/08ದಿನಗಳು ಕಾಶಿ ಪ್ರಯಾಗ್,ಗಯಾ, ನೈಮಿಷ್ಯಾರಣ್ಯ,ದೇವಘರ್. 11.12.2025 12/16/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್ ಸಿಸ್ಟರ್ಸ್) ಅಸ್ಸಾಂ, ಅರುಣಾಚಲ, ಮೇಘಾಲಯ,ಮಣಿಪುರ,ತ್ರಿಪುರ ನಾಗಲ್ಯಾಂಡ್,ಮಿಝೋರಾಂ. 8073824856 9206979202 9846954639

ವ್ಯಾಪಾರ

Business to Business

Finance

LOAN AGAINST PROPERTY/ BUSINESS/ PROJECTS CONTACT : +918754809650

ವೈಯಕ್ತಿಕ

Change of Name

I, GEETHA Dinesh, D/o, P. Krishnappa, #131, 1st Main. Swathantranagar, Bangalore 49, have changed my name to Geetha Krishnappa, vide affidavit number IN-KA89041558835620X, Dt. - 07/11/2025

ಅಫ್ಗನ್ ಪ್ರಜೆಗಳ ಬಂಧನ ಶೇ146ರಷ್ಟು ಹೆಚ್ಚಳ: ವಿಶ್ವಸಂಸ್ಥೆ

ಪೆಶಾವರ್ (ಪಿಟಿಐ): 'ಗಡಿ ದಾಟುವಿಕೆಗೆ ಪಾಕಿಸ್ತಾನವು ಪುನರ್ ಅವಕಾಶ ಕಲ್ಪಿಸಿದ ಬಳಿಕ ಅಫ್ಗನ್ ಪ್ರಜೆಗಳ ಬಂಧನದ ಪ್ರಮಾಣವು ಶೇಕಡ 146ರಷ್ಟು ಏರಿಕೆಯಾಗಿದೆ' ಎಂದು ವಿಶ್ವಸಂಸ್ಥೆಯ ವರದಿಯು ತಿಳಿಸಿದೆ.

ಒಂದು ವಾರದಲ್ಲಿ 7,764 ಅಫ್ಗನ್ ನಾಗರಿಕರನ್ನು ಬಂಧಿಸಲಾಗಿದೆ. ಈ ಹಿಂದಿನ ವಾರಕ್ಕೆ ಹೋಲಿಸಿದರೆ, ತೀವ್ರತರದಲ್ಲಿ ಏರಿಕೆಯಾಗಿದೆ ಎಂದು ವಿಶ್ವಸಂಸ್ಥೆಯ ಪುನರ್‌ವಸತಿಯ ಹೈ ಕಮಿಷನರ್ ಹಾಗೂ ಅಂತರ ರಾಷ್ಟ್ರೀಯ ವಲಸೆ ಸಂಸ್ಥೆಯು ಬಿಡುಗಡೆಗೊಳಿಸಿದ ಇತ್ತೀಚಿಗಿನ ವರದಿಯಲ್ಲಿ ತಿಳಿಸಿದೆ.

ಬಲೂಚಿಸ್ತಾನವನ್ನು ಕೇಂದ್ರಿಕರಿಸಿ, ಪಾಕಿಸ್ತಾನವು ದಮನ ಕಾರ್ಯಾಚರಣೆ ನಡೆಸಿತ್ತು. ಬಂಧಿತರಲ್ಲಿ ಶೇಕಡಾ 86ರಷ್ಟು ಮಂದಿ ಅಲ್ಲಿ ನೆಲಸಿದವರೇ ಸೇರಿದ್ದಾರೆ.

ಅಕ್ಟೋಬರ್ 26ರಿಂದ ನವೆಂಬರ್ 1ರವರೆಗೆ ನಡೆದ ಬಂಧಿತರಲ್ಲಿ ಅಫ್ಗನ್ ಪೌರತ್ವ ಕಾರ್ಡ್ ಹೊಂದಿದ ಹಾಗೂ ಯಾವುದೇ ದಾಖಲೆ ಹೊಂದಿರದ ಅಫ್ಗಾನಿಸ್ತಾನದ ನಿವಾಸಿಗಳ ಸಂಖ್ಯೆ ಶೇ 77ರಷ್ಟಿದ್ದು, ನೋಂದಣಿ ಕಾರ್ಡ್ ಹೊಂದಿರದ ವ್ಯಕ್ತಿಗಳು ಶೇ 23ರಷ್ಟಿದ್ದಾರೆ ಎಂದಿದೆ.

'ಭಾರತ ಹಿಂದೂ ರಾಷ್ಟ್ರ'

ಒಂದನೇ ಪುಟದಿಂದ...

ಕೇಶವ ಬಲಿರಾಮ ಹೆಡಗೇವಾರ್ ಅವರು 1925ರ ಸೆಪ್ಟೆಂಬರ್ 27 ರಂದು ಮಹಾರಾಷ್ಟ್ರದ ನಾಗ್ಪುರದಲ್ಲಿ ಆರ್‌ಎಸ್‌ಎಸ್ ಸ್ಥಾಪಿಸಿದ್ದರು. ಹಿಂದೂ ಸಂಸ್ಕೃತಿ, ಹಿಂದೂ ಒಗ್ಗಟ್ಟು ಮತ್ತು ರಾಷ್ಟ್ರ ಸ್ವಾವಲಂಬನೆ ಸಾಧಿಸುವುದು ಸಂಘದ ಆಶಯವಾಗಿದ್ದು, ಸದಸ್ಯರಿಗೆ ವಿವಿಧ ರೀತಿಯ ತರಬೇತಿ, ಸೈದ್ಧಾಂತಿಕ ಶಿಕ್ಷಣ ನೀಡಲಾಗುತ್ತದೆ ಎಂದು ವಿವರಿಸಿದರು.

ಸಂಘವು ಸ್ವಯಂ ಬೆಂಬಲಿತ ಸಂಸ್ಥೆಯಾಗಿದ್ದು, ಸಂಘ ನಡೆಸಲು ಹೊರಗಿನಿಂದ ಹಣಕಾಸಿನ ನೆರವು ಪಡೆದಿಲ್ಲ. ಸ್ವಯಂ ಸೇವಕರಿಂದ ವರ್ಷಕ್ಕೆ ಒಂದು ಬಾರಿ ಗುರುದಕ್ಷಿಣೆ ಪಡೆಯುವ ಮೂಲಕ ಸಂಘಟನೆಯ ವೆಚ್ಚಗಳನ್ನು ಭರಿಸಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ವೇದಿಕೆಯಲ್ಲಿ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಕ್ಷೇತ್ರೀಯ ಸಂಘಚಾಲಕ ಪಿ. ವಾಮನ ರಾವ್ ಶೆಣೈ, ಕರ್ನಾಟಕ ದಕ್ಷಿಣ ಪ್ರಾಂತ ಸಂಘಚಾಲಕ ಜಿ.ಎಸ್. ಉಮಾಪತಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಹ ಸರಕಾರ್ಯವಾಹ ಸಿ.ಆರ್. ಮುಕುಂದ, ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ್ ಮಂಗೇಶ್ ಬೇಂಢೆ, ಅಖಿಲ ಭಾರತೀಯ ಸಂಪರ್ಕ ಪ್ರಮುಖ್ ರಾಮಲಾಲ್, ಸಹಸಂಪರ್ಕ ಪ್ರಮುಖರಾದ ರಮೇಶ್ ಪಪ್ಪಾ, ಭರತ್ ಭೂಷಣ್, ಸುನಿಲ್ ದೇಶಪಾಂಡೆ, ಅಖಿಲ ಭಾರತೀಯ ಪ್ರಚಾರ ಪ್ರಮುಖ್ ಸುನಿಲ್ ಅಂಬೇಕರ್, ಸಹಪ್ರಚಾರ ಪ್ರಮುಖರಾದ ಪ್ರದೀಪ್ ಜೋಷಿ, ನರೇಂದ್ರ ಕುಮಾರ್, ಅಖಿಲ ಭಾರತೀಯ ಸಹ ಬೌದ್ಧಿಕ ಪ್ರಮುಖ್ ಸುಧೀರ್ ಹಾಜರಿದ್ದರು.

ಸೈಲ್ ವಿರುದ್ಧ ಜಾಮೀನು ರಹಿತ ಬಂಧನ ವಾರಂಟ್

ಪ್ರಜಾವಾಣಿ ವಾರ್ತೆ

ಸತೀಶ್ ಸೈಲ್

ಬೆಂಗಳೂರು: 'ಬೇಲೆಕೇರಿ ಬಂದರಿನಿಂದ ಅಕ್ರಮವಾಗಿ ಅದಿರು ಸಾಗಣೆ ಮತ್ತು ಮಾರಾಟ ಮಾಡಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ನ್ಯಾಯಾಲಯದ ವಿಚಾರಣೆಗೆ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಸಹಕಾರ ನೀಡುತ್ತಿಲ್ಲ' ಎಂಬ ಕಾರಣಕ್ಕೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಅವರ ವಿರುದ್ಧ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸಿದೆ.

ಸತೀಶ್ ಸೈಲ್ ಮತ್ತಿತರರ ವಿರುದ್ಧ ಸಿಬಿಐ ದಾಖಲಿಸಿರುವ ಪ್ರಕರಣವನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಸತೀಶ್ ಸೈಲ್ ಪರ ಕಿರಿಯ ವಕೀಲರು, 'ಅರ್ಜಿದಾರರ ಪರ ಹಿರಿಯ ವಕೀಲರು ಮತ್ತು ಅರ್ಜಿದಾರರು ಧಾರವಾಡಕ್ಕೆ ತೆರಳಿರುವ ಕಾರಣದಿಂದ ಗೈರಾಗಿದ್ದಾರೆ. ಆದ್ದರಿಂದ ವಿನಾಯತಿ ನೀಡಬೇಕು' ಎಂದು ಕೋರಿದರು.

ಆದರೆ, ನ್ಯಾಯಾಧೀಶರು, 'ಇದು 2014ರ ಪ್ರಕರಣ. ನ್ಯಾಯಾಲಯ ಈ ಹಿಂದಿನ ಸಂದರ್ಭಗಳಲ್ಲಿ ಅರ್ಜಿದಾರರ ಗೈರು ಹಾಜರಿಗೆ ವಿನಾಯತಿ ನೀಡಿತ್ತು. ಆದಾಗ್ಯೂ, ನ್ಯಾಯಾಲಯ ಪಾಟಿ ಸವಾಲು ನಡೆಸುತ್ತಿರುವ ಈ ಸಂದರ್ಭದಲ್ಲಿ, ವಿಚಾರಣೆ ವಿಳಂಬಗೊಳಿಸಲು ವಕೀಲರು ಮುಂದೂಡಿಕೆಯ ಮನವಿ ಮಾಡಿದ್ದಾರೆ. ಬೇರೊಂದು ನ್ಯಾಯಾಲಯದಲ್ಲಿ ಕಾರ್ಯನಿರತವಾಗಿದ್ದೇನೆ ಎಂಬ ಕಾರಣಕ್ಕೆ ವಕೀಲರ ಹಾಜರಿಗೆ ವಿನಾಯತಿ ನೀಡಿ ವಿಚಾರಣೆಯನ್ನು ಮುಂದೂಡಲು ಆಧಾರ ಎನಿಸುವುದಿಲ್ಲ ಎಂಬ ಸ್ಥಾಪಿತ ಕಾನೂನಿನ ಅಡಿಯಲ್ಲಿ ಈ ಅರ್ಜಿ ತಿರಸ್ಕರಿಸಲಾಗುತ್ತಿದೆ' ಎಂದು ಆದೇಶಿಸಿದರು.

'ಈ ನ್ಯಾಯಾಲಯ ಹಾಲಿ ಮತ್ತು ಮಾಜಿ ಸಂಸದರು- ಶಾಸಕರ ವಿರುದ್ಧದ ಕ್ರಿಮಿನಲ್ ಪ್ರಕರಣಗಳನ್ನು ಸಾಧ್ಯವಾದಷ್ಟು ಬೇಗ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ನಿರ್ದೇಶನಗಳ ಪ್ರಕಾರ ಸ್ಥಾಪಿಸಿದ ವಿಶೇಷ ನ್ಯಾಯಾಲಯವಾಗಿದೆ. ಹಾಲಿ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆ ನಡೆಯುತ್ತಿರುವ ಸಂದರ್ಭದಲ್ಲಿ ಎಲ್ಲಾ ಆರೋಪಿಗಳೂ ಹಾಜರಿರುವಾಗ ಮೊದಲ ಆರೋಪಿಯಾದ ಇವರೊಬ್ಬರ ಗೈರನ್ನು ಮನ್ನಿಸಲಾಗದು. ಹಾಗಾಗಿ, ಸತೀಶ್ ಸೈಲ್ ವಿರುದ್ಧ ಬಲವಂತದ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಇದೇ ವೇಳೆ ಜಾರಿ ನಿರ್ದೇಶನಾಲಯ (ಇ.ಡಿ) ದಾಖಲಿಸಿರುವ ಮತ್ತೊಂದು ಪ್ರಕರಣದಲ್ಲಿ ವೈದ್ಯಕೀಯ ಚಿಕಿತ್ಸೆ ಆಧಾರದಡಿ ಮಧ್ಯಂತರ ಜಾಮೀನು ಪಡೆದು ಹೊರಗಿರುವ ಸತೀಶ್ ಸೈಲ್ ಅವರ ಜಾಮೀನು ಅರ್ಜಿಯನ್ನೂ (ವೈದ್ಯಕೀಯ ಕಾರಣದ ಅರ್ಜಿ) ನ್ಯಾಯಾಧೀಶರು ವಜಾಗೊಳಿಸಿ ಆದೇಶಿಸಿದರು.

ಸಾಕ್ಷಿ ವಿಚಾರಣೆಯಲ್ಲಿ 24 ಆರೋಪಿಗಳು ನ್ಯಾಯಾಲಯದಲ್ಲಿ ಹಾಜರಿದ್ದರು.

ಬಾಲಕಿಯರ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದುಕೊಂಡ ಬೀಗಲ್ಸ್ ಬಿ.ಸಿ. ತಂಡದ ಆಟಗಾರ್ತಿಯರು

ಮಿನಿ ಗೇಮ್ಸ್: ಎಂಸಿಎಚ್‌ಎಸ್ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರಿನ ಎಂಸಿಎಚ್‌ಎಸ್ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡವು ಇಲ್ಲಿ ನಡೆಯುತ್ತಿರುವ 'ರಾಜ್ಯ ಮಿನಿ ಗೇಮ್ಸ್'ನ ಬಾಲಕರ ಬ್ಯಾಸ್ಕೆಟ್‌ಬಾಲ್ ಸ್ಪರ್ಧೆಯಲ್ಲಿ ಸದರ್ನ್ ಬ್ಲೂಸ್ ತಂಡವನ್ನು ಮಣಿಸಿ ಪ್ರಶಸ್ತಿ ಗೆದ್ದುಕೊಂಡಿತು. ಬಾಲಕಿಯರ ವಿಭಾಗದಲ್ಲಿ ಬೀಗಲ್ಸ್ ಬ್ಯಾಸ್ಕೆಟ್‌ಬಾಲ್ ತಂಡವು ಚಾಂಪಿಯನ್ ಆಯಿತು.

ತೀವ್ರ ಪೈಪೋಟಿಯಿದ್ದ ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ಎಂಸಿಎಚ್‌ಎಸ್ ತಂಡವು 55–50ರಿಂದ ಗೆಲುವು ಸಾಧಿಸಿತು. ಮೊದಲಾರ್ಧದಲ್ಲಿ 22–12ರಿಂದ ಮುನ್ನಡೆ ಪಡೆದದ್ದು ಎಂಸಿಎಚ್‌ಎಸ್ ತಂಡಕ್ಕೆ ವರವಾಯಿತು. ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ ಆತಿಥೇಯ ಜಿಲ್ಲೆಯ ಬೀಗಲ್ಸ್ ಬಿ.ಸಿ. ತಂಡ 51–31ರಿಂದ ಮಂಡ್ಯ ತಂಡವನ್ನು ಸುಲಭವಾಗಿ ಸೋಲಿಸಿತು.

ಬಾಲಕಿಯರ 10 ಮೀ. ಏರ್ ಪಿಸ್ತೂಲ್ ವೈಯಕ್ತಿಕ ಸ್ಪರ್ಧೆಯಲ್ಲಿ ಬೆಂಗಳೂರಿನ ಆವಂತಿಕಾ ಮಧು ಸ್ವರ್ಣಕ್ಕೆ ಗುರಿ ಇಟ್ಟರು. ತಂಡ ವಿಭಾಗದ ಸ್ಪರ್ಧೆಯಲ್ಲಿಯೂ ಆವಂತಿಕಾ, ಕಿಯಾರಾ, ವೈಷ್ಣವಿ ಅವರಿದ್ದ ಆತಿಥೇಯ ಜಿಲ್ಲಾ ತಂಡವು ಚಿನ್ನ ತನ್ನದಾಗಿಸಿಕೊಂಡಿತು.

ಬಾಲಕರ 10 ಮೀ. ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿಯೂ ಆತಿಥೇಯ ಶೂಟರ್‌ಗಳು ಪಾರಮ್ಯ ಮೆರೆದರು. ವೈಯಕ್ತಿಕ ವಿಭಾಗದಲ್ಲಿ ಅಪೂರ್ವ ವೈದ್ಯನಾಥ್ ಎಸ್. ಚಿನ್ನ ಗೆದ್ದರೆ, ತಂಡ ವಿಭಾಗದಲ್ಲಿ ಶ್ರವಣ್, ಸಿದ್ಧಾರ್ಥ್ ಹಾಗೂ ವಿಶ್ವ ಅವರು ಸ್ವರ್ಣಕ್ಕೆ ಕೊರಳೊಡ್ಡಿದರು.

ಜುಡೊ ಸ್ಪರ್ಧೆಯ ಫಲಿತಾಂಶಗಳು (ಚಿನ್ನದ ಪದಕ ವಿಜೇತರು): 25 ಕೆ.ಜಿ.ಯೊಳಗಿನ ಬಾಲಕರು: ಶೋಲ್ಕ ಕೃಷ್ಣ ಕೆ. (ಬೆಳಗಾವಿ), 30 ಕೆ.ಜಿ.ಯೊಳಗಿನ ಬಾಲಕರು: ಪ್ರದೀಪ್ ಶ್ರೀಕಂಠ ನಾಯಕ್ (ಬೆಳಗಾವಿ), 35 ಕೆ.ಜಿ.ಯೊಳಗಿನ ಬಾಲಕರು: ದರ್ಶನ್ ಕೆ.ಪಿ. (ಚಿಕ್ಕಮಗಳೂರು), 40 ಕೆ.ಜಿ. ಯೊಳಗಿನ ಬಾಲಕರು: ಗಣೇಶ್ ಎನ್.ಆರ್. (ಶಿವಮೊಗ್ಗ).

ಶ್ರೀಮಂತ ರಾಷ್ಟ್ರಗಳು ಇಂಗಾಲ ಹೊರಸೂಸುವಿಕೆ ತಗ್ಗಿಸಲಿ: ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಭಿವೃದ್ಧಿ ಹೊಂದಿದ ದೇಶಗಳು ಇಂಗಾಲ ಹೊರಸೂಸುವಿಕೆಯ ಪ್ರಮಾಣ ತಗ್ಗಿಸುವ ವಾಗ್ದಾನವನ್ನು ಈಡೇರಿಸಲು ಬದ್ಧವಾಗಬೇಕು ಎಂದು ಭಾರತ ಒತ್ತಿ ಹೇಳಿದೆ.

ಹವಾಮಾನ ಬದಲಾವಣೆಗೆ ಸಂಬಂಧಿಸಿದ ಪ್ಯಾರಿಸ್ ಒಪ್ಪಂದ ಜಾರಿಯಾಗಿ ಹತ್ತು ವರ್ಷಗಳು ಕಳೆದರೂ, ಆ ಒಪ್ಪಂದದ ಗುರಿಗಳನ್ನು ತಲುಪಲು ಸಾಧ್ಯವಾಗಿಲ್ಲ ಎಂದು ಬ್ರೆಜಿಲ್‌ನಲ್ಲಿನ ಭಾರತದ ರಾಯಭಾರಿ ದಿನೇಶ್ ಭಾಟಿಯಾ ಹೇಳಿದ್ದಾರೆ.

ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕುರಿತ ಶೃಂಗಸಭೆಯು (ಸಿಒಪಿ–30) ಬ್ರೆಜಿಲ್‌ನ ಬೆಲೆಮ್ ನಗರದಲ್ಲಿ ಸೋಮವಾರ ಆರಂಭವಾಗಲಿದ್ದು, ಅದಕ್ಕೆ ಪೂರಕವಾಗಿ ಭಾರತವು ಈ ಒತ್ತಾಯ ಮಾಡಿದೆ.

ಎರಡು ವಾರಗಳ ಸುದೀರ್ಘ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪಾಲ್ಗೊಳ್ಳುವ ಸಾಧ್ಯತೆಯಿಲ್ಲ. ಆದರೆ, ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಕೊನೆಯಲ್ಲಿ ನಡೆಯಲಿರುವ ಉನ್ನತ ಮಟ್ಟದ ಮಾತುಕತೆ ವೇಳೆ ಶೃಂಗವನ್ನು ಸೇರಿಕೊಳ್ಳಲಿದ್ದಾರೆ.

ಮುಂಬೈ ಧಾರಣೆ (ಶೇಂಗಾ)

08-11-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1425 (1420)
ಒಂದು ವಾರದ ಡೆಲಿವರಿ	1420 (1415)
ಪಾಮ್ ವಾರದ ಡೆಲಿವರಿ	1248 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,19,700 (1,19,600)
ಬೆಳ್ಳಿ ಕೆ.ಜಿಗೆ	1,47,600 (1,48,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಏಷ್ಯಾಕಪ್ ಟ್ರೋಫಿ ವಿವಾದ ಪರಿಹರಿಸಲು ಭಾರತ, ಪಾಕಿಸ್ತಾನ ಮಂಡಳಿ ಯತ್ನ

ದೇವಜಿತ್ ಸೈಕಿಯಾ

ನವದೆಹಲಿ (ಪಿಟಿಐ): ಏಷ್ಯಾ ಕಪ್ ಟ್ರೋಫಿ ವಿವಾದ ಬಗೆಹರಿಸಿಕೊಳ್ಳಲು ಭಾರತ ಮತ್ತು ಪಾಕಿಸ್ತಾನದ ಕ್ರಿಕೆಟ್ ಮಂಡಳಿಗಳು ಮುಂದಿನ ದಿನಗಳಲ್ಲಿ ಉಭಯತ್ರರಿಗೂ ಒಪ್ಪಿಗೆಯಾಗುವ ನಿಟ್ಟಿನಲ್ಲಿ ಪರಿಹಾರ ಕಂಡುಕೊಳ್ಳಲು ಮುಂದಾಗಿವೆ.

ದುಬೈನಲ್ಲಿ ಐಸಿಸಿ ಸಭೆಯ ಸಂದರ್ಭದಲ್ಲಿ, ಪಾಕಿಸ್ತಾನ ಕ್ರಿಕೆಟ್ ಮಂಡಳಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಅವರೊಂದಿಗೆ ಈ ಕಗ್ಗಂಟು ಪರಿಹರಿಸುವ ಬಗ್ಗೆ ಮಾತುಕತೆ ನಡೆಸಿರುವುದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ದೇವಜಿತ್ ಸೈಕಿಯಾ ಶನಿವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ದುಬೈನಲ್ಲಿ ಸೆ.28ರಂದು ನಡೆದ ಏಷ್ಯಾ ಕಪ್ ಟಿ20 ಫೈನಲ್‌ನಲ್ಲಿ ಭಾರತ ತಂಡ, ಬದ್ಧ ಎದುರಾಳಿ ಪಾಕಿಸ್ತಾನ ತಂಡವನ್ನು ಸೋಲಿಸಿತ್ತು.

ಪಾಕಿಸ್ತಾನದ ಗೃಹ ಸಚಿವರೂ ಆಗಿರುವ ನಕ್ವಿ ಅವರಿಂದ, ಪಂದ್ಯದ ನಂತರ ಟ್ರೋಫಿ ಸ್ವೀಕರಿಸಲು ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ನಿರಾಕರಿಸಿದ್ದರು. ಆದರೆ ಟ್ರೋಫಿ ಪ್ರದಾನ ಸಮಾರಂಭಲ್ಲಿ ಹಾಜರಿದ್ದ ನಕ್ವಿ, ಕೆಲಸಮಯ ಕಾದು ಕೆಲ ಸಿಬ್ಬಂದಿ ಜೊತೆ ಟ್ರೋಫಿಯೊಂದಿಗೆ ಕ್ರೀಡಾಂಗಣದಿಂದ ನಿರ್ಗಮಿಸಿದ್ದರು. ಟ್ರೋಫಿಯನ್ನು ದುಬೈನ ಐಸಿಸಿ ಕೇಂದ್ರ ಕಚೇರಿಯ ಕೊಠಡಿಯಲ್ಲಿಟ್ಟು ಬೀಗಹಾಕಲಾಗಿದೆ.

'ನಾನು ಐಸಿಸಿ ಸಭೆಯ ಔಪಚಾರಿಕ ಮತ್ತು ಅನೌಪಚಾರಿಕ ಸಭೆಯ ಭಾಗವಾಗಿದ್ದೆ. ಪಿಸಿಬಿ ಅಧ್ಯಕ್ಷ ಮೊಹ್ಸಿನ್ ನಕ್ವಿ ಸಹ ಹಾಜರಿದ್ದರು. ಟ್ರೋಫಿಯ ವಿಷಯ ಐಸಿಸಿ ಸಭೆಯ ಕಾರ್ಯಸೂಚಿಯಲ್ಲಿರಲಿಲ್ಲ. ಆದರೆ ಐಸಿಸಿಯು ತನ್ನ ಹಿರಿಯ ಸದಸ್ಯರ ಸಮ್ಮುಖದಲ್ಲಿ ನಮ್ಮಿಬ್ಬರ ನಡುವೆ ಮಾತುಕತೆಗೆ ಅವಕಾಶ ಕಲ್ಪಿಸಿತು' ಎಂದು ಸೈಕಿಯಾ ತಿಳಿಸಿದ್ದಾರೆ.

ವಿವೇಕ್ ಸ್ಪರ್ಧೆಗೆ ಟ್ರಂಪ್ ಬೆಂಬಲ

ನ್ಯೂಯಾರ್ಕ್ (ಪಿಟಿಐ): ಒಹಿಯೊ ರಾಜ್ಯದ ಗವರ್ನರ್ ಸ್ಥಾನಕ್ಕೆ ಸ್ಪರ್ಧಿಸಿರುವ ರಿಪಬ್ಲಿಕನ್ ಪಕ್ಷದ ನಾಯಕ, ಭಾರತೀಯ ಮೂಲದ ವಿವೇಕ್ ರಾಮಸ್ವಾಮಿ ಅವರಿಗೆ ಬೆಂಬಲ ವ್ಯಕ್ತಪಡಿಸಿರುವ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್, 'ವಿವೇಕ್ ಅವರು ಒಹಿಯೊದ ಅತ್ಯುತ್ತಮ ಗವರ್ನರ್ ಆಗಿ ಕಾರ್ಯ ನಿರ್ವಹಿಸಲಿದ್ದಾರೆ' ಎಂದು ಹೇಳಿದ್ದಾರೆ.

ಸಾಮಾಜಿಕ ಮಾಧ್ಯಮ 'ಟ್ರೂತ್'ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, 'ವಿವೇಕ್ ರಾಮಸ್ವಾಮಿ ಅವರಿಗೆ ನನ್ನ ಪೂರ್ಣ ಬೆಂಬಲ ಮತ್ತು ಅನುಮೋದನೆ ಇದೆ. ಅವರು ಎಂದಿಗೂ ನಿಮ್ಮನ್ನು ತಲೆತಗ್ಗಿಸುವಂತೆ ಮಾಡುವುದಿಲ್ಲ' ಎಂದಿದ್ದಾರೆ.

'ಅವರು ನನ್ನ ವಿರುದ್ಧ ಸ್ಪರ್ಧಿಸಿದ್ದರು ಎಂಬುದು ಗೊತ್ತಿದೆ. ಅವರಲ್ಲಿ ಏನೋ ವಿಶೇಷತೆಯಿದೆ. ಅವರು ಯುವ, ಬಲಿಷ್ಠ ಮತ್ತು ಜಾಣರಿದ್ದಾರೆ. ಅಲ್ಲದೆ ಅತ್ಯುತ್ತಮ ವ್ಯಕ್ತಿಯಾಗಿದ್ದು, ಅಮೆರಿಕವನ್ನು ನಿಜವಾಗಿಯೂ ಪ್ರೀತಿಸುತ್ತಾರೆ' ಎಂದು ಹೇಳಿದ್ದಾರೆ.

ವಿವೇಕ್ ರಾಮಸ್ವಾಮಿ

'ನಿಮ್ಮ ಮುಂದಿನ ಗವರ್ನರ್ ವಿವೇಕ್ ಅವರು ಆರ್ಥಿಕ ಪ್ರಗತಿಗಾಗಿ ದಣಿವರಿಯದೆ ಕೆಲಸ ಮಾಡಲಿದ್ದಾರೆ. ತೆರಿಗೆ ಕಡಿತಗೊಳಿಸುವ ನಿಟ್ಟಿನಲ್ಲಿ ನಿಯಮಗಳನ್ನು ತರಲಿದ್ದಾರೆ. 'ಮೇಡ್ ಇನ್ ಅಮೆರಿಕ'ವನ್ನು ಪ್ರಚುರ ಪಡಿಸಲಿದ್ದಾರೆ. ಇಂಧನ ಕ್ಷೇತ್ರದಲ್ಲಿ ಅಮೆರಿಕದ ಪ್ರಾಬಲ್ಯ ಮುಂದುವರಿಸಲು, ಗಡಿಯನ್ನು ಅತ್ಯಂತ ಸುರಕ್ಷಿತಗೊಳಿಸಲು, ವಲಸೆ ಮತ್ತು ಅಪರಾಧ ತಡೆಯಲು, ನಮ್ಮ ಸೇನೆಯನ್ನು ಬಲಿಷ್ಠಗೊಳಿಸಲು, ಕಾನೂನು ಸುವ್ಯವಸ್ಥೆ ಹಾಗೂ ಏಕತೆಯನ್ನು ಕಾಯ್ದುಕೊಳ್ಳಲು ಶ್ರಮಿಸಲಿದ್ದಾರೆ' ಎಂದು ಟ್ರಂಪ್ ವಿವರಿಸಿದ್ದಾರೆ.

ಟ್ರಂಪ್ ಅವರ ಬೆಂಬಲ ಮತ್ತು ಅನುಮೋದನೆಗೆ ಧನ್ಯವಾದ ಹೇಳಿರುವ 40 ವರ್ಷದ ವಿವೇಕ್ ರಾಮಸ್ವಾಮಿ ಅವರು, 'ಒಹಿಯೊ ಅನ್ನು ಹಿಂದೆಂದಿಗಿಂತಲೂ ಶ್ರೇಷ್ಠವಾಗಿಸೋಣ' ಎಂದಿದ್ದಾರೆ.

ವಿವೇಕ್ ಪರಿಚಯ: ಕೇರಳದ ಪಾಲಕ್ಕಾಡ್‌ನಿಂದ ಅಮೆರಿಕಕ್ಕೆ ವಲಸೆ ಹೋದ ತಮಿಳು ದಂಪತಿಯ ಮಗನಾಗಿ 1985ರಲ್ಲಿ ಸಿನ್ಸಿನಾಟಿಯಲ್ಲಿ ಜನಿಸಿದ ವಿವೇಕ್ ರಾಮಸ್ವಾಮಿ, ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಜೀವವಿಜ್ಞಾನ ವಿಷಯದಲ್ಲಿ ಪದವಿ ಪಡೆದರು. ನಂತರ 'ಯೇಲ್ ಲಾ ಸ್ಕೂಲ್'ನಲ್ಲಿ ಕಾನೂನು ಪದವಿ ಪಡೆದರು. ಅಮೆರಿಕದಲ್ಲಿ ಜೈವಿಕ ತಂತ್ರಜ್ಞಾನಕ್ಕೆ ಸಂಬಂಧಿಸಿದ ಉದ್ಯಮಿಯಾಗಿದ್ದಾರೆ.

ರಿಪಬ್ಲಿಕನ್ ಪಕ್ಷದಲ್ಲಿ ಪ್ರಾಥಮಿಕ ಹಂತದ ಚುನಾವಣೆಗೂ ಮೊದಲು ವಿವೇಕ್ ರಾಮಸ್ವಾಮಿ ಅವರೂ ಅಧ್ಯಕ್ಷೀಯ ಸ್ಥಾನದ ಆಕಾಂಕ್ಷಿಯಾಗಿ ಅಮೆರಿಕದ ವಿವಿಧ ರಾಜ್ಯಗಳಲ್ಲಿ ಕಾರ್ಯಕರ್ತರ ಹಲವು ಸಭೆಗಳನ್ನು ನಡೆಸಿದ್ದರು. ನಂತರ ಡೊನಾಲ್ಡ್ ಟ್ರಂಪ್ ಹೆಚ್ಚು ಜನಪ್ರಿಯ ಅಭ್ಯರ್ಥಿಯಾಗಿ ಹೊರಹೊಮ್ಮಿದ್ದರಿಂದ ಅವರ ಸ್ಪರ್ಧೆಯನ್ನು ಅನುಮೋದಿಸಿ ಕಣದಿಂದ ಹಿಂದೆ ಸರಿದಿದ್ದರು.

ಶೂಟಿಂಗ್: ರವಿಂದರ್‌ಗೆ ಚಿನ್ನ, ಇಳವೆನಿಲ್‌ಗೆ ಕಂಚು

ಕೈರೊ (ಪಿಟಿಐ): ಸೇನೆಯ ಅನುಭವಿ ಶೂಟರ್ ರವಿಂದರ್ ಸಿಂಗ್ ಅವರು ಐಎಸ್‌ಎಸ್‌ಎಫ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಪುರುಷರ 50 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದು ಸಂಭ್ರಮಿಸಿದರು.

ಆದರೆ ಮಹಿಳೆಯರ ವಿಭಾಗದಲ್ಲಿ ಎರಡು ಬಾರಿಯ ಒಲಿಂಪಿಯನ್ ಇಳವನಿಲ್ ವಳರಿವನ್ ಅವರು 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿದರೂ, ಕಂಚಿನ ಪದಕಕ್ಕೆ ಸಮಾಧಾನಪಟ್ಟುಕೊಳ್ಳಬೇಕಾಯಿತು.

ದಕ್ಷಿಣ ಕೊರಿಯಾದ ಬಾನ್ ಹ್ಯೋಜಿನ್ (255.0) ಚಿನ್ನ ಗೆದ್ದರೆ, ಚೀನಾದ ವಾಂಗ್ ಜಿಫೀ (254) ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. 19ನೇ ಶಾಟ್‌ವರೆಗೆ ಚೀನಾ ಸ್ಪರ್ಧಿಯು ವಳರಿವನ್ ಅವರಿಗಿಂತ ಹಿಂದೆಯಿದ್ದರು.

ವಳರಿವನ್, ಮೇಘನಾ ಸಜ್ಜನರ ಮತ್ತು ಶ್ರೇಯಾ ಅಗರವಾಲ್ ಅವರನ್ನೊಳಗೊಂಡ ಭಾರತ ತಂಡ (1893.3) ತಂಡ ವಿಭಾಗದಲ್ಲಿ ಮೂರನೇ ಸ್ಥಾನ ಪಡೆಯಿತು.

ನಾಯಕ್ ಸುಬೇದಾರ್ ಆಗಿರುವ 29 ವರ್ಷ ವಯಸ್ಸಿನ ರವಿಂದರ್ ಸಿಂಗ್ ಅವರು 569 ಪಾಯಿಂಟ್ ಸ್ಕೋರ್ ಮಾಡಿದರೆ, ದಕ್ಷಿಣ ಕೊರಿಯಾದ ಕಿಮ್ ಚಿಯಾಂಗ್‌ಯಾಂಗ್ (556) ಅವರು ಬೆಳ್ಳಿ ಮತ್ತು ತಟಸ್ಥ ರಾಷ್ಟ್ರದ ಆ್ಯಂಟನ್ ಅರಿಸ್ಟರ್ಕೊವ್ (555) ಕಂಚು ಗೆದ್ದರು. ರವಿಂದರ್, ಕಮಲಜೀತ್ ಮತ್ತು ಯೋಗೇಶ್ ಕುಮಾರ್ ಅವರನ್ನು ಒಳಗೊಂಡ ತಂಡವು ಟೀಮ್ ವಿಭಾಗದಲ್ಲಿ ಬೆಳ್ಳಿ ಗೆದ್ದಿತು.

ಶೇ 65.08 ಮತದಾನ

ಪಟ್ನಾ (ಪಿಟಿಐ): ಬಿಹಾರ ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ ಶೇಕಡ 65.08ರಷ್ಟು ಮತದಾನ ಆಗಿದ್ದು, ಇದು ರಾಜ್ಯದ ಇತಿಹಾಸದಲ್ಲಿಯೇ ಅತ್ಯಧಿಕವಾಗಿದೆ ಎಂದು ಕೇಂದ್ರ ಚುನಾವಣಾ ಆಯೋಗ ತಿಳಿಸಿದೆ.

ಮೊದಲ ಹಂತದ ಮತದಾನ ನ.6ರಂದು ನಡೆದಿದ್ದು, ಮತದಾನದ ಪ್ರಮಾಣಕ್ಕೆ ಸಂಬಂಧಿಸಿದ ಅಂತಿಮ ಅಂಕಿ–ಅಂಶವನ್ನು ಬಿಹಾರದ ಮುಖ್ಯ ಚುನಾವಣಾ ಅಧಿಕಾರಿಯ ಕಚೇರಿ ಶನಿವಾರ ಬಿಡುಗಡೆ ಮಾಡಿದೆ.

2020ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಮತದಾನದ ಒಟ್ಟು ಪ್ರಮಾಣ ಶೇ 57.29 ಆಗಿತ್ತು. ಅದಕ್ಕೆ ಹೋಲಿಸಿದರೆ, ಮತದಾನದ ಪ್ರಮಾಣ ಶೇ 7.79ರಷ್ಟು ಹೆಚ್ಚಾಗಿದೆ.

ಮುಜಫ್ಫರ್‌ಪುರದಲ್ಲಿ ಅತಿಹೆಚ್ಚು ಅಂದರೆ ಶೇ 71.81 ಮತದಾನ ನಡೆದಿದೆ. ಸಮಸ್ತಿಪುರದಲ್ಲಿ ಶೇ 71.74 ಮತದಾನ ದಾಖಲಾಗಿದೆ.

ಮಧೇಪುರ (ಶೇ 69.59), ಸಹರ್ಸಾ (69.38), ವೈಶಾಲಿ (68.50) ಮತ್ತು ಖಗಢಿಯಾ (67.90) ಜಿಲ್ಲೆಗಳಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಮತದಾನ ನಡೆದಿದೆ. ಪಟ್ನಾ ಜಿಲ್ಲೆಯಲ್ಲಿ ಶೇ 59.02 ಮತದಾನ ನಡೆದಿದೆ.

‘ಆರ್‌ಜೆಡಿ ಗೆದ್ದರೆ ದುರಾಡಳಿತ’

ಬಿಹಾರ: ಬಂದೂಕು ಸಂಸ್ಕೃತಿ, ಹಿಂಸೆಗೆ ಬೆಂಬಲ– ಮೋದಿ ಆರೋಪ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ಸೀತಾಮಢಿ/ಬೆತಿಯಾ (ಬಿಹಾರ) (ಪಿಟಿಐ): ಆರ್‌ಜೆಡಿ ನೇತೃತ್ವದ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಬಿಹಾರದಲ್ಲಿ ದುರಾಡಳಿತ ಮತ್ತು ಹಿಂಸಾಚಾರ ಮರುಕಳಿಸಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಆರೋಪಿಸಿದರು.

ಸೀತಾಮಢಿ ಮತ್ತು ಬೆತಿಯಾದಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡ ಅವರು, ಎನ್‌ಡಿಎ ಅಧಿಕಾರಿಕ್ಕೇರಿದರೆ ಮಕ್ಕಳಿಗೆ ಉತ್ತಮ ಶಿಕ್ಷಣ ಖಾತರಿಪಡಿಸುತ್ತದೆ ಮತ್ತು ನವೋದ್ಯಮಗಳಿಗೆ ಅನುಕೂಲ ಮಾಡಿ ಕೊಡುತ್ತದೆ ಎಂದು ಪ್ರತಿಪಾದಿಸಿದರು.

‘ಮಕ್ಕಳು ದೊಡ್ಡವರಾದ ಮೇಲೆ ಸಮಾಜಘಾತುಕ ಶಕ್ತಿಗಳಾಗಿ ಬೆಳೆಯಬೇಕು ಎಂದು ಆರ್‌ಜೆಡಿ ಬಯಸುತ್ತದೆ. ಅವರು ಅಧಿಕಾರಕ್ಕೇರಿದರೆ ಜನರ ತಲೆಗೆ ‘ಕಟ್ಟಾ’ (ನಾಡ ಬಂದೂಕು) ಗುರಿಯಿಟ್ಟು ಬೆದರಿಸುತ್ತಾರೆ. ಕ್ರೌರ್ಯ ಮತ್ತು ಭ್ರಷ್ಟಾಚಾರ ತುಂಬಿರುವಂತಹ ಸರ್ಕಾರವನ್ನು ಬಿಹಾರದ ಜನರು ಖಂಡಿತವಾಗಿಯೂ ಬಯಸುವುದಿಲ್ಲ’ ಎಂದು ಹೇಳಿದರು.

‘ತಲೆಗೆ ಬಂದೂಕು ಹಿಡಿದು ಬೆದರಿಸುವ ಸರ್ಕಾರ ಜನರಿಗೆ ಬೇಡ. ಮಕ್ಕಳಿಗೆ ಸ್ಕೂಲ್ ಬ್ಯಾಗ್, ಕಂಪ್ಯೂಟರ್, ಕ್ರಿಕೆಟ್ ಬ್ಯಾಟ್ ಮತ್ತು ಹಾಕಿ ಸ್ಟಿಕ್‌ಗಳನ್ನು ನೀಡಿ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವಂತೆ ಉತ್ತೇಜಿಸುವ ಎನ್‌ಡಿಎ ಸರ್ಕಾರ ಮತ್ತೆ ಅಧಿಕಾರಕ್ಕೇರಬೇಕೆಂದು ಬಯಸುತ್ತಿದ್ದಾರೆ’ ಎಂದರು.

ರಸ್ತೆ ಬದಿ ವಿವಿಪ್ಯಾಟ್ ಚೀಟಿ

ಸಮಸ್ತಿಪುರ (ಪಿಟಿಐ): ಬಿಹಾರದ ಸಮಸ್ತಿಪುರ ಜಿಲ್ಲೆಯ ರಸ್ತೆ ಬದಿಯಲ್ಲಿ ವಿವಿ ಪ್ಯಾಟ್ ಚೀಟಿಗಳ ರಾಶಿ ಪತ್ತೆಯಾಗಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಹಾಯಕ ಚುನಾವಣಾ ಅಧಿಕಾರಿಯನ್ನು ಶನಿವಾರ ಅಮಾನತುಗೊಳಿಸಲಾಗಿದ್ದು, ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಜಿಲ್ಲೆಯ ಸರಾಯ್‌ರಂಜನ್ ವಿಧಾನಸಭಾ ಕ್ಷೇತ್ರದ ಕಾಲೇಜು ಬಳಿ ರಸ್ತೆ ಬದಿಯಲ್ಲಿ ಚೀಟಿಗಳು ಬಿದ್ದಿರುವುದು ಕಂಡುಬಂದಿದೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದ ನಂತರ ಚುನಾವಣಾ ಆಯೋಗ ಕ್ರಮ ಕೈಗೊಂಡಿದೆ.

ಜನ ಸುರಾಜ್ ಪಕ್ಷದ ಅಧ್ಯಕ್ಷ ಪ್ರಶಾಂತ್ ಕಿಶೋರ್ ಮಧುಬನಿಯಲ್ಲಿ ಶನಿವಾರ ರೋಡ್ ಶೋ ನಡೆಸಿದರು —ಪಿಟಿಐ ಚಿತ್ರ

ಹುದ್ದೆಯ ಘನತೆ ಕಾಯ್ದುಕೊಳ್ಳದ ಪ್ರಧಾನಿ: ಪ್ರಿಯಾಂಕಾ

ಕಟಿಹಾರ್: ಚುನಾವಣಾ ಪ್ರಚಾರ ಸಭೆಯಲ್ಲಿ ‘ಕಟ್ಟಾ’ (ನಾಡ ಪಿಸ್ತೂಲ್) ಮುಂತಾದ ಪದಗಳನ್ನು ಬಳಸುವ ಮೂಲಕ ಪ್ರಧಾನಿ ನರೇಂದ್ರ ಮೋದಿ ತಮ್ಮ ಹುದ್ದೆಯ ಘನತೆಯನ್ನು ಕಾಯ್ದುಕೊಳ್ಳುತ್ತಿಲ್ಲ ಎಂದು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಶನಿವಾರ ಟೀಕಿಸಿದರು.

ಕಟಿಹಾರ್‌ನಲ್ಲಿ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಮಹಾತ್ಮಾ ಗಾಂಧಿ ಅವರು ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ವಿರುದ್ಧ ಹೋರಾಡಿದ ರೀತಿಯಲ್ಲಿ ಕಾಂಗ್ರೆಸ್ ಪಕ್ಷ ಇಂದು ಹೋರಾಟ ನಡೆಸುತ್ತಿದೆ’ ಎಂದರು.

ಒಂದೆಡೆ, ಪ್ರಧಾನಿ ಅವರು ಅಹಿಂಸೆಯನ್ನು ಪ್ರತಿಪಾದಿಸುವ ‘ವಂದೇ ಮಾತರಂ’ ಗೀತೆಯನ್ನು ಶ್ಲಾಘಿಸುತ್ತಿದ್ದರೆ, ಮತ್ತೊಂದೆಡೆ, ಅವರು ‘ಕಟ್ಟಾ’ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಹೇಳಿದರು.

ಎನ್‌ಡಿಎ ಸರ್ಕಾರವನ್ನು ಟೀಕಿಸಿದ ಅವರು, ‘ಯುವಕರಿಗೆ ಉದ್ಯೋಗ ದೊರಕಿಸಿಕೊಡುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ. ಮೋದಿ ಅವರು ಸಾರ್ವಜನಿಕ ವಲಯದ ಉದ್ಯಮಗಳನ್ನು ಕಾರ್ಪೊರೇಟ್ ವಲಯದ ಇಬ್ಬರು ಸ್ನೇಹಿತರಿಗೆ ಹಸ್ತಾಂತರಿಸುತ್ತಿದ್ದಾರೆ’ ಎಂದು ಆರೋಪಿಸಿದರು.

‘ಮಹಿಳೆಯರಿಗೆ ₹10 ಸಾವಿರ ನೀಡಿ ಮತಗಳನ್ನು ಪಡೆಯಬಹುದು ಎಂದು ಬಿಜೆಪಿ ಭಾವಿಸಿದೆ’ ಎಂದರು.

‘ಡಿಎಂಕೆ ಮಣಿಸಲು ಎಸ್‌ಐಆರ್’

ಎಂ.ಕೆ.ಸ್ಟಾಲಿನ್

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಚುನಾವಣಾ ಆಯೋಗವನ್ನು ಬಳಸಿಕೊಂಡು ಅಡ್ಡದಾರಿ ಮೂಲಕ ಅಧಿಕಾರಕ್ಕೆ ಬರಲು ಕೆಲವರು ಶ್ರಮಿಸುತ್ತಿದ್ದಾರೆ ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಬಿಜೆಪಿಯನ್ನು ಹೆಸರಿಸದೆ ಶನಿವಾರ ಆರೋಪಿಸಿದರು.

ಪಕ್ಷದ ಯುವ ಘಟಕ ಹಮ್ಮಿಕೊಂಡಿದ್ದ ‘ಡಿಎಂಕೆ 75– ಜ್ಞಾನ ಉತ್ಸವ’ದಲ್ಲಿ ಮಾತನಾಡಿದ ಅವರು, ‘ಸೈದ್ಧಾಂತಿಕವಾಗಿ ಡಿಎಂಕೆಯನ್ನು ಸೋಲಿಸಲಾಗದವರು, ಈಗ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನೆಪದಲ್ಲಿ ಅಧಿಕಾರ ಹಿಡಿಯಲು ಹವಣಿಸುತ್ತಿದ್ದಾರೆ’ ಎಂದು ದೂರಿದರು.

‘ಆಕ್ಷೇಪಗಳನ್ನು ಆಲಿಸದೆ ಆಯೋಗ ಎಸ್‌ಐಆರ್‌ಗೆ ಚಾಲನೆ ನೀಡಿದೆ. ಅದನ್ನು ನಾವು ಕಾನೂನಾತ್ಮಕ ಮತ್ತು ರಾಜಕೀಯವಾಗಿ ಎದುರಿಸುತ್ತೇವೆ’ ಎಂದು ಅವರು ತಿಳಿಸಿದರು.

ವಿಜಯ್ ವಿರುದ್ಧ ಟೀಕೆ: ‘ತಮಿಳುನಾಡಿನಲ್ಲಿ ಡಿಎಂಕೆ ಪಕ್ಷ ಸ್ಥಾಪನೆಯಾದ ಬಳಿಕ ಅಧಿಕಾರಕ್ಕೆ ಬರಲು 18 ವರ್ಷಗಳ ದೀರ್ಘಕಾಲವೇ ಬೇಕಾಯಿತು. ಆದರೆ ಇತ್ತೀಚೆಗೆ ಪಕ್ಷವೊಂದನ್ನು ಸ್ಥಾಪಿಸಿರುವ ಕೆಲವರು ಸರ್ಕಾರ ರಚಿಸಿಯೇ ಬಿಡುತ್ತೇವೆ ಎಂದು ಹಗಲುಗನಸು ಕಾಣುತ್ತಿದ್ದಾರೆ’ ಎಂದು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ಅಧ್ಯಕ್ಷ, ಚಿತ್ರನಟ ವಿಜಯ್ ಹೆಸರನ್ನು ಪ್ರಸ್ತಾಪಿಸಿದೆ ಸ್ಟಾಲಿನ್ ಟೀಕಿಸಿದರು.

ಸಾಮಾನ್ಯ ಜನರು ಸೇರಿ 1949ರಲ್ಲಿ ಸ್ಥಾಪಿಸಿದ ಡಿಎಂಕೆಯು 1967ರಲ್ಲಿ ಮೊದಲ ಬಾರಿಗೆ ಅಧಿಕಾರ ಹಿಡಿಯುವ ಸಾಧನೆ ಮಾಡಿತು. ಹೀಗೆ ಮಾಡಿದ ಮೊದಲ ರಾಜ್ಯಮಟ್ಟದ ಪಕ್ಷ ಡಿಎಂಕೆ. ಅದಕ್ಕೆ ಸಾಕಷ್ಟು ಕಾರ್ಯಕರ್ತರ ಶ್ರಮವಿದೆ. ಹಲವರ ತ್ಯಾಗ, ಬಲಿದಾನದ ಫಲವಾಗಿ ಪಕ್ಷ ಅಧಿಕಾರಕ್ಕೆ ಬಂದಿತ್ತು ಎಂದು ಅವರು ಸ್ಮರಿಸಿದರು.

‘ಪಕ್ಷವನ್ನು ನಾವು ಸ್ಥಾಪಿಸಿದ್ದೇವೆ, ಹೀಗಾಗಿ ನಾನೇ ಮುಖ್ಯಮಂತ್ರಿ ಎಂದು ಘೋಷಿಸಿಕೊಂಡು ಡಿಎಂಕೆ ಅಧಿಕಾರಕ್ಕೆ ಬಂದಿಲ್ಲ’ ಎಂದು ಅವರು ವಿಜಯ್ ಅನ್ನು ಟೀಕಿಸಿದರು.

‘ಇಷ್ಟೆಲ್ಲ ಇತಿಹಾಸ ತಿಳಿಯದೇ, ಡಿಎಂಕೆ ರೀತಿ ಅಧಿಕಾರಕ್ಕೆ ಬರುತ್ತೇವೆ ಎಂದು ಕೆಲವರು ಕನಸು ಕಾಣುತ್ತಿದ್ದಾರೆ. ಡಿಎಂಕೆ ರೀತಿ ಗೆಲ್ಲಬೇಕು ಎಂದರೆ, ಅದೇ ರೀತಿ ಪಕ್ಷವನ್ನು ಕಟ್ಟಿ ಬೆಳೆಸಬೇಕು. ಅದರ ಬಗ್ಗೆ ಜ್ಞಾನ ಇರಬೇಕು’ ಎಂದು ಹೇಳಿದರು.

ನ್ಯಾಯ ಪ್ರತಿಯೊಬ್ಬರ ಹಕ್ಕು: ಸಿಜೆಐ

ನವದೆಹಲಿ (ಪಿಟಿಐ): ‘ನ್ಯಾಯವು ಕೆಲವರಿಗಾಗಿ ಮಾತ್ರ ಇರುವ ಸೌಲಭ್ಯವಲ್ಲ, ಬದಲಿಗೆ ಪ್ರತಿಯೊಬ್ಬ ಪ್ರಜೆಯ ಹಕ್ಕು’ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್.ಗವಾಯಿ ಶನಿವಾರ ಅಭಿಪ್ರಾಯಪಟ್ಟರು.

ಸುಪ್ರೀಂಕೋರ್ಟ್‌ನ ಆವರಣದಲ್ಲಿ ‘ಕಾನೂನು ನೆರವಿನ ವಿಧಾನಗಳನ್ನು ಬಲಪಡಿಸುವುದರ’ ಕುರಿತು ನಡೆದ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

‘ನ್ಯಾಯದ ಬೆಳಕು’ ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನೂ ತಲುಪುವಂತೆ ಮಾಡುವುದು ನ್ಯಾಯಾಧೀಶರು ಮತ್ತು ವಕೀಲರ ಕರ್ತವ್ಯ ಎನ್ನುವುದನ್ನು ಮರೆಯಬಾರದು. ನ್ಯಾಯವು ಜನಸಾಮಾನ್ಯರಲ್ಲಿ ವಿಶ್ವಾಸ ಹೆಚ್ಚಿಸಬೇಕು. ಎಲ್ಲೋ, ಯಾರೊ ನಮ್ಮ ಬೆಂಬಲಕ್ಕೆ ನಿಲ್ಲಲು ಸಿದ್ಧರಿದ್ದಾರೆ ಎಂಬ ಭರವಸೆಯನ್ನು ಅವರಲ್ಲಿ ಹುಟ್ಟುಹಾಕುವ ಮೂಲಕ ಜೀವನ ಬದಲಿಸುವ ಮಹತ್ತರ ಕೆಲಸವನ್ನು ಮಾಡಬೇಕು’ ಎಂದು ಅವರು ಹೇಳಿದರು.

ಪಾರ್ಥ್ ವಿರುದ್ಧ ತನಿಖೆಯಾಗಲಿ: ಪವಾರ್

ಅಕೋಲ (ಪಿಟಿಐ): ‘ನನ್ನ ಮೊಮ್ಮಗ ಪಾರ್ಥ್ ಪವಾರ್ ವಿರುದ್ಧದ ಭೂ ಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ತನಿಖೆ ನಡೆಸಲಿ, ಇದರಿಂದ ಸತ್ಯ ಹೊರಬರಲಿದೆ’ ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಹೇಳಿದ್ದಾರೆ.

‘ಇದು ಗಂಭೀರ ವಿಷಯ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಹೀಗಾಗಿ ಅವರು ತನಿಖೆಗೆ ಆದೇಶಿಸಬೇಕು’ ಎಂದು ಪವಾರ್ ಇಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

> **ಪ್ರಕರಣದಲ್ಲಿ ಯಾರನ್ನೂ ರಕ್ಷಿಸುವ ಪ್ರಶ್ನೆಯೇ ಇಲ್ಲ. ತಪ್ಪಿತಸ್ಥರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಕಾನೂನು ಕ್ರಮ ವಹಿಸಲಾಗುವುದು**
> **ದೇವೇಂದ್ರ ಫಡಣವೀಸ್**
> ಮಹಾರಾಷ್ಟ್ರ ಮುಖ್ಯಮಂತ್ರಿ

ಪುಣೆಯ ಮುಂಧ್ವಾ ಪ್ರದೇಶದಲ್ಲಿರುವ ಸುಮಾರು ₹1,800 ಕೋಟಿ ಮೌಲ್ಯದ 40 ಎಕರೆ ಜಮೀನನ್ನು ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪುತ್ರ, ಪಾರ್ಥ್ ಪವಾರ್ ಒಡೆತನದ ಕಂಪನಿ ಕೇವಲ ₹300 ಕೋಟಿಗೆ, ಮುದ್ರಾಂಕ ಶುಲ್ಕವನ್ನೂ ಪಾವತಿಸದೆ ಅಕ್ರಮವಾಗಿ ಖರೀದಿಸಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ‘ಪಾರ್ಥ್ ತಪ್ಪು ಮಾಡುತ್ತಾನೆ ಎಂದು ನನಗೆ ಅನಿಸುತ್ತಿಲ್ಲ’ ಎಂಬ ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಪವಾರ್, ‘ಇದು ಅವರ ಅಭಿಪ್ರಾಯ’ ಎಂದರು.

ಮುಂಬೈ ವರದಿ: ಮಹಾರಾಷ್ಟ್ರದ ಸಚಿವ ಪ್ರತಾಪ್ ಸರ್‌ನಾಯಕ್ ಅವರು, ಮೀರಾ–ಭಯಂದರ್‌ನಲ್ಲಿ ಶಿಕ್ಷಣ ಸಂಸ್ಥೆ ಆರಂಭಿಸಲು ₹200 ಕೋಟಿ ಮೊತ್ತದ 4 ಎಕರೆ ಜಮೀನನ್ನು ಕೇವಲ ₹3 ಕೋಟಿಗೆ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ವಿಜಯ್ ವಡೆತ್ತಿವಾರ್ ಆರೋಪಿಸಿದ್ದಾರೆ.

ಪಾರ್ಥ್ ಪವಾರ್ ವಿರುದ್ಧ ಭೂಕಬಳಿಕೆ ಆರೋಪ ಕೇಳಿಬಂದ ಬೆನ್ನಲ್ಲೇ, ವಿಜಯ್ ಈ ಆರೋಪ ಮಾಡಿದ್ದಾರೆ.

ಪಿಎಫ್‌ಐಗೆ ಸೇರಿದ ಆಸ್ತಿ ಮುಟ್ಟುಗೋಲು

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನಿಷೇಧಿತ ಸಂಘಟನೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ)ಗೆ ಸೇರಿದ ₹67 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

‘ಈ ಆಸ್ತಿಗಳ ಮೂಲ ಮಾಲೀಕತ್ವವು ಪಿಎಫ್‌ಐ ಒಡೆತನದಲ್ಲಿದ್ದು, ವಿವಿಧ ಟ್ರಸ್ಟ್‌ಗಳ ಹೆಸರಿನಲ್ಲಿ ನಡೆಸುತ್ತಿತ್ತು. ಸಂಘಟನೆಯ ರಾಜಕೀಯ ಪಕ್ಷ (ಎಸ್‌ಡಿಪಿಐ) ಹೊರತುಪಡಿಸಿದ ಸಂಸ್ಥೆಗಳಾಗಿವೆ’ ಎಂದು ಕೇಂದ್ರ ತನಿಖಾ ಸಂಸ್ಥೆಯು ತಿಳಿಸಿದೆ.

ದೇಶದ ವಿವಿಧೆಡೆ ಭಯೋತ್ಪಾದಕ ಕೃತ್ಯಗಳಲ್ಲಿ ಭಾಗಿಯಾದ ಆರೋಪದ ಮೇಲೆ 2022ರ ಸೆಪ್ಟೆಂಬರ್‌ನಲ್ಲಿ ಪಿಎಫ್‌ಐ ಸಂಘಟನೆ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿತ್ತು. ಇದಾದ ಬಳಿಕ ಸಂಘಟನೆಗೆ ಸೇರಿದ ವಿವಿಧ ಕಚೇರಿಗಳ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ), ಇ.ಡಿ. ಹಾಗೂ ರಾಜ್ಯ ಪೊಲೀಸ್ ಘಟಕಗಳ ಜೊತೆ ಸೇರಿಕೊಂಡು ದಾಳಿ ನಡೆಸಲಾಗಿತ್ತು.

ಪಿಎಫ್‌ಐಗೆ ಸೇರಿದ ₹67.03 ಕೋಟಿ ಮೌಲ್ಯದ ಆಸ್ತಿಯನ್ನು ಮುಟ್ಟಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿಯು ನವೆಂಬರ್ 6ರಂದು ಹೊರಡಿಸಿದ ತಾತ್ಕಾಲಿಕ ಆದೇಶದಲ್ಲಿ ತಿಳಿಸಿದೆ. ಹೊಸ ಆದೇಶದಿಂದ ಇದುವರೆಗೂ ಪಿಎಫ್‌ಐಗೆ ಸೇರಿದ ₹129 ಕೋಟಿ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಂತಾಗಿದೆ.

ವಂದೇ ಭಾರತ್: 4 ರೈಲಿಗೆ ಚಾಲನೆ

ವಾರಾಣಸಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರು–ಎರ್ನಾಕುಳಂ ಸೇರಿದಂತೆ ನಾಲ್ಕು ನೂತನ ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಬನಾರಸ್ ರೈಲು ನಿಲ್ದಾಣದಿಂದ ಶನಿವಾರ ಹಸಿರು ನಿಶಾನೆ ತೋರಿದರು.

ನೂತನ ರೈಲುಗಳು ಬನಾರಸ್–ಖಜುರಾಹೊ, ಲಖನೌ–ಸಹಾರನಪುರ, ಫಿರೋಜ್‌ಪುರ–ದೆಹಲಿ, ಎರ್ನಾಕುಳಂ–ಬೆಂಗಳೂರಿನ ನಡುವೆ ಸಂಚರಿಸಲಿವೆ.

ಈ ಸೆಮಿ ಹೈಸ್ಪೀಡ್ ರೈಲುಗಳು ಪ್ರಮುಖ ರೈಲು ನಿಲ್ದಾಣಗಳ ನಡುವಣ ಪ್ರಯಾಣದ ಅವಧಿಯನ್ನು ತಗ್ಗಿಸಲಿವೆ, ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲಿವೆ ಮತ್ತು ದೇಶದಾದ್ಯಂತ ಆರ್ಥಿಕ ಚಟುವಟಿಕೆಗಳಿಗೆ ಬೆಂಬಲ ನೀಡಲಿವೆ ಎಂದು ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ‘ವಂದೇ ಭಾರತ್, ನಮೋ ಭಾರತ್ ಮತ್ತು ಅಮೃತ ಭಾರತ್ ರೈಲುಗಳು ಭಾರತೀಯ ರೈಲ್ವೆಯ ಹೊಸ ಪೀಳಿಗೆಗಳು’ ಎಂದರು.

‘ದೇಶದಲ್ಲಿ ಸಾಕಷ್ಟು ವಂದೇ ಭಾರತ್ ರೈಲುಗಳು ಸಂಚರಿಸುತ್ತಿವೆ, ವಿಮಾನಗಳು ಜಗತ್ತಿನಾದ್ಯಂತ ಹಾರಾಡುತ್ತಿವೆ. ಈ ಎಲ್ಲ ಅಭಿವೃದ್ಧಿಯು ದೇಶದ ಬೆಳವಣಿಗೆಯೊಂದಿಗೆ ಸಂಬಂಧ ಹೊಂದಿದೆ. ಜಗತ್ತಿನ ಅಭಿವೃದ್ಧಿ ಹೊಂದಿದ ದೇಶಗಳ ಆರ್ಥಿಕ ಬೆಳವಣಿಗೆಯಲ್ಲಿ ಮೂಲ ಸೌಕರ್ಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಈ ಅಭಿವೃದ್ಧಿಯ ಪಥದಲ್ಲಿ ಭಾರತವೂ ವೇಗವಾಗಿ ಸಾಗುತ್ತಿದೆ’ ಎಂದರು. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಉಪಸ್ಥಿತರಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರು ವಂದೇ ಭಾರತ್ ರೈಲುಗಳಿಗೆ ಬನಾರಸ್ ರೈಲು ನಿಲ್ದಾಣದಲ್ಲಿ ಹಸಿರು ನಿಶಾನೆ ತೋರಿ, ಜನರತ್ತ ಕೈಬೀಸಿದರು — ಪಿಟಿಐ ಚಿತ್ರ

‘ಅಭಿವೃದ್ಧಿಯ ಪಯಣದಲ್ಲಿ ಭಾಗಿ’

‘ವಂದೇ ಭಾರತ್’ ರೈಲು ಜಾಲವು ಭಾರತದ ಪ್ರಮುಖ ಯಾತ್ರಾ ಸ್ಥಳಗಳನ್ನು ಸಂಪರ್ಕಿಸುವ ಮೂಲಕ ದೇಶದ ಸಂಸ್ಕೃತಿ, ನಂಬಿಕೆ ಮತ್ತು ಅಭಿವೃದ್ಧಿಯ ಪಯಣದಲ್ಲಿ ಜೊತೆಯಾಗಿದೆ. ದೇಶದಲ್ಲಿ ಯಾತ್ರೆಯನ್ನು ‘ಧ್ಯಾನದ ಮಾರ್ಗ’ ಎಂದೇ ಶತಮಾನಗಳಿಂದ ಪರಿಗಣಿಸಲಾಗುತ್ತದೆ’ ಎಂದು ಪ್ರಧಾನಿ ಹೇಳಿದರು.

ಶಾಲಾ ಮಕ್ಕಳಿಂದ ಆರ್‌ಎಸ್‌ಎಸ್ ಗೀತೆ: ಪಿಣರಾಯಿ ಖಂಡನೆ

ತಿರುವನಂತಪುರ: ನೂತನವಾಗಿ ಉದ್ಘಾಟನೆಗೊಂಡ ಎರ್ನಾಕುಳಂ–ಬೆಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಶಾಲಾ ಮಕ್ಕಳಿಂದ ಆರ್‌ಎಸ್‌ಎಸ್ ಗೀತೆಯನ್ನು ಹಾಡಿಸಲಾಗಿದೆ ಎಂದು ಹೇಳಲಾಗಿದ್ದು, ಈ ನಡೆಯನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಖಂಡಿಸಿದ್ದಾರೆ.

ರೈಲಿನಲ್ಲಿ ವಿದ್ಯಾರ್ಥಿಗಳು ಆರ್‌ಎಸ್‌ಎಸ್ ಗೀತೆ ಹಾಡಿರುವ ದೃಶ್ಯ ಟಿ.ವಿ ಚಾನೆಲ್‌ಗಳಲ್ಲಿ ಪ್ರಸಾರವಾಗಿದೆ.

‘ಸರ್ಕಾರದ ಅಧಿಕೃತ ಕಾರ್ಯಕ್ರಮದಲ್ಲಿ ಸಂವಿಧಾನಾತ್ಮಕ ನೀತಿಗಳನ್ನು ಉಲ್ಲಂಘಿಸಲಾಗಿದೆ. ಸಂಘ ಪರಿವಾರವು ತನ್ನ ಕೋಮು ರಾಜಕೀಯದ ಪ್ರಚಾರಕ್ಕಾಗಿ ಅತಿದೊಡ್ಡ ಸಾರ್ವಜನಿಕ ವಲಯವಾದ ರೈಲ್ವೆಯನ್ನು ಬಳಸಿಕೊಂಡಿರುವುದು ಸ್ವೀಕಾರಾರ್ಹವಲ್ಲ’ ಎಂದು ಹರಿಹಾಯ್ದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸಂಸತ್ತು: ಡಿ. 1ರಿಂದ ಚಳಿಗಾಲದ ಅಧಿವೇಶನ

ನವದೆಹಲಿ (ಪಿಟಿಐ): ಸಂಸತ್ತಿನ ಚಳಿಗಾಲದ ಅಧಿವೇಶನ ಡಿಸೆಂಬರ್ 1ರಿಂದ 19ರವರೆಗೆ ನಡೆಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಶನಿವಾರ ತಿಳಿಸಿದ್ದಾರೆ.

ಚಳಿಗಾಲದ ಅಧಿವೇಶನ ನಡೆಸುವ ಕುರಿತು ಸರ್ಕಾರ ಸಲ್ಲಿಸಿದ್ದ ಪ್ರಸ್ತಾವಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅನುಮೋದನೆ ನೀಡಿದ್ದಾರೆ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜನರ ಆಶೋತ್ತರಗಳನ್ನು ಈಡೇರಿಸಲು ಮತ್ತು ಪ್ರಜಾಪ್ರಭುತ್ವವನ್ನು ಗಟ್ಟಿಗೊಳಿಸಲು ರಚನಾತ್ಮಕ ಹಾಗೂ ಅರ್ಥಪೂರ್ಣ ಅಧಿವೇಶನವನ್ನು ಎದುರು ನೋಡುತ್ತಿರುವುದಾಗಿ ಅವರು ಹೇಳಿದ್ದಾರೆ.

ಬಿಜೆಪಿಯಿಂದ ಜಮ್ಮು–ಕಾಶ್ಮೀರಕ್ಕೆ ಹಾನಿ: ಒಮರ್

ಶ್ರೀನಗರ (ಪಿಟಿಐ): ‘ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನದ ಮೇಲಿನ ದಾಳಿ 2015ರಲ್ಲಿ ಪಿಡಿಪಿ–ಬಿಜೆಪಿ ಸರ್ಕಾರ ರಚನೆ ಆದಾಗಿನಿಂದಲೇ ಆರಂಭವಾಗಿತ್ತು’ ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಆರೋಪಿಸಿದರು.

ಶನಿವಾರ ಇಲ್ಲಿನ ಬಡಗಾಂ ವಿಧಾನಸಭಾ ಕ್ಷೇತ್ರದ ಮೈರ್‌ಗುಂಡ್‌ನಲ್ಲಿ ನಡೆದ ಚುನಾವಣಾ ರ‍್ಯಾಲಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿಯು ಜಮ್ಮು ಮತ್ತು ಕಾಶ್ಮೀರಕ್ಕೆ ಈಗಾಗಲೇ ಗರಿಷ್ಠ ಮಟ್ಟದಲ್ಲಿ ಹಾನಿ ಉಂಟುಮಾಡಿದೆ. ವಿಶೇಷ ಸ್ಥಾನಮಾನ ವಾಪಸ್ ಪಡೆದ ನಂತರ, ನಮ್ಮ ಅಸ್ತಿತ್ವಕ್ಕೆ ಆತಂಕ ಎದುರಾಗಿದೆ. ಈಗ ನಮ್ಮ ನಕ್ಷೆಯೂ ಉಳಿದಿಲ್ಲ’ ಎಂದರು.

ಉತ್ತರ ಪ್ರದೇಶ: ಲಂಚವಾಗಿ ‘ಶೂ’ ಪಡೆದ ಪೊಲೀಸರು

ಲಖನೌ: ಪ್ರಕರಣದ ಆರೋಪಿಗಳ ಪಟ್ಟಿಯಿಂದ ಹೆಸರನ್ನು ತೆಗೆದು ಹಾಕಿದ್ದಕ್ಕಾಗಿ ಉತ್ತರ ಪ್ರದೇಶದ ಪೊಲೀಸರು ವ್ಯಾಪಾರಿಯೊಬ್ಬರಿಂದ ನಗದಿನ ಬದಲಾಗಿ ನಾಲ್ಕು ಜೋಡಿ ಶೂಗಳನ್ನು ಲಂಚವಾಗಿ ಪಡೆದಿದ್ದಾರೆ.

ರಾಜ್ಯದ ಆಗ್ರಾ ನಗರದಲ್ಲಿ ಪೊಲೀಸರು ವ್ಯಾಪಾರಿಯೊಬ್ಬರ ವಿರುದ್ಧದ ಪ್ರಕರಣದ ತನಿಖೆ ನಡೆಸುತ್ತಿದ್ದರು. ಅದರ ಭಾಗವಾಗಿ ವ್ಯಾಪಾರಿಯ ಹೇಳಿಕೆಯನ್ನು ದಾಖಲಿಸಿ ಹಿರಿಯ ಅಧಿಕಾರಿಗಳಿಗೆ ವರದಿಯನ್ನು ಸಲ್ಲಿಸಬೇಕಿತ್ತು. ಆದರೆ, ಪೊಲೀಸರು ವ್ಯಾಪಾರಿಯನ್ನು ಸಂಪರ್ಕಿಸಿ, ಅವರ ಪರವಾಗಿ ವರದಿ ಬರೆಯಲು ಲಂಚವಾಗಿ ಹಣ ಕೇಳಿದ್ದರು.

ಆದರೆ ವ್ಯಾಪಾರಿಯು, ‘ಹಣ ನೀಡಲು ಸಾಧ್ಯವಿಲ್ಲ’ ಎಂದಾಗ, ನಾಲ್ಕು ಜೋಡಿ ಶೂಗಳನ್ನು ನೀಡುವಂತೆ ಪೊಲೀಸರು ಒತ್ತಾಯಿಸಿದ್ದಾರೆ. ಹಾಗಾಗಿ ವ್ಯಾಪಾರಿಯು ಅವರಿಗೆ ಶೂಗಳನ್ನು ನೀಡಿದ್ದರು ಎನ್ನಲಾಗಿದೆ. ಭ್ರಷ್ಟಾಚಾರ ವಿರೋಧಿ ಸಹಾಯವಾಣಿ ಸಂಖ್ಯೆಗೆ ದೂರು ಸಲ್ಲಿಸಿದ ನಂತರ ಮೂವರು ಪೊಲೀಸರನ್ನು ಅಮಾನತುಗೊಳಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗುಂಡಣ್ಣ

25 ವರ್ಷಗಳ ಹಿಂದೆ
ಗುರುವಾರ 9-11-2000

• **ರಾಜ್ ಪುತ್ರರ ಮನವಿ ತಿರಸ್ಕರಿಸಿದ ನೆಡುಮಾರನ್**

ಚೆನ್ನೈ, ನ.8 (ಯುಎನ್‌ಐ): ಡಾ. ರಾಜ್‌ಕುಮಾರ್ ಬಿಡುಗಡೆಗಾಗಿ ವೀರಪ್ಪನ್ ಜತೆ ಸಂಧಾನ ನಡೆಸಲು ಮತ್ತೆ ಕಾಡಿಗೆ ತೆರಳುವಂತೆ ರಾಜ್ ಪುತ್ರರು ಮಾಡಿದ ಮನವಿಯನ್ನು ತಮಿಳು ರಾಷ್ಟ್ರೀಯವಾದಿ ಚಳವಳಿ ನಾಯಕ ಪಿ. ನೆಡುಮಾರನ್ ಇಂದು ಇಲ್ಲಿ ತಳ್ಳಿ ಹಾಕಿದರು.

ಸಂಧಾನಕಾರರ ತಂಡದಿಂದ ಹೊರಗುಳಿಯಲು ತಾವು ಕೈಗೊಂಡಿರುವ ನಿರ್ಧಾರವೇ ಅಂತಿಮ ಎಂದು ಅವರು ಅವರು ಹೇಳಿದರು. ರಾಜ್ ಪುತ್ರರಾದ ಶಿವರಾಜ್‌ಕುಮಾರ್, ಹಾಗೂ ರಾಘವೇಂದ್ರ ರಾಜ್‌ಕುಮಾರ್ ಇಂದು ನೆಡುಮಾರನ್ ಮನೆಗೆ ತೆರಳಿ ಅವರನ್ನು ಭೇಟಿಯಾದರು.

75 ವರ್ಷಗಳ ಹಿಂದೆ
ಗುರುವಾರ 9-11-1950

• **ಬೆಲ್ಲದ ಮಾರಾಟದ ಬಗ್ಗೆ ಸರ್ಕಾರಿ ಪ್ರಕಟನೆ**

ಬೆಂಗಳೂರು, ನ.8: ಬೆಂಗಳೂರು ನಗರದ ದಾಸ್ತಾನುಗಾರರು ಶೇಖರಿಸಿರುವ ಬೆಲ್ಲವನ್ನು ವಶಪಡಿಸಿಕೊಳ್ಳಲು ಯುಕ್ತ ಕಾರ್ಯಕ್ರಮ ತೆಗೆದುಕೊಂಡಿರುವುದಾಗಿ ರೇಷನಿಂಗ್ ಅಧಿಕಾರಿಗಳು ಹೊರಡಿಸಿರುವ ಅಧಿಕೃತ ಪ್ರಕಟನೆ ತಿಳಿಸುತ್ತದೆ.

ದೀಪಾವಳಿಗೆ ಸಹಕಾರ ಸಂಘಗಳ ಮೂಲಕ ರೇಷನ್ ಕಾರ್ಡುಗಳ ಮೇಲೆ ಬೆಲ್ಲವನ್ನು ಕೊಡುವುದಲ್ಲದೆ ಹಳೇ ಮತ್ತು ಜೊಸ ಪೇಟೆಗಳ ಕೆಲವು ದಾಸ್ತಾನುಗಾರರೂ ಗೊತ್ತಾದ ದರದಲ್ಲಿ, ಹತೋಟ ಬೆಲೆಗೆ, ರೇಷನಿಂಗ್ ಅಧಿಕಾರಿಗಳ ಮತ್ತು ಡೆಪ್ಯುಟಿ ಕಮಿಷನರ್ ಸಿಬ್ಬಂದಿ ಸಮ್ಮುಖದಲ್ಲಿ ಬೆಲ್ಲ ಮಾರಲು ಅವಕಾಶ ಕೊಡಲು ನಿರ್ಧರಿಸಲಾಗಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

09 ನವೆಂಬರ್ 2025 ಭಾನುವಾರಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್‌ಋತು ತಿಥಿ: ಕಾರ್ತಿಕ ಕೃಷ್ಣ ಪಂಚಮಿ ಗಂ. 25-56 ನಕ್ಷತ್ರ: ಆರ್ದ್ರಾ ಗಂ 20-05 ಯೋಗ: ಸಿದ್ಧ ಗಂ. 15-02 ಕರಣ: ಕೌಲವ ಗಂ. 15-06 ತುಲಾ ಮಾಸದ 23 ನೇ ದಿನ. ಮಳೆ ನಕ್ಷತ್ರ: ವಿಶಾಖ 1 ನೇ ಪಾದ. ರಾಹುಕಾಲ : ಸಾಯಂಕಾಲ 04-30 - 06-00 ಸೂರ್ಯೋದಯ : 06-31 ಸೂರ್ಯಾಸ್ತ : 05-58 ಮುಸ್ಲಿಂ ದಿನಾಂಕ : 17 ಜುಮಾದುಲ್ಲಾವಲ್ ಅದೃಷ್ಟ ಸಂಖ್ಯೆ : 5, 8

ಮೇಷ: ಆಪತ್ತಿನ ಕಾಲದಲ್ಲಿ ಇಂದು ಮಿತ್ರರು ಹಾಗೂ ಸಹೋದ್ಯೋಗಿಗಳು ನಿಮ್ಮ ಮೇಲಿಟ್ಟ ಪ್ರೀತಿ ವಿಶ್ವಾಸದ ಅನುಭವ ಬರಲಿದೆ. ಶಿಶುವಿನ ಜನನ ಕುಟುಂಬದ ಸಂತೋಷಕ್ಕೆ ಕಾರಣವಾಗುತ್ತದೆ. ವಾಣಿಜ್ಯ ವ್ಯವಹಾರಗಳಲ್ಲಿ ಲಾಭ.

ವೃಷಭ: ಪ್ರಾಪ್ತ ವಯಸ್ಸಿನ ಮಗಳಿಗೆ ಸಂಬಂಧಿಕರಲ್ಲಿಯೇ ಅಥವಾ ಅಕ್ಕ-ಪಕ್ಕದ ಮನೆಯಲ್ಲಿಯೇ ವರ ನಿಶ್ಚಯವಾಗಿ ಮದುವೆಯ ತಯಾರಿ ನಡೆಸುವಿರಿ. ನಿಮ್ಮ ಪ್ರಾಮಾಣಿಕತೆಗೆ ತಕ್ಕ ಫಲವನ್ನು ಇಂದು ಪಡೆಯುತ್ತೀರಿ.

ಮಿಥುನ: ಚಾಣಕ್ಷತನದ ನಿಮ್ಮ ಮಾತುಗಳನ್ನು ಸರಿಯಾದ ಸಮಯದಲ್ಲಿ ಪ್ರಯೋಗಿಸಿ, ಅದರಿಂದಾಗಿ ಲಾಭ ಪಡೆಯುವಿರಿ. ನಿಮ್ಮ ಈ ದಿನದ ಪ್ರಮುಖ ಕೆಲಸಗಳಿಗೆ ಪೂರ್ವ ತಯಾರಿ ಮಾಡಿಕೊಳ್ಳುವುದು ಅಗತ್ಯವೆನಿಸುವುದು.

ಕರ್ಕಾಟಕ: ನಿಮ್ಮ ಇಂದಿನ ದಿನದದಲ್ಲಿ ಆಗುವ ಹಲವು ಘಟನೆಗಳಿಂದ ಪದೇ ಪದೇ ದಿವ್ಯಶಕ್ತಿಯ ಅನುಭೂತಿಯು ಆಗುತ್ತದೆ. ನೀವು ನಿರ್ಧರಿಸಿದ ರೀತಿಯಲ್ಲಿ ನಿಮ್ಮ ಜೀವನ ಇರುವುದು. ಈ ದಿನವು ನೆಮ್ಮದಿಯುಕ್ತ ದಿನ ಎನಿಸುವುದು.

ಸಿಂಹ: ಮಕ್ಕಳು ತಪ್ಪು ಮಾಡಿದಾಗ ಸಿಟ್ಟು ಬರುವುದು ಸಹಜವಾದರೂ ಸಹ ತಿಳುವಳಿಕೆ ಹೇಳಿ ಅವರನ್ನು ಸರಿದಾರಿಗೆ ತನ್ನಿ. ಮುಕ್ತ ಮಾತುಕತೆಗಳಿಂದ ವ್ಯವಹಾರಗಳು ನೀವು ಅಂದುಕೊಂಡ ರೀತಿಯಲ್ಲಿ ನಡೆಯುತ್ತದೆ.

ಕನ್ಯಾ: ಹಿರಿಯರ ಅಭಿಪ್ರಾಯದಂತೆ ಮನೆಯನ್ನು ಆಧುನಿಕರಣಗೊಳಿಸುವ ಕೆಲಸದಲ್ಲಿ ಮುಂದುವರಿಯುವಿರಿ. ಸ್ನೇಹಿತರ ಸಹಾಯದಿಂದ ಜಮೀನು ಖರೀದಿಯ ಕನಸು ನನಸಾಗಲಿದೆ. ಲೇವಾದೇವಿ ವ್ಯವಹಾರದಲ್ಲಿ ಜಾಗ್ರತೆ ಇರಲಿ.

ತುಲಾ: ಈ ದಿನ ಆತ್ಮೀಯರನ್ನು ಭೇಟಿ ಮಾಡಲಿದ್ದೀರಿ. ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಹೆಜ್ಜೆ ಇಡುವುದು ಸೂಕ್ತ. ಪುಸ್ತಕ ವ್ಯಾಪಾರಿಗಳಿಗೆ ಲಾಭ. ನಿಮ್ಮ ನಾಯಕತ್ವದ ಗುಣ ಪ್ರದರ್ಶಿಸಲು ವೇದಿಕೆ ಸಿಗಲಿದೆ.

ವೃಶ್ಚಿಕ: ಹೊಸ ಮನೆಯ ಕೆಲಸಗಳು ಮುಕ್ತಾಯ ಹಂತ ತಲುಪುವುದರಿಂದ ಮನಸ್ಸಿಗೆ ನೆಮ್ಮದಿ ಇರುವುದು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಓದಿನಲ್ಲಿ ಹೆಚ್ಚಿನ ಪರಿಶ್ರಮ ಅಗತ್ಯ. ದೇವತಾ ಕಾರ್ಯಗಳಿಗಾಗಿ ಪ್ರಯಾಣ ಮಾಡಲಿದ್ದೀರಿ.

ಧನು: ನಿಮ್ಮ ಮೇಲುಸ್ತುವಾರಿಯಲ್ಲಿ ಕೆಲಸ ಕಾರ್ಯ ಸುಗಮವಾಗಿ ಸಾಗುವುದು. ಯಂತ್ರೋಪಕರಣಗಳ ಸಹಾಯದಿಂದ ಕೆಲಸ ಮಾಡುವ ವೇಳೆಯಲ್ಲಿ ಅಪಾಯ ಸಂಭವಿಸಬಹುದು. ಆದ್ದರಿಂದ ಹೆಚ್ಚಿನ ಗಮನದಿಂದ ಕೆಲಸವನ್ನು ಮಾಡಿ.

ಮಕರ: ಬೇರೆಯವರ ಸಹಾಯ ಅಪೇಕ್ಷಿಸದೆ ಕಠಿಣವಾದ ಕಾರ್ಯಗಳನ್ನು ಸಹ ನೀವೆ ಸಾಧಿಸಿಕೊಳ್ಳಿ. ದೈವಾನುಗ್ರಹದಿಂದ ಸಕಲ ಅಭೀಷ್ಟವು ಸಿದ್ಧಿಯಾಗಿ ಸಂತೃಪ್ತಿ ಪಡೆಯುತ್ತೀರಿ. ಹಣಕಾಸಿನ ವಿವಾದಗಳನ್ನು ಬಗೆಹರಿಸಿಕೊಳ್ಳುವಿರಿ.

ಕುಂಭ: ಇತರರ ಕಷ್ಟಕಾಲದಲ್ಲಿ ಮಾಡಿದ ಸದುಪಕಾರದ ಉತ್ತಮ ಫಲಗಳು ನಿಮ್ಮ ಈ ಕಷ್ಟಕಾಲದಲ್ಲಿ ನಿಮ್ಮ ಸಹಾಯಕ್ಕೆ ಬರುತ್ತವೆ. ನಿಮ್ಮ ಅತಿಯಾದ ಸರಳತೆಯು ಸಮಾಜದಲ್ಲಿನ ನಿಮ್ಮ ಉತ್ತಮ ಗೌರವಕ್ಕೆ ಕಾರಣವಾಗುತ್ತದೆ.

ಮೀನ: ನೀವು ಇಂದು ಕೈಗೊಳ್ಳುವ ನಿರ್ಧಾರಗಳು ನಿಮ್ಮ ಕುಟುಂಬದ ಎಲ್ಲ ಸದಸ್ಯರ ಮನಸ್ಸಿಗೆ ನೆಮ್ಮದಿ ತರಲಿವೆ. ಎಲೆಕ್ಟ್ರಿಕಲ್ ಉಪಕರಣಗಳ ಮಾರಾಟಗಾರರಿಗೆ ಮತ್ತು ಕಬ್ಬಿಣ ವ್ಯಾಪಾರಿಗಳಿಗೆ ಹೆಚ್ಚು ಲಾಭ ಇರುವುದು.

ಪದಬಂಧ 6218

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರಗತಿಶೀಲ ಸ್ವಭಾವದವನು (4)
4. ಕಡಿಮೆ ಬೆಲೆ (2)
5.ಅಕ್ಕಿ ತೊಳೆದ ನೀರು (4)
7.ತೊಗಲ ಬಾವಲಿ ಇಲ್ಲಿದೆ (3)
9.ದಶಕದಿಂದಲೂ ಕಾದುತ್ತಿರುವ ಸೊಳ್ಳೆ (3)
11.ಕೌರವರ ಸೋದರ ಮಾವ (3)
12.ಗಣದ ಮುಂದೆ ನಿಂತಿರುವ ಲೆಕ್ಕಿಗ (3)
14.ಮರದ ನಡುವೆ ಓಟನ್ನು ನೀಡುವವನಿದ್ದಾನೆ (4)
16.ಒಂದು ಸಲಕ್ಕೆ ನುಂಗುವಷ್ಟು ಆಹಾರ (2)
17.ಕಡಲ ತೀರದ ಕಾಶ್ಮೀರ ಎಂದು ಪ್ರಸಿದ್ಧಿಪಡೆದಿರುವ (4)

ಮೇಲಿಂದ ಕೆಳಕ್ಕೆ
1.ಮರಳಿ ಬರುವಿಕೆ (6)
2.ಗಾಣದಿಂದ ಎಣ್ಣೆ ತೆಗೆಯುವವನು (3)
3.ಫಲಕದ ಹತ್ತಿರವಿರುವ ಹಣ್ಣು (2)
4.ಮುದ್ರಣವನ್ನು ಹೀಗೂ ಹೇಳುತ್ತಾರೆ (2)
5.ಕರದಲ್ಲಿರುವ ಕಲಸನ್ನ! (7)
6.ಹೊಟ್ಟೆಯೊಳಗೆ ಭ್ರೂಣವಿರುವ ಚೀಲ (4)
8.ಕೋಲಾರ ಜಿಲ್ಲೆಯಲ್ಲಿರುವ ಮಾವಿನಹಣ್ಣಿನ ನಗರ (6)
10.ಕರ ಮುಂದಿರಿಸಿದಾಗ ಕಾಣಿಸಿದ ಉಗುರು (4)
13.ಈತ ಕಬ್ಬಿಣದ ಕೆಲಸಗಾರ (3)
14.ಮರಸುತ್ತುವಾಗ ಏರಿದ ಅಮಲು! (2)
15.ದಾತಾರ ಹಿಡಿದಿರುವ ನೂಲು (2)



6217ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅನುಪಮ, 5.ನಗರ, 6.ರಮಡೋಲು 7.ನೆನಪು 9.ಕಮಾನು 10.ಅಧೀರ, 11.ಗಡಸು, 14.ವರಮಾನ 16.ಕನ್ನಡಿ, 17.ಗುಣಾಕಾರ

ಮೇಲಿಂದ ಕೆಳಕ್ಕೆ: 1.ದನಗಾಹಿ, 2.ಅರಮನೆ, 3.ಮರ, 4.ಹಾಲುಜೇನು, 8.ಪುಲ್ಲಿಂಗ, 10.ಅಗ್ಗವಣಿ, 12.ಸುಧಾಕರ, 13.ತೂಕಡಿಕೆ 15.ನಗು

ಸುಡೊಕು 6602

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9	4		5			2	1
3		5	2		1	7	9	
	1			9				5
5		7			9	1		
	6			2			8	
9		8	6			5		2
1		2		8			6	
			5		6	2		3
6		3		4			5	

6601 ಸುಡೊಕು

6	3	4	2	9	7	1	5	8
9	1	2	5	3	8	4	6	7
8	5	7	4	6	1	3	2	9
2	9	3	7	8	4	6	1	5
1	4	8	9	5	6	7	3	2
5	7	6	1	2	3	8	9	4
3	6	9	8	4	5	2	7	1
7	8	5	6	1	2	9	4	3
4	2	1	3	7	9	5	8	6

ಏಕಾಂಗಿ ಪ್ರವಾಸದ ಕಥನ

ಮನೆ, ಗಂಡ, ಮಕ್ಕಳೇ ಪ್ರಪಂಚ ಎಂದುಕೊಂಡ ಮಹಿಳೆಯರ ನಡುವೆ ಇಲ್ಲೊಬ್ಬರು ಈ ಸರಪಳಿ ಕಡಿದುಕೊಂಡು ಏಕಾಂಗಿಯಾಗಿ ರಾಜಸ್ಥಾನ ಪ್ರವಾಸ ಕೈಗೊಂಡಿದ್ದಾರೆ.

13

ಆವರಗೆರೆ ಅಂದ ಹೆಚ್ಚಿಸಿದ ಬಳಗ

ಕೆಲವೊಮ್ಮೆ ಹಳ್ಳಿಗಳು ಸುಂದರಗೊಳ್ಳುವುದು, ಅಭಿವೃದ್ಧಿ ಹೊಂದುವುದು, ಮಾದರಿಯಾಗುವುದು ಸರ್ಕಾರದ ಯೋಜನೆಗಳಿಂದಲ್ಲ. ಬದಲಾಗಿ ಆಯಾ ಗ್ರಾಮಗಳ ಆಸಕ್ತರ ಗುಂಪು, ಬಳಗ ಇಲ್ಲವೇ ಸಮಾನಮನಸ್ಕರಿಂದ. ಇದಕ್ಕೆ ಉತ್ತಮ ಉದಾಹರಣೆ ದಾವಣಗೆರೆ ಸಮೀಪದ ಈ ಊರು.

• ರಾಮಮೂರ್ತಿ ಪಿ.

ಆವರಗೆರೆ ಗ್ರಾಮದಲ್ಲಿನ 'ಕಾಯಕಯೋಗಿ ಬಸವ ಪರಿಸರ ಬಳಗ' ಸದಸ್ಯರು ಚಿತ್ರಗಳು: ಸತೀಶ್ ಬಡಿಗೇರ

ದಾವಣಗೆರೆ ಸಮೀಪದ ಆವರಗೆರೆ ಗ್ರಾಮದ ಬಸ್ ನಿಲ್ದಾಣದ ಸಮೀಪ ನಿಂತಿದ್ದೆ. ಅಲ್ಲಿನ ಚಿತ್ರಣವನ್ನು ಕಂಡು ಬೆರಗಾಗಿದ್ದೆ. ಏಕೆಂದರೆ, ಆ ಊರಿನ ರಸ್ತೆಗಳು ಚೆನ್ನಾಗಿದ್ದವು. ಅಕ್ಕಪಕ್ಕ ಸಾಲುಮರಗಳು ಬೆಳೆದು ನಿಂತು ತಂಗಾಳಿ ಸೂಸುತ್ತಿದ್ದವು. ಸ್ವಲ್ಪ ಮುಂದೆ ಹೆಜ್ಜೆ ಹಾಕಿದರೆ, ರಸ್ತೆಯ ಎರಡೂ ಬದಿಯಲ್ಲಿ ರೋಣುಗಲ್ಲುಗಳು, ಚಕ್ಕಡಿ ಬಂಡಿಗಳನ್ನು ಒಪ್ಪವಾಗಿ ಜೋಡಿಸಿ, ಅವುಗಳಿಗೆ ಬಣ್ಣ ಬಳಿದು ನಿಲ್ಲಿಸಲಾಗಿತ್ತು. ಸಮೀಪದಲ್ಲೇ ಪಿರಂಗಿಯೂ ನಿಂತಿತ್ತು! ಆ ಊರಿನಲ್ಲಿ ಯುದ್ಧ ನಡೆದ ಕುರುಹುಗಳೇನೂ ಇರಲಿಲ್ಲ. ಆದರೂ ಈ ಪಿರಂಗಿ ಬಂದಿದ್ದಾದರೂ ಹೇಗೆ ಎನ್ನುವ ಕುತೂಹಲದಿಂದಲೇ ಹತ್ತಿರ ಹೋಗಿ ನೋಡಿದರೆ, ಅವು ಫೈಬರ್ ಪೈಪ್ ಮತ್ತು ಚಕ್ಕಡಿ ಬಂಡಿಗಳು! ಸ್ಥಳೀಯ ಕುಶಲಿಗಳ ಕೈಚಳಕವದು. ಅಲ್ಲಿ ಮಕ್ಕಳು ಆಟವಾಡುತ್ತಿದ್ದರು.

ಹೀಗೆ ಅಲ್ಲಿನ ಸುಂದರ ಚಿತ್ರಣಗಳು ಮನ ಸೆಳೆದವು. ಕುತೂಹಲದಿಂದಲೇ ಅಲ್ಲಿಯೇ ಇದ್ದ ಟೀ ಅಂಗಡಿಗೆ ತೆರಳಿ ವೃದ್ಧರೊಬ್ಬರನ್ನು ಮಾತಿಗೆಳೆದಾಗ 'ಕಾಯಕಯೋಗಿ ಬಸವ ಪರಿಸರ ಬಳಗ'ದ ಬಗ್ಗೆ ತಿಳಿಯಿತು.

ಕೋವಿಡ್ ಆರಂಭದ ದಿನಗಳಲ್ಲಿ ಗ್ರಾಮದ ಸಮಾನಮನಸ್ಕರು ಸೇರಿ ರಚಿಸಿಕೊಂಡಿರುವ ಸಂಘಟನೆಯೇ 'ಕಾಯಕಯೋಗಿ ಬಸವ ಪರಿಸರ ಬಳಗ'. ಈ ಬಳಗವು ವಾರಕ್ಕೊಮ್ಮೆ ಗ್ರಾಮದಲ್ಲಿನ ಎರಡು ಉದ್ಯಾನಗಳು, ಮುಖ್ಯರಸ್ತೆಗಳು ಹಾಗೂ ಸರ್ಕಾರಿ ಶಾಲೆಯ ಸ್ವಚ್ಛತೆಗೆ ಶ್ರಮದಾನ ಮಾಡುತ್ತದೆ. ಉದ್ಯಾನಗಳು ಹಾಗೂ ಪ್ರಮುಖ ರಸ್ತೆಗಳ ಬದಿಯಲ್ಲಿ ಆರು ವರ್ಷಗಳಲ್ಲಿ ಎರಡು ಸಾವಿರಕ್ಕೂ ಹೆಚ್ಚು ಗಿಡಗಳನ್ನು ನೆಟ್ಟು ಪೋಷಿಸಿದೆ. ಪ್ರತೀ ಭಾನುವಾರ ಬೆಳಿಗ್ಗೆ ಏಳರಿಂದ ಎಂಟು ಗಂಟೆಯವರೆಗೆ ಬಳಗದ ಸದಸ್ಯರು ಸ್ವಚ್ಛತೆ ಕಾಪಾಡುವ ಜೊತೆಗೆ ಗ್ರಾಮದ ಅಂದ ಹೆಚ್ಚಿಸುವ ಕಾಯಕದಲ್ಲಿ ತೊಡಗುತ್ತಾರೆ.

ಬಳಗದಲ್ಲಿ ಇಪ್ಪತ್ತೈದಕ್ಕೂ ಹೆಚ್ಚು ಸದಸ್ಯರಿದ್ದು, ವಿವಿಧ ವೃತ್ತಿಗಳಲ್ಲಿ ತೊಡಗಿದ್ದಾರೆ. ಕೆಲವು ಸದಸ್ಯರು ವೃತ್ತಿಯಲ್ಲಿ ಪೇಂಟರ್‌ಗಳಾಗಿದ್ದು, ಗ್ರಾಮದ ಹಲವೆಡೆ ನುಡಿಮುತ್ತು, ಜಾಗೃತಿ ಬರಹಗಳನ್ನು ಬರೆದಿದ್ದಾರೆ. ಅವುಗಳು ವಿದ್ಯಾರ್ಥಿಗಳ ಕಣ್ಮನ ಸೆಳೆಯುತ್ತವೆ. 'ಕವಿರತ್ನ ಕಾಳಿದಾಸ ಉದ್ಯಾನ', 'ಮಹರ್ಷಿ ವಾಲ್ಮೀಕಿ ಉದ್ಯಾನ'ಗಳಲ್ಲಿನ ಗಿಡಗಳಿಗೆ ನೀರುಣಿಸಲು ಬಳಗವೇ ಪೈಪ್‌ಲೈನ್ ವ್ಯವಸ್ಥೆ ಮಾಡಿದೆ. ಬೇವು, ತೆಂಗು, ಮಾವು, ಪಪ್ಪಾಯ, ಪೇರಲ, ನೇರಳೆ, ಅಡಿಕೆ ಸೇರಿದಂತೆ ವಿವಿಧ ಬಗೆಯ ಗಿಡಗಳು ಇಲ್ಲಿ ನಳನಳಿಸುತ್ತಿವೆ.

ಭಾನುವಾರ ಬೆಳಿಗ್ಗೆ ಒಂದೆಡೆ ಸೇರುವ ಬಳಗದ ಸದಸ್ಯರು ಪೊರಕೆ ಹಿಡಿದು ಸ್ವಚ್ಛತಾ ಕೆಲಸ ಮಾಡುತ್ತಾರೆ. ಶಾಲಾ ಆವರಣ, ರಸ್ತೆ ಬದಿ ಹಾಗೂ ಉದ್ಯಾನಗಳಲ್ಲಿ ಸಸಿ ನೆಡುವುದು, ನೀರುಣಿಸುವುದು ಸೇರಿದಂತೆ ಇನ್ನಿತರ ಕೆಲಸಗಳಲ್ಲಿ ತೊಡಗುತ್ತಾರೆ.

ಬಸ್ ನಿಲ್ದಾಣದ ಬಳಿ ಅಳವಡಿಸಿರುವ ಬಂಡಿಗಾಲಿಗಳು ದಾರಿ ಹೋಕರನ್ನು ಆಕರ್ಷಿಸುತ್ತವೆ. ಸುತ್ತಮುತ್ತಲಿನ ಹತ್ತಾರು ಹಳ್ಳಿಗಳನ್ನು ಸುತ್ತಾಡಿ, ರೋಣುಗಲ್ಲುಗಳು ಹಾಗೂ ಬಂಡಿಗಾಲಿಗಳನ್ನು ಸಂಗ್ರಹಿಸಿ ತಂದ ಬಳಗದ ಸದಸ್ಯರು, ಅವುಗಳಿಗೆ ಬಣ್ಣ ಬಳಿದು ಸುಂದರಗೊಳಿಸಿದ್ದಾರೆ. ಗ್ರಾಮದ ಎರಡು ಪ್ರಮುಖ ರಸ್ತೆಗಳಲ್ಲಿ ಅವುಗಳನ್ನು ಕಲಾತ್ಮಕವಾಗಿ ಜೋಡಿಸಿಟ್ಟಿದ್ದಾರೆ. ಬಸ್ ನಿಲ್ದಾಣ ಹಾಗೂ ಪ್ರಮುಖ ರಸ್ತೆಗಳ ಬದಿಯಲ್ಲಿ ನೂರಕ್ಕೂ ಹೆಚ್ಚು ಸಿಮೆಂಟ್ ಬೆಂಚ್‌ಗಳನ್ನು (ಕಟ್ಟೆ) ಅಳವಡಿಸಿದ್ದಾರೆ. ವರ್ಷಕ್ಕೊಮ್ಮೆ ಅವುಗಳಿಗೆ ಸುಣ್ಣ ಬಣ್ಣ ಬಳಿಯುತ್ತಾರೆ.

11ನೇ ಪುಟಕ್ಕೆ...

ಜಯಂತಿಗಳ ಆಚರಣೆಯಲ್ಲೂ ಮಾದರಿ

ಬಸವ ಜಯಂತಿ ದಿನದಂದು ನಾಡಿನ ಎಲ್ಲ ಜಾತಿ, ಧರ್ಮಗಳ ಮಹನೀಯರ ಜಯಂತಿಯನ್ನು ಬಳಗದ ವತಿಯಿಂದ ಆಚರಿಸಲಾಗುತ್ತದೆ. ಬಳಗದಲ್ಲಿ ಎಲ್ಲ ಜಾತಿ, ಧರ್ಮದವರೂ ಇರುವ ಕಾರಣ ಪ್ರತ್ಯೇಕವಾಗಿ ಜಯಂತಿ ಆಚರಿಸುವ ಬದಲು ಒಂದೇ ದಿನ ಎಲ್ಲ ಮಹನೀಯರನ್ನು ನೆನೆದು ಗೌರವಿಸುವ ಕೆಲಸ ಮಾಡಲಾಗುತ್ತದೆ. ಅಂದು ಮಹನೀಯರ ಭಾವಚಿತ್ರಗಳ ಮೆರವಣಿಗೆಯನ್ನೂ ಗ್ರಾಮದಲ್ಲಿ ನಡೆಸಲಾಗುತ್ತದೆ. ಆವರಗೆರೆ ಗ್ರಾಮವು ಕಾರ್ಮಿಕ ಹೋರಾಟದ ನೆಲವೂ ಆಗಿದೆ.

ಫೈಬರ್ ಪೈಪ್ ಹಾಗೂ ಬಂಡಿಗಾಲಿ ಬಳಸಿ ತಯಾರಿಸಿದ ಪಿರಂಗಿಯ ಬಳಿ ಚಿಣ್ಣರ ಆಟ

ಮಂಗಳೂರಿನ 'ಟೈಗರ್ ಬಾಯ್ಸ್' ತಂಡ ತಾಸೆಗೆ ಹೆಜ್ಜೆ ಹಾಕಿದಾಗ... ಚಿತ್ರ: ರಂಜು ಪಿ.

ಪ್ರಜಾವಾಣಿ ನೋಡಿಯೊ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ತುಳುನಾಡಿನಲ್ಲಿ ಮಾರ್ನೆಮಿಯ ಒಂಬತ್ತು ದಿನವೂ ಎಲ್ಲೆಡೆ ತಾಸೆ, ಡೋಲುಗಳ ಅಬ್ಬರವೇ ಕೇಳಿಬರುತ್ತದೆ. ವಿವಿಧ ರೀತಿಯ ವೇಷಗಳು ಕಣ್ಣಿಗೆ ಹಬ್ಬ ನೀಡುತ್ತವೆ. ಅಷ್ಟೂ ದಿನವೂ ವೇಷ ಹಾಕಲಾಗುತ್ತದೆ. ಜನಪದ ಕಲೆಯಾದ ಹುಲಿವೇಷ ಇಂದಿಗೂ ತನ್ನ ಆಕರ್ಷಣೆಯನ್ನು ಕಳೆದುಕೊಳ್ಳದೆ ದಿನೇ ದಿನೇ ರಂಗೇರುತ್ತಲೇ ಇದೆ.

ತುಳುನಾಡಿನ ಹುಲಿವೇಷ

• ರಂಜಿತ್ ಪುಣ್ಚಪ್ಪಾಡಿ

ದೂರಕ್ಕೆ ಕೇಳಿಸುತ್ತಿದ್ದ ತಾಸೆ, ಡೋಲು ವಾದನದ ಅಬ್ಬರ ದಾರಿ ಸಮೀಪಿಸುತ್ತಿದ್ದಂತೆ ಜೋರಾಗಿ ಕೇಳುತ್ತಾ ಬಂತು. ಆವರಣದ ಸುತ್ತ ನೂರಾರು ಜನರು ನೆರೆದಿದ್ದರು. ಸಿಂಗರಿಸಿದ್ದ ವೇದಿಕೆಯಲ್ಲಿ ಹನುಮಂತ, ದೇವಿಯ ಭಾವಚಿತ್ರಗಳು, ಅದರ ಎದುರು ಹುಲಿ ಮುಖವಾಡಗಳು, ಝುಂಡೆ ಮುಂತಾದ ಹುಲಿವೇಷದ ಪರಿಕರಗಳಿಗೆ ಗುರಿಕಾರ ಆರತಿ ಬೆಳಗುತ್ತಿದ್ದರು. ಒಬ್ಬರ ನಂತರ ಒಬ್ಬರಂತೆ ಮಕ್ಕಳು, ಯುವಕರು, ಮಧ್ಯವಯಸ್ಕರು ಬಂದು ಕೆಳಗಿರಿಸಿದ್ದ ಲೋಬಾನಕ್ಕೆ (ಊದು) ಮುಖ ಒಡ್ಡಿ ದೇವರಿಗೆ ನಮಿಸುತ್ತಿದ್ದರು. ನಮಿಸಿದ ಬಳಿಕ ಆವೇಶದಿಂದ ಕುಣಿಯುತ್ತಿದ್ದ ಅವರನ್ನು ನೆರೆದಿದ್ದವರು ಉತ್ತೇಜಿಸುತ್ತಾ ಸಂಭ್ರಮಿಸುತ್ತಿದ್ದರು. ಇಂತಹ ಕಂಪನ ಸೃಷ್ಟಿಸಿದ್ದ ಸನ್ನಿವೇಶದಲ್ಲಿ ನೆರೆದವರೂ ಬೆರೆಯಲು ರಾತ್ರಿಯನ್ನು ಲೆಕ್ಕಿಸದೆ ಕಾದಿದ್ದರು.

ಇದು ತುಳುನಾಡಿನ ಮಾರ್ನೆಮಿ ಆಚರಣೆಯಲ್ಲಿ ಪ್ರಾಮುಖ್ಯತೆ ಪಡೆದಿರುವ 'ಪಿಲಿ ಏಸ' (ಹುಲಿ ವೇಷ)ದ 'ಊದು ಪೂಜೆ' ಮತ್ತು 'ರಂಗ್' ಸಮಾರಂಭದ ಚಿತ್ರಣ. ಹುಲಿ ವೇಷಧಾರಿಗಳು ವೇಷ ಹಾಕುವ ಅಥವಾ ಬಣ್ಣ ಹಚ್ಚಿಕೊಳ್ಳುವ ಸಮಾರಂಭವೂ ಹೌದು.

ಅಂದು ರಾತ್ರಿ ಒಂಬತ್ತು ಗಂಟೆ ಸುಮಾರಿಗೆ ರಂಗ್ ಆರಂಭವಾಯಿತು. ಎರಡು ಗಂಟೆಗೂ ಹೆಚ್ಚು ಹುಲಿವೇಷಧಾರಿಗಳು ಭರ್ಜರಿಯಾಗಿ ಪೌಲ ಹಾಕಿದರು. ಹನ್ನೊಂದು ಗಂಟೆ ಬಳಿಕ ಬಣ್ಣದ ಸಮಯ. ಕೇವಲ ಚಡ್ಡಿ ಧರಿಸಿದ್ದ ವೇಷಧಾರಿಗಳು ಎರಡೂ ಕೈಗಳಲ್ಲಿ ಉದ್ದನೆಯ ಕೋಲುಗಳನ್ನು ಊರಿ ನಿಂತರು. ಕಲಾವಿದರು ಮೊದಲಿಗೆ ಬಿಳಿ, ಬಳಿಕ ಕೇಸರಿ, ಹಳದಿ, ಕಪ್ಪು ಬಣ್ಣ ಬಳಿದರು. ಬೆಳಿಗ್ಗೆ ಆರರ ಹೊತ್ತಿಗೆ ನೋಡ ನೋಡುತ್ತಿದ್ದಂತೆಯೇ ಐವತ್ತು ಹುಲಿಗಳು ಸಿದ್ಧವಾಗಿದ್ದವು! ಆ ಹುಲಿ ಗುಂಪಿನಲ್ಲಿ ಅಪ್ಪೆ ಪಿಲಿ ಅಥವಾ ಮಂಡೆ ಪಿಲಿ (ತಾಯಿ ಹುಲಿ), ಕಿನ್ನಿ ಪಿಲಿ (ಮರಿ), ಕಪ್ಪು ಪಿಲಿ, ಚಿಟ್ಟೆ ಪಿಲಿ ಅಥವಾ ಬಲಿಪೆ (ಚಿರತೆ, ಚೀತಾ) ಇದ್ದವು.

ಬೆಳಿಗ್ಗೆ ಎಂಟರ ಸುಮಾರಿಗೆ ಸಿದ್ಧವಾಗಿ ನಿಂತಿದ್ದ ಬಸ್, ಲಾರಿ, ಓಪನ್ ಜೀಪ್‌ಗಳನ್ನು ಏರಿದ ಹುಲಿಗಳು ದೈವಸ್ಥಾನ ಮತ್ತು ದೇವಿ ದೇವಸ್ಥಾನಕ್ಕೆ ಸವಾರಿ ಹೊರಟವು. ಅಲ್ಲಿ ಭಕ್ತಿಯಿಂದ ನಮಿಸಿ ದೈವ–ದೇವರ ಎದುರು ಆವೇಶಭರಿತವಾಗಿ ಕುಣಿದವು. ಅಲ್ಲಿಂದ ಮುಂದೆ ಮೆರವಣಿಗೆಯಲ್ಲಿ ಮನೆಮನೆಗೆ ತೆರಳಿದವು. ಟ್ರಂಪೆಟ್‌ನ ಇಂಪಿನೊಂದಿಗೆ ತಾಸೆ ಡೋಲುಗಳ ಅಬ್ಬರಕ್ಕೆ ಭರ್ಜರಿಯಾಗಿ ಹೆಜ್ಜೆ ಹಾಕುತ್ತಾ, ಪಲ್ಟಿ ಹೊಡೆಯುತ್ತಾ, ಮನೆಯವರು ನೀಡಿದ ₹50, ₹100, ₹200, ₹500ರ ನೋಟುಗಳನ್ನು ಹಿಮ್ಮುಖವಾಗಿ ಬಾಗಿ ಬಾಯಿಂದ ಎತ್ತುತ್ತಾ ಸಾಹಸವನ್ನು ಪ್ರದರ್ಶಿಸುತ್ತಾ ನೆರೆದವರನ್ನು ರೋಮಾಂಚನಗೊಳಿಸಿದವು. ಟ್ರಂಪೆಟ್, ತಾಸೆ, ಡೋಲು ವಾದನ ಮತ್ತು ವೇಷಧಾರಿಗಳ ನರ್ತನಕ್ಕೆ ಮರುಳಾಗಿ ನೆರೆದಿದ್ದ ಕೆಲ ಯುವಕ–ಯುವತಿಯರು, ಮಕ್ಕಳು, ವಯಸ್ಕರೂ ಅವರೊಂದಿಗೆ ಹೆಜ್ಜೆ ಹಾಕಿದರು.

ಹುಲಿಗಳು ಬೆಳಿಗ್ಗೆಯಿಂದ ಸಂಜೆಯವರೆಗೆ ಮನೆಮನೆಗಳಿಗೆ ತೆರಳಿ ಕುಣಿದವು. ಕೆಲವು ಮನೆಯವರು ತಾವೇ ಕರೆಸಿ ಕುಣಿಸಿದರು. ನೋಟಿನ ಮಾಲೆಯನ್ನೇ ಕೊರಳಿಗೆ ಹಾಕಿ ಸಂಭ್ರಮಿಸಿದರು. ರಾತ್ರಿ ಏಳು ಗಂಟೆಯವರೆಗೆ ಹುಲಿಗಳ ಕುಣಿತ ಅಷ್ಟೇ ಲವಲವಿಕೆಯಿಂದ ಸಾಗಿತ್ತು. ಬಳಿಕ ಮಂಗಳಾದೇವಿ ದೇವಸ್ಥಾನಕ್ಕೆ ತೆರಳಿ ಮಂಗಳಾದೇವಿಯ ಮುಂದೆ ಆವೇಶದಿಂದ ಕುಣಿದು ಸೇವೆ ಅಥವಾ ಹರಕೆ ಸಲ್ಲಿಸಿದವು. ಅಲ್ಲಿಗೆ ಇನ್ನೆರಡು ಹುಲಿ ತಂಡಗಳು ಬಂದಿದ್ದವು.

ವಿವಿಧ ರೀತಿಯ ವೇಷಗಳು ಕಣ್ಣಿಗೆ ಹಬ್ಬ ನೀಡುವಂತಿದ್ದವು. ನವರಾತ್ರಿಯ ಅಷ್ಟೂ ದಿನವೂ ವೇಷ ಹಾಕಲಾಗುತ್ತದೆ. ಸೇವೆ, ಭಕ್ತಿರೂಪದಲ್ಲಿ, ಹರಕೆ ತೀರಿಸಲು ವೇಷ ಹಾಕಲಾಗುತ್ತದೆ. ಭಕ್ತಿಯಿಂದ ಅಥವಾ ಸಂಕಷ್ಟ ಎದುರಾದಾಗ 'ಕಷ್ಟ ನಿವಾರಣೆಯಾದರೆ ವೇಷ ಹಾಕುತ್ತೇನೆ' ಎಂದು ಹರಕೆ ಹೇಳುವ ಜನರು, ಅವರ ಬೇಡಿಕೆ ಈಡೇರಿದರೆ ವೇಷ ಹಾಕಿ ಹರಕೆ ಸಲ್ಲಿಸುತ್ತಾರೆ. ಕಾಯಿಲೆ ಪೀಡಿತರು, ಅಸಹಾಯಕರು, ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಮಾಡಲು ವೇಷ ಹಾಕುವವರೂ ಇದ್ದಾರೆ. ಗಳಿಸಿದ ಹಣವನ್ನು ಅವರಿಗೆ ನೀಡಿ ಮಾನವೀಯತೆ ಮೆರೆಯುತ್ತಾರೆ. ಶಾರ್ದೂಲ, ಕರಡಿ, ಹುಲಿವೇಷ, ಜೋಕರ್, ಬೇಡರು, ಅಲ್ಲದೆ ಸಮಕಾಲೀನ ವೇಷಗಳನ್ನು ಹಾಕುತ್ತಾರೆ. ಈ ಪೈಕಿ ಹುಲಿವೇಷದ್ದೇ ಸಿಂಹಪಾಲು.

> ನಮ್ಮ ಕುಟುಂಬದ ಪರಂಪರೆಯಿಂದಲೂ ಹುಲಿವೇಷದೊಂದಿಗೆ ಅವಿನಾಭಾವ ಸಂಬಂಧವಿದೆ. ನನ್ನ ಅಜ್ಜ, ಅಪ್ಪ ಹುಲಿವೇಷ ಹಾಕುತ್ತಿದ್ದರು. ನಾನು ಒಂದು ವರ್ಷದ ಮಗುವಿದ್ದಾಗಲೇ ಹುಲಿವೇಷ ಹಾಕಿದ್ದೇನೆ. ಅಂದಿನಿಂದ ಪ್ರತಿ ವರ್ಷ ವೇಷ ಹಾಕಿ ದೇವಿಗೆ ಸೇವೆ ಸಲ್ಲಿಸುತ್ತಿದ್ದೇನೆ
>
> **ಸಂದೀಪ್ ಕಾವೂರು,** ಹುಲಿ ವೇಷಧಾರಿ



ಚಿತ್ರ: ಫಕ್ರುದ್ದೀನ್ ಎಚ್.

ಭಯ–ಭಕ್ತಿ ಪ್ರಧಾನವಾದ ಹುಲಿವೇಷ ಸಂಪ್ರದಾಯಬದ್ಧ ಆಚರಣೆ. ವೇಷಧಾರಿಗಳು ಮಾಂಸಾಹಾರ, ಮದ್ಯಪಾನ ಬಿಟ್ಟು ಕಟ್ಟುನಿಟ್ಟಿನ ವ್ರತಾಚರಣೆ ಕೈಗೊಳ್ಳುತ್ತಾರೆ.

'ಹಿಂದೆಲ್ಲಾ ನೈಸರ್ಗಿಕ ಬಣ್ಣಗಳನ್ನು ಬಳಸಿ ವೇಷ ಹಾಕಲಾಗುತ್ತಿತ್ತು. ಬಿಳಿ ಬಣ್ಣಕ್ಕಾಗಿ ಬೆಳ್ತಿಗೆ ಅಕ್ಕಿಯನ್ನು ನುಣ್ಣಗೆ ಅರೆದು ಬಳಸುತ್ತಿದ್ದರು. ಅರಿಸಿನದಿಂದ ಹಳದಿ ಬಣ್ಣ, ಕಪ್ಪು ಬಣ್ಣ, ಹಸಿರಿಗಾಗಿ ಕೆಲವು ಸೊಪ್ಪುಗಳನ್ನು ಬಳಸುತ್ತಿದ್ದರು. ಕಾಲ ಬದಲಾದಂತೆ ಬಳಸುವ ಬಣ್ಣವೂ ಬದಲಾಯಿತು. ಇಂದು ಅಕ್ರಿಲಿಕ್ ಪೇಂಟ್, ವಾಟರ್ ಪೇಂಟ್ ಬಳಸುತ್ತಾರೆ. ಬಣ್ಣಗಳಿಂದ ಹುಲಿಯ ಪಡಿಯಚ್ಚು ಮೂಡಿಸುವುದು ಸಂಪ್ರದಾಯ. ಆದರೆ ಕಾಲ ಬದಲಾದಂತೆ ಜನರ ಅಭಿರುಚಿಯೂ ಬದಲಾಗುತ್ತದೆ. ಈಗ ವಿವಿಧ ಬಣ್ಣಗಳು, ವಿವಿಧ ವಿನ್ಯಾಸಗಳನ್ನು ಹೊಂದಿರುವ ಫ್ಯಾಷನ್ ಹುಲಿಗಳೂ ಕಾಣಸಿಗುತ್ತವೆ' ಎಂದು ತುಳು ಜಾನಪದ ವಿದ್ವಾಂಸ ಕೆ.ಕೆ.ಪೇಜಾವರ ಹೇಳುತ್ತಾರೆ.

'ಹುಲಿವೇಷ ಹಾಕುವುದು ಸಾಮಾನ್ಯ ಸಂಗತಿಯಲ್ಲ. ರಾತ್ರಿ ರಂಗ್ ಶುರುವಾದ ಬಳಿಕ ಬೆಳಿಗ್ಗಿನವರೆಗೆ ಬಣ್ಣ ಹಾಕಲಾಗುತ್ತದೆ. ಮೈಮೇಲಿನ ರೋಮ ತೆಗೆಯಬೇಕಾಗುತ್ತದೆ. ರಾತ್ರಿ ನಿದ್ದೆಗೆಟ್ಟು ಬಣ್ಣ ಹಾಕಿಸಿಕೊಂಡು ಮರುದಿನ ಬೆಳಿಗ್ಗೆಯಿಂದ ರಾತ್ರಿವರೆಗೂ ಮನೆ ಮನೆಗೆ ತೆರಳಿ ಕುಣಿಯಬೇಕಾಗುತ್ತದೆ. ಪುಟ್ಟ ಪುಟ್ಟ ಮಕ್ಕಳೂ ವೇಷ ಹಾಕುತ್ತಾರೆ. ಬಣ್ಣ ಹಾಕುವಾಗ ನಾವು ಹೇಳಿದಂತೆ ಕೇಳುತ್ತಾರೆ. ಆ ಒಂದು ದಿನ ತಂದೆ ತಾಯಿ ಮನೆಯನ್ನೇ ಮರೆಯುತ್ತಾರೆ. ಇಡೀ ರಾತ್ರಿ ನಿದ್ದೆಗೆಟ್ಟರೂ ಮರುದಿನ ಉತ್ಸಾಹದಿಂದಲೇ ಕುಣಿಯುತ್ತಾರೆ' ಎನ್ನುತ್ತಾರೆ ಕಲಾವಿದ ಗಿರೀಶ್ ಸವಣೂರು.

ಹುಲಿವೇಷಕ್ಕೆ ಸಿದ್ಧತೆ ಹೀಗಿರುತ್ತದೆ ನೋಡಿ... ಚಿತ್ರ: ಬಿ.ಕೆ.ಜನಾರ್ಧನ್

ನೂರಕ್ಕೂ ಹೆಚ್ಚು ತಂಡಗಳು

ಸಾಂಪ್ರದಾಯಿಕವಾಗಿ ಹುಲಿವೇಷ ಹಾಕುವ ಹಲವಾರು ತಂಡಗಳಿವೆ. ಸುಮಾರು ನೂರಕ್ಕಿಂತಲೂ ಹೆಚ್ಚು ವರ್ಷಗಳಿಂದಲೂ ನಡೆಸಿಕೊಂಡು ಬರುತ್ತಿರುವ ತಂಡಗಳಿವೆ. ಒಂದೊಂದು ತಂಡದಲ್ಲಿ ಮೂವತ್ತರಿಂದ ಎಂಬತ್ತು ಕಲಾವಿದರು ಇರುತ್ತಾರೆ. ಕಲಾವಿದನೊಬ್ಬ ಕಡಿಮೆ ಎಂದರೂ ದಿನಕ್ಕೆ ₹1 ಸಾವಿರದಿಂದ ₹5 ಸಾವಿರದವರೆಗೆ ಸಂಭಾವನೆ ಪಡೆಯುತ್ತಾನೆ. 'ಸೆಲೆಬ್ರಿಟಿ' ಹುಲಿವೇಷಧಾರಿಗಳೂ ಇದ್ದಾರೆ. ಲಕ್ಷಗಟ್ಟಲೆ ಖರ್ಚು ತಗಲುವ ಹುಲಿವೇಷ ತಂಡ ನಡೆಸುವುದು ಬಲು ದುಬಾರಿ. ಆದ್ದರಿಂದಲೇ ಹುಲಿವೇಷ ತಂಡ ನಡೆಸುವುದು ಕಂಬಳ ಕೋಣ ಸಾಕಿದಂತೆಯೇ ಪ್ರತಿಷ್ಠೆಯ ವಿಷಯ. ಕೇಸರಿ ಫ್ರೆಂಡ್ಸ್ ಸರ್ಕಲ್ ಬಜಿಲಕೇರಿ, ಬರ್ಕೆ ಫ್ರೆಂಡ್ಸ್, ಪೊಳಲಿಯ ಪುರಲ್ದಪ್ಪೆನ ಮೋಕೆದ ಬೊಳ್ಳಿಲು, ಗೋರಕ್ಷನಾಥ ಟೈಗರ್ಸ್, ಕಾಡುಬೆಟ್ಟು ಅಶೋಕ್‌ರಾಜ್ ಬಳಗ, ಮುಳಿಹಿತ್ಲು ಫ್ರೆಂಡ್ಸ್ ಸರ್ಕಲ್ ಮುಂತಾದ ಕೆಲವು ಪ್ರಸಿದ್ಧ ಹುಲಿವೇಷ ತಂಡಗಳಿವೆ.

ಬೆರಳೆಣಿಕೆಯಷ್ಟಿದ್ದ ಹುಲಿವೇಷ ತಂಡಗಳ ಸಂಖ್ಯೆ ಈಗ ನೂರರ ಗಡಿ ದಾಟಿದೆ! ಚೌತಿ, ದೊಡ್ಡ ಮಟ್ಟದ ಕಾರ್ಯಕ್ರಮಗಳ ಸಂದರ್ಭದಲ್ಲಿ ಮುಂಬೈ, ಬೆಂಗಳೂರು ಸೇರಿದಂತೆ ಇತರ ನಗರಗಳಿಂದ ತಂಡಗಳಿಗೆ ಬೇಡಿಕೆ ಬರುತ್ತದೆ. ದಸರಾ ಅಲ್ಲದೆ ಕೃಷ್ಣ ಜನ್ಮಾಷ್ಟಮಿ, ಚೌತಿ, ದೇವಸ್ಥಾನಗಳ ಜಾತ್ರೆ, ಶೋಭಾಯಾತ್ರೆಗಳಲ್ಲೂ ಹುಲಿವೇಷ ಕಾಣಸಿಗುತ್ತದೆ. ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ವ್ಯಾಪ್ತಿಯಲ್ಲೇ ಓಡಾಡಿಕೊಂಡಿದ್ದ ತಂಡಗಳೀಗ ರಾಜ್ಯ, ದೇಶದ ಗಡಿಯನ್ನು ದಾಟಿ ವಿವಿಧೆಡೆ ಪ್ರದರ್ಶನ ನೀಡುತ್ತಿವೆ. ಅಲ್ಲದೇ ವಿಮಾನವೇರಿ ವಿದೇಶಗಳನ್ನು ತಲುಪಿ, ಅಲ್ಲೂ ಕುಣಿದು ಮನಸೂರೆಗೊಳ್ಳುತ್ತಿವೆ.

ಭರ್ಜರಿ ಸ್ಪರ್ಧೆ!

ಸಾಂಪ್ರದಾಯಿಕ ಹುಲಿ ಕುಣಿತವಲ್ಲದೆ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಮಂಗಳೂರಿನಲ್ಲಿ ಹತ್ತು ವರ್ಷಗಳಿಂದ ನಡೆಯುತ್ತಿರುವ 'ಪಿಲಿನಲಿಕೆ', 'ಪಿಲಿಪರ್ಬ', 'ಪುತ್ತೂರ್ದ ಪಿಲಿಗೊಬ್ಬು' ಮುಂತಾದವು ಇದಕ್ಕೆ ಉದಾಹರಣೆ.

11ನೇ ಪುಟಕ್ಕೆ...

ಇತಿಹಾಸ ಪುಟ ಸೇರುತ್ತಿರುವ ವಾಡೆಗಳು

ರಾಯಬಾಗ ಹೊರವಲಯದಲ್ಲಿನ ರಾಜವಾಡೆ ಚಿತ್ರ: ಆನಂದ ಮನ್ನಿಕೇರಿ

• ಇಮಾಮ್‌ಹುಸೇನ್ ಗೂಡುನವರ

ಉತ್ತರ ಕರ್ನಾಟಕದಲ್ಲಿ ಕೋಟೆಗಳಿಗೆ ವಾಡೆಗಳು ಎಂದು ಹೇಳುತ್ತಾರೆ. ಈ ಭಾಗದ ಹಳ್ಳಿಗಳಲ್ಲಿ ವಾಡೆಗಳು ಕಾಣಸಿಗುತ್ತವೆ. ಹಿಂದೊಮ್ಮೆ ರಾಜವೈಭೋಗ ಕಂಡಿರುವ ಈ ದೈತ್ಯ ಕಟ್ಟಡಗಳು ಈಗ ಹೆಚ್ಚು ಕಡಿಮೆ ಇತಿಹಾಸದ ಪುಟ ಸೇರಿವೆ. ವಾಡೆಗಳು ನಮ್ಮ ನೆಲದ ಶ್ರೀಮಂತ ಸಂಸ್ಕೃತಿ ಹಾಗೂ ಆಡಳಿತ ಶಿಸ್ತಿನ ಕುರುಹುಗಳು.

ಇಂಥ ವಾಡೆಗಳ ಸ್ಥಿತಿಗತಿ ಅರಿಯಲು ಹೊರಟು ನಿಂತಾಗ ಮೊದಲು ತಲುಪಿದ್ದು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶಿರಸಂಗಿಗೆ. ಹೊರಗೆ ಜೀಕುವ ಮಳೆ. ಒಮ್ಮೆ ಧೋ... ಎಂದು ಸುರಿದರೆ, ಮತ್ತೊಮ್ಮೆ ವಿರಾಮ. ಈ ವೇಳೆ ಲಿಂಗರಾಜರ ವಾಡೆಗೆ ಹೋದರೆ ಅಚ್ಚರಿ. ಒಂದು ಕಾಲಕ್ಕೆ ರಾಜವೈಭವದಿಂದ ಮೆರೆದಿದ್ದ ವಾಡೆ ಸೊರಗಿತ್ತು. ವಾಡೆಯ ಬೃಹತ್ ಗೋಡೆ ಕುಸಿದಿದ್ದರೆ, ವಿವಿಧ ಸಾಮಗ್ರಿಗಳು ಬೇಕಾಬಿಟ್ಟಿಯಾಗಿ ಬಿದ್ದಿದ್ದವು. ಮುಖ್ಯ ಕಟ್ಟಡವೂ ಶಿಥಿಲ ಹಂತ ತಲುಪಿತ್ತು. ಅಲ್ಲಿಗೆ ಬಂದಿದ್ದ ಇಬ್ಬರು ಪ್ರವಾಸಿಗರು, 'ಶ್ರೀಮಂತಿಕೆಯಿಂದ ಕೂಡಿದ್ದ ವಾಡೆಗೆ ಇಂಥ ಪರಿಸ್ಥಿತಿ ಬಂದಿದೆಯಲ್ಲ' ಎಂದು ಬೇಸರದಿಂದ ಆಡಿದ ಮಾತು ಕಿವಿಗೆ ಬಿತ್ತು.

ಇದು ಈ ವಾಡೆಯೊಂದರ ಕಥೆಯಷ್ಟೇ ಅಲ್ಲ; ಕೆಲವನ್ನಷ್ಟೇ ಬಿಟ್ಟರೆ ಜಿಲ್ಲೆಯ ಬಹುತೇಕ ವಾಡೆಗಳಲ್ಲಿ ಇದೇ ಚಿತ್ರಣ ಕಂಡುಬರುತ್ತದೆ.

ಬೆಳಗಾವಿ ಜಿಲ್ಲೆಯಲ್ಲಿ ಐವತ್ತಕ್ಕೂ ಅಧಿಕ ವಾಡೆಗಳಿದ್ದವು. ಪ್ರತಿಷ್ಠಿತರು, ಆಡಳಿತಗಾರರು ಮತ್ತು ರಾಜಮನೆತನದವರು ವಾಸಕ್ಕಾಗಿ ಹಾಗೂ ಆಡಳಿತಕ್ಕಾಗಿ ಬಳಸುತ್ತಿದ್ದ ಭವ್ಯ ಕಟ್ಟಡ ಇವಾಗಿದ್ದವು.

ವಾಡೆಯೊಳಗೆ ಮುಖ್ಯ ಕಟ್ಟಡ ಇರುತ್ತಿತ್ತು. ಅದರ ಹೆಬ್ಬಾಗಿಲು ಮಜಬೂತ್ ಆಗಿರುತ್ತಿತ್ತು. ದೀರ್ಘ ಬಾಳಿಕೆ ಬರುವಂಥ ಕೆತ್ತನೆಗಳು, ಆಯಾ ಅರಸೊತ್ತಿಗೆ ಮತ್ತು ವಂಶಕ್ಕೆ ಸಂಬಂಧಿಸಿದ ಚಿತ್ರಗಳು, ಲಾಂಛನಗಳನ್ನು ಕಾಣಬಹುದು. ಇದಲ್ಲದೇ ಭವ್ಯ ಪಡಸಾಲೆ, ಅದರಲ್ಲಿ ಸಾರ್ವಜನಿಕರೊಂದಿಗೆ ಸಂವಾದ ಮಾಡಲು ಕಟ್ಟೆ. ಪಡಸಾಲೆಯ ಒಂದುಬದಿ ಕೋಣೆಯಲ್ಲಿ ಶಸ್ತ್ರಾಗಾರ, ಮತ್ತೊಂದು ಕೋಣೆಯಲ್ಲಿ ಖಜಾನೆ ಇರುತ್ತಿತ್ತು.

ವಾಸ್ತುಶಿಲ್ಪ ದೃಷ್ಟಿಯಿಂದ ಶ್ರೀಮಂತವಾಗಿದ್ದ ವಾಡೆಗಳು ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗೆ ಸಾಕ್ಷಿಯಾಗುತ್ತಿದ್ದವು. ವಿವಿಧ ಚಲನಚಿತ್ರಗಳು, ಕಿರುಚಿತ್ರಗಳ ಚಿತ್ರೀಕರಣಕ್ಕೆ ವೇದಿಕೆ ಕಲ್ಪಿಸಿದ್ದವು.

ಬೆಳಗಾವಿ, ಕಾಕತಿ, ಸವದತ್ತಿ, ಸವದತ್ತಿ ತಾಲ್ಲೂಕಿನ ಶಿರಸಂಗಿ, ಚಚಡಿ, ಯರಗಟ್ಟಿ ತಾಲ್ಲೂಕಿನ ತಲ್ಲೂರ, ಚನ್ನಮ್ಮನ ಕಿತ್ತೂರು ತಾಲ್ಲೂಕಿನ ತುರಮರಿ, ರಾಮದುರ್ಗ, ಕಾಗವಾಡ, ನಿಪ್ಪಾಣಿ, ನಿಪ್ಪಾಣಿ ತಾಲ್ಲೂಕಿನ ಸೌಂದಲಗಾ, ಬೇಡಕಿಹಾಳ, ಬೆನ್ನಾಡಿ, ಚಿಕ್ಕೋಡಿ, ಚಿಕ್ಕೋಡಿ ತಾಲ್ಲೂಕಿನ ಅಂಕಲಿ, ನನದಿ, ರಾಯಬಾಗ, ರಾಯಬಾಗ ತಾಲ್ಲೂಕಿನ ಚಿಂಚಲಿ ಮೊದಲಾದ ಗ್ರಾಮಗಳಲ್ಲಿ ವಾಡೆ ಇದ್ದವು.

ವಿವಿಧ ಉದ್ದೇಶಕ್ಕೆ ಬಳಕೆ

'ವಾಡೆಗಳನ್ನು ವಿವಿಧ ಉದ್ದೇಶಕ್ಕೆ ನಿರ್ಮಿಸಲಾಗುತ್ತಿತ್ತು. ಸೈನ್ಯದ ಉದ್ದೇಶಕ್ಕಾಗಿ ಕಟ್ಟಿದ ವಾಡೆಗಳಲ್ಲಿ ತರಬೇತಿ ನೀಡುವ ಜತೆಗೆ, ಶಸ್ತ್ರಾಸ್ತ್ರಗಳನ್ನು ಇರಿಸಲಾಗುತ್ತಿತ್ತು. ರಾಜರ ಆಡಳಿತ, ತೆರಿಗೆ ಸಂಗ್ರಹಕ್ಕಾಗಿ ವಾಡೆಗಳನ್ನು ಕಟ್ಟಲಾಗಿತ್ತು. ಹವ್ಯಾಸಕ್ಕಾಗಿ ಮತ್ತು ಬೇಟೆಗಾಗಿ ಬಂದಾಗ ವಾಸವಿರಲೆಂದೂ ಕೆಲವರು ವಾಡೆ ಕಟ್ಟಿಸಿದ್ದರು' ಎಂದು ಸಂಶೋಧಕ ಗುರುಪಾದ ಮರಿಗುದ್ದಿ ಹೇಳುತ್ತಾರೆ.

ಬೆಳಗಾವಿ ಜಿಲ್ಲೆಯಲ್ಲಿದ್ದ ಲಿಂಗಾಯತರು, ಮರಾಠರು ಮತ್ತು ಜೈನರ ವಾಡೆಗಳು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಕೇಂದ್ರಗಳಾಗಿದ್ದವು. ಇಪ್ಪತ್ತು ವರ್ಷಗಳ ಹಿಂದೆ ಮರಿಗುದ್ದಿ ಅವರು ಅಧ್ಯಯನ ಕೈಗೊಂಡಾಗ, ಹಲವು ವಾಡೆಗಳು ಸುಸ್ಥಿತಿಯಲ್ಲೇ ಇದ್ದವು. ನಂತರ ಅವುಗಳ ಸಂರಕ್ಷಣೆ ಆಗಲಿಲ್ಲ. ಈಗ ರಾಜಮನೆತನದವರು ವಾಸವಿರುವ ಕೆಲವಷ್ಟೇ ಸುಸ್ಥಿತಿಯಲ್ಲಿವೆ. ಉಳಿದವು ಅವನತಿಯತ್ತ ಸಾಗಿವೆ. ಪುರಾತನ ಕಾಲದ ಕಟ್ಟಡದ ಒಂದೊಂದೇ ಅವಶೇಷ ಕಳಚಿಬೀಳುತ್ತಿವೆ. ಇದನ್ನು ಅವರು ಬೇಸರದಿಂದಲೇ ಹೇಳುತ್ತಾರೆ.

'ಶಿರಸಂಗಿಯ ಲಿಂಗರಾಜರು ತಮ್ಮ ಇಡೀ ಆಸ್ತಿಯನ್ನೇ ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ದಾನ ಮಾಡಿದ್ದಾರೆ. ಅವರು ವಾಸಿಸುತ್ತಿದ್ದ ವಾಡೆ ದುಃಸ್ಥಿತಿಗೆ ತಲುಪಿದ್ದು ಬೇಸರ ತರಿಸುವಂಥದ್ದು. ಸವದತ್ತಿ ಕೋಟೆಯೊಳಗಿನ ವಾಡೆ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವೇನಿಲ್ಲ' ಎಂದು ಸಾಹಿತಿ ಯ.ರು.ಪಾಟೀಲ ನೋವಿನಿಂದ ಹೇಳುತ್ತಾರೆ.

'ಲಿಂಗರಾಜರ ವಾಡೆ ಭವ್ಯ ಅರಮನೆಯಂತಿತ್ತು. ಈ ಭಾಗದಲ್ಲಿ ಶ್ರೀಮಂತಿಕೆಯಿಂದ ಮೆರೆದಿತ್ತು. ಈಗ ಕಟ್ಟಡವೆಲ್ಲ ಹಾಳಾಗಿದೆ. ಗೋಡೆ ಬಿದ್ದಿದೆ. ಮಳೆಯಿಂದಾಗಿ ಕಟ್ಟಡದ ಅವಶೇಷಗಳು ಹಾಳಾಗಿವೆ. ಇಲ್ಲಿ ಸಣ್ಣಪುಟ್ಟ ದುರಸ್ತಿ ಕೈಗೊಂಡರೆ ಸಾಲದು. ಇಡೀ ಕಟ್ಟಡವನ್ನೇ ಮರುನಿರ್ಮಾಣ ಮಾಡಬೇಕು' ಎನ್ನುತ್ತಾರೆ ಲಿಂಗರಾಜ ದೇಸಾಯಿ ಆಸ್ತಿ ಸಂರಕ್ಷಣಾ ಸಮಿತಿ ಅಧ್ಯಕ್ಷ ಬಸವಪ್ರಭು ಅಣ್ಣಿಗೇರಿ.

ಕತ್ತಲಾದ ನಂತರ ಮೋಜು–ಮಸ್ತಿ

ಛತ್ರಪತಿ ಶಾಹೂ ಮಹಾರಾಜರು ತಮ್ಮ ಕುಟುಂಬದೊಂದಿಗೆ ಬೇಸಿಗೆ ರಜೆ ಕಳೆಯಲು ರಾಯಬಾಗ ಹೊರವಲಯದಲ್ಲಿ ನಿರ್ಮಿಸಿದ ರಾಜವಾಡೆ ಅದ್ಭುತವಾಗಿದೆ.

11ನೇ ಪುಟಕ್ಕೆ...

ಶಿರಸಂಗಿಯ ವಾಡೆಯ ಹೊರಗೋಡೆ ಬಿದ್ದಿರುವುದು ಚಿತ್ರ: ಇಮಾಮ್‌ಹುಸೇನ್ ಗೂಡುನವರ

ಕೃಷ್ಣವಾದ್ಯದಲ್ಲಿ ನಾದ, ಗಮಕದ ಸಿಂಚನ

• ಉಮಾ ಅನಂತ್

ವೇಣುವಾದನ ಕೇಳುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತದೆ. ವಿಶಿಷ್ಟ ಅನುಭೂತಿ, ನಾದದಲೆಯ ಸಂಚಲನ ಮೂಡಿಸುತ್ತದೆ. ಕೇಳಿದ ಕೀರ್ತನೆಯನ್ನೇ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ. ನಾದಧಾರೆ ಕಿವಿಯಲ್ಲಿ ಸದಾ ಗುಂಯ್‌ಗುಡುತ್ತದೆ. ಇದರ ಶಕ್ತಿಯೇ ಅಂಥದ್ದು. ಇಂಥ ವೇಣುವಾದನದಲ್ಲಿ ಸ್ವರಗಳ ಅಲೆಯನ್ನು ಹಿತವಾಗಿ ಹೊಮ್ಮಿಸುತ್ತಾ ಮೋಡಿ ಮಾಡುವ ಅದ್ಭುತ ಕಲಾವಿದ ಮೈಸೂರಿನ ಸಿ.ಎ. ಶ್ರೀಧರ್. ಇವರ ನುಡಿಸಾಣಿಕೆಯಲ್ಲಿ ವಿಶಿಷ್ಟ ಮಾಧುರ್ಯವಿದೆ. ಕೊಳಲಿನಲ್ಲಿ ಸ್ವರ, ತಾಳಗಳನ್ನು ಸಮತೋಲನ ಮಾಡುತ್ತಾ ಗಮಕಗಳನ್ನು ಪ್ರದರ್ಶಿಸುತ್ತಾ, ನಾದದ ಭಾವದಲೆಯನ್ನು ಶ್ರವಣಾನಂದಕರವಾಗಿ ಪ್ರಸ್ತುತಪಡಿಸುವ ಪರಿಯಂತೂ ಅನನ್ಯ.

ಹೌದು, ಕೃಷ್ಣವಾದ್ಯವೆಂದೂ ಹೆಸರಾದ ಬಿದಿರಿನಿಂದ ಮಾಡಿದ ಹಗುರ ವಾದ್ಯ ಕೊಳಲಿನಲ್ಲಿ ವಿದ್ವಾನ್ ಸಿ.ಎ. ಶ್ರೀಧರ ಅವರದು ಅನನ್ಯ ಸಾಧನೆ. ವೇಣುವಾದನದಲ್ಲಿ ಇವರು ಹೊಮ್ಮಿಸುವ ಗಮಕ ಕೇಳುಗರಿಗೆ ಆಪಾದಮಸ್ತಕ ಪುಳಕ ತರುತ್ತದೆ. ವಿದ್ವತ್‌ಪೂರ್ಣ ನುಡಿಸಾಣಿಕೆ, ಅದ್ಭುತ ಉಸಿರು ನಿಯಂತ್ರಣ ಸಾಮರ್ಥ್ಯ, ರಾಗಗಳ ನಿರೂಪಣೆಯಲ್ಲಿ ಬದ್ಧತೆ, ಮನೋಧರ್ಮದಲ್ಲಿ ಪರಿಪೂರ್ಣತೆ ಇವರ ವಾದನ ವೈಶಿಷ್ಟ್ಯ.

ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿನ ಚಿಲ್ಕುಂದದವರಾದ ಶ್ರೀಧರ್ ವಿದ್ವಾನ್ ಸಿ.ಕೆ. ಅನಂತರಾಮಯ್ಯ ಹಾಗೂ ಸಿ.ಎಸ್. ಸತ್ಯಲಕ್ಷ್ಮೀ ಅವರ ಮಗ. ನಾಲ್ಕನೇ ವಯಸ್ಸಿನಲ್ಲೇ ಸಂಗೀತದ ಸ ರಿ ಗ ಮ ಪ ನಾದಕ್ಕೆ ಮಾರುಹೋದ ಶ್ರೀಧರ್ ಜೀವನದುದ್ದಕ್ಕೂ ಸಂಗೀತ ಉಪಾಸನೆ ಮಾಡುತ್ತಾ ಇದನ್ನೇ ತಪಸ್ಸಾಗಿ ಸ್ವೀಕರಿಸಿದವರು. ಸಂತ ತ್ಯಾಗರಾಜರ ನೇರ ಶಿಷ್ಯಪರಂಪರೆಗೆ ಸೇರಿದ ವೆಂಕಟನಾರಾಯಣ ಉಡುಪ ಅವರಿಂದ ಸಂಗೀತ ವಿದ್ಯೆ ಧಾರೆಯೆರೆಸಿಕೊಂಡವರು. ಮುಂದೆ ವಿದ್ವಾನ್ ಸಿ.ಟಿ. ಶ್ರೀನಿವಾಸಮೂರ್ತಿ, ಮುರಳೀಧರ್, ವಿದ್ವಾನ್ ವಿ. ದೇಶಿಕಾಚಾರ್ ಅವರಿಂದಲೂ ಸಂಗೀತವನ್ನು ಕಲಿತವರು.

ವಿದ್ವಾನ್ ಶ್ರೀಧರ್ ಬರೀ ನಾದೋಪಾಸಕ ಮಾತ್ರವಲ್ಲ, ಸಂಗೀತದ ಹಲವು ಆಯಾಮಗಳಲ್ಲಿ ಸತತ ಕೃಷಿ ಮಾಡಿದ ಅದ್ವಿತೀಯ ಸಾಧಕ. ವೇಣುವಾದಕ, ಸಂಗೀತ ಶಾಸ್ತ್ರಜ್ಞ, ಸಂಶೋಧಕ, ಬೋಧಕ, ಕಲಾ ಇತಿಹಾಸಕಾರ, ಗ್ರಂಥಕರ್ತ, ಗಾಯಕ, ವಾಗ್ಗೇಯಕಾರ.. ಇವಿಷ್ಟೂ ವಿಶೇಷಣಗಳನ್ನು ಒಳಗೊಂಡ ಬಹುಶ್ರುತ ವಿದ್ವಾಂಸ.

ಶ್ರೀಧರ್ ಅವರು ಸಂಗೀತದ ಅಕಡೆಮಿಕ್ ಸಾಧನೆಯಲ್ಲೂ ಮುಂಚೂಣಿಯಲ್ಲಿ ನಿಲ್ಲುವವರು. ಮೈಸೂರು ವಿಶ್ವವಿದ್ಯಾಲಯದ ಲಲಿತಕಲಾ ಕಾಲೇಜಿನಲ್ಲಿ ಸಂಗೀತ ಪ್ರಾಧ್ಯಾಪಕರಾಗಿ, ವಿಭಾಗ ಮುಖ್ಯಸ್ಥರಾಗಿ, ಪ್ರಾಂಶುಪಾಲರಾಗಿ, ಮೈಸೂರು ಮಹಾರಾಜ ಕಾಲೇಜಿನ ಪ್ರಾಂಶುಪಾಲರಾಗಿ ನಿವೃತ್ತರಾದವರು, ಸದ್ಯ ಗಂಗೂಬಾಯಿ ಹಾನಗಲ್ ಸಂಗೀತ ವಿವಿಯಲ್ಲಿ ಗೌರವ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ.

ದೇಶ ವಿದೇಶಗಳಲ್ಲಿ ನೂರಾರು ಕೊಳಲು ಕಛೇರಿ ನೀಡಿ ಕೇಳುಗರಲ್ಲಿ ಪರಮಾನಂದದ ಸಿಂಚನ ಮೂಡಿಸಿರುವ ಶ್ರೀಧರ್, ವೇಣುವಾದನದಲ್ಲಿ ಮಧುರಾತಿಮಧುರ ಅನುಭೂತಿ ಸೃಷ್ಟಿಸುವವರು.

ಮಾಧುರ್ಯ, ಶಾಸ್ತ್ರೀಯತೆ, ಗಮಕಬದ್ಧ ಗಾಯಕಿ, ತಂತ್ರಕಾರಿ ಶೈಲಿಗಳಿಂದ ಕೃಷ್ಣವಾದ್ಯದಲ್ಲಿ ಗಟ್ಟಿಕುಳ ಎನಿಸಿಕೊಂಡಿದ್ದಾರೆ.

ಪ್ರತಿಷ್ಠಿತ ಪಿಟೀಲು ಚೌಡಯ್ಯ ಪ್ರಶಸ್ತಿ, ಆಕಾಶವಾಣಿ ಪುರಸ್ಕಾರ, ಚಂದನವಾಹಿನಿಯ ರಾಷ್ಟ್ರೀಯ ಪ್ರಶಸ್ತಿ, ಕೌಸ್ತುಭ ಪ್ರಶಸ್ತಿ, ಪ್ರಣವಶ್ರೀ ಪ್ರಶಸ್ತಿ, ಸುವರ್ಣ ಕರ್ನಾಟಕ ಹೊಯ್ಸಳ ಪ್ರಶಸ್ತಿ, ಶ್ರೇಷ್ಠ ಆಚಾರ್ಯ ಪ್ರಶಸ್ತಿ, ವೇಣು ಬ್ರಹ್ಮ ಪ್ರಶಸ್ತಿ, ಮದ್ರಾಸ್ ಮ್ಯೂಸಿಕ್ ಅಕಾಡೆಮಿ ಪ್ರಶಸ್ತಿಗಳನ್ನು ಪಡೆದ ಸಂಗೀತ ಜ್ಞಾನನಿಧಿ ಶ್ರೀಧರ ಅವರಿಗೆ ಈಗ ಕರ್ನಾಟಕ ಗಾನಕಲಾಭೂಷಣ ಬಿರುದು ಜೊತೆಗೆ ವಾದಿರಾಜ ಪ್ರಶಸ್ತಿ ಲಭಿಸಿದೆ.

ಮತ್ತೂರು ಶ್ರೀನಿಧಿ

ಕರ್ನಾಟಕ ಸಂಗೀತ ಕಲಾವಿದರೇ ಸೇರಿ ಕಟ್ಟಿದ ಸಂಸ್ಥೆ ಗಾನಕಲಾ ಪರಿಷತ್, ಕರ್ನಾಟಕ ಶಾಸ್ತ್ರೀಯ ಸಂಗೀತದ ಅತಿದೊಡ್ಡ ಸಂಸ್ಥೆಯಾಗಿದ್ದು, ಐವತ್ತ ನಾಲ್ಕನೇ ರಾಜ್ಯಮಟ್ಟದ ಸಂಗೀತ ಸಮ್ಮೇಳನ ಆಯೋಜಿಸಿ ನಾಡಿನ ಹೆಸರಾಂತ ಸಾಧಕರಿಗೆ ಗಾನಕಲಾಭೂಷಣ ಹಾಗೂ ಹಾಗೂ ಯುವ ಕಲಾವಿದರಿಗೆ ಗಾನಕಲಾಶ್ರೀ ಬಿರುದು ನೀಡಿ ಸನ್ಮಾನಿಸುತ್ತದೆ. ಈ ಬಾರಿ ಗಾನಕಲಾಭೂಷಣ ಪ್ರಶಸ್ತಿ ಮೈಸೂರಿನ ವೇಣುವಾದಕ ಸಿ.ಎ. ಶ್ರೀಧರ್ ಅವರಿಗೆ ಒಲಿದಿದೆ. ಗಾನಕಲಾಶ್ರೀ ಬಿರುದು ಪಿಟೀಲು ವಾದಕ ಮತ್ತೂರು ಶ್ರೀನಿಧಿ ಅವರಿಗೆ ಲಭಿಸಿದೆ. ಗಾನಕಲಾಪರಿಷತ್ ಹಾಗೂ ಮೈಸೂರಿನ ಗಾನಭಾರತಿ ಆಶ್ರಯದಲ್ಲಿ 'ಗಾನಭಾರತೀ ರಮಾ ಗೋವಿಂದ್ ಕಲಾ ವೇದಿಕೆ'ಯಲ್ಲಿ ನ.9ರಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.


ವಿದ್ವಾನ್ ಸಿ.ಎ. ಶ್ರೀಧರ್

ನಾಡಿಗೇ ಹೆಮ್ಮೆ

'ಶ್ರೀಧರ್ ಅವರು ಬಹುಶ್ರುತ ವಿದ್ವಾನ್. ನಾಡಿನ ಹೆಮ್ಮೆಯ ಹಾಗೂ ಪ್ರಬುದ್ಧ ಕೊಳಲು ವಾದಕ. ಪ್ರತಿವರ್ಷವೂ ಸಂಗೀತದಲ್ಲಿ ಇಂಥ ಅತ್ಯುನ್ನತ ಸಾಧನೆ ಮಾಡಿದ ಕಲಾವಿದರನ್ನು ಗುರುತಿಸಿ ಗಾನಕಲಾಭೂಷಣ ಬಿರುದು ನೀಡುತ್ತಾ ಬಂದಿದ್ದೇವೆ. ಇದೇ ರೀತಿ ಮತ್ತೂರು ಶ್ರೀನಿಧಿ ಭರವಸೆಯ ಪಿಟೀಲು ವಾದಕ. ಪಿಟೀಲಿನ ಎಳೆಎಳೆಯಲ್ಲೂ ಮಾಧುರ್ಯ ಸೂಸುವ ಈ ವಾದಕ ಪಕ್ಕವಾದ್ಯದಲ್ಲೂ ಪಳಗಿದವರೆ. ಇವರಿಗೆ ಗಾನಕಲಾಶ್ರೀ ಬಿರುದು ನೀಡುತ್ತೇವೆ. ರಾಜ್ಯಮಟ್ಟದ ಈ ಪ್ರತಿಷ್ಠಿತ ಸಮ್ಮೇಳನದಲ್ಲಿ ಹೆಮ್ಮೆಯ ಗರಿಮೂಡಿಸಿದ ಇಬ್ಬರೂ ಕಲಾವಿದರೂ ಅಭಿನಂದನೆಗೆ ಅರ್ಹರು' ಎಂದು ಹೇಳುತ್ತಾರೆ ಕರ್ನಾಟಕ ಗಾನಕಲಾ ಪರಿಷತ್ತಿನ ಅಧ್ಯಕ್ಷ ವಿದ್ವಾನ್ ಆರ್.ಕೆ. ಪದ್ಮನಾಭ ಅವರು.

ಗಾನಕಲಾಶ್ರೀ ಶ್ರೀನಿಧಿ

ಭರವಸೆಯ ವಾದಕ ಮತ್ತೂರು ಶ್ರೀನಿಧಿ ಅವರ ಮನೆತನವೇ ಸಂಗೀತದ್ದು. ಚಿಕ್ಕ ಮಗುವಿರುವಾಗಲೇ ಸಂಗೀತಕ್ಕೆ ಕಿವಿಯಾಗಿಸುವುದು, ರಾಗ–ತಾಳಗಳನ್ನು ಗುರುತಿಸುವ ಗುಣ ಇವರಿಗೆ ರಕ್ತಗತವಾಗಿಯೇ ಬಂದಿದೆ. ತಂದೆ ರಾಮಮೂರ್ತಿ ಹಾಗೂ ತಾಯಿ ರಾಜಲಕ್ಷ್ಮಿ ಅವರು ಮಗನ ಆಸಕ್ತಿಗೆ ಸೂಕ್ತ ಕಾಲದಲ್ಲೇ ನೀರೆರೆದು ಪೋಷಿಸಿದ ಪರಿಣಾಮ ಶ್ರೀನಿಧಿ ಇಂದು ನಾದನಿಧಿಯಾಗಿ ರೂಪುಗೊಂಡಿದ್ದಾರೆ. ಪಿಟೀಲು ವಿದ್ವಾಂಸ ಆರ್.ಆರ್. ಕೇಶವಮೂರ್ತಿ ಅವರ ಬಳಿ ನಿರಂತರ ಹನ್ನೆರಡು ವರ್ಷ ಪಿಟೀಲಿನ ಎಳೆಎಳೆಯಲ್ಲೂ ಮಾಧುರ್ಯ ಮೂಡಿಸುವ ಚಾಕಚಕ್ಯತೆ ಗಳಿಸಿದ ಶ್ರೀನಿಧಿ ಮುಂದೆ ವಿದ್ವಾನ್ ಆರ್.ಎನ್. ತ್ಯಾಗರಾಜನ್ ಅವರ ಬಳಿ ಸಂಗೀತದ ಆಳವಾದ ಅಧ್ಯಯನ ನಡೆಸಿದರು.

ವಯೊಲಿನ್‌ನಲ್ಲಿ ಸೋಲೊ ಹಾಗೂ ಪಕ್ಕವಾದ್ಯ ಎರಡರಲ್ಲೂ 'ಪಕ್ಕಾ' ಆದ ಈ ವಿದ್ವಾಂಸರು ರಾಜ್ಯದಾದ್ಯಂತ ಅಲ್ಲದೆ ವಿದೇಶಗಳಲ್ಲೂ ನಾದದ ಕಂಪನ್ನು ಪಸರಿಸಿದವರು.

ನಾದಜ್ಯೋತಿ ಯುವ ಪುರಸ್ಕಾರ, ಅನನ್ಯ ಯುವ ಪುರಸ್ಕಾರ, ಗುರು ಕೇಶವ ಸುಬ್ಬಣ್ಣ ಸ್ಮಾರಕ ಪ್ರಶಸ್ತಿ, ಪಿಟೀಲು ವಾದನ ಚತುರ ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡ ಮತ್ತೂರು ಶ್ರೀನಿಧಿ ಅವರಿಗೆ ಇದೀಗ ಗಾನಕಲಾಶ್ರೀ ಬಿರುದು ಜೊತೆಗೆ ರಾಮಸುಧಾ ಪ್ರಶಸ್ತಿಯ ಗರಿ. ❖

ಇತಿಹಾಸ ಪುಟ ಸೇರುತ್ತಿರುವ ವಾಡೆಗಳು

10ನೇ ಪುಟದಿಂದ...

ಆದರೆ, ವಾಡೆಯ ಗೋಡೆ ಬಿರುಕು ಬಿಟ್ಟಿದ್ದು, ಕಿಟಕಿ, ಬಾಗಿಲುಗಳೆಲ್ಲ ಮುರಿದಿವೆ. ಕತ್ತಲಾಗುತ್ತಿದ್ದಂತೆ ಕೆಲವರು ವಾಡೆಯ ಆವರಣ ಪ್ರವೇಶಿಸಿ ಮೋಜು–ಮಸ್ತಿ ಮಾಡುತ್ತಿದ್ದಾರೆ. ಅಕ್ರಮ ಚಟುವಟಿಕೆ ನಿರಾತಂಕವಾಗಿ ನಡೆಯುತ್ತಿವೆ ಎಂಬ ಆರೋಪವೂ ಇದೆ.

'ರಾಯಬಾಗದ ರಾಜವಾಡೆಗೆ ಪ್ರವಾಸಿಗರನ್ನು ಸೆಳೆಯುವ ಶಕ್ತಿ ಇದೆ. ರಾಜಮನೆತನದವರು ಮತ್ತು ಸರ್ಕಾರ ಇದರ ಅಭಿವೃದ್ಧಿಗೆ ಬೆಳಕು ಚೆಲ್ಲಬೇಕು. ವಾಡೆಯಲ್ಲಿನ ಅಕ್ರಮ ಚಟುವಟಿಕೆ ತಡೆಯಬೇಕು' ಎಂದು ಒತ್ತಾಯಿಸುತ್ತಾರೆ ಸಾಮಾಜಿಕ ಕಾರ್ಯಕರ್ತ ಸಾಗರ ಜಂಡೆನ್ನವರ.

ಬ್ರಿಟಿಷರ ವಿರುದ್ಧ ಕೆಚ್ಚೆದೆಯಿಂದ ಹೋರಾಡಿದ್ದು ವೀರರಾಣಿ ಕಿತ್ತೂರು ಚನ್ನಮ್ಮ. ಇವರ ಹುಟ್ಟೂರಾದ ಬೆಳಗಾವಿ ತಾಲ್ಲೂಕಿನ ಕಾಕತಿಯಲ್ಲಿನ ವಾಡೆ ಸಂಪೂರ್ಣ ನಾಶವಾಗಿದೆ.

'ಕಾಕತಿ ವಾಡೆಯಲ್ಲಿ ಚನ್ನಮ್ಮನ ವಂಶಸ್ಥರು ವಾಸವಿದ್ದರು. ಮೊದಲಿನಂತೆ ಅದನ್ನು ಕಟ್ಟಿ, ಅದರಲ್ಲಿ ಮ್ಯೂಸಿಯಂ ನಿರ್ಮಿಸಿ ಚನ್ನಮ್ಮನ ಇತಿಹಾಸವನ್ನು ಜನರಿಗೆ ತಿಳಿಸುವ ಕೆಲಸವಾಗಬೇಕಿದೆ' ಎಂಬುದು ವೀರರಾಣಿ ಕಿತ್ತೂರು ಚನ್ನಮ್ಮ ವಿಜಯೋತ್ಸವ ಮತ್ತು ಅಭಿವೃದ್ಧಿ ಸಮಿತಿ ಅಧ್ಯಕ್ಷ ಶಿವನಗೌಡ ಪಾಟೀಲ ಆಗ್ರಹ.

ನೂರೊಂದು ಬಾಗಿಲ ವಾಡೆ

ತುರಮರಿಯಲ್ಲಿ ಮೂರೂವರೆ ಶತಮಾನದ ಹಿಂದೆ ನಿರ್ಮಿಸಿದ್ದ ನೂರೊಂದು ಬಾಗಿಲುಗಳ ವಾಡೆ ಇದೆ. ಇಲ್ಲಿ ನಟ ಶಂಕರನಾಗ್ ಅಭಿನಯದ 'ಒಂದಾನೊಂದು ಕಾಲದಲ್ಲಿ' ಚಿತ್ರೀಕರಣವಾಗಿತ್ತು. 'ಸಂಗ್ಯಾ–ಬಾಳ್ಯಾ' ಚಿತ್ರವೂ ಚಿತ್ರೀಕರಣಗೊಂಡಿತ್ತು. ಇಡೀ ನಾಡಿನ ಸಿನಿಪ್ರಿಯರನ್ನು ವಾಡೆಯ ಸೊಬಗು ಸೆಳೆದಿತ್ತು.


ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಬೇಡಿಕಿಹಾಳದ ವಾಡೆ ದುಃಸ್ಥಿತಿ ತಲುಪಿರುವುದು
ಚಿತ್ರ: ಚಂದ್ರಶೇಖರ ಚಿನಕೇಕರ

'ಕಲೆ ಉಳಿಸಬೇಕು. ಕಲಾವಿದರನ್ನು ಪ್ರೋತ್ಸಾಹಿಸಬೇಕೆಂಬ ಉದ್ದೇಶದಿಂದ ಎರಡೂ ಚಿತ್ರಗಳ ಚಿತ್ರೀಕರಣಕ್ಕಾಗಿ ಉಚಿತವಾಗಿ ವಾಡೆ ನೀಡಿದ್ದೆವು. ಇಲ್ಲಿ ಚಿತ್ರೀಕರಣವಾದ ಎರಡೂ ಚಿತ್ರಗಳು ಪ್ರತಿಷ್ಠಿತ ಪ್ರಶಸ್ತಿಗಳಿಗೆ ಭಾಜನವಾಗಿವೆ. ಈಗ ಹಾಳಾಗಿರುವ ವಾಡೆ ಅಭಿವೃದ್ಧಿಗೆ ಚಿಂತನೆ ನಡೆಸಿದ್ದೇವೆ' ಎಂದು ವಾರಸುದಾರರಾದ ಬಸವರಾಜ ಚಿಂತಾಮಣಿಗೌಡರ ಪಾಟೀಲ ಹೇಳುತ್ತಾರೆ.

'ಪ್ರಜಾಪ್ರಭುತ್ವ ವ್ಯವಸ್ಥೆಗೂ ಮುನ್ನ, ವಾಡೆಗಳು ಜನರಿಗೆ ಉತ್ತಮ ಆಡಳಿತ ನೀಡಿದ್ದವು. ಅವು ಖಾಸಗಿಯವರಿಗೆ ಸೇರಿದ್ದರೂ ನಾಡಿಗೆ ಅಪಾರ ಕೊಡುಗೆ ಕೊಟ್ಟಿವೆ. ಪ್ರಜೆಗಳ ಹಿತರಕ್ಷಣೆ ಮಾಡಿವೆ. ಸರ್ಕಾರದಿಂದ ಅವುಗಳ ರಕ್ಷಣೆ ಬಹಳ ಮುಖ್ಯವಾಗಿದೆ' ಎಂದು ಚನ್ನಮ್ಮನ ಕಿತ್ತೂರಿನ ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಹೇಳುತ್ತಾರೆ.

ವಾಡೆಗಳು ಕೇವಲ ಕಟ್ಟಡಗಳಲ್ಲ, ಅವು ನಮ್ಮ ಇತಿಹಾಸದ ಕುರುಹುಗಳು, ಅಪೂರ್ವ ವಾಸ್ತುಶಿಲ್ಪದ ಮಾದರಿಗಳು. ಅವುಗಳನ್ನು ಉಳಿಸಿಕೊಳ್ಳುವುದು ತುಂಬಾ ಮುಖ್ಯ. ❖

ಸವದತ್ತಿ ತಾಲ್ಲೂಕಿನ ಶಿರಸಂಗಿಯ ವಾಡೆ
ಚಿತ್ರ: ಇಮಾಮ್‌ಹುಸೇನ್ ಗೂಡುನವರ

ಆವರಗೆರೆ ಅಂದ ಹೆಚ್ಚಿಸಿದ ಬಳಗ

ಆವರಗೆರೆಯ ಸರ್ಕಾರಿ ಶಾಲೆಯ ಆವರಣದಲ್ಲಿ ಕಾಯಕಯೋಗಿ ಬಸವ ಪರಿಸರ ಬಳಗದ ಸದಸ್ಯರಿಂದ ವನಮಹೋತ್ಸವ

10ನೇ ಪುಟದಿಂದ...

'ದುಶ್ಚಟಗಳಿಗೆ ದಾಸರಾಗುವ ಬದಲು ವಾರಕ್ಕೊಮ್ಮೆ ಬೆಳಿಗ್ಗೆ ಗುದ್ದಲಿ, ಹಾರಿ, ಪಿಕಾಸಿ ಹಿಡಿದು ಗ್ರಾಮದ ಸ್ವಚ್ಛತೆಗೆ ಶ್ರಮಿಸಿದರೆ ಊರು ಚೆಂದ ಕಾಣುತ್ತದೆ. ದೈಹಿಕವಾಗಿ ವ್ಯಾಯಾಮವೂ ಆಗುತ್ತದೆ. ಬಳಗದಲ್ಲಿ ಕೃಷಿ, ಕಟ್ಟಡ ಕಾರ್ಮಿಕರು ಸೇರಿದಂತೆ ವಿವಿಧ ವೃತ್ತಿಯವರು ಇದ್ದು, ಪ್ರತೀ ಭಾನುವಾರ ಒಂದಿಷ್ಟು ಹೊತ್ತು ಗ್ರಾಮಕ್ಕಾಗಿ ಕೆಲಸ ಮಾಡುತ್ತೇವೆ. ವೈಯಕ್ತಿಕವಾಗಿ ಹಣ ಖರ್ಚು ಮಾಡುವ ಜೊತೆಗೆ ಅಗತ್ಯವೆನಿಸಿದಾಗ ದಾನಿಗಳ ನೆರವನ್ನೂ ಪಡೆಯುತ್ತೇವೆ' ಎಂದು ಬಳಗದ ಪ್ರಮುಖರಾದ ಗುರುಸಿದ್ಧಸ್ವಾಮಿ, ಶಾಮಿಯಾನ ವೀರೇಶ್, ಕೆ.ಮಹಾಂತೇಶ, ಗೋಣಪ್ಪ, ತಿಪ್ಪೇಶ್, ಮಹೇಶ್, ಕೆ.ಆರ್.ರಾಜು ಹೇಳುತ್ತಾರೆ.

ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಗ್ರಾಮ

ಈ ಗ್ರಾಮವು 1959-60ರಲ್ಲಿ ಕೇಂದ್ರ ಸರ್ಕಾರದ 'ರಾಷ್ಟ್ರೀಯ ಅತ್ಯುತ್ತಮ ಮಾದರಿ ಗ್ರಾಮ' ಪ್ರಶಸ್ತಿಗೆ ಭಾಜನವಾಗಿದೆ. ಸ್ವಚ್ಛತೆ ಹಾಗೂ ಕಂದಾಯ ವಸೂಲಿಯನ್ನು ಪರಿಗಣಿಸಿ ಈ ಗ್ರಾಮಕ್ಕೆ ಪ್ರಶಸ್ತಿ ನೀಡಲಾಗಿತ್ತು. ಅಂದಿನ ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ವಿರೂಪಾಕ್ಷಪ್ಪ ಸ್ವಚ್ಛತೆ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸುವ ಕೆಲಸದಲ್ಲಿ ತೊಡಗಿದ್ದರು. ನಿತ್ಯ ಬೆಳಿಗ್ಗೆ ಅವರು ಮನೆ ಮನೆಗೆ ತೆರಳಿ ತ್ಯಾಜ್ಯ ನಿರ್ವಹಣೆಯ ಪಾಠವನ್ನೂ ಮಾಡುತ್ತಿದ್ದರು. ಅವರ ಮಾರ್ಗದಲ್ಲೇ ಮುನ್ನಡೆಯುತ್ತಿದ್ದೇವೆ. ಈ ಎಲ್ಲ ಕೆಲಸವನ್ನು ಗ್ರಾಮದ ಒಳಿತಿಗಾಗಿ, ಆತ್ಮತೃಪ್ತಿಗಾಗಿ ಮಾಡುತ್ತಿದ್ದೇವೆ ಎನ್ನುತ್ತಾರೆ ಬಳಗದ ಅಧ್ಯಕ್ಷ ಎನ್.ಟಿ.ರುದ್ರಪ್ಪ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿದೆ. ಈ ಸಂಭ್ರಮವನ್ನು ಮತ್ತಷ್ಟು ಹೆಚ್ಚಿಸುವ ನಿಟ್ಟಿನಲ್ಲಿ ಪರಿಸರ ಸಂರಕ್ಷಣೆಗೆ ಶ್ರಮಿಸಿದ ವ್ಯಕ್ತಿಗಳು, ಸಂಘ–ಸಂಸ್ಥೆಗಳಿಗೆ 'ಇಂದಿರಾ ಪ್ರಿಯದರ್ಶಿನಿ ಪರಿಸರ ಪ್ರಶಸ್ತಿ' ನೀಡುತ್ತಿದೆ. ಈ ಪ್ರಶಸ್ತಿಗೆ 'ಕಾಯಕಯೋಗಿ ಬಸವ ಪರಿಸರ ಬಳಗ'ವೂ ಭಾಜನವಾಗಿರುವುದು ಸದಸ್ಯರಿಗೆ ಮತ್ತಷ್ಟು ಹುರುಪು ನೀಡಿದೆ.

ಹಿರಿಯರಾದ ಎಂ.ವಿರೂಪಾಕ್ಷಪ್ಪ ನೆಟ್ಟ 'ಗ್ರಾಮ ಪ್ರೇಮ' ಸಸಿ ಈಗ ಹೆಮ್ಮರವಾಗಿದೆ. ಇದು ಉಳಿದವರಿಗೂ ಮಾದರಿಯಾಗಿದೆ. ❖

'ಮಹರ್ಷಿ ವಾಲ್ಮೀಕಿ ಉದ್ಯಾನ'ದಲ್ಲಿ ನಳನಳಿಸುವ ವಿವಿಧ ಪ್ರಬೇಧಗಳ ಗಿಡಗಳು
ಚಿತ್ರಗಳು: ಸತೀಶ್ ಬಡಿಗೇರ

ತುಳುನಾಡಿನ ಹುಲಿವೇಷ

10ನೇ ಪುಟದಿಂದ...

ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ತಂಡಗಳ ಸಂಖ್ಯೆ ವರ್ಷದಿಂದ ವರ್ಷ ಹೆಚ್ಚುತ್ತಿದೆ. ಬಹುಮಾನದ ಮೊತ್ತವೂ ಭರ್ಜರಿಯಾಗಿದೆ. ಈ ವರ್ಷ ಕ್ರಮವಾಗಿ ₹10 ಲಕ್ಷದವರೆಗೂ ಪ್ರಥಮ ಬಹುಮಾನ, ₹50 ಸಾವಿರದಂತೆ ವಿವಿಧ ವೈಯಕ್ತಿಕ ಬಹುಮಾನಗಳನ್ನು ನೀಡಲಾಯಿತು.

ತಾಸೆಯ ಪೆಟ್ಟಿಗೆ ಸರಿಯಾಗಿ ಹಾಕುವ ಹೆಜ್ಜೆ, ಒಂಟಿ, ಇಬ್ಬರು, ಮೂವರು, ನಾಲ್ವರು, ಐವರು ಪೌಲ ಹಾಕುವುದು, ತಾಯಿ ಹುಲಿ ಮರಿಗಳನ್ನು ಮುದ್ದಿಸುವುದು, ಹುಲಿಗಳು ಕುಳಿತುಕೊಳ್ಳುವ ಶೈಲಿ, ಮೈಗೆ ಹಚ್ಚಿಕೊಳ್ಳುವ ಬಣ್ಣ, ಹಣವನ್ನು ಬಾಯಿಯಿಂದ ಎತ್ತುವುದು, 38 ಕೆ.ಜಿ.ಯ ಅಕ್ಕಿ ಮುಡಿಯನ್ನು ಹಲ್ಲಿನಲ್ಲಿ ಕಚ್ಚಿ ಎತ್ತಿ ಹಿಂದಕ್ಕೆ ಎಸೆಯುವುದು, ಪಲ್ಟಿ ಹೊಡೆದು ತಲೆಯಿಂದ ತೆಂಗಿನಕಾಯಿ ಒಡೆಯುವುದು ಸೇರಿದಂತೆ ಹಲವು ಕಸರತ್ತುಗಳು ಸ್ಪರ್ಧೆಯಲ್ಲಿ ನಿರ್ಣಾಯಕ. ಸಂಪ್ರದಾಯ ಪಾಲಿಸುವ ತಂಡಗಳು ಹೆಚ್ಚು ಅಂಕಗಳನ್ನು ಪಡೆಯುತ್ತವೆ.

'1995ರಲ್ಲಿ ಮಂಗಳೂರಿನ ಜೆಪ್ಪುವಿನಲ್ಲಿ ಮೊದಲಿಗೆ ಹುಲಿವೇಷ ಸ್ಪರ್ಧೆ ಆಯೋಜಿಸಲಾಯಿತು. ಅದು ಮೂರು ವರ್ಷ ನಡೆಯಿತು. ಆ ವೇಳೆ ತಂಡಗಳ ನಡುವೆ, ಆಯೋಜಕರ ನಡುವೆ ಹೊಡೆದಾಟಗಳು ನಡೆದವು. ಆನಂತರ ಸ್ಪರ್ಧೆ ಆಯೋಜನೆಯೇ ನಿಂತು ಹೋಯಿತು. 2015ರಲ್ಲಿ ಮಂಗಳೂರಿನ ಯುವ ಉದ್ಯಮಿ ಮಿಥುನ್ ರೈ 'ಪಿಲಿನಲಿಕೆ' ಸ್ಪರ್ಧೆ ಆಯೋಜಿಸುವ ಮೂಲಕ ಈ ಕಲೆಯ ಮೆರುಗನ್ನು ಮತ್ತೆ ಹೆಚ್ಚಿಸಿದರು. ಅಂದಿನಿಂದ ಅಲ್ಲಲ್ಲಿ ಸ್ಪರ್ಧೆಗಳು ಆಯೋಜನೆಯಾಗುತ್ತಿವೆ' ಎಂದು ಕೆ.ಕೆ.ಪೇಜಾವರ ಅಭಿಮಾನದಿಂದ ಹೇಳುತ್ತಾರೆ.

ಐದಾರು ಸಾವಿರ ಮಂದಿ ಕುಳಿತು ವೀಕ್ಷಿಸಲು ಗ್ಯಾಲರಿ ವ್ಯವಸ್ಥೆ, ಊಟ–ತಿಂಡಿ, ಡಿಜಿಟಲ್ ಪರದೆಗಳು, ಥರ್ಡ್ ಅಂಪೈರ್ ವ್ಯವಸ್ಥೆ, ಚಿತ್ರನಟ–ನಟಿಯರು, ಭಾರತೀಯ ತಂಡದ ಕ್ರಿಕೆಟ್ ಆಟಗಾರರು, ರಾಜಕಾರಣಿಗಳು, ಗಣ್ಯರ ಪಾಲ್ಗೊಳ್ಳುವಿಕೆ ಸ್ಪರ್ಧೆಗಳ ರಂಗು ಹೆಚ್ಚಿಸಿದೆ.

ಅನ್ಯಧರ್ಮೀಯರು ಹುಲಿವೇಷ ಹಾಕುತ್ತಾರೆ. ಧಾರ್ಮಿಕ ಆಚರಣೆ ಅಲ್ಲದಿದ್ದರೂ, ಮನರಂಜನೆಗಾಗಿ, ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಅಥವಾ ಹಣ ಸಂಪಾದನೆಗಾಗಿ ಈ ಯುವಕರು ವೇಷ ಹಾಕುತ್ತಾರೆ.

'ಪಿಲಿ ಪರ್ಬ'ದಲ್ಲಿ ಮಂಜೇಶ್ವರದ ಶಿವಶಕ್ತಿ ಟೈಗರ್ಸ್ ತಂಡದ ಪ್ರದರ್ಶನ
ಚಿತ್ರ : ಫಕ್ರುದ್ದೀನ್ ಎಚ್.

ಜನಪದ ಕಲೆಯೊಂದು ಸಂಪ್ರದಾಯ, ತುಳುವರ ಅಭಿಮಾನ ಮತ್ತು ಸ್ಪರ್ಧೆಯಿಂದಾಗಿ ಹೊಸ ವೇಷದೊಂದಿಗೆ ಉಳಿದು, ಬೆಳೆಯುತ್ತಿರುವುದು ಸಂತೋಷವೇ. ಈ ಕೆಲಸವನ್ನು ಯುವಜನಾಂಗ ಚೆನ್ನಾಗಿಯೇ ಮಾಡುತ್ತಿದೆ. ತುಳುನಾಡಿನಲ್ಲಿ ತಾಸೆ, ಡೋಲು, ಟ್ರಂಪೆಟ್‌ನ ನಿನಾದ, ಹುಲಿ ವೇಷ, ಹುಲಿ ಕುಣಿತ, ಪೌಲ, ಲೋಬಾನ ಪರಿಮಳ ಪಸರಿಸುತ್ತಲೇ ಇದೆ. ಇದು ನಮ್ಮ ನಾಡಿನ ಜನಪದ, ಸಾಂಸ್ಕೃತಿಕ ಹೆಮ್ಮೆ. ❖

ಅಮ್ಮಾ ನಾನೂ ಹಂಗೆ ಕುಣಿಲಾ...

ಮುನ್ನೋಟ 09-11-2025 ರಿಂದ 15-11-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ನಿಮ್ಮ ಮಾತು ಮತ್ತು ಆಚರಣೆಯಲ್ಲಿ ವ್ಯತ್ಯಾಸವಿರುತ್ತದೆ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಸೋದರಿಯರ ಅಥವಾ ತಾಯಿಯ ಸಹಕಾರ ಬಹಳ ಸಿಗುತ್ತದೆ. ಸ್ಥಿರಾಸ್ತಿಯನ್ನು ಮಾಡುವ ಯೋಗವಿದೆ. ವಿದ್ಯಾರ್ಥಿಗಳು ಹೆಚ್ಚು ಪರಿಶ್ರಮ ವಹಿಸಿದಲ್ಲಿ ಮಾತ್ರ ಫಲಿತಾಂಶ ಸಿಗುತ್ತದೆ. ಸಂಪನ್ಮೂಲಗಳ ಅಭಿವೃದ್ಧಿಗಾಗಿ ಹಲವಾರು ದಾರಿಗಳನ್ನು ಹುಡುಕುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಸಾಮಾಜಿಕ ಕೆಲಸಗಳನ್ನು ಮಾಡುವವರಿಗೆ ಜನಮನ್ನಣೆ ಒದಗಿ ಬರುತ್ತದೆ. ನಿಮ್ಮ ಸೌಮ್ಯ ನುಡಿ ಬಂಧುಗಳಲ್ಲಿ ಸಮಾಧಾನ ತರಬಹುದು. ಆದಾಯವು ಅಗತ್ಯಗಳನ್ನು ಪೂರೈಸುತ್ತದೆ. ಚಿನ್ನದ ಆಭರಣಗಳನ್ನು ಕಂತಿನ ರೂಪದಲ್ಲಿ ಕೊಳ್ಳುವ ಯೋಗವಿದೆ. ನೀವು ಅಂದುಕೊಂಡ ಕಾರ್ಯಗಳನ್ನು ಸಾಧಿಸಲು ಹಲವು ಮಾರ್ಗಗಳ ಹುಡುಕಾಟ ಮಾಡುವಿರಿ. ಕೋರ್ಟು ಕಛೇರಿ ವ್ಯವಹಾರಗಳಲ್ಲಿ ನಿಧಾನಗತಿಯ ಫಲಿತಾಂಶವನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ವಾರದ ಆರಂಭ ಆಹ್ಲಾದಕರವಾಗಿರುತ್ತದೆ. ಹಿರಿಯ ಉದ್ಯೋಗಸ್ಥರಿಗೆ ಹೊಸ ರೀತಿಯ ಸ್ಥಾನಮಾನಗಳು ದೊರೆಯುವ ಸಾಧ್ಯತೆಗಳಿವೆ. ಹಣದ ಒಳಹರಿವು ಸಮಾಧಾನ ತರುತ್ತದೆ. ವೃತ್ತಿರಂಗದಲ್ಲಿ ಸೂಕ್ತ ಬೆಳವಣಿಗೆಯನ್ನು ಕಾಣಬಹುದು. ಕೆಲವು ರಾಜಕಾರಣಿಗಳಿಗೆ ಸ್ಥಾನಮಾನ ಅನಿರೀಕ್ಷಿತವಾಗಿ ದೊರೆಯುತ್ತದೆ. ಗುತ್ತಿಗೆದಾರರಿಗೆ ವ್ಯವಹಾರದಲ್ಲಿ ಮುನ್ನಡೆ ಇರುತ್ತದೆ. ಉದ್ದಿಮೆದಾರರಿಗೆ ಇದ್ದ ಸಂಕಷ್ಟಗಳು ನಿವಾರಣೆಯಾಗುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚು ಮುನ್ನಡೆ ಇರುತ್ತದೆ. ಪ್ರಮುಖ ಯೋಜನೆಗಳ ಆಗುಹೋಗುಗಳ ಬಗ್ಗೆ ಪರಿಣತರ ಹತ್ತಿರ ವಿಚಾರ ಮಾಡುವಿರಿ. ಸಂಗೀತ ಮತ್ತು ಇತರೆ ಲಲಿತ ಕಲೆಗಳಲ್ಲಿ ಇರುವವರಿಗೆ ಮನ್ನಣೆ ದೊರೆತು ಸಂತಸವಾಗುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧ ಒದಗಿಬರುವ ಅವಕಾಶಗಳಿವೆ. ಆದಾಯವು ಉತ್ತಮವಾಗಿರುತ್ತದೆ. ಕೆಲವರಿಗೆ ಕಚೇರಿ ಕೆಲಸದ ಮೇಲೆ ವಿದೇಶಕ್ಕೆ ಹೋಗಬೇಕಾಗಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಯಾವುದೇ ಕೆಲಸವನ್ನು ಆತುರದಿಂದ ಮಾಡಬೇಡಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಶುಭಕಾರ್ಯಗಳಿಗಾಗಿ ದೂರ ಪ್ರಯಾಣದ ಸಾಧ್ಯತೆಗಳಿವೆ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ಹಿರಿಯರ ಸಲಹೆಗಳಿಂದ ಬರಲಿದ್ದ ಗಂಡಾಂತರಗಳಿಂದ ಪಾರಾಗುವಿರಿ. ಗೃಹ ನವೀಕರಣ ಕಾರ್ಯಗಳನ್ನು ಕೈಗೆತ್ತಿಕೊಳ್ಳುವಿರಿ. ಹಳೆ ವಾಹನವನ್ನು ನವೀಕರಣಗೊಳಿಸುವಿರಿ. ಶತ್ರುಗಳನ್ನು ಜಾಣ್ಮೆಯಿಂದ ಗೆಲ್ಲುವಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮದೇ ಭಿನ್ನಾಭಿಪ್ರಾಯದಿಂದಾಗಿ ನಿಂತುಹೋಗಿದ್ದ ಕೆಲಸ ಈಗ ಆರಂಭಗೊಳ್ಳುವುದು. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ ಇರುತ್ತದೆ. ಸಂಪತ್ತಿನಲ್ಲಿ ವೃದ್ಧಿಯನ್ನು ಕಾಣಬಹುದು. ಜಲ ಸಂಬಂಧಿ ಉದ್ಯೋಗದಲ್ಲಿರುವವರಿಗೆ ಅಭಿವೃದ್ಧಿ ಇರುತ್ತದೆ. ನಿಮ್ಮ ಕೆಲಸಗಳಿಗೆ ರಾಜಕೀಯ ವ್ಯಕ್ತಿಗಳಿಂದ ಕಿರಿಕಿರಿ ಆಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ನಿಮ್ಮ ಕೆಲವು ನಿಲುವುಗಳಲ್ಲಿ ಆಕಸ್ಮಿಕ ಬದಲಾವಣೆಗಳನ್ನು ಮಾಡಿ ಜನರ ಕೆಂಗಣ್ಣಿಗೆ ಗುರಿಯಾಗುವ ಸಾಧ್ಯತೆಗಳಿವೆ. ಆದಾಯವು ಸಾಮಾನ್ಯವಾಗಿರುತ್ತದೆ. ಹಿರಿಯರಿಂದ ನಿಮಗೆ ಹೆಚ್ಚಿನ ಸಹಾಯ ದೊರೆಯುತ್ತದೆ. ವೈದ್ಯಕೀಯ ಔಷಧ ಸಂಶೋಧಕರಿಗೆ ಉತ್ತಮ ಫಲಿತಾಂಶ ದೊರೆಯುತ್ತವೆ. ವೃತ್ತಿಯಲ್ಲಿ ಹೆಚ್ಚಿನ ಒತ್ತಡ ಇರುವುದಿಲ್ಲ. ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಹಿನ್ನಡೆಯನ್ನು ಕಾಣಬಹುದು. ಆದಾಯದಷ್ಟೇ ಖರ್ಚು ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವಾರದ ಆರಂಭದಲ್ಲಿ ದ್ವಂದ್ವ ನಿರ್ಧಾರಗಳು ಇರುತ್ತವೆ. ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಪ್ರಗತಿ ಇರುತ್ತದೆ. ಆದಾಯವು ಚೇತರಿಕೆಯತ್ತ ಹೊರಳುತ್ತದೆ. ಸಾಂಸಾರಿಕ ಜೀವನದಲ್ಲಿ ಸಾಕಷ್ಟು ಹೊಂದಾಣಿಕೆಯನ್ನು ಕಾಣುವ ಸಾಧ್ಯತೆಗಳಿವೆ. ಎದುರಾದ ಸಮಸ್ಯೆಗಳನ್ನು ಈಗ ಮೆಟ್ಟಿನಿಲ್ಲುವ ಸಾಮರ್ಥ್ಯಗಳಿವೆ. ನಿಮ್ಮ ನಿಕಟವರ್ತಿಗಳಿಂದ ಸಹಾಯ ದೊರೆತು ಆತ್ಮಸ್ಥೈರ್ಯ ಹೆಚ್ಚುವುದು. ಕೃಷಿಯಿಂದ ಆದಾಯ ಕಡಿಮೆಯಾಗಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಕುಟುಂಬದಲ್ಲಿ ಹೊಂದಾಣಿಕೆಯಿಂದ ಎಲ್ಲರ ಬೆಂಬಲಗಳಿಸುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ನಿಮ್ಮ ಶತ್ರುಗಳೇ ನಿಮ್ಮ ಮಿತ್ರರಾಗುವ ಸಾಧ್ಯತೆಗಳಿವೆ. ವಿದ್ಯಾರ್ಥಿಗಳಿಗೆ ಮಂದಗತಿಯ ಪ್ರಗತಿ ಇರುತ್ತದೆ. ಸರ್ಕಾರಿ ಉದ್ಯೋಗಿಗಳಿಗೆ ಸ್ಥಾನಪಲ್ಲಟ ಬರುವ ಸಾಧ್ಯತೆ ಇದೆ. ನಿಮ್ಮ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಳ್ಳಲು ಈಗ ಸಕಾಲ. ನಿಮ್ಮ ನಿರೀಕ್ಷಿತ ಮೂಲಗಳಿಂದ ಆದಾಯವಿರುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವಿಶಾಲ ಮನೋಭಾವದಿಂದ ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಕ್ಲಿಷ್ಟವಾದ ಕೆಲಸಗಳನ್ನು ಆಶ್ಚರ್ಯಕರವಾದ ರೀತಿಯಲ್ಲಿ ಸಾಧಿಸಿ ಪ್ರಶಂಸೆಗೆ ಒಳಗಾಗುವಿರಿ. ರಾಜಕೀಯ ಕ್ಷೇತ್ರದಲ್ಲಿ ಸೂತ್ರಧಾರರಾಗಿ ಕೆಲಸ ಮಾಡುವವರಿಗೆ ಬೆಳವಣಿಗೆ ಇರುತ್ತದೆ. ಧನಾದಾಯ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ನಿಮ್ಮ ಒಂದು ಹವ್ಯಾಸ ಸಂಪಾದನೆ ಮಾಡುವ ವೃತ್ತಿಯಾಗಿ ಬದಲಾಗಬಹುದು.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಚಿನ್ನದ ಸಗಟು ಆಭರಣ ತಯಾರಕರಿಗೆ ಲಾಭವಿರುತ್ತದೆ. ಆದಾಯವು ಕಡಿಮೆ ಇರುತ್ತದೆ. ವ್ಯವಹಾರಗಳಲ್ಲಿ ಹೆಚ್ಚಿನ ಹೂಡಿಕೆ ಬೇಡ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹೆಚ್ಚಿನ ಅನುಕೂಲವಾಗುತ್ತದೆ. ಸರ್ಕಾರಿ ನೌಕರರಿಗೆ ವೃತ್ತಿಯಲ್ಲಿನ ಅಕಾಲಿಕ ಪ್ರಯಾಣದಿಂದ ಕಿರಿಕಿರಿಯಾಗುತ್ತದೆ ಮತ್ತು ವೃಥಾ ಖರ್ಚಾಗುತ್ತದೆ. ಮಹಿಳೆಯರು ನಡೆಸುವ ವ್ಯಾಪಾರ-ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಎಲ್ಲರನ್ನು ಅನುಮಾನಿಸುವುದು ಬೇಡ. ಸ್ನೇಹಿತರೊಂದಿಗೆ ಮುಕ್ತವಾಗಿ ಮಾತನಾಡುವುದರಿಂದ ಮನಸ್ಸಿನಲ್ಲಿ ಇದ್ದ ತಪ್ಪು ಕಲ್ಪನೆಗಳು ದೂರವಾಗಿ ಸಂಬಂಧ ಗಟ್ಟಿಯಾಗುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ವ್ಯವಸಾಯದಲ್ಲಿನ ಅಭಿವೃದ್ಧಿ ಕುಂಟಿತವಾಗಬಹುದು. ವೃತ್ತಿಯಲ್ಲಿ ಅಧಿಕ ಒತ್ತಡ ತಡೆದುಕೊಳ್ಳಬೇಕಾದ ಅನಿವಾರ್ಯವಿರುತ್ತದೆ.

ಪದಬಂಧ 2917

ಮೇಲಿನಿಂದ ಕೆಳಕ್ಕೆ

1. ಇವನಿಗೆ ಮುಪ್ಪಿಲ್ಲ, ಸಾವೆಲ್ಲಿ ಬಂತು...ಎಂದೆಂದೂ ಉಳಿದುಬಿಟ್ಟ 5
2. ವನದಲ್ಲಿ ಆರಂಭಿಸಬಹುದಾದ ಹೊಸ ಬದುಕು 5
3. ವಿರಾಮವಿಲ್ಲದೆ ತೇರು ಎಳೆದಂತೆ ಮಾಡುವ ಪ್ರಯತ್ನ ಶ್ರಮ 4
4. ತಂಟೆ ತಕರಾರುಗಳಿಂದ ಕೂಡಿದ ಆಕ್ಷೇಪ 3
6. ವಿಕಾಸವಾದಲ್ಲಿ ಮೊದಲು ಕೋತಿ ನಂತರ ಮನುಷ್ಯ 5
8. ತುಂಟಾಟದ ಬಾಲೆ 2
10. ಕಾಮದೇವನ ತಂದೆ 5
11. ಅಗ್ನಿ ಪರ್ವತದ ಉಗುಳು 2
13. ಮಾತುಗಳನ್ನು ಕೂಡಿಹಾಕಿಕೊಂಡಿರುವ ಕೋಶ 5
14. ಕ್ಷೇತ್ರವಾದ ಜಾಗದ ಮಹಿಮೆ ಇತಿಹಾಸ 5
16. ದ್ರವಗಳ ಬಗ್ಗೆ ಹೊಂದಿರುವ ವಿಶೇಷ ತಿಳಿವಳಿಕೆ 4
17. ನೋಡಲು ಮೋಹಕವಾಗಿ ಆಕರ್ಷಕವಾಗಿರುವ ರೂಪವಂತೆ 3

ಎಡದಿಂದ ಬಲಕ್ಕೆ

1. ನುಡಿ, ನಾಡಿನ ವಿಷಯದಲ್ಲಿ ಆತ್ಮಪೂರ್ವಕ ಪ್ರೀತಿ ಗೌರವ 4
3. ಕಾಪಾಡುವವನು ನಮ್ಮನ್ನು ರಕ್ಷಿಸಬೇಕು ಎಂದೆಂದೂ 5
5. ಪ್ರಾಣವನ್ನು ಹಿಡಿದಿಡುವ ಶಕ್ತಿ ಪಡೆದವ 4
6. ಕುರಿ ಹಸುಗಳ ಗುಂಪು 2
7. ಧ್ಯಾನಾವಸ್ಥೆಗೆ ಬರುವ ಅಡಚಣೆ 4
9. ಹಿಂದಿರುಗಿ ಬಂದ ಮನ್ಮಥ ಲಕ್ಷ್ಮಿಯಾದಾಗ ಅವಳ ಮಗ 5
12. ಕೆಲಸ ಕಾರ್ಯ ಕಜ್ಜದ ಜೀವನದಲ್ಲಿ ತೇದು ತಿಳಿವಳಿಕೆ ಪಡೆದವ 5
15. ನಾಟ್ಯದಲ್ಲಿ ಶ್ರೇಷ್ಠನಾದ ಶಿವ, ಗಂಗಾಧರ 4
17. ಬಂದದಾರಿಗೆ ಇದು ಇಲ್ಲದೆ ಹೋಗಬಹುದು 2
18. ಕಾವ್ಯ ಪ್ರಯೋಗದ ಜೊತೆಗಾರಿಕೆ 4
19. ಮನಸ್ಸಿನಿಂದ ಶತ್ರುವನ್ನು ಅಡಗಿಸುವಿಕೆ 5
20. ರಾದ್ಧಾಂತವಾಗಿ ಬೆಳಕಿಗೆ ಬರುವ ವ್ಯವಹಾರ 4



ಪದಬಂಧ ಉತ್ತರ -2916

ಮೇಲಿಂದ ಕೆಳಕ್ಕೆ

1. ಅರಸಾ 2.ವರಾಳಿ 3.ಪ್ರೀತಿಸು 4.ಸರ್ಕಾರ 7.ವಸುಧಾ 9.ಮಹಾಮಂಡಲ 10.ಅವಧ 11.ಬಿಸಿಯುಸಿರು 13.ನರೇಶ 17.ವರುಣ 18.ಚಂದಿರ 19.ತರಳೆ 20.ಹಮಾರ 21.ಸುಪಾರಿ

ಎಡದಿಂದ ಬಲಕ್ಕೆ

1. ಅಸಂಭವ 3.ಪ್ರೀತಮಾನಸ 5.ರಾಗರತಿ 6.ಸಾಗುವಳಿ 8.ಸುಮನೋಹರ 10.ಅಬುಧಾಬಿ 12.ಮಂದಾಸನ 14.ಸಿರಿಗನ್ನಡ 15.ಧನುರ್ವಾಯು 16.ಲವಲೇಶ 18.ಚಂಡಮಾರುತ 20.ಹಣಕಾಸು 22.ರಘುರಾಮಾ 23.ರಣಕಹಳೆ 24.ರಕ್ಷಾಕರಿ

ಭಾರತೀಯ ವಿದ್ಯಾ ಭವನಕ್ಕೆ 60 ಮುಂದಿನ ಕನಸು 2030

• ವರುಣ ಹೆಗಡೆ

ಭಾರತೀಯ ಶ್ರೀಮಂತ ಪರಂಪರೆ ಮತ್ತು ಸಂಸ್ಕೃತಿಯ ಪುನರುಜ್ಜೀವನಕ್ಕಾಗಿ ಜನ್ಮತಳೆದ ಸಂಸ್ಥೆ ಭಾರತೀಯ ವಿದ್ಯಾ ಭವನ. ಇಲ್ಲಿನ ಸಂಸ್ಕೃತಿ ಮತ್ತು ಪರಂಪರೆಯನ್ನು ಆಧುನಿಕ ಜಗತ್ತಿಗೆ ಪ್ರಸಾರ ಮಾಡುವ ಜತೆಗೆ, ಸಾಹಿತ್ಯ, ಸಂಗೀತ, ನೃತ್ಯ, ಲಲಿತಕಲೆಗಳಿಗೆ ಪ್ರೋತ್ಸಾಹ ನೀಡುತ್ತಿದೆ. ಶೈಕ್ಷಣಿಕ ಕ್ಷೇತ್ರದಲ್ಲಿಯೂ ಛಾಪು ಮೂಡಿಸಿದೆ. ವಿದೇಶದಲ್ಲಿಯೂ ಶಾಖೆಗಳನ್ನು ಹೊಂದಿದೆ. 1966ರಲ್ಲಿ ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿ ಪ್ರಾರಂಭವಾದ ಬೆಂಗಳೂರು ಕೇಂದ್ರಕ್ಕೆ ಈಗ ವಜ್ರ ಮಹೋತ್ಸವದ ಸಂಭ್ರಮ. ಈ ಸಂದರ್ಭದಲ್ಲಿ ಸಂಸ್ಥೆಯ ಬೆಂಗಳೂರು ಕೇಂದ್ರದ ಅಧ್ಯಕ್ಷ ಕೆ.ಜಿ. ರಾಘವನ್ ಅವರ ಜತೆಗೆ ನಡೆಸಿದ ಸಂದರ್ಶನ ಇಲ್ಲಿದೆ.


ಕೆ.ಜಿ.ರಾಘವನ್

• ಭಾರತೀಯ ವಿದ್ಯಾ ಭವನ ಹುಟ್ಟಿದ್ದು ಹೇಗೆ?

ಭಾರತೀಯ ಸಂಸ್ಕೃತಿ ಮತ್ತು ಶಿಕ್ಷಣವನ್ನು ಉತ್ತೇಜಿಸಲು 1938ರಲ್ಲಿ ಕೆ.ಎಂ. ಮುನ್ಷಿ ಅವರು ಸಂಸ್ಥೆಯನ್ನು ಸ್ಥಾಪಿಸಿದರು. ಪ್ರಖ್ಯಾತ ವಕೀಲರಾಗಿದ್ದ ಅವರು, ಕೇಂದ್ರ ಸಚಿವರಾಗಿದ್ದರು. ಪ್ರಮುಖ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. ಸಾಹಿತಿ ಮತ್ತು ಶಿಕ್ಷಣ ತಜ್ಞರೂ ಆಗಿದ್ದರು. ದೂರದೃಷ್ಟಿಯಿಂದ ಸ್ಥಾಪಿಸಿದ್ದ ಈ ಸಂಸ್ಥೆಗೆ ಗಾಂಧೀಜಿ, ಸರ್ದಾರ್ ವಲ್ಲಭಭಾಯ್ ಪಟೇಲ್, ರಾಜೇಂದ್ರ ಪ್ರಸಾದ್, ಜವಾಹರಲಾಲ್ ನೆಹರು, ಎಸ್. ರಾಧಾಕೃಷ್ಣನ್ ಸೇರಿ ಅನೇಕ ರಾಷ್ಟ್ರೀಯ ನಾಯಕರು ಮತ್ತು ವಿದ್ವಾಂಸರ ಬೆಂಬಲವಿತ್ತು.

• ಭಾರತೀಯ ವಿದ್ಯಾ ಭವನವು ಹೇಗೆ ಭಿನ್ನ?

ಸಂಸ್ಥೆಯು ದೇಶ–ವಿದೇಶಗಳು ಸೇರಿ 350 ಶಾಖೆಗಳನ್ನು ಹೊಂದಿದೆ. 400 ಶಾಲೆಗಳನ್ನು ನಡೆಸುತ್ತಿದೆ. ಆಲದಮರದ ರೀತಿ ಬೆಳೆದಿದ್ದು, ಇಲ್ಲಿ ಜಾತಿ, ಮತ, ಪಂಥ, ಧರ್ಮ, ಭಾಷೆಯ ಯಾವುದೇ ಭೇದಭಾವವಿಲ್ಲ. 'ಆನೋ ಭದ್ರಾ ಕೃತವೋ ಯಾಂತು ವಿಶ್ವತಃ', 'ವಸುಧೈವ ಕುಟುಂಬಕಂ' ಮತ್ತು 'ಅಮೃತಂ ತು ವಿದ್ಯಾ' ಎಂಬ ಸಂಸ್ಕೃತದ ನುಡಿಗಟ್ಟುಗಳ ಆಶಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಸಂಸ್ಥೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ಕಲಾವಿದರಿಗೆ ಗೌರವಧನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ. ಸಂಸ್ಥೆ ನೀಡುವ ಪ್ರಮಾಣಪತ್ರಗಳು ವಿಶೇಷ ಮಹತ್ವ ಹೊಂದಿವೆ. ಅನೇಕ ಕಲಾವಿದರು ನಾವು ನೀಡಿದ ಪ್ರಮಾಣಪತ್ರವನ್ನೇ ದಾಖಲೆಯಾಗಿ ನೀಡಿ, ಸರ್ಕಾರದಿಂದ ಕಾರ್ಯಕ್ರಮಗಳು ಮತ್ತಿತರ ಸೌಲಭ್ಯಗಳನ್ನು ಪಡೆಯುತ್ತಿರುವುದು ಸಂತೋಷ ತಂದಿದೆ.

• ಬೆಂಗಳೂರು ಕೇಂದ್ರವು ಕೈಗೊಂಡ ಪ್ರಮುಖ ಕಾರ್ಯಕ್ರಮಗಳು ಏನು?

ಶ್ರೀರಾಂಪುರದಲ್ಲಿ 15 ವರ್ಷಗಳಿಂದ ಭವನ್ ಬಿಬಿಎಂಪಿ ಶಾಲೆಯನ್ನು ಸಿಬಿಎಸ್‌ಸಿ ಪಠ್ಯಕ್ರಮದಲ್ಲಿ ನಡೆಸುತ್ತಿದ್ದೇವೆ. ಈ ಹಿಂದೆ ಬಿಬಿಎಂಪಿ ಆ ಶಾಲೆಯನ್ನು ನಮಗೆ ವಹಿಸಿತ್ತು. ಅಲ್ಲಿ 800 ಮಕ್ಕಳಿದ್ದಾರೆ. ವ್ಯಾಸಂಗ ಮಾಡುತ್ತಿರುವವರಲ್ಲಿ ಬಹುತೇಕರು ಕೊಳೆಗೇರಿ ಮಕ್ಕಳಾಗಿದ್ದಾರೆ. ಚಾಮರಾಜಪೇಟೆಯಲ್ಲಿ ಭವನ್ ಬೆಂಗಳೂರು ಪ್ರೆಸ್ ಎಂಬ ಇನ್ನೊಂದು ಶಾಲೆ ನಡೆಸುತ್ತಿದ್ದೇವೆ. ಶಾಲೆ ಪ್ರಾರಂಭವಾದಾಗಿನಿಂದ ಆ ಪ್ರದೇಶದಲ್ಲಿ ಅಪರಾಧ ಸಂಖ್ಯೆ ಕಡಿಮೆಯಾಗಿದೆ ಎಂಬುದನ್ನು ಪೊಲೀಸ್ ಮೂಲಗಳು ತಿಳಿಸಿವೆ. ಅಲ್ಲಿ ಪಠ್ಯಕ್ರಮದ ಜತೆಗೆ ಭಾರತೀಯ ಸಂಸ್ಕೃತಿ, ಕಲೆ, ಮಾನವೀಯ ಮೌಲ್ಯಗಳನ್ನೊಳಗೊಂಡ ಶಿಕ್ಷಣ ನೀಡುತ್ತಿದ್ದೇವೆ.

ಮುಂದಿನ ವರ್ಷ ಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಕಾರ್ಯಯೋಜನೆ ರೂಪಿಸಲಾಗಿದೆ.

10ರಿಂದ ಸಂತವಾಣಿ ಉತ್ಸವ

ಭಾರತದ ಸಂತರ ಸಂದೇಶ, ಧರ್ಮಗಳ ಸಾರ, ಪರಂಪರೆಯನ್ನು ಪರಿಚಯಿಸಲೆಂದೇ ಬೆಂಗಳೂರಿನ ರೇಸ್‌ಕೋರ್ಸ್ ರಸ್ತೆಯಲ್ಲಿರುವ ಭಾರತೀಯ ವಿದ್ಯಾ-ಭವನದಲ್ಲಿ ನ.10ರಿಂದ ನ.21ರವರೆಗೆ 'ಸಂತವಾಣಿ' ಉತ್ಸವ ಹಮ್ಮಿಕೊಳ್ಳಲಾಗಿದೆ. ಪ್ರತಿ ದಿನ ಬೆಳಿಗ್ಗೆಯಿಂದ ಸಂಜೆವರೆಗೂ ಚಲನಚಿತ್ರ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ, ನಾಟಕ, ತಜ್ಞರಿಂದ ವಿಚಾರ ಮಂಡನೆ, ಪುಸ್ತಕ ಪ್ರದರ್ಶನ ಆಯೋಜಿಸಿದೆ.

• ವಿದ್ಯಾ ಭವನದ ಯೋಜನೆ, ಕಾರ್ಯಕ್ರಮಗಳಿಗೆ ಅನುದಾನ ಹಾಗೂ ಬೆಂಬಲ ಹೇಗಿದೆ?

ಜನರು, ಕಾರ್ಪೊರೇಟ್ ಕಂಪನಿಗಳ ಬೆಂಬಲದಿಂದ ಕಾರ್ಯ-ನಿರ್ವಹಿಸುತ್ತಿದ್ದೇವೆ. ಇನ್ಫೊಸಿಸ್ ಜತೆಗೆ ಸೇರಿ ಪ್ರತಿ ತಿಂಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತಿದ್ದೇವೆ. ರಾಜ್ಯದ ವಿವಿಧೆಡೆ ವೀಕ್ಷಕರು ಇರುವ ಕಡೆ ಹೋಗಿ, ಕಾರ್ಯಕ್ರಮ ಮಾಡುತ್ತಿದ್ದೇವೆ. ಈ ಸರಣಿಯಡಿ ಸಾವಿರಕ್ಕೂ ಅಧಿಕ ಕಾರ್ಯಕ್ರಮ ನಡೆಸಿದ್ದೇವೆ. ಇನ್ಫೊಸಿಸ್ ಸಂಸ್ಥೆಯು ನಮ್ಮ ಕೇಂದ್ರಕ್ಕೆ ಸಾಕಷ್ಟು ಬೆಂಬಲ ನೀಡಿದೆ. ಅವರ ಸಹಯೋಗದಲ್ಲಿ ವಿವಿಧ ರಾಜ್ಯಗಳಲ್ಲಿಯೂ ಕಾರ್ಯಕ್ರಮ ಮಾಡಿದ್ದೇವೆ. ಈ ವಿಶೇಷ ಕಾರ್ಯಕ್ರಮಗಳ ಜತೆಗೆ ವಾರ್ಷಿಕ ಚಟುವಟಿಕೆ ಹಾಗೂ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಹಲವರು ನಮ್ಮಲ್ಲಿ ದತ್ತಿನಿಧಿ ಇರಿಸಿರುವುದರಿಂದಲೂ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೇವೆ.

• ಬೆಂಗಳೂರಿನಲ್ಲಿರುವ ವಿದ್ಯಾ ಭವನದ ಶಾಲೆಯ ವೈಶಿಷ್ಟ್ಯ...

ಶ್ರೀರಾಂಪುರದಲ್ಲಿರುವ ವಿದ್ಯಾ ಭವನದ ಶಾಲೆಗೆ ಬರುವ ಮಕ್ಕಳಲ್ಲಿ ಹೆಚ್ಚಿನವರು ಕೊಳೆಗೇರಿಯವರು. ಬಹುತೇಕ ಮಕ್ಕಳ ಕುಟುಂಬದಲ್ಲಿ ಅವರೇ ಶಾಲೆ ಮೆಟ್ಟಿಲು ಏರಿದ ಮೊದಲಿಗರು. ಬೆಂಗಳೂರಿನಲ್ಲಿರುವ ಎರಡೂ ಶಾಲೆಗಳು ಆಂಗ್ಲ ಮಾಧ್ಯಮ ಸಿಬಿಎಸ್‌ಸಿ ಪಠ್ಯಕ್ರಮ ಹೊಂದಿವೆ. ಸ್ಮಾರ್ಟ್ ಮತ್ತು ಎಲೆಕ್ಟ್ರಾನಿಕ್ ಬೋರ್ಡ್‌ಗಳು, ಸುಸಜ್ಜಿತ ಸಭಾಂಗಣ, ಕೊಠಡಿ, ಪೀಠೋಪಕರಣ, ಕಂಪ್ಯೂಟರ್ ಶಿಕ್ಷಣ, ಪ್ರಯೋಗಾಲಯ, ಗ್ರಂಥಾಲಯ ಹೊಂದಿವೆ. ಶೇಕಡ 100ರಷ್ಟು ಫಲಿತಾಂಶ ಬರುತ್ತಿದೆ.

• ಆಧುನಿಕ ತಂತ್ರಜ್ಞಾನ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ವ್ಯಾಪಿಸಿಕೊಳ್ಳುತ್ತಿರುವ ಹೊತ್ತಿನಲ್ಲಿ ಕಲೆ, ಸಾಹಿತ್ಯ, ಸಂಗೀತ ಅಸ್ಮಿತೆಯನ್ನು ಹೇಗೆ ಉಳಿಸಿಕೊಳ್ಳಬಹುದು?

ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಸಂಗೀತ–ನೃತ್ಯದಂತಹ ಕಾರ್ಯಕ್ರಮಗಳನ್ನು ನೇರವಾಗಿ ಕಣ್ತುಂಬಿಕೊಳ್ಳುವಾಗ ಆಗುವ ಅನುಭವವೇ ಬೇರೆ. ಮೊಬೈಲ್‌ನಂತಹ ಡಿಜಿಟಲ್ ಸಾಧನಗಳ ನೆರವಿನಿಂದ ಸಂಗೀತ ಕೇಳುವುದಕ್ಕೂ, ಕಲಾವಿದರ ಎದುರು ಕುಳಿತು ಕೇಳುವುದಕ್ಕೂ ವ್ಯತ್ಯಾಸವಿದೆ. ಆದ್ದರಿಂದ ತಂತ್ರಜ್ಞಾನ ಎಷ್ಟೇ ಮುಂದುವರಿದರೂ ಸಂಗೀತ–ನೃತ್ಯದಂತಹ ಕಾರ್ಯಕ್ರಮಗಳಿಗೆ ಪ್ರೇಕ್ಷಕರ ಕೊರತೆಯಾಗದು.

• ಯುವಜನರು ಪಾಶ್ಚಾತ್ಯ ಸಂಸ್ಕೃತಿಯತ್ತ ಆಕರ್ಷಿತರಾಗುತ್ತಿದ್ದಾರೆ. ಈ ಸಂದರ್ಭದಲ್ಲಿ ಭಾರತೀಯ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸವಾಲಿದೆ ಅಲ್ಲವೆ?

ಹೌದು, ಭಾರತೀಯ ಸಂಸ್ಕೃತಿಗೆ ಅಷ್ಟಾಗಿ ಪ್ರಚಾರ ಸಿಕ್ಕಿಲ್ಲ. ತಂತ್ರಜ್ಞಾನದ ಪ್ರಯೋಜನವನ್ನೂ ಪ್ರಚಾರಕ್ಕೆ ಬಳಸಿಕೊಂಡಿರಲಿಲ್ಲ. ಈಗ ಆ ಕೆಲಸ ಆಗುತ್ತಿದೆ. ಯೂಟ್ಯೂಬ್‌ನಲ್ಲಿ ಇಲ್ಲಿನ ಪ್ರಸಿದ್ಧ ಕಲಾವಿದರ ಪ್ರದರ್ಶನಗಳು ಕಾಣಸಿಗುತ್ತವೆ. ನಮ್ಮ ಸಂಸ್ಕೃತಿಯ ಬಗ್ಗೆ ಪ್ರಚಾರ ಮಾಡಿದರೆ, ಪಾಶ್ಚಾತ್ಯ ಸಂಸ್ಕೃತಿಯ ಆಕರ್ಷಣೆ ಕಡಿಮೆಯಾಗಲಿದೆ.

• ಭಾರತೀಯ ವಿದ್ಯಾ ಭವನದ ಬೆಂಗಳೂರು ಕೇಂದ್ರದ ಮುಂದಿನ ಯೋಜನೆಗಳು...

ರೇಸ್‌ಕೋರ್ಸ್ ರಸ್ತೆಯಲ್ಲಿರುವ ಕೇಂದ್ರದಲ್ಲಿ ಕಾರ್ಯಚಟುವಟಿಕೆ ವಿಸ್ತರಿಸಲು ಸ್ಥಳಾವಕಾಶದ ಕೊರತೆಯಿದೆ. ಆದ್ದರಿಂದ ಬೇರೆಡೆ ಸ್ಥಳ ಗುರುತಿಸಿ, ಅಲ್ಲಿ ವೈವಿಧ್ಯಮಯ ಕಾರ್ಯಕ್ರಮ ಮಾಡಬೇಕೆಂಬ ಕನಸಿದೆ. ದೊಡ್ಡ ಗ್ರಂಥಾಲಯ ನಿರ್ಮಾಣ, ಸಂಶೋಧನೆಗಳಿಗೆ ಅವಕಾಶ, ವೃದ್ಧಾಶ್ರಮ ನಿರ್ಮಾಣ, ಪ್ರಕೃತಿ ಚಿಕಿತ್ಸೆ ಸೇರಿ ಹಲವು ಸಮಾಜಮುಖಿ ಕಾರ್ಯಯೋಜನೆಯನ್ನು ಅನುಷ್ಠಾನ ಮಾಡುವ ಗುರಿಯಿದೆ. ಈ ಸಂಬಂಧ 'ವಿಷನ್ 2030' ರೂಪಿಸಲಾಗಿದೆ.

• 60ನೇ ವರ್ಷ ಸಂಭ್ರಮದ ಪ್ರಯುಕ್ತ 'ಸಂತವಾಣಿ' ಕಾರ್ಯಕ್ರಮ ರೂಪಿಸಿದ್ದೀರಿ. ಇದರ ವಿಶೇಷತೆ ಏನು?

ಈ ಸಂಭ್ರಮದ ಮೊದಲ ಕಾರ್ಯಕ್ರಮ 'ಸಂತವಾಣಿ'. ವಿವಿಧತೆಯಲ್ಲಿ ಏಕತೆ ನಮ್ಮ ದೇಶದ ವಿಶೇಷತೆ. ಆ ವಿವಿಧತೆ ಕಾಯ್ದುಕೊಳ್ಳಬೇಕು. ದೇಶದಲ್ಲಿ ಬಂದು ಹೋದ ಮಹಾನ್ ಸಂತರು ತಮ್ಮ ಗುರಿ ಸಾಧಿಸಲು ಬೇರೆ ಬೇರೆ ಮಾರ್ಗ ಅನುಸರಿಸಿದರೂ ಅವರ ಆಶಯ ಒಂದೇ ಆಗಿತ್ತು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಬೌದ್ಧರು, ಜೈನರು ಸೇರಿ ಎಲ್ಲ ಧರ್ಮದವರನ್ನು ಒಳಗೊಂಡು ಈ ಕಾರ್ಯಕ್ರಮ ರೂಪಿಸಲಾಗಿದೆ.

ಮೊದಲ ಓದು

ಆರು ತೆರೆಗಳು ಮೀರಿ ಬಂದಾಗ...



ಕಾಣುತ್ತ ಕಾಣುತ್ತ ಕೇಳುತ್ತ ಕೇಳುತ್ತ ಆರು ತೆರೆಯ ನೋಡಂಬಿಗ
ನಾಟಕಕಾರರು: ಗಿರಿಧರ ಖಾಸನೀಸ್
ಪ್ರ: ನವಕರ್ನಾಟಕ ಪ್ರಕಾಶನ
ಮೊ: 9448257518

ಅಕ್ಕನ ವಚನದ ಸಾಲು, ಪುರಂದರ ದಾಸರ ಕೀರ್ತನೆಯ ಸಾಲು ಎರಡೂ ಸಮ್ಮಿಳಿತಗೊಂಡಂತೆಯೇ ಇದೆ ಇಡೀ ಪುಸ್ತಕ. ನಮ್ಮ ಸುತ್ತಲೂ ಕಂಡಿದ್ದು, ಕೇಳಿದ್ದು ಇಲ್ಲಿ ಪಾತ್ರಗಳಾಗಿವೆ. ಆರು ತೆರೆಯ ನೋಡಂಬಿಗ ಅದು ಮೀರಿ ಬರುತಲಿದೆ ಅಂಬಿಗ ಎಂಬ ಸಾಲಿನ ಅರಿಷಡ್ವರ್ಗಗಳ ತೆರೆಗಳಿಲ್ಲಿ ಮನದ ಸಮುದ್ರದೊಳಗೆ ಕೋಲಾಹಲವನ್ನೇ ಎಬ್ಬಿಸುತ್ತವೆ. ಅತಿ ಸಣ್ಣ ನಾಟಕಗಳಾದರೂ ಬದುಕಿನ ಎಲ್ಲ ದೊಡ್ಡ ನಾಟಕಗಳೂ ಇಲ್ಲಿ ಕಾಣಿಸುತ್ತವೆ. ಪ್ರತಿ ನಾಟಕದಲ್ಲಿಯೂ ನಮ್ಮೊಳಗಿನ ಸಣ್ಣತನ, ನಮ್ಮೊಳಗಿನ ಅಸೂಯೆ, ನಮ್ಮೊಳಗಿನ ಶ್ರೇಷ್ಠತೆಯ ವ್ಯಸನದ ದಾಸರಾಗಿರುವುದು, ನಾವು ಇರುವುದಕ್ಕಿಂತಲೂ ಉತ್ತಮರು ಎನಿಸಿಕೊಳ್ಳಲು ಏನು ಮಾಡುತ್ತೇವೆ ಎಂಬ ಸಂಘರ್ಷವೇ ಇಲ್ಲಿ ಪದಗಳ ರೂಪ ಪಡೆದಿವೆ. ಸದಾ ಬೆಟ್ಟ ಏರುವ, ಬೆಟ್ಟದ ತಪ್ಪಲಿನಲ್ಲಿ ಕೂತಿರುವ ಭಿಕ್ಕು ನಮ್ಮ ಆಂತರ್ಯ ಹಾಗೂ ಅಂತಃಸಾಕ್ಷಿಯ ಪ್ರತೀಕದಂತೆನಿಸುತ್ತದೆ. ಸಾವು, ನೋವು, ನಲಿವು, ಅಹಂಕಾರ, ದುರಹಂಕಾರ, ಹೆಮ್ಮೆ, ತ್ಯಾಗ ಇವೆಲ್ಲವೂ ಇಲ್ಲಿ ಪಾತ್ರಗಳಾಗಿವೆ. ನಾವು, ನಮ್ಮ ಏಕಾಂತದಲ್ಲಿ ಕನ್ನಡಿಯ ಮುಂದೆ ನಿಂತು ಸಂವಾದಕ್ಕಿಳಿದಂತೆಯೇ ಪ್ರತಿಯೊಂದು ಪಾತ್ರಗಳೂ ಧ್ವನಿಸುತ್ತವೆ. ಒಬ್ಬ ನಾಟಕಕಾರ ಇಷ್ಟೊಂದು ಪಾತ್ರಗಳನ್ನು ಜೀವಿಸುವ ಪರಿ, ಅವುಗಳಿಂದ ಒಂದೊಂದೇ ಗುಣಗಳನ್ನು ಹೆಕ್ಕಿ, ಪ್ರತಿಧ್ವನಿಸುವ ಪರಿ ಅನನ್ಯವಾಗಿದೆ. ಸಣ್ಣ ನಾಟಕ ಓದಲು ಹೆಚ್ಚು ಸಮಯ ತೆಗೆದುಕೊಳ್ಳದು. ಆದರೆ ಓದಿದ ನಂತರ ಜೀರ್ಣಿಸಿಕೊಳ್ಳಲು ಸಮಯ ತೆಗೆದುಕೊಳ್ಳುತ್ತದೆ. ಕೆಲವು ನಾಟಕಗಳು ಹತಾಶೆಯನ್ನೂ, ಇನ್ನೂ ಕೆಲವು ಮುಗುಳ್ನಗೆಯನ್ನೂ ಮೂಡಿಸುತ್ತವೆ. ಆತ್ಮಾವಲೋಕನದ ಓದಿಗೆ ಈ ನಾಟಕಗಳು ಪ್ರೇರೇಪಿಸುತ್ತವೆ.

ಪುಟ: 152 ₹195

ನಗರ, ಗ್ರಾಮ್ಯ ಬದುಕಿನ ಬಿಂಬಗಳು

ಸೂಪರ್ ಗಾಡ್ ಸಣ್ಣಯ್ಯ (ಕಥಾ ಸಂಕಲನ)
ಲೇ: ಹೃದಯ ಶಿವ
ಪ್ರ: ಹರಿವು ಬುಕ್ಸ್, ಬೆಂಗಳೂರು
ಮೊ: 8088822171.

ಇದು 15 ಕಥೆಗಳನ್ನೊಳಗೊಂಡ ಕಥಾ ಸಂಕಲನ. ಚಲನಚಿತ್ರ ಗೀತೆ ರಚನೆಕಾರ ಹೃದಯ ಶಿವ ಅವರ ಮೊದಲ ಕಥಾ ಸಂಕಲನವಿದು. ಕನಕಪುರ ಭಾಗದ ಗ್ರಾಮ್ಯ ಬದುಕಿನ ಚಿತ್ರಣ ಕಟ್ಟಿಕೊಡುವ ಇಲಿನ ಕಥೆಗಳು ಸರಳ ಭಾಷೆಯಿಂದ ಓದಿಸಿಕೊಳ್ಳುತ್ತವೆ. ಕೆಲ ಕಥೆಗಳು ಪುಟ್ಟದಾಗಿದ್ದರೂ ಕಥಾವಸ್ತುವಿನ ಕಾರಣಕ್ಕಾಗಿಯೇ ಓದುಗರ ಮನ ಸೆಳೆಯುತ್ತವೆ.

ಯಾವುದೇ ಹಳ್ಳಿಯಲ್ಲೂ ಇರಬಹುದಾದ ಪರಿಸರ, ಅಲ್ಲಿನ ವಿಭಿನ್ನ ವ್ಯಕ್ತಿಗಳ ಕುತೂಹಲಭರಿತ ಕಥನಗಳು ಈ ಕಥಾಸಂಕಲನದ ವಿಶೇಷ. ಬಾಲ್ಯದಲ್ಲಿನ ತಮ್ಮ ಹಳ್ಳಿಯ ಅನುಭವ ಕಥನಗಳನ್ನೇ ಹೃದಯ ಶಿವ ಕಥೆಗಳ ಜೀವದ್ರವ್ಯವಾಗಿಸಿದ್ದಾರೆ. ಗ್ರಾಮೀಣ ಪರಿಸರದ ಜತೆಗೇ ನಗರ ಬದುಕಿನ ಅನುಭವಗಳೂ ಇಲ್ಲಿ ಕಥಾವಸ್ತುವಿನ ಸ್ವರೂಪ ತಳೆದಿರುವುದು ಗಮನಾರ್ಹ. ಹಾಗಾಗಿ, ಇಲ್ಲಿನ ಕಥೆಗಳು ನಗರ ಮತ್ತು ಗ್ರಾಮ್ಯ ಬದುಕಿನ ಪ್ರತಿಬಿಂಬದಂತಿವೆ.

'ಬುಂಡೆದಾಸನೆಂಬ ಹುಚ್ಚಯ್ಯ' ಹಾಗೂ 'ಸೂಪರ್ ಗಾಡ್ ಸಣ್ಣಯ್ಯ' ಕಥೆಗಳು ಏಕವ್ಯಕ್ತಿ ಪಾತ್ರಧಾರಿ ಕಥೆಗಳಂತೆ ಮೇಲ್ನೋಟಕ್ಕೆ ಗೋಚರಿಸಿದರೂ, ಹುಚ್ಚಯ್ಯ, ಸಣ್ಣಯ್ಯ ಯಾವುದೇ ಹಳ್ಳಿಯಲ್ಲಿ ಇರಬಹುದಾದ ವ್ಯಕ್ತಿಗಳಂತೆ ಕಾಣಿಸುತ್ತಾರೆ. ಪೆದ್ದನೆಂಬಂತೆ ಕಾಣುವ ಹುಚ್ಚಯ್ಯ ಅನಾಥ ಪ್ರಜ್ಞೆಯಿಂದ ನರಳುತ್ತಿದ್ದರೂ, ಸ್ವಾಭಿಮಾನದ ಬದುಕಿನಲ್ಲೇ ಜೀವನ ಪ್ರೀತಿ ಕಂಡುಕೊಳ್ಳುತ್ತಲೇ ಊರಿನ ಮಕ್ಕಳು ವೃದ್ಧರಾದಿಯಾಗಿ ಎಲ್ಲರ ಮನದಲ್ಲಿ ಸದ್ದಿಲ್ಲದೇ ನೆಲೆನಿಂತ ಬಗೆಯನ್ನು ಹೃದಯ ಶಿವ ಸ್ವಗತದ ಧಾಟಿಯಲ್ಲೇ ಕಟ್ಟಿಕೊಟ್ಟಿದ್ದಾರೆ. ಧಾರ್ಮಿಕತೆಯ ಮುಖವಾಡ ಹೊತ್ತ ಅರ್ಚಕ ಸಣ್ಣಯ್ಯ, ದೇವರ ಹೆಸರಿನಲ್ಲಿ ಗ್ರಾಮಸ್ಥರನ್ನು ತನ್ನ ವಶಕ್ಕೊಳಪಡಿಸಿಕೊಳ್ಳುವಲ್ಲಿ ಇನ್ನೇನು ಸಫಲವಾಗಿಟ್ಟಬಿಟ್ಟ ಅನ್ನುವಷ್ಟರಲ್ಲಿ ಅವನೇ ಕಾನೂನಿನ ಕುಣಿಕೆಗೆ ಸಿಕ್ಕಿಬೀಳುವುದು ಕಥೆಗೆ ವಿಭಿನ್ನ ತಿರುವು ನೀಡುತ್ತದೆ.

'ಸುಶೀಲಾ', 'ವೈಷ್ಣವಿ ಎಂಬ ಸುಂದರಿ', 'ಪ್ರಾಯಶ್ಚಿತ್ತ' ಇತ್ಯಾದಿ ಕಥೆಗಳಲ್ಲಿ ಹೆಣ್ಣಿನ ಬದುಕನ್ನು ತೆರೆದಿಡುತ್ತಲೇ ಆಕೆಯಿನ್ನೂ ಶೋಷಣೆಯಿಂದ ಮುಕ್ತವಾಗಿಲ್ಲವೆಂಬುದನ್ನು ಸೂಕ್ಷ್ಮವಾಗಿ ಮನಗಾಣಿಸಲಾಗಿದೆ. ಸಕಾರಾತ್ಮಕ ಅಂತ್ಯದ ನಿರೀಕ್ಷೆಯ ಕೆಲ ಕಥೆಗಳು ಅಂತಿಮವಾಗಿ ನಕಾರಾತ್ಮಕವಾಗಿ ಕೊನೆಯಾಗಿ ಅಚ್ಚರಿಗೀಡು ಮಾಡುತ್ತವೆ. ಇಲ್ಲಿನ ಕೆಲ ಕಥೆಗಳಲ್ಲಿ ಕಂಡುಬರುವ ಸ್ವಗತ ಮತ್ತು ಸಿನಿಮೀಯ ಧಾಟಿಯ ನಿರೂಪಣೆ ಕಥೆಯ ಓಘಕ್ಕೆ ತುಸು ಅಡ್ಡಿಯೆನಿಸಿದರೂ, ಕಥಾಹಂದರಕ್ಕೆ ಧಕ್ಕೆಯಾಗದಂತೆ ನೋಡಿಕೊಂಡಿರುವಲ್ಲಿ ಕಥೆಗಾರನ ಜಾಣ್ಮೆ ಎದ್ದು ಕಾಣುತ್ತದೆ.

ಪುಟ: 128 ₹165

ಕಥೆ

ವಿಕಾಸ್ ನೇಗಿಲೋಣಿ ಅವರ 'ಅಂತಿಮ ಯಾತ್ರೆ'

ತೀರ್ಥಹಳ್ಳಿ ಸಮೀಪ ನೇಗಿಲೋಣಿ ಊರು. ಓದಿದ್ದು ಉಡುಪಿ ಮತ್ತು ಉಜಿರೆಯಲ್ಲಿ. ವಿವಿಧೆಡೆ ಪತ್ರಕರ್ತನಾಗಿ ಕೆಲಸ ಮಾಡಿದ್ದಾರೆ. ಧಾರಾವಾಹಿಗಳಿಗೆ ಕಥೆ, ಚಿತ್ರಕಥೆ, ಸಂಭಾಷಣೆ, ಶೀರ್ಷಿಕೆ ಸಾಹಿತ್ಯ ಬರೆದಿದ್ದಾರೆ. ಪ್ರಕಟಿತ ಕಥಾ ಸಂಕಲನಗಳು 'ಮಳೆಗಾಲ ಬಂದು ಬಾಗಿಲು ತಟ್ಟಿತು', 'ಬಸವರಾಜ ವಿಲಾಸ' ಮತ್ತು 'ಬ್ರಹ್ಮಚಾರಿಯ ಹೆಂಡತಿ'. ಪ್ರಕಟಿತ ಅಡಾಲಸೆಂಟ್ ಆತ್ಮಚರಿತ್ರೆಯ ಹೆಸರು-'ರಥಬೀದಿ ಎಕ್ಸ್‌ಪ್ರೆಸ್'.

prajavani.net/short-story

ಪ್ರಜಾವಾಣಿ
ದೀಪಾವಳಿ ವಿಶೇಷಾಂಕ 2025
ಕಥಾ–ಕವನ ಸ್ಪರ್ಧೆ
ತೀರ್ಪುಗಾರರ ಮೆಚ್ಚುಗೆ ಪಡೆದ ಕಥೆ ಹಾಗೂ ಕವನ

ಉತ್ತರ ಕನ್ನಡ ಜಿಲ್ಲೆಯ ಅಂಕೋಲದವರು. 'ಮೀನುಪೇಟೆಯ ತಿರುವು' ಹಾಗೂ 'ಸಂಬಾರಬಟ್ಟಲ ಕೊಡಿಸು' ಇವರ ಕವನ ಸಂಕಲನ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ವಿಭಾ ಸಾಹಿತ್ಯ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳು ಮುಡಿಗೇರಿವೆ. ಮೈಸೂರು, ಮಂಗಳೂರು, ಬೆಂಗಳೂರು, ಧಾರವಾಡ ವಿಶ್ವವಿದ್ಯಾಲಯಗಳಿಗೆ ಇವರ ಲೇಖನ ಹಾಗೂ ಕವಿತೆಗಳು ಪಠ್ಯವಾಗಿವೆ.

ಕವನ

ರೇಣುಕಾ ರಮಾನಂದ ಅವರ 'ತುಲಾಭಾರ'

www.prajavani.net/poetry

ಸಾದರ ಸ್ವೀಕಾರ

ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರತಿಕ್ರಿಯೆಗಳನ್ನು ಕಳಿಸಲು bhanuvara@prajavani.co.in

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಗುಂಡನ ಕಿತಾಪತಿ

majakoora@prajavani.co.in

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ವಾಸ	+	ಹಾಲು	+	ಕು	=	
2	ಪತ್ರ	+	ನವ	+	ಪು	=	
3	ರಮಾ	+	ದನ	+	ವಿ	=	
4	ಜೂನ	+	ನಾಕು	+	ತ	=	
5	ಬರಿ	+	ನಾದ	+	ಥ	=	

ವನಮಹೋತ್ಸವಕ್ಕೆಂದು ಕಾರ್ಡ್‌ಬೋರ್ಡ್‌ನಲ್ಲಿ ಮರವೊಂದರ ಕಲಾಕೃತಿ ತಯಾರಿಸಿ, ಅದರ ಮೇಲೆ 'ಮರ ಉಳಿಸಿ' ಎನ್ನುವ ಬೋರ್ಡ್ ಹಾಕಿದ್ದರು. ಕಾರ್ಯಕ್ರಮ ಮುಗಿದ ಬಳಿಕ ಬೇರೊಂದು ಕಾರ್ಯಕ್ರಮಕ್ಕೆ ಈ ವೃಕ್ಷವನ್ನು ಕೊಂಡೊಯ್ಯಬೇಕಿತ್ತು. ಕೊಡಲಿಯೊಂದಿಗೆ ಬಂದ ಗುಂಡ, ಮರ ಉಳಿಸಿ ಎನ್ನುವ ಬೋರ್ಡ್ ನೋಡಿ, ಅದನ್ನಷ್ಟೇ ಉಳಿಸಿ ಉಳಿದ ಕಲಾಕೃತಿಯನ್ನು ಕತ್ತರಿಸಿ ಕೊಂಡೊಯ್ದ.



ಜಾಣಪದ ಆಟ

ಇಲ್ಲಿ ಕೊಟ್ಟಿರುವ ಆರಂಭದ ಹಾಗೂ ಕೊನೆಯ ಅಕ್ಷರಗಳು ಕಕಾ ಬಳ್ಳಿಯಿಂದಲೇ ಆಗಿವೆ. ನೀವು ನಡುವೆ 'ಪದಪಟ್ಟಿ'ಯಿಂದ ಇನ್ನೊಂದು ಅಕ್ಷರ ತುಂಬಿ ಅರ್ಥಬದ್ಧ ಪದ ಮಾಡಿ.

ಪದಪಟ್ಟಿ				
ನ	ಣಿ	ಳ	ರಿ	ದ
ಡ	ಲ	ಚ	ಲು	ಡು
ನಿ	ಟ	ಣೆ	ಡಿ	ಣ

1	ಕೋ		ಕೆ
2	ಕಾ		ಕೆ
3	ಕು		ಕೆ
4	ಕು		ಕೆ
5	ಕಿ		ಕಿ
6	ಕ		ಕ
7	ಕೆ		ಕು
8	ಕು		ಕ
9	ಕೊ		ಕು
10	ಕ		ಕೆ
11	ಕು		ಕು
12	ಕ		ಕು
13	ಕೀ		ಕ
14	ಕೆ		ಕು
15	ಕೆ		ಕು

2. ಇಲ್ಲಿ ಕೊಟ್ಟಿರುವ 'ಸಾವ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಸಾ	ವ		
2	ಸಾ	ವ		
3	ಸಾ	ವ		
4	ಸಾ	ವ		
5	ಸಾ	ವ		

ಅಕ್ಷರಪಟ್ಟಿ				
ಯ	ಕಾ	ವ	ರ	ಸು
ಕಾ	ಧಾ	ರಿ	ಶ	ನ

ಮೋಜಿನ ಇಂಗ್ಲಿಷ್

ಒಂದು ವ್ಯಂಜನದ ಮುಂದೆ ಎರಡು ಸ್ವರಾಕ್ಷರ ಬರುವ ಮೂರಕ್ಷರಗಳ ಹತ್ತು ಪದ ಹುಡುಕಿ.

ಉದಾ: GOA

1			
2			
3			
4			
5			
6			
7			
8			
9			
10			

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಅಕ್ಕರೆ ಅಜ್ಜಿ

ನಮ್ಮಜ್ಜಿಗೆ ಈಗ ಎಂಬತ್ತು
ಆದರೂ ನೋಡಿರಿ ಗಮ್ಮತ್ತು!
ಪುಸ್ತಕ ಕೊಟ್ಟರೆ ಓದುವವಳು
ರೇಡಿಯೋ ಹಾಡನು ಕೇಳುವವಳು
ಪಟಪಟ ಮಾತನು ಆಡುವವಳು
ಕಟಕಟ ರೊಟ್ಟಿಯ ತಿನ್ನುವವಳು
ಮಕ್ಕಳ ಬಳಗವ ಕರೆಯುವವಳು
ಅಕ್ಕರೆಯಿಂದ ಕಥೆ ಹೇಳುವವಳು
ಬಡಿಗೆಯೇ ಇಲ್ಲದೆ ನಡೆಯುವವಳು
ಅಡಿಗೆಯ ಬಗೆಯನು ತಿಳಿಸುವವಳು
ಮಕ್ಕಳ ಮುದ್ದನು ಮಾಡುವವಳು
ಅವರಿಗೆ ಮದ್ದನು ಕುಡಿಸುವವಳು
ಮಕ್ಕಳ ಮನವನು ಗೆದ್ದವಳು
ಅಕ್ಕರೆ ಅಜ್ಜಿ ಎನಿಸಿಹಳು

ಬೆಡಗಿನ ಭಾಗಾಕಾರ

ನೂರರೊಳಗಿನ ಒಂದು ಸಂಖ್ಯೆ ಬರೆದುಕೊಂಡು ಅದರ ಕೆಳಗೆ ಆ ಸಂಖ್ಯೆಯ ವಿಲೋಮ ಸಂಖ್ಯೆ ಬರೆದು ಎರಡನ್ನೂ ಕೂಡಿದಾಗ ಬರುವ ಮೊತ್ತ 11ರಿಂದ ಪೂರ್ಣ ಭಾಗವಾಗುತ್ತದೆ. ಹಾಗೆ ಆ ಸಂಖ್ಯೆಯ ವಿಲೋಮ ಸಂಖ್ಯೆಯನ್ನು ಪಕ್ಕದಲ್ಲಿಟ್ಟು 11ರಿಂದ ಭಾಗಿಸಿದರೂ ಪೂರ್ಣಭಾಗವಾಗುತ್ತದೆ.

ಉದಾ 1:

```
 54
 45
----
 99

11)99(9
   99
   --
   00

11)5445(495
   44
   ---
    104
     99
   ----
   0055
     55
   ----
    000
```

ಮ್ಯಾಚಿಕ್

ಇಲ್ಲಿ ಎರಡು ಕಡ್ಡಿಗಳನ್ನು ಮಾತ್ರ ಸ್ಥಳಾಂತರಿಸಿ ಈಗಿರುವ ಸಂಖ್ಯೆಗಿಂತ ದೊಡ್ಡ ಸಂಖ್ಯೆ ಮಾಡಿ.



ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಕಾಗೆಯಗೂಡು 2.ನವೀಕರಣ 3.ಜನಾನುರಾಗಿ 4.ನಕಲಿಖಾತೆ 5.ಭಾವಲಹರಿ
ಮೋಜಿನ ಇಂಗ್ಲಿಷ್: 1.FOCUS 2.SUPER 3.CAMEL 4.REFER 5.LEVEL 6.RIVER 7.BONUS 8.WOMEN 9.SEVEN 10.REGAL
ಜಾಣಪದ ಆಟ: 1.ಹೆಗ್ಗಣ 2.ಬೆಳ್ಳುಳ್ಳಿ 3.ಹುತ್ತರಿ 4.ಗಜ್ಜರಿ 5.ಮದ್ದಾನೆ 6.ಮನ್ನಣೆ 7.ಚಿತ್ತಾರ 8.ಕತ್ತಲೆ 9.ಅಚ್ಚರಿ 10.ಇಡ್ಲಿ
ಜಾಣಪದ ಆಟ 2: 1.ಪರಮಾಣು 2.ಪರಮಾತ್ಮ 3.ಪರಮಾನ್ನ 4.ಪರಕೀಯ 5.ಪರದಾಟ

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಶ್ರೀನಿಧಿ ಉ.ಮುದಗಲ್ಲ, ಬಾಗಲಕೋಟೆ

ನಿಶ್ವಿಕಾ ಎಸ್.ಬಿ., ಗದಗ

ತುಳಸಿಕೃಷ್ಣ ಎಂ.ಹೊನ್ನೂರು, ಚಿತ್ರದುರ್ಗ

ವೇದಿತ್, ಮೈಸೂರು

ವೇದಶ್ರೀ ವಿಠ್ಠಲ ಜೋಡಟ್ಟಿ, ಜಮಖಂಡಿ

ಪ್ರಯಾಗ್ ಬಿ., ಕೋಲಾರ

ಮೆಹ್ರಾನ್‌ಘರ್ ಕೋಟೆಯ ಭವ್ಯ ನೋಟ

ಪ್ರವಾಸ

ಭಯವನ್ನು ಓಡಿಸಿದ ಏಕಾಂಗಿ ಪ್ರವಾಸ

ಮನೆ, ಗಂಡ, ಮಕ್ಕಳೇ ಪ್ರಪಂಚ ಎಂದುಕೊಂಡ ಮಹಿಳೆಯರ ಸಂಖ್ಯೆ ದೊಡ್ಡದೇ ಇದೆ. ಒಂದೆರಡು ದಿನ ಪ್ರವಾಸ ಹೊರಟರೆ ಇಡೀ ಕುಟುಂಬವೇ ತೊಂದರೆಗೆ ಸಿಲುಕಿಬಿಡುತ್ತದೆ ಎನ್ನುವ ಮನೋಭಾವವಿದೆ. ಮಹಿಳೆಯರು ಏಕಾಂಗಿಯಾಗಿ ಪ್ರವಾಸ ಮಾಡುವುದು ಅಪಾಯ ಎನ್ನುವ ಮಾತು ಸಾಮಾನ್ಯ. ಇಂಥ ಭೀತಿಯನ್ನು ಮೀರಿದ ಲೇಖಕಿಯ ಅನುಭವ ಕಥನ ನಿಮ್ಮ ಓದಿಗಾಗಿ...

• ಶುಭಾ ಖಟಾವಕರ ಮೈತ್ರಸ್

ನಾಗಾಲೋಟದಿಂದ ಓಡುತ್ತಿದ್ದ ತೆರೆದ ಜೀಪು ಚಂಗನೆ ಎಗರಿ, ವೇಗದಿಂದ ಮುಂದೆ ಸಾಗುತ್ತಿತ್ತು. ಅದೊಂದು ಮರಳುಗಾಡು. ತಗ್ಗು ದಿಣ್ಣೆಗಳಲ್ಲಿ ಪಯಣ. ಮುಂದೆ ಆಳವಾದ ಮರಳಿನ ಹಳ್ಳ ಎದುರಾಯಿತು. ಜೀಪಿನ ಹಿಂಬದಿಯಲ್ಲಿ ನಿಂತಿದ್ದ ನಾನು ಇನ್ನೇನು ಭಯದಿಂದ ಕೂಗಬೇಕು, ಅಷ್ಟರಲ್ಲಿ ಜೀಪು ಹಳ್ಳಕ್ಕೆ ಧುಮುಕಿತು. ಭಯ ತುಂಬಿದ ನನ್ನ ಕೂಗು ಹರ್ಷೋದ್ಗಾರವಾಗಿ ಬದಲಾಯಿತು. ಅಷ್ಟೇ ವೇಗದಿಂದ ಜೀಪು ಆ ಹಳ್ಳದಿಂದ ಮೇಲೇರಿತು. ಹೃದಯವೇ ಬಾಯಿಗೆ ಬಂದಂತಹ ಅನುಭವ. ತಿರುವು ಮುರುವುಗಳಲ್ಲಿ ಓಲಾಡುತ್ತ ಆ ಜೀಪು ಸೂರ್ಯಾಸ್ತದ ಪಾಯಿಂಟ್‌ಗೆ ನನ್ನನ್ನು ತಲುಪಿಸಿತು. ಸ್ವಲ್ಪ ಹೊತ್ತಿನಲ್ಲೇ ಕಂಡ ಸೂರ್ಯಾಸ್ತ ರೋಮಾಂಚನಕಾರಿಯಾಗಿತ್ತು. ಅದು ಪ್ರವಾಸದ ಪ್ರಯಾಸವನ್ನು ನೀಗಿಸಿ, ಸಾರ್ಥಕಗೊಳಿಸಿತ್ತು. ಆಗ ನಾನು ನನ್ನ ಭಯವೊಂದನ್ನು ಜಯಿಸಿದ್ದೆ!

ಜೈಪುರದ ಹೆಮ್ಮೆ ಹವಾ ಮಹಲ್

ತೆರೆದ ಜೀಪ್‌ಗಳಲ್ಲಿ ಹಿಂದೆ ನಿಂತು ಜನರು ಕೂಗುತ್ತ, ಕೇಕೆ ಹಾಕುತ್ತ ಜೀಪ್ ಸಫಾರಿ ಅಥವಾ ಡ್ಯೂನ್ ಬ್ಯಾಶಿಂಗ್ ಮಾಡುವುದು ಭೀತಿದಾಯಕ ಅನುಭವ ಇರಬಹುದು ಎಂದೆನ್ನಿಸುತ್ತಿತ್ತು. ಆ ಹೆದರಿಕೆಯನ್ನು ಹೋಗಲಾಡಿಸಿಕೊಳ್ಳಬೇಕು ಎಂಬ ಆಸೆ ಇತ್ತು. ಜೀವನ, ನಾಗಾಲೋಟದ ತಗ್ಗು ದಿಣ್ಣೆಗಳ ಏರಿಳಿತದ ಪ್ರವಾಸವಲ್ಲವೆ? ಅನೇಕ ಬಾರಿ ನಮ್ಮ ಅವ್ಯಕ್ತ ಭೀತಿಗಳು ನಮ್ಮನ್ನು ಮುಂದುವರಿಯದಂತೆ ತಡೆಯುತ್ತಿರುತ್ತವೆ. ಅವುಗಳನ್ನು ಮೀರುವುದು ಅಥವಾ ಬಿಡುವುದು ನಮ್ಮ ಕೈಯಲ್ಲೇ ಇದೆ.

ಹತ್ತಾರು ಪ್ರೇರಣದಾಯಕ ಲೇಖನಗಳನ್ನು, ಸುದ್ದಿಗಳನ್ನು ಓದಿದ್ದೇನೆ. ವಯಸ್ಸಾದವರು ಸಾಹಸ ಕ್ರೀಡೆಗಳಲ್ಲಿ ಭಾಗವಹಿಸುವುದು, ಹಿಮಾಲಯದ ಚಾರಣ ಮಾಡುವುದು, ಬಂಜಿ ಜಂಪಿಂಗ್, ಪ್ಯಾರಾ ಸೇಲಿಂಗ್ ಇತ್ಯಾದಿ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ನೋಡಿ ಅವರ ಬಗ್ಗೆ ಅಭಿಮಾನ ಮೂಡುತ್ತಿತ್ತು. ನಾನೂ ನನ್ನ ಕೆಲವು ಭೀತಿಗಳನ್ನು ಹೋಗಲಾಡಿಸಿಕೊಳ್ಳಬೇಕು ಎಂದು ಅನಿಸಿದ್ದು ಸುಳ್ಳಲ್ಲ. ಇತ್ತೀಚಿನ ನನ್ನ ರಾಜಸ್ಥಾನದ ಏಕಾಂಗಿ ಪ್ರವಾಸದಲ್ಲಿ ಅಂಥ ಅವಕಾಶ ಒದಗಿಬಂದಿತು.

ಜೈಪುರದಿಂದ ಆರಂಭವಾದ ಒಂಬತ್ತು ದಿನಗಳ ಪ್ರವಾಸ, ಮಾರವಾಡ ಮತ್ತು ಮೇವಾಡದ ಪುಷ್ಕರ್, ಅಜ್ಮೇರ್, ಉದಯಪುರ, ಜೋಧಪುರ, ಥಾರ್ ಮರುಭೂಮಿಯ ಡೆಸರ್ಟ್ ಸಫಾರಿ, ಜೈಸಲ್ಮೇರ್, ಅಂತಿಮವಾಗಿ ಬಿಕಾನೇರ್‌ನಲ್ಲಿ ಕೊನೆಗೊಂಡಿತು. ರಾಷ್ಟ್ರೀಯ ಸ್ಮಾರಕಗಳು, ಕೋಟೆ ಕೊತ್ತಲಗಳು, ಅರಮನೆಗಳು, ದೇವಾಲಯಗಳು, ನದಿಗಳು, ಗಿರಿ ವನಗಳು, ಕೊಳಗಳು, ಮರುಭೂಮಿ ಎಲ್ಲವೂ ಮನದಲ್ಲಿ ಹಚ್ಚ ಹಸಿರಾಗಿ ಉಳಿದಿವೆ. ನನ್ನ ಪ್ರವಾಸದುದ್ದಕ್ಕೂ ಅಲ್ಲಿನ ಸಂಸ್ಕೃತಿ, ಆಚಾರ ವಿಚಾರ, ರಾಜಕೀಯ ಪರಿಸ್ಥಿತಿ ಎಲ್ಲವನ್ನೂ ಚಾಲಕನ ಜೊತೆ ದಿನವೂ ಚರ್ಚಿಸುತ್ತಿದ್ದೆ.

ಒಂಟೆಗಳು, ಮರಳು ದಿಬ್ಬಗಳು, ಸಾಂಪ್ರದಾಯಿಕ ಉಡುಪುಗಳನ್ನು ಧರಿಸಿ ನೃತ್ಯ ಪ್ರದರ್ಶಿಸುವ ಕಲಾವಿದರು, ಇತ್ಯಾದಿಗಳನ್ನು ಜೈಸಲ್ಮೇರ್ ಬಳಿಯ ಸ್ಯಾಮ್ ಮರುಭೂಮಿಗೆ ಭೇಟಿ ನೀಡಿದಾಗ ಅಪೇಕ್ಷಿಸಿಯೇ ಇದ್ದೆ. ರಾಜಸ್ಥಾನ ಪ್ರವಾಸದ ಭಾಗವಾದ ಡೆಸರ್ಟ್ ಸಫಾರಿ, ಅನೇಕ ಕಾರಣಗಳಿಗೆ ಅಚ್ಚುಮೆಚ್ಚಿನದ್ದಾಗಿದೆ. ಮೇಲೆ ತಿಳಿಸಿದಂತೆ ಸ್ಯಾಮ್ ಮರುಭೂಮಿಯಲ್ಲಿ ನನ್ನ ಜೀಪ್ ಸಫಾರಿಯ ಭೀತಿ ದೂರವಾಯಿತು.

ಒಂಟೆಯ ಮೇಲೆ ಕುಳಿತುಕೊಳ್ಳುವುದು ಯಾವಾಗಲೂ ನನಗೆ ಭಯದ ಅನುಭವ ಎನ್ನಿಸಿದ್ದುಂಟು. ಸ್ಯಾಮ್ ಮರುಭೂಮಿಯ ಲಿಮ್ರಾ ಡೆಸರ್ಟ್ ಕ್ಯಾಂಪ್‌ನಲ್ಲಿ ಒಂದು ರಾತ್ರಿ ತಂಗಿದ್ದ ನಾನು, ಒಂಟೆ ಸವಾರಿಯ ಇಚ್ಛೆಯನ್ನು ಸಿಬ್ಬಂದಿ ಬಳಿ ಹೇಳಿದೆ. ಅದಕ್ಕೆ ಅವನು ಬೆಳಿಗ್ಗೆ ಆರು ಗಂಟೆಗೆ ಸಿದ್ಧವಾಗಿರಲು ತಿಳಿಸಿ, ಒಂಟೆ ಮೇಲೆ ಕರೆದೊಯ್ದು ಸೂರ್ಯೋದಯದ ದರ್ಶನ ಮಾಡಿಸುವುದಾಗಿ ಮಾತು ಕೊಟ್ಟ. ಒಂಟೆ ಸವಾರಿಯ ಕಲ್ಪನೆಯ ಸಂಭ್ರಮದಿಂದಾಗಿ ರಾತ್ರಿಯಿಡೀ ನಿದ್ದೆ ಮಾಡಲಿಲ್ಲ. ಹೇಗೋ ಏನೋ ಎಂಬ ಅಳುಕೂ ನನ್ನಲ್ಲಿತ್ತು. ಬೆಳಿಗ್ಗೆ ಐದೂವರೆಗೆ ತಯಾರಾಗಿ ಡೆಸರ್ಟ್ ಕ್ಯಾಂಪ್‌ನ ಸಿಬ್ಬಂದಿ ಬರುವ ಹಾದಿಯನ್ನೇ ಕಾಯುತ್ತಿದ್ದೆ. ನನಗೆ ಮಾತು ಕೊಟ್ಟಿದ್ದ ಆತ ಆರು ಗಂಟೆಗೆಲ್ಲ ತಯಾರಾಗಿ ಬಂದ.

ಜೀಪ್‌ನಲ್ಲಿ ಸ್ವಲ್ಪ ದೂರ ಹೋದ ಮೇಲೆ ಅಲ್ಲಿ ಜಿಪ್ಸಿ ಹುಡುಗರು ಒಂಟೆಗಳೊಂದಿಗೆ ಕುಳಿತಿದ್ದನ್ನು ಕಂಡೆ. ಸುಮಾರು ಹತ್ತು ವರ್ಷ ವಯಸ್ಸಿನ ಒಬ್ಬ ಜಿಪ್ಸಿ ಹುಡುಗ ನಮ್ಮನ್ನು ಕಂಡು ಮುಂದೆ ಬಂದ. ಜೀಪ್‌ನಿಂದ ಇಳಿದ ನನ್ನನ್ನು ಒಂಟೆಯೊಂದರ ಬಳಿ ಕರೆದೊಯ್ದ. ಅದು ಅತ್ತಿಂದಿತ್ತ ಮಿಸುಕಾಡಿ ಹೂಂಕರಿಸಿತು. ಅದನ್ನು ಕಂಡ ನನಗೆ ಒಂಟೆ ಸವಾರಿ ಸಹವಾಸವೇ ಬೇಡ ಎಂದೆನ್ನಿಸಿ, ಮರಳಿ ಕ್ಯಾಂಪ್‌ಗೆ ಹೋಗಬೇಕೆಂಬ ಇಚ್ಛೆ ತೀವ್ರವಾಯಿತು. ಕೈ ಕಾಲುಗಳು ನಡುಗಲಾರಂಭಿಸಿದ್ದವು. ನನ್ನೊಂದಿಗೆ ಬಂದ ಡೆಸರ್ಟ್ ಕ್ಯಾಂಪ್‌ನ ಸಿಬ್ಬಂದಿ, 'ನೀವು ಮನಸ್ಸು ಮಾಡಿ ಇಷ್ಟು ದೂರ ಬಂದಿದ್ದೀರಿ, ಹೆದರಬೇಡಿ' ಎಂದು ಹುರಿದುಂಬಿಸಿದ.

ಒಂಟೆ ಏರುವ ಕಾರ್ಯಕ್ರಮ ಶುರುವಾಯ್ತು. ಒಂಟೆ ನೆಲದಮೇಲೆ ಕುಳಿತಿತ್ತಾದರೂ, ಅದರ ಡುಬ್ಬ ನೆಲದಿಂದ ಸುಮಾರು ನಾಲ್ಕು ಅಡಿ ಎತ್ತರದಲ್ಲಿತ್ತು. ಹೇಗೋ ಕಸರತ್ತು ಮಾಡಿ ಸಿಬ್ಬಂದಿ ಮತ್ತು ಆ ಪುಟ್ಟ ಬಾಲಕನ ಸಹಾಯದಿಂದ ನನ್ನ ಭಾರೀ ಶರೀರವನ್ನು ಅದರ ಡುಬ್ಬದ ಮೇಲೆ ಸ್ಥಾಪಿಸಿದೆ. ಅದು ಮಿಸುಕಾಡಲಾರಂಭಿಸಿತು. ಆಗಿಂದಾಗಲೇ ಇಳಿದು ಓಡಬೇಕೆನಿಸಿತು. ಆ ಬಾಲಕ ಇನ್ನು ಒಂಟೆ ಏಳಲಿದೆಯೆಂದೂ, ನೀವು ಹಿಂದಕ್ಕೆ ಬಾಗಿ ಕುಳಿತುಕೊಳ್ಳಿರೆಂದು ಕಟ್ಟುನಿಟ್ಟಾಗಿ ಆಜ್ಞಾಪಿಸಿದ. ಅಕ್ಕಪಕ್ಕಕ್ಕೆ ಓಲಾಡುತ್ತ ಆ ಒಂಟೆ ಎದ್ದು ನಿಲ್ಲಲಾರಂಭಿಸಿತು.

ರಾಜರುಗಳ ನೆನಪಿನ ಸ್ಮಾರಕ ಬಡಾ ಬಾಗ್

ಮರುಕ್ಷಣವೇ ಬೀಳಲಿರುವೆನೆಂಬ ಭಾವನೆ ನನಗೆ. ಅಂತೂ ಇಂತೂ ಆ ಒಂಟೆ ಎದ್ದು ನಿಂತಿತು. ಅದರ ಮೇಲೆ ಕುಳಿತುಕೊಳ್ಳುವುದೇ ಒಂದು ಹರಸಾಹಸವೆಂದು ಅನ್ನಿಸಲಾರಂಭಿಸಿತು.

ಬಳುಕುತ್ತ, ಓಲಾಡುತ್ತ ಮರಳಿನ ದಿಣ್ಣೆಗಳ ಮೇಲೆ ಹೆಜ್ಜೆಯಿಡುತ್ತ ಒಂಟೆ ಮುಂದೆ ಸಾಗಿದಂತೆಲ್ಲ ಮರಳುಗಾಡಿನ ಹಡಗು ಎಂಬ ಹೆಸರಿನ ಇನ್ನೊಂದು ಅರ್ಥ ಹೊಳೆಯಿತು. ಆಗ ಬೀಳಲಿರುವೆನೋ, ಈಗ ಬೀಳಲಿರುವೆನೋ ಎಂಬ ಭೀತಿಯಿಂದಲೇ ಜೀವ ಕೈಯಲ್ಲಿ ಹಿಡಿದು ಕಣ್ಣುಮುಚ್ಚಿ ಕುಳಿತ ನನಗೆ, 'ಸಾಮ್ನೆ ದೇಖೋ' ಎಂದು ಆ ಬಾಲಕ ಕೂಗಿದಾಗಲೇ ಕಣ್ಣು ಬಿಟ್ಟಿದ್ದು. ಎದುರಿಗಿನ ಸೂರ್ಯೋದಯದ ನಯನ ಮನೋಹರ ದೃಶ್ಯ ನನ್ನ ಅಳುಕನ್ನು ಮರೆಸಿತು. ಆ ಬಾಲಕ ನನ್ನ ಮತ್ತು ಸೂರ್ಯೋದಯದ ಅನೇಕ ಫೋಟೊಗಳನ್ನು ಕ್ಲಿಕ್ಕಿಸಿದ. ಆ ಒಂಟೆ ಮೇಲೆ ಒಂದು ರೌಂಡ್ ಹೊಡಿಸಿಕೊಂಡು ಬಂದ ನಂತರ, ಹತ್ತಿದಷ್ಟೇ ಕಷ್ಟಪಟ್ಟು ಇಳಿಯುವ ಕಾರ್ಯಕ್ರಮವನ್ನು ಕೂಡ ನಡೆಯಿತು.


ಸ್ಯಾಮ್ ಮರುಭೂಮಿಯಲ್ಲಿ ಸೂರ್ಯೋದಯದ ಸುಂದರ ನೋಟ

ಜೀಪ್ ಮತ್ತು ಒಂಟೆ ಸವಾರಿ ಮೇಲ್ನೋಟಕ್ಕೆ ಸಾಧಾರಣ ಎನ್ನಿಸಿದರೂ ನನ್ನ ಅವ್ಯಕ್ತ ಭೀತಿಯ ದ್ಯೋತಕಗಳಾಗಿದ್ದವು. ಅಂತೆಯೇ ನನ್ನ ಏಕಾಂಗಿ ಪ್ರವಾಸ ಕೂಡ. ರಾಜಸ್ಥಾನದಾದ್ಯಂತ ಒಬ್ಬಳೇ ಸಂಚರಿಸಿದ ನನಗೆ ಎಲ್ಲೋ ಒಂದು ಕಡೆ ನನ್ನನ್ನು ನಾನೇ ಕಂಡುಕೊಳ್ಳುವಂತಾಯಿತು. ಅನೇಕ ಬಾರಿ ಮಹಿಳೆಯರಾದ ನಾವು ನಮ್ಮನ್ನು ನಾವೇ ಭೀತಿ ಎಂಬ ಸರಪಳಿಯಿಂದ ಕಟ್ಟಿ ಹಾಕಿಕೊಳ್ಳುತ್ತೇವೆ. 'ನನ್ನಿಂದಲೇ ಸಂಸಾರ ನಡೆಯುತ್ತಿದೆ, ನಾನು ಸುತ್ತಲು ಹೊರಟರೆ ಸಂಸಾರದ ಗತಿ ಏನು' ಎಂಬ ಭೀತಿ. ಏಕಾಂಗಿ ಪ್ರವಾಸ ಹೋಗುವುದಾ? ಜನರು, ಸಂಬಂಧಿಕರು ಏನೆಂದುಕೊಂಡಾರು ಎಂಬ ಭೀತಿ. ನಮ್ಮ ಆರಾಮದಾಯಕ ವಲಯದಿಂದ ಹೊರಬಾರದಂತೆ ಈ ಭೀತಿಗಳು ನಮ್ಮನ್ನು ತಡೆಯುತ್ತಿರುತ್ತವೆ. ಈ ಸರಪಳಿಯ ಬಂಧನವನ್ನು ನಾವೇ ಕಳಚಿಕೊಳ್ಳಬೇಕು. ಜಗತ್ತು ವಿಶಾಲವಾಗಿದೆ. ಅದರ ಆಳ ಅಗಲಗಳನ್ನು ನಮ್ಮ ಜೀವಿತಾವಧಿಯಲ್ಲಿ ಅಳೆಯುವುದು ಅಸಾಧ್ಯವಾದರೂ ಒಂದು ಕಿರು ಪ್ರಯತ್ನ ಮಾಡುವುದರಲ್ಲಿ ಸಮಸ್ಯೆಯೇನೂ ಇಲ್ಲ.

ನಾನು ನನ್ನ ಏಕಾಂಗಿ ಪ್ರವಾಸವನ್ನು ಮುಗಿಸಿಕೊಂಡು ಮನೆಗೆ ಮರಳಿದೆ. ನನ್ನಲ್ಲಿ ತುಂಬಿ ತುಳುಕುತಿದ್ದ ಆತ್ಮವಿಶ್ವಾಸವನ್ನು ಕಂಡ ಗಂಡ, ಮಗಳು ಚಕಿತರಾದರು. ನಾನು ನನ್ನ ಅನಗತ್ಯ ಭಯ-ಭೀತಿಯನ್ನು ಕಳೆದುಕೊಂಡಿದ್ದೆ!

ಜೈಸಲ್ಮೇರ್ ಕೋಟೆಯಿಂದ ಕಾಣುವ ದೃಶ್ಯ

ADVERTORIAL

ಫ್ರಾನ್ಸ್ ಚಿರಕಾಲ ಬೆಳಗಲಿ

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

"ನಾನು ಮುಂಚೆ ದೆಹಲಿಯಲ್ಲಿ ವಾಸಿಸುತ್ತಿದ್ದೆ. ಅದು ಚೆನ್ನಾಗಿಯೇ ಇತ್ತು. ಆದರೆ, ಮುಂಬೈ ನನ್ನ ಹೃದಯಕ್ಕೆ ಹೆಚ್ಚು ಆಪ್ತ" ಎಂದು ಅಚ್ಚ ಹಿಂದಿಯಲ್ಲಿ ಹೇಳಿದರು ಮುಂಬೈನಲ್ಲಿ ಫ್ರೆಂಚ್ ಕಾನ್ಸುಲ್ ಜನರಲ್ ಆಗಿರುವ ಝಾಂ-ಮಾರ್ಕ್-ಸೇರೆ-ಶಾರ್ಲೆ. ಅವರಾಡಿದ ಈ ಮಾತುಗಳು ತಾಜ್‌ಮಹಲ್ ಪ್ಯಾಲೆಸ್ ಹೋಟೆಲ್‌ನಲ್ಲಿ ನಗೆ ತುಳುಕಿಸಿತು. ಅಂದು ಜುಲೈ 14– ಬಾಸ್ತೀ ದೇ-ವೈನ್, ಸಂಸ್ಕೃತಿ, ಭಾರತ ಹಾಗೂ ಫ್ರಾನ್ಸ್ ನಡುವಿನ ಮಿತ್ರತ್ವವನ್ನು ಸಂಭ್ರಮಿಸಲು ಏರ್ಪಡಿಸಿದ್ದ ಸಂಜೆಯ ವಿಶೇಷ ಕಾರ್ಯಕ್ರಮ. ಎರಡೂ ದೇಶಗಳ ರಾಷ್ಟ್ರಗೀತೆಗಳು ಮೊಳಗಲು ಶುರುಮಾಡಿದಾಗ ನಾವೆಲ್ಲರೂ "ವೀವ್ ಲಾ ಫ್ರಾನ್ಸ್!" ಎಂದು ಹರ್ಷೋದ್ಗಾರ ಮಾಡಿ ಫ್ರಾನ್ಸ್‌ನ ಸ್ಫೂರ್ತಿಯನ್ನು ಆವಾಹಿಸಿಕೊಂಡೆವು.

ಫ್ರಾನ್ಸ್ ದೇಶವು ಕ್ರಾಂತಿಗಳಿಗೆ ಹೆಸರಾದ ನಾಡು. ಜೊತೆಗೆ, ಪ್ರೀತಿ, ಸೌಂದರ್ಯ ಹಾಗೂ ಬದುಕನ್ನು ಪರಿಪೂರ್ಣವಾಗಿ ಆನಂದಿಸುವುದಕ್ಕೂ ಪ್ರಸಿದ್ಧಿ ಪಡೆದ ನೆಲ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ನಾನು ಆ ದೇಶವನ್ನು ಎಲ್ಲಾ ಋತುಮಾನಗಳಲ್ಲೂ ಪ್ಯಾರಿಸ್‌ನಿಂದ ಪ್ರೊವಾನ್ಸ್‌ವರೆಗೆ, ಟೂಲೂಝ್‌ನಿಂದ ಶಾಮೊನಿವರೆಗೆ ಸಂಚರಿಸಿದ್ದೇನೆ. ಅಲ್ಲಿನ ಪ್ರತಿಯೊಂದು ಪ್ರವಾಸವೂ ನನಗೆ ಕೇವಲ ನೋಡುವಿಕೆಯನ್ನಷ್ಟೇ ಲಭ್ಯವಾಗಿಸಿಲ್ಲ; ನಿಜವಾಗಿಯೂ ಅನುಭವಗಳನ್ನು ಮೊಗೆಮೊಗೆದು ನೀಡಿದೆ. ಯಾವುದೇ ಪ್ರವಾಸಿಯು ಫ್ರಾನ್ಸ್‌ನಲ್ಲಿ ಸ್ಥಳಗಳಿಗೆ ಮಾತ್ರ ಭೇಟಿ ನೀಡುವುದಿಲ್ಲ; ಅಲ್ಲಿ ಖಾದ್ಯ-ಪಾನೀಯಗಳನ್ನು ಆಸ್ವಾದಿಸುತ್ತಾನೆ, ಧ್ವನಿಗಳಿಗೆ ಕಿವಿಯಾಗುತ್ತಾನೆ ಹಾಗೂ ಸುತ್ತಲ ವಾತಾವರಣದೊಂದಿಗೆ ತಾದಾತ್ಮ್ಯ ಹೊಂದುತ್ತಾನೆ.

ನನ್ನಮಟ್ಟಿಗೆ ಹೇಳುವುದಾದರೆ, ಫ್ರಾನ್ಸ್, ಅಚ್ಚಳಿಯದಂತಹ ಹಲವಾರು 'ಮೊದಲ ಅನುಭವ'ಗಳನ್ನು ನೀಡಿದ ನಾಡು. ನಾನು ಮೊದಲ ಸಲ ವೈನ್‌ನ ರುಚಿ ನೋಡಿದ್ದು, ಗಾಜಿನ ಲೋಟವನ್ನು ಸುರುಳಿ ತಿರುವುತ್ತಾ ವೈನಿನ ಪ್ರತಿಯೊಂದು ಗುಟುಕನ್ನು ಹೇಗೆ ಆಸ್ವಾದಿಸಬೇಕು ಎಂಬುದನ್ನು ಕಲಿತಿದ್ದು ಬೋರ್ಡೋದಲ್ಲಿ; ಮೊದಲ ಬಾರಿಗೆ ಬಿದ್ದು ಎದ್ದೇಳುತ್ತಾ ಸ್ಕೀ ರನ್ ಮಾಡಿದ್ದು ಹಿಮಾಚ್ಛಾದಿತ ಶಾಮೊನಿಯಲ್ಲಿ; ಕಾಲದಲ್ಲಿ ಹಿಂದಕ್ಕೆ ಸರಿದ ಭಾವ ಮೂಡಿಸುವ ಮಾಯೆಯಂತಹ ರಾತ್ರಿಯನ್ನು ಕಳೆದದ್ದು ಅಲ್ಲಿನ ಲುವಾರ್ ವ್ಯಾಲಿಯ ಕೋಟೆಯಲ್ಲಿ; ನನ್ನ ಮಗಳು ಸಾರಾ ಜೊತೆ ಮೋಜಿನಿಂದ ಕೂಡಿದ ಮಾಕಾರೋಂ ಖಾದ್ಯ ತಯಾರಿಕೆಯ ಕಲಿಕಾ ತರಗತಿಗೆ ಸೇರಿದ್ದು ಲ್ಯು ಕೋರ್ಡೋನ್ ಬ್ಲೂ ಎಂಬಲ್ಲಿ. ಇಲ್ಲಿ ವಸಂತ, ಬೇಸಿಗೆ, ಚಳಿ ಪ್ರತಿಯೊಂದು ಋತುವೂ ತನ್ನದೇ ಸ್ಫೂರ್ತಿಯನ್ನು ಹೊತ್ತು ತರುತ್ತದೆ. ಫ್ರಾನ್ಸ್‌ನಲ್ಲಿ ಪ್ರವಾಸಿಗರು ಕೇವಲ ನೋಡುವುದಕ್ಕೆ ಸೀಮಿತವಾಗುವುದಿಲ್ಲ; ಅವುಗಳನ್ನು ಖುದ್ದು ಅನುಭವಕ್ಕೆ ತಂದುಕೊಳ್ಳುತ್ತಾರೆ.

'ವೀಣಾ ವರ್ಲ್ಡ್' ಸಂಸ್ಥೆಯು ತಾನು ಆಯೋಜಿಸುವ ಪ್ರವಾಸ ಕಾರ್ಯಕ್ರಮಗಳಿಗಾಗಿ ಫ್ರೆಂಚ್ ರಾಯಭಾರಿಯವರ ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾದ ಸಂದರ್ಭವು ಬಹಳಷ್ಟು ಪ್ರವಾಸಿಗಳು ನೋಡದ ಸ್ಥಳಗಳಿಗೆ ಭೇಟಿ ನೀಡುವ ಅವಕಾಶವನ್ನು ನನಗೆ ಒದಗಿಸಿತು. ಆ ಪ್ರವಾಸ ಟೂಲೂಝ್‌ನಿಂದ ಆರಂಭಗೊಂಡಿತು. ಗುಲಾಬಿ ಬಣ್ಣದ ಟೆರ್ರಾಕೋಟಾ ಕಟ್ಟಡಗಳಿಂದ ತುಂಬಿರುವ ಈ "ಪಿಂಕ್ ಸಿಟಿ"ಯು ನನಗೆ ತಕ್ಷಣವೇ ನಮ್ಮ ಜೈಪುರದ ನೆನಪು ತಂದಿತು. ಅಲ್ಲಿನ ಪ್ರವಾಸೋದ್ಯಮ ಕಚೇರಿಯ ನಿಕೋಲ್ ಅವರು "ತೆರೆದ ಮನಸ್ಸಿನಿಂದ ಬನ್ನಿ" ಎಂದು ಹೇಳಿದ್ದು ಏಕೆಂಬುದು ನನಗೆ ಥಟ್ಟನೆ ಅರ್ಥವಾಯಿತು. ಫ್ರಾನ್ಸ್‌ನಲ್ಲಿ ಏರ್‌ಬಸ್ ಕಾರ್ಖಾನೆಯಿಂದ ಹಿಡಿದು ಪ್ರಶಾಂತ ಪರಿಸರದ ದ್ರಾಕ್ಷಿತೋಟಗಳವರೆಗೆ ಎಲ್ಲೆಡೆಯೂ ಅಲ್ಲಿನ ಜನರ ಆಪ್ತತೆಯನ್ನು ಕಾಣಬಹುದು. ಅಂದಂತೆ, ಫ್ರಾನ್ಸ್‌ನಲ್ಲಿ ವೈನ್ ಒಂದು ಪಾನೀಯವಷ್ಟೇ ಅಲ್ಲ; ಅದಕ್ಕೂ ಮಿಗಿಲಾದುದು. ಅದು ಅವರ ಸಂಸ್ಕೃತಿಯ ಭಾಗ. ಅದನ್ನು ಅವರು ಹಿತಕರ ಭಾವನೆ ಹಾಗೂ ಸೂಕ್ತ ಸಂಯೋಜನೆಯೊಂದಿಗೆ ಸವಿದು ಆನಂದಿಸುತ್ತಾರೆ.

ಪ್ಯಾರಿಸ್‌ನಿಂದ ಕೆಲವೇ ಗಂಟೆಗಳಷ್ಟು ದೂರದಲ್ಲಿ ಲ್ವಾರ್ ವ್ಯಾಲಿಯು ಕಲ್ಪಿತ ಕಥೆಯ ನಗರದಂತಿದೆ. ಅಲ್ಲಿ ನಾವು ಶಾಂಬೋರ್‌ನ ಎತ್ತರದ ಗೋಪುರಗಳು ಹಾಗೂ ವಿಲಾಂಡ್ರಿಯ ಸೊಬಗಿನ ಉದ್ಯಾನಗಳನ್ನು ಕಣ್ತುಂಬಿಕೊಂಡೆವು. ನಂತರ, ಪುಟ್ಟ ಶಾಟೋವೊಂದರಲ್ಲಿ ತಂಗಿ ರಾತ್ರಿ ಕಳೆದೆವು. ಅಲ್ಲಿ ನಕ್ಷತ್ರಗಳಿಂದ ತುಂಬಿದ ಆಗಸದ ಅಡಿಯಲ್ಲಿ ಸಂದುಹೋಗಿರುವ ಯುಗಮಾನಕ್ಕೆ ವಾಪಸ್ಸು ತೆರಳಿದಂತಾಯಿತು. ಮರುದಿನ ಬೆಳಿಗ್ಗೆ, ಅಡುಗೆಕೋಣೆಯ ಪಿಂಗಾಣಿ ಪರಿಕರಗಳ ಕಿಣಿಕಿಣಿ ಮೆಲು ಸದ್ದು ಕಿವಿಗೆ ಬೀಳುತ್ತಿರುವಾಗ ಸೂರ್ಯನ ಬೆಳಕಿಗೆ ಮೈಯೊಡ್ಡಿಕೊಂಡು ಸಿದ್ಧಗೊಂಡ ಸ್ಥಳದಿಂದಲೇ ನೇರವಾಗಿ ಬಂದಿದ್ದ ತಾಜಾ ಬೆಣ್ಣೆ ಹಾಗೂ ಮಕರಂದದ ಪರಿಮಳ ಸೂಸುತ್ತಿದ್ದ ಜೇನುತುಪ್ಪದೊಂದಿಗೆ ಉಪಾಹಾರ ಸವಿದೆವು.

ನಂತರ, ನಾವು ತೆರಳಿದ ಸ್ಥಳ ವರ್ಸೈ. ಸುವರ್ಣಲೇಪಿತ ದ್ವಾರಗಳು, ಹಾಲ್ ಆಫ್ ಮಿರರ್ಸ್ ಹಾಗೂ ಕಣ್ಣೋಟವನ್ನೂ ಮೀರಿ ವಿಸ್ತಾರವಾದ ಉದ್ಯಾನಗಳಿಂದ ನಿಬ್ಬೆರಗಾಗಿಸುವ ತಾಣವಿದು (ಸಲಹೆ: ಅನುಕೂಲಕರವಾದ ಶೂ ಧರಿಸಿ!). ನಂತರ ಶಾಂತಿಇಯಿಯಲ್ಲಿ ಕಾರ್ಪೊರೇಟ್ ವೃತ್ತಿಪರರ ತಂಡವನ್ನು ಭೇಟಿ ಮಾಡಿದೆವು. ಆಗ ಅಲ್ಲಿ ಬಾಣಸಿಗರು ಭಾರತೀಯ ಸ್ವಾದಗಳಿಂದ ಪ್ರಭಾವಿತವಾದ ವಿಶೇಷವಾದ ಮೂರು-ಕೋರ್ಸ್‌ಗಳ ಇಂಡೊ-ಫ್ರೆಂಚ್ ಭೋಜನ ಸಿದ್ಧಪಡಿಸಿದರು. ಬಹಳ ಹಗುರವಾದ ಮೆತ್ತನೆಯ

ಶಾಂತಿಇಯಿ ಕ್ರೀಮ್ ಮೆಲ್ಲುವಾಗ ಮೋಡದ ತುಣುಕನ್ನೇ ಬಾಯೊಳಗೆ ಇರಿಸುತ್ತಿದ್ದೇವೇನೋ ಅನ್ನಿಸಿತು. ಫ್ರಾನ್ಸ್‌ನಲ್ಲಿ ಆತಿಥ್ಯವು ಪ್ರವಾಸಿಗರ ಹೃದಯವನ್ನು ಗೆದ್ದುಬಿಡುತ್ತದೆ. ಅಲ್ಲಿನ ಜನರು ಅತಿಥಿಗಳ ಆದ್ಯತೆಗಳ ಬಗ್ಗೆ ಬರೋಬ್ಬರಿ ಕಾಳಜಿವಹಿಸಿ ಅವರಲ್ಲಿ ಹಿತಕರ ಭಾವನೆ ಮೂಡಿಸಲು ಆದ್ಯತೆ ನೀಡುತ್ತಾರೆ.

ಡೆಸ್ಸರ್ಟ್‌ಅನ್ನು ಕಂಡುಹಿಡಿದಿದ್ದು ಫ್ರೆಂಚರು ಅಲ್ಲದಿರಬಹುದು; ಆದರೆ ಅದಕ್ಕೆ ಪರಿಪೂರ್ಣತೆ ನೀಡಿರುವವರು ನಿಶ್ಚಿತವಾಗಿಯೂ ಫ್ರೆಂಚರೇ ಸರಿ. ನನ್ನ ಮಗಳು ಸಾರಾ ಮತ್ತು ನಾನು ಮಾಕರೂಂ ಖಾದ್ಯದ ಕಲಿಕಾ ತರಗತಿಗಳನ್ನು ನೆನೆಸಿಕೊಂಡು ಈಗಲೂ ನಗುತ್ತೇವೆ. ಅದನ್ನು ಸಿದ್ಧಪಡಿಸುವ ವಿಧಾನದ ಬಗ್ಗೆ ಮೇಲೆ ಹಿಡಿತ ಸಾಧಿಸಿದ ಮೇಲೆ ನಿಜವಾಗಿಯೂ ಅದಕ್ಕಾಗಿ ಪಟ್ಟ ಶ್ರಮವೆಲ್ಲಾ ಸಾರ್ಥಕವೆನ್ನಿಸಿತು. ನನಗೆ ಕ್ರೀಮ್ ಬ್ರುಲೆ ಮೇಲಿನ ಗರಿಗರಿ ಟಾಪ್‌ಅನ್ನು ಒಡೆಯುವುದು, ಟಾರ್ಟ್ ತಾತಾಂದ ಬೆಚ್ಚನೆಯ ನಯವಾದ ಕ್ಯಾರಮೆಲ್‌ಅನ್ನು ಸವಿಯುವುದು ಇಲ್ಲವೇ ಅಪೇರಾ ಕೇಕ್‌ನ ಸಮೃದ್ಧ ಪದರಗಳನ್ನು ಮೆಲ್ಲುವುದೆಂದರೆ ಇಷ್ಟ. ಫ್ರಾನ್ಸ್‌ನಲ್ಲಿ ಡೆಸ್ಸರ್ಟ್ ಎಂದರೆ ಕೊನೆಯ ಕೋರ್ಸ್ ಮಾತ್ರವಷ್ಟೇ ಅಲ್ಲ– ಅದು ಕ್ಷಣಗಳನ್ನು ವಿಳಂಬಗೊಳಿಸಲು ಹಾಗೂ ಆಸ್ವಾದಿಸಲು ಒಂದು ಮಧುರವಾದ ನೆಪ.

ಎಫೆಲ್ ಟವರ್ (ಐಫೆಲ್ ಟವರ್) ಕಣ್ತುಂಬಿಕೊಳ್ಳಲೇಬೇಕು, ಸೇನ್‌ನಲ್ಲಿ ದೋಣಿ ಸವಾರಿ ಮಾಡಬೇಕು ಹಾಗೂ ನೋತ್ರ್-ಡಾಮ್‌ಗೆ ಎಡತಾಕಬೇಕು. ಆದರೆ, ಪ್ಯಾರಿಸ್‌ನ ನಿಜವಾದ ಮಾಯೆ ಅಡಗಿರುವುದು ಅದಕ್ಕೆ ಹೊಂದಿಕೊಂಡಿರುವ ನೆರೆಯ ಪ್ರದೇಶಗಳಲ್ಲಿ. ಲೊ ಮಾರೆಯಲ್ಲಿ ಕಲ್ಲುಹಾಸಿನ ಬೀದಿಗಳು, ಬೇಕರಿಗಳು ಹಾಗೂ ಚಲನಶೀಲ ಅಂಗಳಗಳು ಗಮನಸೆಳೆಯುತ್ತವೆ. ಮೊನ್ಮಾರ್ತ್ರ್‌ದಲ್ಲಿ ಕಲಾವಿದರು ಬಯಲಿನಲ್ಲಿ ವರ್ಣಚಿತ್ರಗಳನ್ನು ರಚಿಸುವುದರಲ್ಲಿ ತಲ್ಲೀನರಾಗಿರುತ್ತಾರೆ ಹಾಗೂ ಅಲ್ಲಿನ ಬೆಟ್ಟಗುಡ್ಡಗಳು ನಗರದ ಬೆರಗಿನ ನೋಟಗಳ ಸುರುಳಿ ಬಿಚ್ಚುತ್ತವೆ. ಸಾಂ ಜೆರ್ಮಾಂ ದೇ ಪ್ರೇದಲ್ಲಿ ಹಳೆಯ ಪುಸ್ತಕಗಳ ಅಂಗಡಿಗಳು ಹಾಗೂ ಕೆಫೆಗಳು ಒಂದೊಮ್ಮೆ ಅಲ್ಲಿ ಕಲೆಯುತ್ತಿದ್ದ ಹೆಸರಾಂತ ಲೇಖಕರ ಧ್ವನಿಗಳನ್ನು ಪ್ರತಿಧ್ವನಿಸುತ್ತವೆ. ನಿಮ್ಮ ಪ್ರವಾಸದ ಮೆರುಗು ಹೆಚ್ಚಿಸಿಕೊಳ್ಳಲು ವೇಗದ ರೈಲಿನಲ್ಲಿ ರಾಂಸ್‌ಗೆ ಪಯಣಿಸಬಹುದು. ಶಾಂಪೇನ್‌ಗಳ ತವರು ತಾಣವಾದ ಇಲ್ಲಿ ಶತಮಾನಗಳಷ್ಟು ಪುರಾತನವಾದ ಚರ್ಚುಗಳ ಕಮಾನುದ್ವಾರದ ಕೆಳಗೆ ಶಾಂಪೇನ್ ಗುಟುಕುರಿಸಬಹುದು.

ನೋರ್ಮಾಂಡಿಯ ಡಿ–ಡೇ ಕಡಲ ದಂಡೆಗಳಾದ ಒಮಾಹ, ಜುನೊ ಮತ್ತು ಗೋಲ್ಡ್‌ನಲ್ಲಿ ನಿಮ್ಮನ್ನು ಇತಿಹಾಸವೇ ಆವರಿಸಿದಂತಾಗುತ್ತದೆ. ಹಸಿರು ಹುಲ್ಲಿನ ಮೇಲೆ ಬಿಳಿ ಶಿಲುಬೆಯ ಸಾಲುಗಳಿರುವ ನೋರ್ಮಾಂಡಿಯ ಅಮೆರಿಕನ್ ಸಮಾಧಿಸ್ಥಳವು ಹೃದಯವನ್ನು ಕಲಕುತ್ತದೆ. ಅಲ್ಲಿ ಮೆಲುವಾಗಿ ಬೀಸುವ ಗಾಳಿಯು ಯುದ್ಧದಲ್ಲಿ ಹೋರಾಡಿ ಹುತಾತ್ಮರಾದ ಯೋಧರ ನೆನಪುಗಳನ್ನು ತನ್ನೊಂದಿಗೆ ಹೊತ್ತು ತಂದಿದೆಯೇನೋ ಎನ್ನಿಸುತ್ತದೆ. ಹತ್ತಿರದಲ್ಲೇ ಇರುವ ವಸ್ತು ಸಂಗ್ರಹಾಲಯಗಳು ಸರಳ ಹಾಗೂ ಆಪ್ತ ಶೈಲಿಯಲ್ಲಿ ಹುತಾತ್ಮ ಯೋಧರ ಕಥೆಗಳನ್ನು ಉಲಿಯುತ್ತವೆ. ಅಲ್ಲಿಂದ ಹೊರಡುವಾಗ ನಮಗೇ ಗೊತ್ತಿಲ್ಲದಂತೆ ಗಾಢ ಮೌನ, ದೃಢತೆ ಹಾಗೂ ಕೃತಜ್ಞತಾ ಭಾವ ನಮ್ಮನ್ನು ಆವರಿಸಿರುತ್ತದೆ.

ಮೊನ್ ಸಾಂ ಮಿಶೆಲ್ ಸಾಗರದಿಂದ ಉದ್ಭವವಾದ ಕೋಟೆಯಂತೆ ಗೋಚರಿಸುತ್ತದೆ. ಇದು ಭಾಗಶಃ ಧಾರ್ಮಿಕ ಸಮುಚ್ಚಯದಂತೆಯೂ, ಭಾಗಶಃ ದ್ವೀಪದಂತೆಯೂ ಇದ್ದು, ಮಧ್ಯಕಾಲೀನ ವಾಸ್ತುಶಿಲ್ಪಕ್ಕೆ ಅತ್ಯುತ್ತಮ ಉದಾಹರಣೆಯಾಗಿದೆ. ಸಾಗರದಲ್ಲಿ ಅಲೆಗಳ ಉಬ್ಬರವಿರುವಾಗ ಇದು ತೇಲುತ್ತಿರುವಂತೆ ಕಾಣುತ್ತದೆ; ಅಲೆಗಳ ಮಟ್ಟ ಇಳಿದಾಗ ನಡೆದು ಸಾಗಬಹುದಾದ ಜಾಡು ಕಂಡುಬರುತ್ತದೆ. ಅಲ್ಲಿ ಮೇಲಕ್ಕೆ ಹತ್ತುವುದೇ ವಿಶಿಷ್ಟ ಅನುಭವ. ಪ್ರತಿಯೊಂದು ಮೆಟ್ಟಿಲೇರಿದಾಗಲೂ ಹೊಸ ದೃಶ್ಯಗಳು ಅನಾವರಣಗೊಳ್ಳುತ್ತವೆ; ಪ್ರಶಾಂತ ಮೌನವು ಅಲ್ಲಿನ ಆಧ್ಯಾತ್ಮಿಕ ಸೌಂದರ್ಯದ ಅನುಭವವನ್ನು ನೋಡುಗರಿಗೆ ದಾಟಿಸುತ್ತದೆ.

ಪ್ಯಾರಿಸ್ ಬಳಿಯ ಲಾ ವಾಲೇ ಗ್ರಾಮವು ಶಾಪಿಂಗ್ ಮಾಡಲು ಹೇಳಿಮಾಡಿಸಿದ ತಾಣವಾಗಿದೆ. ದುಬಾರಿಯಲ್ಲದ ಬೆಲೆಗಳಲ್ಲಿ ಹೆಸರಾಂತ ಡಿಸೈನರ್ ಬ್ರ್ಯಾಂಡ್‌ಗಳು ಇಲ್ಲಿ ಲಭ್ಯ. 'ವೀಣಾ ವರ್ಲ್ಡ್'ನೊಂದಿಗಿನ ಪ್ರವಾಸವು ವಿಐಪಿ ಲೌಂಜಸ್ ಹಾಗೂ ಹ್ಯಾಂಡ್ಸ್–ಫ್ರೀ ಶಾಪಿಂಗ್ ಸೌಕರ್ಯದಿಂದ ಈ ಅನುಕೂಲವನ್ನು ಇನ್ನಷ್ಟು ಉತ್ತಮಗೊಳಿಸುತ್ತದೆ. ಇನ್ನು ಪ್ಯಾರಿಸ್‌ನಲ್ಲಿ ಗಾಲ್ರಿ ಲಾಫಾಯೇಟ್ ಸ್ಟೋರ್ ವಿಶಿಷ್ಟ ಅನುಭವವನ್ನು ಲಭ್ಯವಾಗಿಸುತ್ತದೆ. ಅಲ್ಲಿನ ವರ್ಣಮಯ ಗಾಜಿನ ಗುಮ್ಮಟ, ಸೊಬಗಿನ ಪ್ರದರ್ಶಿಕೆಗಳು ಹಾಗೂ ಸೂರ್ಯಾಸ್ತಮಾನದ ವೇಳೆಯಲ್ಲಿ ಪ್ಯಾರಿಸ್‌ನ ದಿಗಂತದ ನೋಟವನ್ನು ಮರೆಯಲಾಗದು. ಇಲ್ಲಿ ವಿಂಡೊ ಶಾಪಿಂಗ್ ಕೂಡ ಫ್ರಾನ್ಸ್‌ನ ಫ್ಯಾಷನ್ ಹಾಗೂ ಸ್ಟೈಲ್‌ನ ಸುದೀರ್ಘ ಪರಂಪರೆಯ ಭಾಗವಾದ ಭಾವನೆ ಮೂಡಿಸುತ್ತದೆ.

